ಮಂಗಳೂರು
ಬುಧವಾರ, 20 ಮೇ 2026
ಸಂಪುಟ 48, ಸಂಚಿಕೆ 62 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ




ಗಾಯಗೊಂಡಿದ್ದ ಮಾರ್ತಾಂಡ ಸಾವು | ೦೫
ನಕ್ಸಲ್ ಪಿಡುಗು ನಿರ್ಮೂಲನೆ: ಶಾ | ೦೭
ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್ | ೦೭

ತುಮಕೂರಿನಲ್ಲಿ ಐತಿಹಾಸಿಕ ಸಮಾವೇಶ | ಬಡವರ ಹಿತರಕ್ಷಣೆ

ಒಂದೇ ವರ್ಷದಲ್ಲಿ 5 ಗ್ಯಾರಂಟಿ ಜಾರಿ: ಸಿಎಂ ಸಿದ್ದರಾಮಯ್ಯ

ನುಡಿದಂತೆ ನಡೆದಿದ್ದೇವೆ



ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ: ಸಚಿವ ಕೃಷ್ಣ ಬೈರೇಗೌಡ

ಕಳೆದ 16 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹಾಗೂ ಅಸಾಧ್ಯವೆನಿಸಿದ್ದ ಕಂದಾಯ ಇಲಾಖೆಯ ಕೆಲಸ ಕಾರ್ಯಗಳನ್ನು ಇಂದು ಜನರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಕಂದಾಯ ಇಲಾಖೆ ಕ್ರಾಂತಿಕಾರಿ ಬದಲಾವಣೆ, ಪರಿವರ್ತನೆ ತಂದಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ➡ಪುಟ ೪

3 ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ ಪುಟ ೪

• **ತುಮಕೂರು:** ನಮ್ಮ ಸರ್ಕಾರ ಯಾವಾಗಲೂ ನುಡಿದಂತೆ ನಡೆಯುವ ಸರ್ಕಾರ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಸದಾ ಮಾಡಿಕೊಂಡು ಬಂದಿದ್ದೇವೆ. ನಮ್ಮ ಸರ್ಕಾರ ರಾಜ್ಯದ ಬಡವರ ಹಿತ ಕಾಯುವಲ್ಲಿ ಸದಾ ಬದ್ಧವಾಗಿದೆ. ಕೇವಲ ಒಂದೇ ವರ್ಷದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಯಶಸ್ವಿಯಾಗಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತುಮಕೂರಲ್ಲಿ ಸಾಧನೆಯ ಸಮರ್ಪಣೆ

ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿರುವ ಸಂದರ್ಭದಲ್ಲಿ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಮಂಗಳವಾರ ನಗರದ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ, ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶ, ಮಾದರಿ ವಸ್ತುಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದಂತೆ, ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬರಿಗೂ ಸಾಮಾಜಿಕ ಮತ್ತು ಆರ್ಥಿಕ ಶಕ್ತಿ ಸಿಗಬೇಕು. ➡ಪುಟ ೪

ಗ್ಯಾರಂಟಿಗಳು ವಿಶ್ವಕ್ಕೇ ಮಾದರಿ: ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಬಡವರ ಮತ್ತು ಶೋಷಿತರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದಿರುವ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಇಂದು ಇಡೀ ವಿಶ್ವಕ್ಕೇ ಮಾದರಿಯಾಗಿವೆ ಎಂದು ತಿಳಿಸಿದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 5 ಗ್ಯಾರಂಟಿ ಯೋಜನೆಗಳು ಕೇವಲ ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾಜಿಕ ಬದಲಾವಣೆ ತಂದ ಈ ಐದು ಗ್ಯಾರಂಟಿಗಳು ಜಗತ್ತಿಗೇ ಮಾದರಿ ಎಂದು ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಉಲ್ಲೇಖಿಸಲಾಗಿದೆ. ಇದು ನಮ್ಮ ಸರ್ಕಾರಕ್ಕೆ ಹೆಮ್ಮೆ ಎಂದರು. ➡ಪುಟ ೪

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಹಲವು ದಶಕಗಳಿಂದ ರಾಜ್ಯದ ಹಟ್ಟಿ, ತಾಂಡಾ, ಮಜರೆ ಗ್ರಾಮಗಳು ಕಂದಾಯ ಗ್ರಾಮಗಳಾಗದೆ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದರು. ಇದನ್ನು ರಾಜ್ಯ ಕಂದಾಯ ಇಲಾಖೆ ಆದ್ಯತೆ ಕಾರ್ಯಕ್ರಮವಾಗಿ ತೆಗೆದುಕೊಂಡು 14 ಲಕ್ಷಕ್ಕೂ ಹೆಚ್ಚು ಹಕ್ಕು ಪತ್ರಗಳನ್ನು ರಾಜ್ಯದಲ್ಲಿ ವಿತರಿಸಿದೆ. ತುಮಕೂರು ಜಿಲ್ಲೆಯೊಂದರಲ್ಲೇ 22 ಸಾವಿರ ಕಂದಾಯ ಗ್ರಾಮಗಳ ಹಕ್ಕುಪತ್ರಗಳನ್ನು ನೀಡುವ ಮೂಲಕ ಇಂದು ಗಿನ್ನಿಸ್ ದಾಖಲೆ ಸೃಷ್ಟಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು. ತುಮಕೂರು ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ 650 ಅಂಗನವಾಡಿ ಕಾರ್ಯಕರ್ತೆಯರಿಗೆ ನೇಮಕ ಆದೇಶ ನೀಡಿ ಇಂದು ಮತ್ತೊಂದು ದಾಖಲೆ ಸೃಷ್ಟಿಸಿದೆ ಎಂದರು. ➡ಪುಟ ೪

ಐಲ್ಯಾಂಡ್, ಫಿನ್‌ಲ್ಯಾಂಡ್, ಡೆನ್ಮಾರ್ಕ್ ಪ್ರಧಾನಿಗಳ ಜತೆ ಮೋದಿ ಮಾತುಕತೆ

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ



ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಪ್ರಧಾನಿ ಮೋದಿ • ಪುಟ ೪

• **ಓಸ್ಲೋ:** ತೃತೀಯ ಭಾರತ–ನಾರ್ಡಿಕ್ ಶೃಂಗಸಭೆಗೆ ಮುನ್ನ ಮಂಗಳವಾರ, ಶುದ್ಧ ಇಂಧನ, ವ್ಯಾಪಾರ, ಸುಸ್ಥಿರತೆ ಮತ್ತು ಡಿಜಿಟಲೀಕರಣ ರಂಗಗಳಲ್ಲಿ ದ್ವಿಪಕ್ಷೀಯ ಸಹಕಾರ ಕೊಂಡಿಗಳನ್ನು ಬಲಪಡಿಸುವ ಬಗ್ಗೆ ಐಲ್ಯಾಂಡ್, ಫಿನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಪ್ರಧಾನಿಗಳ ಜತೆ ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಮೋದಿ ಪಂಚ ರಾಷ್ಟ್ರ ಪ್ರವಾಸ

ಭಾರತ ಮತ್ತು ಐಲ್ಯಾಂಡ್, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ನಡುವಣ ದ್ವಿಪಕ್ಷೀಯ ಬಾಂಧವ್ಯಗಳ ಸಮಗ್ರ ಪ್ರಗತಿಪಥದ ಬಗ್ಗೆ ಈ ರಾಷ್ಟ್ರಗಳ ಪ್ರಧಾನಿಗಳಾದ ಕ್ರಮವಾಗಿ ಕ್ರಿಸ್ತನ್ ಫ್ರೋಸ್ಟಡೋಟಿರ್, ಪೆಟ್ಟೆರಿ ಒರ್ಪೋ ಮತ್ತು ಮೆಟ್ಟೆ ಫ್ರೆಡರಿಕ್‌ಸೆನ್ ಜತೆ ಪ್ರಧಾನಿ ಮೋದಿ ಚರ್ಚಿಸಿದರು. ಐಲ್ಯಾಂಡ್ ಪ್ರಧಾನಿ ಕ್ರಿಸ್ತನ್ ಜತೆ ಅದ್ಭುತ ಮಾತುಕತೆ ನಡೆಯಿತು. ಐಲ್ಯಾಂಡ್ ಜತೆಗಿನ ಸ್ನೇಹಬಾಂಧವ್ಯಕ್ಕೆ ಭಾರತ ತುಂಬು ಗೌರವ ನೀಡುತ್ತದೆ ಎಂದು ಪ್ರಧಾನಿ ಮೋದಿ ನಂತರ ಸಾಮಾಜಿಕ ಜಾಲತಾಣಕ್ಕೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಹೂಡಿಕೆಗಳಿಗೆ ಒತ್ತು: ಶುದ್ಧ ಇಂಧನ, ಮೀನುಗಾರಿಕೆ, ಸುಸ್ಥಿರತೆ, ಜಿಯೊಥರ್ಮಲ್ ಇಂಧನ, ಕಾರ್ಬನ್ ಕ್ಯಾಪ್ಚರ್ ಮತ್ತು ದಾಸ್ತಾನು ರಂಗಗಳಲ್ಲಿ ಸಹಕಾರ ಬಾಂಧವ್ಯಗಳ ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಇತ್ತಂಡಗಳ ನಡುವೆ ಚರ್ಚೆ ನಡೆಯಿತು. ➡ಪುಟ ೪

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಡೆನ್ಮಾರ್ಕ್ ಪ್ರಧಾನಿ ಜತೆ ಪ್ರಧಾನಿ ನರೇಂದ್ರ ಮೋದಿ ಫಲದಾಯಕ ಮಾತುಕತೆ ನಡೆಸಿದರು. ಈಚಿನ ವರ್ಷಗಳಲ್ಲಿ ಭಾರತ–ಡೆನ್ಮಾರ್ಕ್ ನಡುವಣ ಸ್ನೇಹಾಚಾರದಲ್ಲಿ ಗಮನಾರ್ಹ ಪ್ರಗತಿಯಾಗಿದೆ ಎಂದು ಮೋದಿ ಎಕ್ಸ್‌ಗೆ ಹಾಕಿರುವ ಪ್ರತ್ಯೇಕ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ನವೀಕರಿಸಬಹುದಾದ ಇಂಧನ, ಕ್ಲೈಮೇಟ್ ಆ್ಯಕ್ಷನ್, ಜಲ ನಿರ್ವಹಣೆ, ಗ್ರೀನ್ ಶಿಪ್ಪಿಂಗ್, ಡಿಜಿಟಲೀಕರಣ, ಆಹಾರ ಸಂಸ್ಕರಣೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಉಭಯ ನಾಯಕರು ಚರ್ಚಿಸಿದರು. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚೌತಿ, ನಕ್ಷತ್ರ: ಆರ್ದ್ರೆ ಉಪರಿ ಪುನರ್ವಸು

ದಿನದ ಮಾತು

ಒಳ್ಳೆಯವರು, ಜ್ಞಾನಿಗಳು ಆಡಿದ ಪ್ರೀತಿಯ ಮಾತುಗಳು ಸಾವಿರ ಸೂರ್ಯನ ಬೆಳಕಿನಂತೆ.
▲ಹಿತೋಪದೇಶ

ಭರವಸೆಯ ಕಿರಣವಾಗಿ ಇಂಡೋ–ಮೆಡಿಟರೇನಿಯನ್ ಪಾಲುದಾರಿಕೆ
ಲೇಖನ
• ನರೇಂದ್ರ ಮೋದಿ
• ಜಾರ್ಜಿಯಾ ಮೆಲೋನಿ
• ಪುಟ ೬

ಕಿರುಸುದ್ದಿ

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ



• **ಡೆಹ್ರಾಡೂನ್:** ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ಬಿಜೆಪಿ ಮುಖಂಡ ಮೇಜರ್ ಜನರಲ್ (ನಿವೃತ್ತ) ಭುವನ್ ಚಂದ್ರ ಖಂಡೂರಿ (91) ಮಂಗಳವಾರ ಡೆಹ್ರಾಡೂನ್‌ನ ಮ್ಯಾಕ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಆರಂಭದಲ್ಲಿ ಖಂಡೂರಿ ಭಾರತೀಯ ಸೇನಾಧಿಕಾರಿಯಾಗಿದ್ದು, ನಂತರ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದರು. ➡ಪುಟ ೪

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

• **ಹೊಸದಿಲ್ಲಿ:** ದಿಲ್ಲಿ ಹೈಕೋರ್ಟ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ನಾಯಕರಾದ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸಂಜಯ್ ಸಿಂಗ್ ಮತ್ತು ಇತರರಿಗೆ ದಿಲ್ಲಿ ಹೈಕೋರ್ಟ್ ಮಂಗಳವಾರ ನೋಟಿಸ್ ನೀಡಿದೆ. ➡ಪುಟ ೪

ಕರ್ನಾಟಕ ಬ್ಯಾಂಕ್: 1,310 ಕೋ. ರೂ. ಲಾಭ
• ಪುಟ ೧೦

ರಾಜ್ಯದಲ್ಲಿ ಇಂದು ಔಷಧ ಮಳಿಗೆ ಬಂದ್
• ಪುಟ ೫

ಲಾಹೋರ್ ಗಲ್ಲಿಗಳಿಗೆ ರಾಮು, ಕೃಷ್ಣನ ನಾಮ
• ಪುಟ ೭

ಕೇರಳ ಸಂಪುಟದಲ್ಲಿ ಹಗ್ಗಜಗ್ಗಾಟ
• ಪುಟ ೭



ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್
• ಪುಟ ೭

ಸುದ್ದಿ ಸಮಗ್ರ

ಕ್ರಮ ಕೈಗೊಳ್ಳದ್ದಕ್ಕೆ ರಾಜ್ಯಗಳಿಗೆ ಸುಪ್ರೀಂಕೋರ್ಟ್ ಛೀಮಾರಿ

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

• **ಹೊಸದಿಲ್ಲಿ:** ಬೀದಿ ನಾಯಿ ಕಡಿತದ ನಿರಂತರ ಘಟನಾವಳಿಗಳನ್ನು ಕಡೆಗಣಿಸುವಂತಿಲ್ಲ, ಅದರಲ್ಲೂ ಮುಖ್ಯವಾಗಿ ಮಕ್ಕಳ ಮೇಲೆ ಬೀದಿನಾಯಿಗಳ ಮಾರಣಾಂತಿಕ ದಾಳಿ ಘಟನೆಗಳು ನಿರ್ಲಕ್ಷಿಸುವಂತದ್ದಲ್ಲ



ಎಂದು ಸರ್ವೋಚ್ಚ ನ್ಯಾಯಾಲಯ ಮಂಗಳವಾರ ಮಹತ್ವದ ತೀರ್ಪು ನೀಡಿದೆ. ತನ್ಮೂಲಕ ಈ ವಿಚಾರದಲ್ಲಿ ನ.7ರ ತನ್ನದೇ ತೀರ್ಪನ್ನು ಎತ್ತಿಹಿಡಿದಿದೆ. ನ.7ರ ತೀರ್ಪಿಗೆ ಮಾರ್ಪಾಡು ತರಬೇಕೆಂಬ ಸರಕಾರೇತರ ಸಂಘಟನೆಗಳು ಮತ್ತು ಶ್ವಾನ ಪ್ರೇಮಿಗಳ ಎಲ್ಲಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ.

2001ರಲ್ಲಿ ಜಾರಿಗೊಂಡ ಪ್ರಾಣಿಗಳ ಸಂತಾನ ನಿಯಂತ್ರಣ ನಿಯಮಾವಳಿಯ ಸೂಕ್ತ ಪಾಲನೆ ಆಗಿಲ್ಲ ಅಥವಾ ಇದರ ಅನುಷ್ಠಾನ ವಿಚಾರದಲ್ಲಿ ಘೋರ ನಿರ್ಲಕ್ಷ್ಯ ವಹಿಸಲಾಗಿದೆ. ಬೆಳೆಯುತ್ತಲೇ ಇರುವ ನಾಯಿಗಳ ಸಂಖ್ಯೆಗೆ ಅನುಗುಣವಾಗಿ ಪೂರಕ ಸಂಪನ್ಮೂಲಗಳ ಸೃಷ್ಟಿಸುವ ಪ್ರಯತ್ನವಾಗಿಲ್ಲ. ಸಂತಾನ ನಿಯಂತ್ರಣ, ವ್ಯಾಕ್ಸಿನೇಶನ್ ಇತ್ಯಾದಿಗಳನ್ನು ಒಟ್ಟಾರೆ ನಿರ್ವಹಿಸಲಾಗುತ್ತಿದೆ. ➡ಪುಟ ೪

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ

• **ಹೊಸದಿಲ್ಲಿ:** ಬೀದಿ ನಾಯಿಗಳ ಹಾವಳಿ ಹಾಗೂ ಸಾರ್ವಜನಿಕರ ಸುರಕ್ಷತೆ ಪ್ರಶ್ನೆಗೆ



ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದ್ದು, 'ಕ್ರೂರ ಹಾಗೂ ಅಪಾಯಕಾರಿ' ಸ್ವಭಾವದ ನಾಯಿಗಳಿಗೆ ದಯಾಮರಣ ನೀಡಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದೆ. ಜತೆಗೆ, ಶಾಲೆಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳಲ್ಲಿ ನಾಯಿಗಳನ್ನು ತೆರವುಗೊಳಿಸಿ. ➡ಪುಟ ೪

ಕೇಂದ್ರಕ್ಕೆ ಭೂ ವರ್ಗಾವಣೆ ಪ್ರಕ್ರಿಯೆಗೆ ಸಿಎಂ ಸುವೇಂದು ಚಾಲನೆ

ಸಿಲಿಗುರಿ: 120 ಎಕರೆ ಜಾಗ ಕೇಂದ್ರಕ್ಕೆ ವರ್ಗ

• **ಕೋಲ್ಕತ್ತಾ:** ಭಾರತದ ಮುಖ್ಯ ಭೂಭಾಗವನ್ನು ಈಶಾನ್ಯ ರಾಜ್ಯ ಗಳೊಂದಿಗೆ ಸಂಪರ್ಕಿಸುವ ಮತ್ತು ಅಂತಾರಾಷ್ಟ್ರೀಯ ಗಡಿಗಳಿಗೆ ತೀರಾ ನಿಕಟವಾಗಿರುವ



ಕಾರಣ, ದೇಶದ ತೀರಾ ವ್ಯೂಹಾತ್ಮಕವಾದ ನಿರ್ಣಾಯಕ ಮತ್ತು ಸೂಕ್ಷ್ಮ ಸಂವೇದಿ ಪ್ರದೇಶವೆಂದು ಪರಿಗಣಿತ, ಸಿಲಿಗುರಿಯ ಚಿಕನ್‌ನೆಕ್ ಕಾರಿಡಾರ್‌ನ 120 ಎಕರೆ ಜಾಗವನ್ನು, ಕೇಂದ್ರ ಸರಕಾರಕ್ಕೆ ವರ್ಗಾಯಿಸುವ ಪ್ರಕ್ರಿಯೆಗೆ ಪಶ್ಚಿಮ ಬಂಗಾಳದ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ ಚಾಲನೆ ನೀಡಿದೆ.

ರಾಷ್ಟ್ರೀಯ ಭದ್ರತಾ ದೃಷ್ಟಿಯಿಂದ ಇದೊಂದು ಮಹತ್ವದ ನಿರ್ಧಾರ ವಾಗಿದೆ. ಚೀನಾದ ಟಿಬೆಟ್ ವಲಯಕ್ಕೆ ಸಮೀಪದಲ್ಲಿದ್ದು ನೇಪಾಳ, ಭೂತಾನ್, ಬಾಂಗ್ಲಾ ಗಡಿಗೆ ತಾಗಿಕೊಂಡಿರುವುದರಿಂದಲೇ ಅಗಲ ಕಿರಿದಾದ ಪ್ರಸ್ತುತ ಭೂಮಿಯು ವ್ಯೂಹಾತ್ಮಕವಾಗಿ ಸೂಕ್ಷ್ಮ ಸಂವೇದಿಯೆನಿಸಿದೆ. ಕೆಲವು ಕಡೆ ಈ ಕಾರಿಡಾರ್ ಕೇವಲ 20ರಿಂದ 22 ಕಿ.ಮೀ ಕಿರಿದಾಗಿದ್ದು, ಭೂ–ಭೌಗೋಳಿಕ ಬಿಕ್ಕಟ್ಟು ಅಥವಾ ಮಿಲಿಟರಿ ಸಂಘರ್ಷ ಸಂದರ್ಭದಲ್ಲಿ ವ್ಯೂಹಾತ್ಮಕವಾಗಿ ತೀರಾ ದುರ್ಬಲವೆಂದು ಪರಿಗಣಿತವಾಗಿದೆ. ➡ಪುಟ ೪

ಕ್ರಾಂತಿಕಾರಿ ಹೆಜ್ಜೆ

ಪಶ್ಚಿಮ ಬಂಗಾಳದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ವಿಜಯ ಸಾಧಿಸಿದೆ. ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಸುವೇಂದು ಸರಕಾರ ಬೇರೆ ಬೇರೆ ರಂಗಗಳಲ್ಲಿ ಕ್ರಾಂತಿಕಾರಿ ಹೆಜ್ಜೆಗಳನ್ನಿರಿಸ ತೊಡಗಿದೆ. ಅದು ಆಡಳಿತಾತ್ಮಕ ವ್ಯವಸ್ಥೆಗಳ ಪುನರ್‌ರಚನೆಯಿರಲಿ, ಕಾನೂನು ಸುವ್ಯವಸ್ಥೆ ಕ್ರಮಗಳು, ತೃಣಮೂಲ ಕಾಂಗ್ರೆಸ್ ನಾಯಕರ ಷಾಮೀಲಾತಿಯುಳ್ಳ ಗೋಲ್‌ಮಾಲ್‌ಗಳ ತನಿಖೆ, ದಕ್ಷ ಆಡಳಿತ ಜತೆ ಜತೆಗೆ ಕೇಂದ್ರದ ಜತೆ ವ್ಯೂಹಾತ್ಮಕ ಸಮನ್ವಯ ಕಾಯ್ದುಕೊಳ್ಳುವ ನಿರ್ಧಾರಗಳನ್ನು ತ್ವರಿತಗತಿಯಿಂದ ಕೈಗೊಳ್ಳಲಾಗುತ್ತಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

• **ಬೆಂಗಳೂರು:** ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯು ಮೇ 20ರಿಂದ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಹೈಕೋರ್ಟ್ ಮಂಗಳವಾರ ತಡೆಯೊಡ್ಡಿದೆ. ಈ ಹಿನ್ನೆಲೆ ಪ್ರತಿಭಟನೆ ಹಿಂಪಡೆಯಲಾಗಿದೆ ಎಂದು ಜಂಟಿ ಕ್ರಿಯಾ ಸಮಿತಿ ತಿಳಿಸಿದ್ದು, ಬುಧವಾರ ರಾಜ್ಯಾದ್ಯಂತ ಬಸ್ ಸೇವೆ ಎಂದಿನಂತೆ ಇರಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು ಈ ಸಂಬಂಧ ಮಾಹಿತಿ ನೀಡಿದ್ದಾರೆ. ➡ಪುಟ ೪


- ಎಂದಿನಂತಿರಲಿದೆ ಬಸ್ ಸಂಚಾರ, ಪ್ರಯಾಣಿಕರು ನಿರಾಳ
- ಸಾರಿಗೆ ನಿಗಮಗಳ ನೌಕರರು ಕರೆ ನೀಡಿದ್ದ ಹೋರಾಟ
- ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಕ್ಕೆ ಹೈಕೋರ್ಟ್ ಸೂಚನೆ



ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

• **ಹೊಸದಿಲ್ಲಿ:** ಉಗ್ರ ಚಟುವಟಿಕೆ ನಡೆಸುವ ಸ್ಲೀಪರ್ ಸೆಲ್‌ಗಳಿಗೆ ಉತ್ತರಪ್ರದೇಶದಲ್ಲಿ ಅಪ್ರಾಪ್ತರನ್ನು ನೇಮಕಾತಿ ಮಾಡುತ್ತಿರುವ ಪಾಕಿಸ್ತಾನ ನಿಯಂತ್ರಿತ ಜಾಲವೊಂದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಪತ್ತೆ ಹಚ್ಚಿದೆ.

ಭಾರತದ ವಿರುದ್ಧ ಪಾಕ್ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ



ಸಂವೇದನಾಶೀಲ ಪ್ರದೇಶಗಳಲ್ಲಿ ಅಪ್ರಾಪ್ತರು, ಆರ್ಥಿಕವಾಗಿ ದುರ್ಬಲ ವ್ಯಕ್ತಿಗಳನ್ನು ಭಾರತದ ವಿರುದ್ಧ ಗುಪ್ತಚರರಂತೆ ಬಳಸಿಕೊಳ್ಳುತ್ತಿದೆ. ಇದು ಪಾಕಿಸ್ತಾನದ ಹೈಬ್ರಿಡ್ ಬೆದರಿಕೆ ಕಾರ್ಯತಂತ್ರ ಎಂದು ಅಪ್ರಾಪ್ತರ ನ್ಯಾಯಮಂಡಳಿಗೆ ಸಲ್ಲಿಸಿದ ತನಿಖಾ ವರದಿಯಲ್ಲಿ ಎನ್‌ಐಎ ಉಲ್ಲೇಖಿಸಿದೆ. ಸಂವೇದನಾಶೀಲ ಪ್ರದೇಶಗಳು, ರೈಲ್ವೆ ನಿಲ್ದಾಣಗಳು, ತಂತ್ರಜ್ಞಾನದ ದೃಷ್ಟಿಯಿಂದ ಮಹತ್ವದ ಸ್ಥಳಗಳ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಈ ಜಾಲವು ಅಪ್ರಾಪ್ತರನ್ನು ನೇಮಕ ಮಾಡುತ್ತಿದೆ. ➡ಪುಟ ೪

ದೇಶದ್ರೋಹ ಕೃತ್ಯಕ್ಕೆ ₹500-15,000

ರಹಸ್ಯ ಮಾಹಿತಿಗಳನ್ನು ಸೋರಿಕೆ ಮಾಡುವುದಕ್ಕಾಗಿ ಪಾಕಿಸ್ತಾನಿ ಹ್ಯಾಂಡ್ಲರ್‌ಗಳು ಅಪ್ರಾಪ್ತರಿಗೆ 500ರಿಂದ 15,000 ರೂ.ವರೆಗೆ ಹಣ ನೀಡುತ್ತಿದ್ದಾರೆಂಬ ಆತಂಕಕಾರಿ ಮಾಹಿತಿಯನ್ನು ಎನ್‌ಐಎ ಬಯಲಿಗೆಳೆದಿದೆ. ಪಾಕಿಸ್ತಾನದ ಡಿಜಿಟಲ್ ಉಗ್ರವಾದ ಮತ್ತು ಸ್ಲೀಪರ್ ಸೆಲ್ ನೇಮಕಾತಿ ಪ್ರಯತ್ನದಲ್ಲಿ ಉತ್ತರಪ್ರದೇಶದ ಮೇಲೆ ಹೆಚ್ಚಿನ ಗಮನಹರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

• **ವಾಷಿಂಗ್ಟನ್:** ಇರಾನ್ ನಾಯಕರು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬೇಡುತ್ತಿದ್ದಾರೆ. ಒಂದು ವೇಳೆ ಇರಾನ್ ಒಪ್ಪಂದ ಅಂತಿಮಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಇರಾನ್ ಮೇಲೆ ದೊಡ್ಡ ದಾಳಿ ನಡೆಸಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಹೊಸ ಬೆದರಿಕೆ ಹಾಕಿದ್ದಾರೆ.

ಅಂದರೆ ಬಹುಶಃ ಮುಂದಿನ ವಾರದೊಳಗೆ ಒಪ್ಪಂದ ಅಂತಿಮಗೊಳ್ಳಬೇಕು. ಇನ್ನು ಎರಡು ಅಥವಾ ಮೂರು ದಿನ ಬಹುಶಃ ಶುಕ್ರವಾರ, ಶನಿವಾರ, ಭಾನುವಾರ ಅಥವಾ ಅದರೊಳಗೆ ಹೊಸ ದಾಳಿ ನಡೆಸುವ ಸಾಧ್ಯತೆಯಿದೆ. ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸುವಷ್ಟು ಸಮಯ ಕಾದು ಕುಳಿತುಕೊಳ್ಳಲು ನಮ್ಮ ಬಳಿ ಸಮಯವಿಲ್ಲ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ದಾಳಿಗೆ ಸಿದ್ಧತೆ ನಡೆಸಿದ್ದ ಅಮೆರಿಕ, ಗಂಟೆಗೊಂದು ಹೇಳಿಕೆ!



ದಾಳಿ ರದ್ದು ಹೇಳಿಕೆ ಬೆನ್ನಲ್ಲೇ ನಿರ್ಧಾರ ಬದಲು!: ಸೋಮವಾರ ಇರಾನ್ ಮೇಲೆ ಹೊಸ ದಾಳಿ ನಡೆಸುವುದು ಬಹುತೇಕ ಖಚಿತವಾಗಿತ್ತು. ಆದರೆ ಹೊಸ ದಾಳಿಗೆ ಸಕಲ ಸಿದ್ಧತೆಗಳನ್ನೂ ನಾವು ಮಾಡಿಕೊಂಡಿದ್ದೆವು. ಒಂದು ಗಂಟೆ ಮುಂಚೆ ದಾಳಿ ನಿರ್ಧಾರ ಬದಲಿಸಿದ್ದು, ದಾಳಿ ರದ್ದುಗೊಳಿಸಿದ್ದಾಗಿ ಟ್ರಂಪ್ ಬಹಿರಂಗಗೊಳಿಸಿದ್ದಾರೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,77,200(2,76,000) ಅಪರಂಜಿ ಚಿನ್ನ: 15,860(15,825) ಆಭರಣ ಚಿನ್ನ: 14,395(14,320) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,200(114↓) ಎನ್‌ಎಸ್‌ಇ 23,618(31↓)

$1 = ₹95.97

ಕಿರುಸುದ್ದಿ

ಹಿಜಾಬ್‌ಗೆ ಅವಕಾಶ: ವಿಹಿಂಪ ಖಂಡನೆ

• **ಮಂಗಳೂರು:** ರಾಜ್ಯದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಸರಕಾರ ಅವಕಾಶ ನೀಡಿರುವುದನ್ನು ವಿಶ್ವಹಿಂದು ಪರಿಷತ್ ವಿರೋಧಿಸುತ್ತದೆ ಎಂದು ವಿಹಿಂಪ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದರು. ಶಾಲಾ ಕಾಲೇಜುಗಳ ಪಾವಿತ್ರ್ಯತೆ ಇರುವ ಸ್ಥಳಗಳು. ಶಾಲಾ ಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡುವ ಮೂಲಕ ಸರಕಾರ ಮತಾಂಧತೆಗೆ ಅವಕಾಶ ನೀಡಿದಂತಾಗಿದೆ. ಇದು ರಾಜ್ಯ ಸರಕಾರದ ಓಲೈಕೆ ನೀತಿಯಾಗಿದೆ. ರಾಜ್ಯ ಕಾಂಗ್ರೆಸ್ ಸರಕಾರ ಹಿಜಾಬ್ ಪ್ರೇಮಿ ಸರಕಾರವಾಗಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು. ಸರಕಾರದ ಈ ನಿರ್ಧಾರದ ವಿರುದ್ಧ ವಿದ್ಯಾರ್ಥಿಗಳು ಬೀದಿಗಿಳಿಯಬೇಕಿದೆ. ಯುವಶಕ್ತಿ ಪ್ರತಿಭಟನೆ ನಡೆಸಬೇಕಿದ್ದು, ವಿಹಿಂಪ ಬೆಂಬಲಿಸಲಿದೆ. ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಶಾಲಾ ಕಾಲೇಜಿಗೆ ಆಗಮಿಸಿದರೆ ನಾವು ಬೆಂಬಲಿಸುತ್ತೇವೆ ಎಂದರು.

ರಾಮಕೃಷ್ಣ ಕೋಡಿಂಬಾಳಗೆ ಬ್ಲ್ಯಾಕ್ ಬೆಲ್ಟ್

• **ಸುಬ್ರಹ್ಮಣ್ಯ:** ಶೋಟೋಕಾನ್ ಸ್ಕೂಲ್ ಆಫ್ ಕರಾಟೆ ಇಂಡಿಯಾದ ಕುಕ್ಕೆ ಸುಬ್ರಹ್ಮಣ್ಯದ ರಾಮಕೃಷ್ಣ (ಕಿಶನ್) ಪಂಜಳ ಕೋಡಿಂಬಾಳ ಅವರಿಗೆ ಕರಾಟೆಯಲ್ಲಿ ಫೋರ್ತ್ ಡನ್ ಬ್ಲ್ಯಾಕ್ ಬೆಲ್ಟ್ ಪಡೆದು ಸಾಧನೆ ಮೆರೆದಿದ್ದಾರೆ.



ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ 4ನೇ ಬ್ಲ್ಯಾಕ್ ಬೆಲ್ಟ್ ಹಾಗೂ ಪ್ರಮಾಣಪತ್ರ ಮತ್ತು ಪಾರಿತೋಷಕ ಪಡೆದರು. ಅವರು ಕಳೆದ 25 ವರ್ಷಗಳಿಂದ ಮೈಸೂರಿನಲ್ಲಿ ಕರಾಟೆ ಗುರು ಯೋಗೀಶ್ ಮೈಸೂರು ಅವರಿಂದ ಕರಾಟೆ ಅಭ್ಯಾಸ ಮಾಡಿದ್ದರು.

ಮೇ 24ರಂದು ಮಂಗಳೂರು ಪ್ರೆಸ್ ಕ್ಲಬ್ ದಿನಾಚರಣೆ

• **ಮಂಗಳೂರು:** ಮಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಪ್ರೆಸ್ ಕ್ಲಬ್ ದಿನಾಚರಣೆ ಮೇ 24ರಂದು ಬೆಳಗ್ಗೆ 10ಕ್ಕೆ ನಗರದ ರೆಡ್ ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. 2025ನೇ ಸಾಲಿನ ಮಂಗಳೂರು ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿರುವ ಸಮಾಜ ಸೇವಕ ದೀಪಕ್ ಜಿ.ಬೆಳ್ತಂಗಡಿ ಅವರಿಗೆ ಮಂಗಳೂರು ನಗರ ಪೊಲೀಸ್ ಕಮಿಷನರೇಟ್‌ನ ಉಪ ಪೊಲೀಸ್ ಆಯುಕ್ತ ಎಚ್.ಎನ್.ಮಿಥುನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ಎ.ಖಾದರ್ ಶಾ ಹಿರಿಯ ಪತ್ರಕರ್ತರಿಗೆ ಗೌರವ ಸನ್ಮಾನ ಹಾಗೂ ದ.ಕ.ಜಿಲ್ಲಾ ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಿದ್ದಾರೆ. ದ.ಕ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಂದಡ್ಕ: ದೃಢಕಲಶಾಭಿಷೇಕ

• **ಮುಲ್ಕಿ:** ಅತಿಕಾರಿಬೆಟ್ಟು ಪುತ್ತೂರು ದೇಂದಡ್ಕ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಮೇ 20 ರಂದು ಬೆಳಗ್ಗೆ 8.30ರಿಂದ ಶ್ರೀ ಮಹಾಲಿಂಗೇಶ್ವರ ದೇವರಿಗೆ ದೃಢಕಲಶಾಭಿಷೇಕವು ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳವರ ಅಮೃತ ಹಸ್ತದಿಂದ ಸಂಪನ್ನಗೊಳ್ಳಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಚೆನ್ನೈನ ಮಹಿಳೆ ಆನೆಯಡಿಗೆ ಬಿದ್ದು ಸಾವು ಪ್ರಕರಣ | ಎರಡು ದಿನ ದುಬಾರೆ ಶಿಬಿರ ಬಂದ್

ಆನೆಗಳ ಕಾದಾಟ: 'ಮಾರ್ತಾಂಡ' ಸಾವು

• **ಮಡಿಕೇರಿ:** ದುಬಾರೆ ಶಿಬಿರದಲ್ಲಿ ಸೋಮವಾರ ನಡೆದ ಸಾಕಾನೆಗಳ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 'ಮಾರ್ತಾಂಡ' ಆನೆ ಮಂಗಳವಾರ ಮುಂಜಾನೆ ಸಾವಿಗೀಡಾಗಿದೆ.

ಸೋಮವಾರ ಆನೆಗಳ ಸ್ನಾನದ ಸಂದರ್ಭ ದಸರಾ ಆನೆ ಕಂಜನ್ ಮತ್ತು ಮಕನಾ ಆನೆ ಮಾರ್ತಾಂಡ ನಡುವೆ ನಡೆದ ಕಾಳಗದ ಸಂದರ್ಭ ಸ್ಥಳದಲ್ಲಿದ್ದ ಚೆನ್ನೈ ಮೂಲದ ಪ್ರವಾಸಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದರು. ಜೊತೆಗೆ ಆನೆಯೂ ತೀವ್ರವಾಗಿ ಗಾಯಗೊಂಡಿತ್ತು. ಕಂಜನ್ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ (34) ಆನೆಗೆ ವನ್ಯಜೀವಿ ತಜ್ಞ ವೈದ್ಯ ಮುಜೀಬ್ ಅವರು ಚಿಕಿತ್ಸೆ ನೀಡುತ್ತಿದ್ದರು. ಆದರೆ ಕಂಜನ್ ಆನೆ ದಾಳಿಯ ತಿವಿತದಿಂದ ಗಂಭೀರ ಗಾಯಗೊಂಡಿದ್ದ ಮಾರ್ತಾಂಡ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮುಂಜಾನೆ ಮೃತಪಟ್ಟಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಸಚಿವರ ಸಂತಾಪ

ಆನೆ ಮೃತಪಟ್ಟಿರುವ ಸುದ್ದಿ ತಿಳಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಸಂತಾಪ ವ್ಯಕ್ತಪಡಿಸಿದ್ದಾರೆ. ಅನಿರೀಕ್ಷಿತವಾದ ಮತ್ತು ಊಹಿಸಲೂ ಆಗದ ದುರ್ಘಟನೆಯಲ್ಲಿ ಒಬ್ಬ ಪ್ರವಾಸಿ ಮಹಿಳೆ ಮತ್ತು ಒಂದು ಆನೆ ಮೃತಪಟ್ಟಿರುವುದು ಅತ್ಯಂತ ದುಃಖದ ಸಂಗತಿ ಎಂದು ಸಚಿವರು ತಿಳಿಸಿದ್ದಾರೆ.





ಮಾರ್ಗಸೂಚಿ ಪಾಲಿಸಲು ಸೂಚನೆ

ಕೊಡಗು ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ವೇಳೆ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅತ್ಯಂತ ದುರದೃಷ್ಟಕರ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ದುಬಾರೆ ಶಿಬಿರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಕೊಡಗು ಜಿಲ್ಲಾಡಳಿತಕ್ಕೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚನೆ ನೀಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಚಿವರು, ದುರಂತದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಪ್ರಾಥಮಿಕ ಮಾಹಿತಿ ಪಡೆದುಕೊಂಡಿದ್ದೇನೆ. ಘಟನೆಗೆ ನಿಖರ ಕಾರಣಗಳೇನು ಮತ್ತು ಪ್ರವಾಸಿ ಮಾರ್ಗಸೂಚಿ ನಿರ್ವಹಣೆಯಲ್ಲಿ ಏನಾದರೂ ಲೋಪವಾಗಿದೆಯೇ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಆನೆ ಶಿಬಿರಗಳಲ್ಲಿ ಕಟ್ಟುನಿಟ್ಟಾಗಿ ಪ್ರವಾಸಿಗರ ನಿರ್ವಹಣೆಗೆ ಮಾರ್ಗಸೂಚಿ ಜಾರಿಗೆ ತರಲು ನಿರ್ದೇಶಿಸಿರುವ ಸಚಿವರು, ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವಂತೆ ನಿಗಾವಹಿಸಬೇಕು. ಜಿಲ್ಲಾಡಳಿತವು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

ಕಾಡುಪ್ರಾಣಿಗಳ ನಡವಳಿಕೆಯನ್ನು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ನಿಖರವಾಗಿ ಊಹಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಅರಣ್ಯ ಪ್ರದೇಶಗಳು ಹಾಗೂ ಆನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರಾಣಿಗಳನ್ನು ವೀಕ್ಷಿಸುವಾಗ ಅಂತರ ಕಾಯ್ದುಕೊಳ್ಳುವ ಜೊತೆಗೆ ತಮ್ಮ ಸುರಕ್ಷತೆಯ ಬಗ್ಗೆ ತೀವ್ರ ಎಚ್ಚರಿಕೆ ವಹಿಸಬೇಕು ಎಂದು ಸಚಿವರು ಪ್ರವಾಸಿಗರಲ್ಲಿ ಮನವಿ ಮಾಡಿದ್ದಾರೆ.

ಇದೇ ವೇಳೆ, ಸೋಮವಾರ ದುಬಾರೆ ಶಿಬಿರದಲ್ಲಿ ನಡೆದ ಸಾಕಾನೆಗಳ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 'ಮಾರ್ತಾಂಡ' ಆನೆ ಮಂಗಳವಾರ ಬೆಳಗ್ಗೆ ಮೃತಪಟ್ಟಿರುವ ಸುದ್ದಿ ತಿಳಿದು ಸಚಿವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಮಾರ್ತಾಂಡನ ಅಗಲಿಕೆ ಶಿಬಿರದ ಸಿಬ್ಬಂದಿ ಹಾಗೂ ಪ್ರಾಣಿ ಪ್ರಿಯರಿಗೆ ನೋವು ತಂದಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.

ಜಂಬೂ ಸವಾರಿಯಿಂದ ಹೊರಕ್ಕೆ

ಹಾಸನ ಜಿಲ್ಲೆ ಆಲೂರಿನಲ್ಲಿ 2023 ರಲ್ಲಿ ಸೆರೆ ಹಿಡಿಯಲಾಗಿದ್ದ 53 ವರ್ಷದ ಮಾರ್ತಾಂಡ 4500 ಕೆ.ಜಿ. ತೂಕವಿತ್ತು. ಹಾಸನ ಜಿಲ್ಲೆ ಯಸಳೂರಿನ ಬಳಿ 2014ರಲ್ಲಿ ಸೆರೆ ಹಿಡಿಯಲಾಗಿದ್ದ 26 ವರ್ಷದ ಕಂಜನ್ 3 ಬಾರಿ ದಸರಾ ಮಹೋತ್ಸವದಲ್ಲಿ ಭಾಗಿಯಾಗಿದ್ದ. ಇನ್ನು ಮುಂದೆ ದಸರಾ ಮಹೋತ್ಸವಕ್ಕೆ ಈ ಆನೆಯನ್ನು ಬಳಸದಂತೆ ಸೂಚಿಸಿರುವುದಾಗಿಯೂ ಈಶ್ವರ ಖಂಡ್ರೆ ಹೇಳಿದ್ದಾರೆ.

ಪರಿಹಾರ ಘೋಷಣೆ

ಸಂತ್ರಸ್ತ ಕುಟುಂಬಕ್ಕೆ ಅರಣ್ಯ ಇಲಾಖೆ 20 ಲಕ್ಷ ರೂ.ಗಳ ಪರಿಹಾರವನ್ನು ಘೋಷಣೆ ಮಾಡಿದೆ.

ಮಾನವೀಯತೆ ಮೆರೆದ ಪತಿ

ಈ ನಡುವೆ ಪತ್ನಿಯ ಸಾವಿನಲ್ಲೂ ಆಕೆಯ ಪತಿ ಜೋಯಲ್ ಮಾನವೀಯತೆ ಮೆರೆದಿದ್ದಾರೆ. ದುಬಾರೆಯಲ್ಲಿ ಸಂಭವಿಸಿದ ಭೀಕರ ದುರಂತದಲ್ಲಿ ಮೃತಪಟ್ಟ ಮಹಿಳೆಯ ಜೋಸ್ನಿಯ ನೇತ್ರವನ್ನು ಪತಿ ಜೋಯಲ್ ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಎರಡು ದಿನ ಶಿಬಿರ ಬಂದ್

ದುಬಾರೆ ಸಾಕಾನೆ ಶಿಬಿರದಲ್ಲಿ ಪ್ರವಾಸಿ ಮಹಿಳೆ ಹಾಗೂ ಸಾಕಾನೆ ಮಾರ್ತಾಂಡ ಸಾವಿನ ಹಿನ್ನೆಲೆಯಲ್ಲಿ ಎರಡು ದಿನಗಳ ಕಾಲ ಆನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದು ಡಿಸಿಎಫ್ ಅಭಿಷೇಕ್ ಅವರು ತಿಳಿಸಿದ್ದಾರೆ.



ಕೂಡ್ಲು ರಾಮದಾಸನಗರ ಕಾಳ್ಯಂಗಾಡಿನಲ್ಲಿರುವ ಬಾರಿಕ್ಕಾಡು ಅಂಜಾರಿಲ್ಲಂ ತರವಾಡಿನ ನವೀಕೃತ ತರವಾಡು ಮನೆಯ ಗೃಹಪ್ರವೇಶ, ಕೊರತ್ತಿಯಮ್ಮ, ಗುಳಿಗ ದೈವಗಳ ಪುನರ್ ಪ್ರತಿಷ್ಠಾ ಕಲಶಾಭಿಷೇಕದ ಅಂಗವಾಗಿ ಮಂಗಳವಾರ ಕೊರತ್ತಿಯಮ್ಮನ ಕೋಲ ವೈಭವದೊಂದಿಗೆ ಜರಗಿತು. ಅಸಂಖ್ಯ ಭಕ್ತಾದಿಗಳು ಭಾಗವಹಿಸಿದ್ದರು.

ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ

• **ಪುತ್ತೂರು:** ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಿ ಹಣ ವರ್ಗಾವಣೆ ಮಾಡಿರುವ ಕುರಿತು ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ನಗರದ ಪರ್ಲಡ್ಕ ಪಾಂಗ್ಲಾಯಿ ನಿವಾಸಿ ಶಿವಶಂಕರ ಅವರು ಬ್ಯಾಂಕ್ ಖಾತೆಯಲ್ಲಿದ್ದ ಹಣ ಕಳೆದುಕೊಂಡವರು. ಅವರು ಪುತ್ತೂರು ಯೂನಿಯನ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದು, ಮೇ 1ರಂದು ರೂ.51 ಸಾವಿರ, ಮೇ 2ರಂದು ರೂ.49 ಸಾವಿರ, ಮೇ 3ರಂದು ರೂ.1500 ಮತ್ತು ರೂ.10,300 ಹಣವನ್ನು ಅವರ ಖಾತೆಯಿಂದ ಯಾರೋ ಅನುಮತಿ ಇಲ್ಲದೆ ಕಾನೂನು ಬಾಹಿರವಾಗಿ ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಿ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ.

ಕುರಿತು ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ಹಣ ವರ್ಗಾವಣೆಯಾಗಿರುವ ಕುರಿತು ಮಾಹಿತಿ ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಅವರು ಸೈಬರ್ ಹೆಲ್ಪ್‌ಲೈನ್ ನಂಬರ್‌ಗೆ ಕರೆ ಮಾಡಿ ದೂರು ನೀಡಿದ್ದರು. ಈ ತನಕ ಹಣ ವಾಪಸಾಗದ ಹಿನ್ನೆಲೆಯಲ್ಲಿ ಮೇ 15ರಂದು ಅವರು ಪುತ್ತೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಚೇರಿ, ಹೋಟೆಲ್, ಅಂಗಡಿ: ಬೆಳ್ತಂಗಡಿಯಲ್ಲಿ ಸರಣಿ ಕಳವು

• **ಬೆಳ್ತಂಗಡಿ:** ರಾತ್ರೋರಾತ್ರಿ ಬೆಳ್ತಂಗಡಿ ನಗರದ ವಕೀಲರ ಕಚೇರಿ, ಹೋಟೆಲ್, ಅಂಗಡಿಗಳಿಗೆ ನುಗ್ಗಿದ ಕಳ್ಳರು ನಗದು ದೋಚಿ ಪರಾರಿಯಾದ ಘಟನೆ ಮೇ 18 ರಂದು ರಾತ್ರಿ ನಡೆದಿದೆ.

ಬೆಳ್ತಂಗಡಿ ಕೋರ್ಟ್ ರಸ್ತೆಯ ಧರ್ಮಶ್ರೀ ಬಿಲ್ಡಿಂಗ್‌ನ ಸಮೃದ್ಧಿ ಎಂಟರ್‌ಪ್ರೈಸಸ್ ನಿಂದ ಸುಮಾರು 1.50 ಲಕ್ಷ ನಗದು ಕದ್ದು, ಸಿಸಿ ಕ್ಯಾಮೆರಾವನ್ನು ಹಾನಿಗೊಳಿಸಿ ಮೆಮೊರಿ ಕಾರ್ಡ್‌ನ್ನು ಪಡೆದು ಪರಾರಿಯಾಗಿದ್ದಾರೆ. ಹಾಗೂ ಅದೇ ಕಟ್ಟಡದ ಮಹಮ್ಮದ್ ಹನೀಫ್ ಎಂಬವರ ಟಿ.ಎಚ್. ರಿಯಲ್ ಎಸ್ಟೇಟ್ ಕಚೇರಿ, ಕಟ್ಟಡ ಮಾಲಕರ ಕಚೇರಿ ಸೇರಿದಂತೆ ವಕೀಲರುಗಳಾದ ರಾಧಾಕೃಷ್ಣ ಉಷಾ ಎನ್.ಜಿ, ಯತೀಶ್ ಶೆಟ್ಟಿ ಪಿ. ಕಚೇರಿಗಳಿಗೆ ನುಗ್ಗಿದ್ದಾರೆ.

ಮೂರು ಮಾರ್ಗದ ಬಳಿ ಇರುವ ಮಾತೃಶ್ರೀ ಹೊಟೇಲ್‌ನಲ್ಲಿದ್ದ ಡಬ್ಬಿಯಿಂದ ರೂ.5000 ಹಾಗೂ ಡ್ರಾವರ್ ನಿಂದ 2000 ಸಾವಿರ, ಶಬರಿ ಎಂಟರ್‌ಪ್ರೈಸಸ್ ನಿಂದ ಸುಮಾರು 2 ಸಾವಿರ, ವಕೀಲ ಜಯರಾಮ ಮಣಿಯಾಣಿಯವರ ಕಚೇರಿ, ಮೆ. ಹಿಮಾಲಯ ಫೈನಾನ್ಸ್ ಮತ್ತು ಇನ್ವೆಸ್ಟ್ ಮೆಂಟ್, ವಕೀಲ ಜಿತೇಶ್ ಕೆ. ಅವರ ಕಚೇರಿಗೆ ನುಗ್ಗಿದ್ದಾರೆ. ಘಟನಾ ಸ್ಥಳಗಳಿಗೆ ಬೆಳ್ತಂಗಡಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.



ಮರ ಕಡಿಯುತ್ತಿದ್ದಾಗ ಕೆಳಗೆ ಬಿದ್ದು ಸಾವು

ಮಡಿಕೇರಿ: ಮರ ಕಡಿಯುವಾಗ ಆಕಸ್ಮಿಕವಾಗಿ ಕೆಳಗೆ ಬಿದ್ದು ಅರಂತೋಡು ಮೂಲದ ಕಾರ್ಮಿಕ ಸಾವನ್ನಪ್ಪಿರುವ ಘಟನೆ ಮಡಿಕೇರಿ ನಗರಸಭೆ ವಸತಿ ಗೃಹದ ಬಳಿ ನಡೆದಿದೆ. ನಗರಸಭೆ ಸಿಬ್ಬಂದಿ ಸೋಮಶೇಖರ್ ಎಂಬವರು ಅವರು ವಾಸಿಸುವ ವಸತಿಗೃಹದ ಪಕ್ಕದಲ್ಲಿದ್ದ ಮರವನ್ನು ಕಡಿಸುವ ವೇಳೆ ಈ ಘಟನೆ ನಡೆದಿದ್ದು, ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ವ್ಯಕ್ತಿ ಸಾವನ್ನಪ್ಪಿದ್ದಾರೆ. ಈ ನಡುವೆ ಮರ ಕಡಿಯಲು ಅನುಮತಿ ಪಡೆಯದಿರುವ ಬಗ್ಗೆಯೂ ಆರೋಪ ಕೇಳಿ ಬಂದಿದ್ದು, ಸ್ಥಳಕ್ಕೆ ನಗರಸಭಾ ಅಧ್ಯಕ್ಷೆ ಕಲಾವತಿ ಹಾಗೂ ಮಡಿಕೇರಿ ನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಯುಎಇ: ತುಂಬೆ ಗ್ರೂಪ್‌ನ ಪಶುವೈದ್ಯಕೀಯ ಬೋಧನಾ ಆಸ್ಪತ್ರೆ-ಕಾಲೇಜಿಗೆ ಶಂಕುಸ್ಥಾಪನೆ

• **ಮಂಗಳೂರು :** ಯುಎಇಯ ಪ್ರಾಣಿ ಆರೋಗ್ಯ ರಕ್ಷಣೆ ಮತ್ತು ಪಶುವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಇತಿಹಾಸ ಸೃಷ್ಟಿಯಾಗಿದೆ. ತುಂಬೆ ಗ್ರೂಪ್ ದೇಶದ ಮೊಟ್ಟಮೊದಲ ಖಾಸಗಿ ಪಶುವೈದ್ಯಕೀಯ ಬೋಧನಾ ಆಸ್ಪತ್ರೆ ಮತ್ತು ಕಾಲೇಜು ನಿರ್ಮಾಣಕ್ಕೆ ಅಜ್ಮಾನ್‌ನ ತುಂಬೆ ಮೆಡಿಸಿಟಿಯಲ್ಲಿ ಅಧಿಕೃತವಾಗಿ ಚಾಲನೆ ನೀಡಿದೆ.

ಅಜ್ಮಾನ್‌ನ ಯುವರಾಜ ಹಾಗೂ ಕಾರ್ಯಕಾರಿ ಮಂಡಳಿಯ ಅಧ್ಯಕ್ಷ ಶೇಖ್ ಅಮ್ಮರ್ ಬಿನ್ ಹುಮೈದ್ ಅಲ್ ನುಐಮಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ತುಂಬೆ ಗ್ರೂಪ್‌ನ ಸಂಸ್ಥಾಪಕ ಅಧ್ಯಕ್ಷ ಡಾ. ತುಂಬೆ ಮೊಯ್ದೀನ್ ಉಪಸ್ಥಿತರಿದ್ದರು.

ಒಂದೇ ಸೂರಿನಡಿ ಎಲ್ಲ ಪ್ರಾಣಿಗಳಿಗೂ ಚಿಕಿತ್ಸೆ ಮತ್ತು ಶಿಕ್ಷಣ

ಇಲ್ಲಿಯವರೆಗೆ ಯುಎಇಯಲ್ಲಿ ಸುಧಾರಿತ ಪಶುವೈದ್ಯಕೀಯ ಆರೈಕೆ ಮತ್ತು ಶಿಕ್ಷಣಕ್ಕಾಗಿ ಸರ್ಕಾರಿ ಸಂಸ್ಥೆಗಳು ಅಥವಾ ವಿದೇಶಿ ಶಿಕ್ಷಣವನ್ನು ಅವಲಂಬಿಸಬೇಕಾಗಿತ್ತು. ಆದರೆ, 85,000 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗುತ್ತಿರುವ ಈ ಹೊಸ ತುಂಬೆ ಆಸ್ಪತ್ರೆ ಮತ್ತು ಕಾಲೇಜು ಆ ಕೊರತೆಯನ್ನು ನೀಗಿಸಲಿದೆ. ಇಲ್ಲಿ ಸಣ್ಣ ಸಾಕುಪ್ರಾಣಿಗಳಾದ ನಾಯಿ, ಬೆಕ್ಕುಗಳಿಂದ ಹಿಡಿದು, ಯುಎಇಯ ಹೆಮ್ಮೆಯ ಸಂಕೇತಗಳಾದ ಕುದುರೆ, ಒಂಟೆ ಹಾಗೂ ಇತರ ಜಾನುವಾರುಗಳಿಗೆ ಒಂದೇ ಸೂರಿನಡಿ ಅತ್ಯಾಧುನಿಕ ಚಿಕಿತ್ಸೆ ನೀಡಲಾಗುತ್ತದೆ. ಈ ಸಂಕೀರ್ಣದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಶಸ್ತ್ರಚಿಕಿತ್ಸಾ ಕೊಠಡಿಗಳು, ರೋಗ ನಿರ್ಣಯ ಚಿತ್ರಣ (ಡಯಾಗ್ನಾಸ್ಟಿಕ್ ಇಮೇಜಿಂಗ್), ತೀವ್ರ ನಿಗಾ ಘಟಕ ಮತ್ತು ಪ್ರಯೋಗಾಲಯಗಳು ಇರಲಿವೆ.

ಪ್ರಮುಖ ಕೋರ್ಸ್ ಮತ್ತು ಜಾಗತಿಕ ಪಾಲುದಾರಿಕೆ

ಈ ಕಾಲೇಜು ತುಂಬೆ ಗ್ರೂಪ್‌ನ ಪ್ರಮುಖ ಶೈಕ್ಷಣಿಕ ಸಂಸ್ಥೆಯಾದ ಗಲ್ಫ್ ಮೆಡಿಕಲ್ ಯೂನಿವರ್ಸಿಟಿ ಅಡಿಯಲ್ಲಿ ಕಾರ್ಯ ನಿರ್ವಹಿಸಲಿದ್ದು, ಡಾಕ್ಟರ್ ಆಫ್ ವೆಟರಿನರಿ ಮೆಡಿಸಿನ್ ಇದರ ಪ್ರಮುಖ ಪದವಿಯಾಗಿದೆ. ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ತರಬೇತಿ ನೀಡಲು ಕಾಲೇಜು ವಿಶ್ವದ ಹೆಸರಾಂತ ಸಂಸ್ಥೆಗಳೊಂದಿಗೆ ಕೈಜೋಡಿಸಿದೆ.

ಲಂಡನ್‌ನ ರಾಯಲ್ ವೆಟರಿನರಿ ಕಾಲೇಜು ಹಾಗೂ ರಷ್ಯಾದ ಡಾನ್ ಸ್ಟೇಟ್ ಯೂನಿವರ್ಸಿಟಿ ಜೊತೆ ಅಂತಾರಾಷ್ಟ್ರೀಯ ಶೈಕ್ಷಣಿಕ ಸಹಯೋಗ.

ಭಾರತದ ರಾಜೀವ್‌ಗಾಂಧಿ ಇನ್ಸಿಟಿಟ್ಯೂಟ್ ಆಫ್ ವೆಟರಿನರಿ ಎಜುಕೇಶನ್ ಎಂಡ್ ರಿಸರ್ಚ್ ಜೊತೆ ಸಂಶೋಧನಾ ಪಾಲುದಾರಿಕೆ. ಶಾರ್ಜಾ ಈಕ್ವಿನ್ ಹಾಸ್ಪಿಟಲ್ (ಕುದುರೆಚಿಕಿತ್ಸೆ), ಶಾರ್ಜಾ ಫಾಲ್ಕನ್ ಹಾಸ್ಪಿಟಲ್ (ಹದ್ದುಗಳ ಚಿಕಿತ್ಸೆ) ಮತ್ತು ಯುಎಕ್ಯೂ ಕ್ಯಾಮೆಲ್ ಬ್ರೀಡಿಂಗ್ ಸೆಂಟರ್ (ಒಂಟೆ ತಳಿ ಅಭಿವೃದ್ಧಿ ಕೇಂದ್ರ) ಗಳೊಂದಿಗೆ ಪ್ರಾಯೋಗಿಕ ತರಬೇತಿಗಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ.



ಯುಎಇಯ ಹೆರಿಟೇಜ್ ಹಾಗೂ ಪ್ರಾಣಿಗಳಿಗೆ ನಮ್ಮ ಒತ್ತು

ಮೂರು ದಶಕಗಳ ಹಿಂದೆ ನಾವು ತುಂಬೆ ಸಂಸ್ಥೆಯನ್ನು ಪ್ರಾರಂಭಿಸಿದಾಗ, ಯುಎಇ ಜನತೆಗೆ ಜಾಗತಿಕ ಮಟ್ಟದ ಆರೋಗ್ಯ ಮತ್ತು ಶಿಕ್ಷಣವನ್ನು ಇಲ್ಲೇ ನೀಡುವುದು ನಮ್ಮ ಗುರಿಯಾಗಿತ್ತು. ಇಂದು ನಾವು ಆ ಭರವಸೆಯನ್ನು ನಮ್ಮ ಮನೆ, ಫಾರ್ಮ್‌ಗಳು ಮತ್ತು ನಮ್ಮ ಪರಂಪರೆಯ ಭಾಗವಾಗಿರುವ ಪ್ರಾಣಿಗಳಿಗೂ ವಿಸ್ತರಿಸುತ್ತಿದ್ದೇವೆ. ನಮ್ಮ ಮಾನವ ಆಸ್ಪತ್ರೆಗಳು ಯಾವ ಉನ್ನತ ಗುಣಮಟ್ಟಕ್ಕೆ ಹೆಸರಾಗಿವೆಯೋ, ಅದೇ ಗುಣಮಟ್ಟದ ಚಿಕಿತ್ಸೆಯನ್ನು ಈ ಪಶುವೈದ್ಯಕೀಯ ಆಸ್ಪತ್ರೆಯೂ ನೀಡಲಿದೆ.

■ **ಡಾ. ತುಂಬೆ ಮೊಯ್ದೀನ್ ,**
ಸಂಸ್ಥಾಪಕ ಅಧ್ಯಕ್ಷ, ತುಂಬೆ ಗ್ರೂಪ್

ಗಲ್ಫ್ ಮೆಡಿಕಲ್‌ಯೂನಿವರ್ಸಿಟಿಯ ಚಾನ್ಸಲರ್ ಪ್ರೊ. ಮಂದಾ ವೆಂಕಟರಮಣ ಉಪಸ್ಥಿತರಿದ್ದರು.

ದಾಖಲಾತಿ ಮಾಹಿತಿ

ಈ ಕಾಲೇಜಿನ ಪ್ರವೇಶ ಪ್ರಕ್ರಿಯೆ, ಕೋರ್ಸ್‌ಗಳ ವಿವರಗಳು ಮತ್ತು ಮುಂಬರುವ ಅಲ್ಪಾವಧಿ ತರಬೇತಿಗಳ ಮಾಹಿತಿಗಾಗಿ ಆಸಕ್ತರು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ gmu.ac.ae ಗೆ ಭೇಟಿ ನೀಡಬಹುದು.

ರೇಷನಿಂಗ್ ಬಳಿಕ ನೀರಿನ ಸಮಸ್ಯೆಯಿಲ್ಲ | ಕೆಲವೆಡೆ ಮಾತ್ರ ಸ್ವಲ್ಪಮಟ್ಟಿನ ತೊಂದರೆ

ಕಂಟೋನ್ಮೆಂಟ್: ನೀರು ಸರಬರಾಜು ಹೇರಳ

▸ **ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

ಮಂಗಳೂರು: ನಗರದ ಹೆಗ್ಗುರುತು ಸ್ಟೇಟ್‌ಬ್ಯಾಂಕ್ ಪ್ರದೇಶವನ್ನು ಒಳಗೊಂಡ ಕಂಟೋನ್ಮೆಂಟ್ ವಾರ್ಡ್‌ನಲ್ಲಿ ಒಂದೆರಡು ಕಡೆ ಸ್ವಲ್ಪಮಟ್ಟಿನ ಸಮಸ್ಯೆ ಹೊರತುಪಡಿಸಿದರೆ ನೀರು ಪೂರೈಕೆ ಸರಾಗವಾಗಿದೆ.

ಸ್ಟೇಟ್‌ಬ್ಯಾಂಕ್‌ನ ಒಂದು ಭಾಗ, ಕೇಂದ್ರ ಮೈದಾನ, ಪೊಲೀಸ್ ವಸತಿ ಗೃಹ, ಓಲ್ಡ್ ಕೆಂಟ್ ರೋಡ್, ಪಾಂಡೇಶ್ವರ ಅಗ್ನಿಶಾಮಕ ಠಾಣೆ, ಶಿವನಗರ ಒಂದು ಭಾಗ, ಅತ್ತಾವರ ಕಟ್ಟಪುಣಿ, ಕೆಎಂಸಿ ಐದನೇ ಅಡ್ಡರಸ್ತೆ, ವೈದ್ಯನಾಥ ನಗರ, ಅತ್ತಾವರ ಕೆಇಬಿ ಮುಂಭಾಗದ ಪ್ರದೇಶಗಳಲ್ಲಿ ವ್ಯಾಪಿಸಿರುವ ಕಂಟೋನ್ಮೆಂಟ್ ವಾರ್ಡ್ ಸ್ವತಂತ್ರ ಮನೆಗಳು ಹಾಗೂ ವಸತಿ ಸಮುಚ್ಛಯಗಳನ್ನು ಒಳಗೊಂಡಿದೆ.

ಈ ವಾರ್ಡ್‌ನ ದೂಮಪ್ಪ ಕಂಪೌಂಡ್, ಗ್ರೀನ್ ಲೇಔಟ್ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆಯಿದೆ. ಇಲ್ಲಿ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿಲ್ಲ, ಟ್ಯಾಂಕ್ ತುಂಬುವ ಮೊದಲೇ ನೀರು ಪೂರೈಕೆ ಬಂದ್ ಆಗುತ್ತಿದೆ. ಇದರಿಂದ ಕೆಲವೊಮ್ಮೆ ನೀರಿನ ಕೊರತೆ ಎದುರಾಗುತ್ತದೆ ಎಂಬ ದೂರುಗಳಿವೆ.

ಕಂಟೋನ್ಮೆಂಟ್ ವಾರ್ಡ್‌ಗೆ ಪಡೀಲ್ ಟ್ಯಾಂಕ್‌ನಿಂದ ನೀರು ಪೂರೈಕೆಯಾಗುತ್ತಿದೆ. ಇಡೀ ವಾರ್ಡ್‌ಗೆ ಒಂದೇ ಟ್ಯಾಂಕ್‌ನಿಂದ ನೀರು ಸರಬರಾಜು ಆಗುತ್ತಿರುವ ಕಾರಣ ರೇಷನಿಂಗ್ ಆರಂಭಗೊಳ್ಳುವ ಮುನ್ನ ನೀರನ್ನು ಹಂಚಿಕೆ ಮಾಡಿ ವಿತರಣೆ ಮಾಡಲಾಗುತ್ತಿತ್ತು. ಇಲ್ಲಿ ಬೆಳಗ್ಗೆ 4ರಿಂದ ಮಧ್ಯಾಹ್ನ 12ರವರೆಗೆ ನೀರು ಪೂರೈಕೆ ಮಾಡಲಾಗುತ್ತಿತ್ತು. ವಾರ್ಡ್‌ನ ಎಲ್ಲ ಪ್ರದೇಶಗಳಿಗೆ ನೀರು ಲಭ್ಯವಾಗಬೇಕು, ಎತ್ತರದ ಪ್ರದೇಶಗಳಿಗೂ ನೀರು ತಲುಪಬೇಕು ಎಂಬ ದೃಷ್ಟಿಯಿಂದ ಬೆಳಗ್ಗೆ 4ರಿಂದ 8ರವರೆಗೆ ಒಂದು ಭಾಗಕ್ಕೆ, ಬೆಳಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಇನ್ನೊಂದು ಭಾಗಕ್ಕೆ ಹಂಚಿಕೆ ಮಾಡಿ ನೀರು ವಿತರಿಸಲಾಗುತ್ತಿತ್ತು. ರೇಷನಿಂಗ್ ಬಳಿಕವೂ ಇದೇ ಮಾದರಿಯನ್ನು ಅನುಸರಿಸಲಾಗುತ್ತಿದೆ. ನೀರು ಪೂರೈಕೆಗೆ ರೇಷನಿಂಗ್ ಆರಂಭಗೊಂಡ ಬಳಿಕ ನೀರಿನ ಕೊರತೆ ಬಗ್ಗೆ ದೂರುಗಳು ಕಡಿಮೆಯಾಗಿವೆ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳು ಇಲ್ಲ. ಅತ್ತಾವರ ವೈದ್ಯನಾಥ ನಗರದಲ್ಲಿ ಎರಡು ಬೋರ್‌ವೆಲ್‌ಗಳಿದ್ದು, ಡ್ರೈನೇಜ್ ಸೋರಿಕೆಯಿಂದ ಇದರ ನೀರನ್ನು ಬಳಸಲಾಗುತ್ತಿಲ್ಲ. ಈ ವಾರ್ಡ್‌ನಲ್ಲಿ ಈ ಬೇಸಗೆಯಲ್ಲಿ ಇದುವರೆಗೆ ಮನಪಾ ವತಿಯಿಂದ ಟ್ಯಾಂಕರ್ ನೀರು ಪೂರೈಸುವ ಸನ್ನಿವೇಶ ಉಂಟಾಗಿಲ್ಲ. ವಸತಿ ಸಮುಚ್ಛಯಗಳು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿವೆ.

ಕಂಟೋನ್ಮೆಂಟ್ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ.60ರಷ್ಟು ಪೂರ್ಣಗೊಂಡಿದೆ. ಮುಖ್ಯ ಪೈಪ್‌ಲೈನ್ ಆಗಿದ್ದು, ಒಳರಸ್ತೆಗಳಲ್ಲಿ ಇನ್ನಷ್ಟೇ ಪೈಪ್‌ಲೈನ್ ಅಳವಡಿಸಬೇಕಿದೆ. ಸ್ಟೇಟ್‌ಬ್ಯಾಂಕ್ ಸರ್ವಿಸ್ ಬಸ್ ಸ್ಟ್ಯಾಂಡ್ ಬಳಿ 25 ಲಕ್ಷ ಲೀಟರ್ ಸಾಮರ್ಥ್ಯದ ಬೃಹತ್ ಟ್ಯಾಂಕ್ ನಿರ್ಮಾಣಗೊಂಡಿದೆ.

• ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



ಪಾಂಡೇಶ್ವರ ಅಗ್ನಿಶಾಮಕ ಠಾಣೆ ಮುಂಭಾಗದ ರಸ್ತೆ, ವೃತ್ತ ಅಭಿವೃದ್ಧಿಪಡಿಸಲಾಗಿದೆ

▸ ಡ್ರೈನೇಜ್ ಸಮಸ್ಯೆ

ಪಾಂಡೇಶ್ವರ, ದೂಮಪ್ಪ ಕಂಪೌಂಡ್ ಮುಂತಾದ ಪ್ರದೇಶಗಳಲ್ಲಿ ಡ್ರೈನೇಜ್ ಸಮಸ್ಯೆಯಿದೆ. ಮ್ಯಾನ್ ಹೋಲ್‌ಗಳಲ್ಲಿ ಕೊಳಚೆ ನೀರು ಉಕ್ಕಿ ಸ್ಥಳೀಯರು ತೊಂದರೆ ಅನುಭವಿಸುತ್ತಿದ್ದಾರೆ. ಇಲ್ಲಿ ಗೂಡ್ಸ್ ರೈಲ್ವೆ ಹಳಿ ಹಾದುಹೋಗುತ್ತಿದ್ದು, ಯುಜಿಡಿ ಪೈಪ್‌ಲೈನ್ ಅಳವಡಿಸಲು ರೈಲ್ವೆ ಇಲಾಖೆ ಬಿಡುತ್ತಿಲ್ಲ. ಇದರಿಂದಾಗಿ ಡ್ರೈನೇಜ್ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತಿಲ್ಲ.

ಕೃತಕ ಪ್ರವಾಹ

ಕಂಟೋನ್ಮೆಂಟ್ ವಾರ್ಡ್‌ನ ಪಾಂಡೇಶ್ವರ, ಶಿವನಗರ, ಅತ್ತಾವರ ಪ್ರದೇಶಗಳಲ್ಲಿ ರಾಜಕಾಲುವೆಗಳು ಹಾದುಹೋಗುತ್ತಿವೆ. ಈ ಮೂರೂ ಕಡೆಯೂ ಪ್ರತಿವರ್ಷ ಮಳೆಗಾಲದಲ್ಲಿ ಕೃತಕ ನೆರೆ ಕಟ್ಟಿಟ್ಟ ಬುತ್ತಿ. ಒಂದೆರಡು ಗಂಟೆಗಳ ಕಾಲ ಭಾರಿ ಮಳೆ ಸುರಿದಾಗ ರಾಜಕಾಲುವೆಯಿಂದ ನೀರು ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಇದರಿಂದಾಗಿ ಈ ಪ್ರದೇಶದಲ್ಲಿ ಸುಮಾರು 200ರಷ್ಟು ಮನೆಗಳು ಸಮಸ್ಯೆ ಅನುಭವಿಸುತ್ತಿವೆ. ಮನೆಗಳಿಗೆ ನೀರು ನುಗ್ಗಿ ಅವಾಂತರ ಉಂಟಾಗುತ್ತಿದೆ. ಕೃತಕ ನೆರೆ ತಡೆಗೆ ತಡೆಗೋಡೆ ರಚನೆಗೊಂಡಿದ್ದರೂ, ರಾಜಕಾಲುವೆಯಲ್ಲಿ ಹರಿಯುವ ನೀರನ್ನು ಸಮುದ್ರ ಸ್ವೀಕರಿಸದೇ ಇದ್ದ ಸಂದರ್ಭದಲ್ಲಿ ಕೃತಕ ಪ್ರವಾಹ ಕಾಣಿಸಿಕೊಳ್ಳುತ್ತದೆ.

ಕಂಟೋನ್ಮೆಂಟ್ ವಾರ್ಡ್‌ನ ಒಂದೆರಡು ಕಡೆ ಮಾತ್ರ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ ಇತ್ತು. ಉಳಿದಂತೆ ಇಡೀ ವಾರ್ಡ್‌ಗೆ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ರೇಷನಿಂಗ್ ಬಳಿಕ ಇಡೀ ದಿನ ನೀರು ಪೂರೈಕೆಯಾಗುವ ಕಾರಣ ನೀರಿನ ಕೊರತೆ ಬಗ್ಗೆ ದೂರುಗಳು ಕೇಳಿಬರುತ್ತಿಲ್ಲ. ವಾರ್ಡ್‌ನ ಬಹುತೇಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆರ್‌ಟಿಒ -ಎಂವಿ ಶೆಟ್ಟಿ ವೃತ್ತ-ಪಾಂಡೇಶ್ವರ, ಆರ್‌ಟಿಒ- ಶಿವನಗರ, ಅಗ್ನಿಶಾಮಕ ಠಾಣೆ-ಕೇರಳಸಮಾಜ, ಪಾಂಡೇಶ್ವರ, ಶಿವನಗರ ಮುಂತಾದ ಕಡೆಗಳಲ್ಲಿ ರಸ್ತೆ ಸಂಪೂರ್ಣ ಅಭಿವೃದ್ಧಿಪಡಿಸಲಾಗಿದೆ. ಮುಡಾ ವತಿಯಿಂದ ಪಾಂಡೇಶ್ವರದಲ್ಲಿ ಒಟ್ಟು 1.25 ಕೋಟಿ ರೂ. ವೆಚ್ಚದಲ್ಲಿ ಎರಡು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.



■ **ದಿವಾಕರ ಪಾಂಡೇಶ್ವರ,**
ಕಂಟೋನ್ಮೆಂಟ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



ಕರ್ನಾಟಕದ ಗ್ಯಾರಂಟಿಗಳಿಗೆ ವರ್ಷದ ಹರ್ಷ



ಕರ್ನಾಟಕ ರಾಜ್ಯದಲ್ಲಿ ಗ್ಯಾರಂಟಿ ಶಕೆ ಆರಂಭವಾಗಿ ಇಂದಿಗೆ 1,097 ದಿನಗಳು ಸಂದಿವೆ. ಕನ್ನಡಿಗರ ವಿಶ್ವಾಸ ಗಳಿಸಿ ರಾಜ್ಯದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇಂದು ಮೂರು ವರ್ಷಗಳನ್ನು ಪೂರೈಸಿ ನಾಲ್ಕನೇ ವರ್ಷಕ್ಕೆ ಕಾಲಿರಿಸಿದೆ.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಹಾಗೂ ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು 2023ರ ಮೇ 20ರಿಂದ ಈವರೆಗೆ ಜನರಲ್ಲಿ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ. ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷ ನೀಡಿರುವ ಭರವಸೆಗಳು ಈ ಸರ್ಕಾರದ ಅವಧಿಯಲ್ಲಿ ಈಡೇರುತ್ತಿವೆ. ಜಾಗತಿಕ ಪ್ರಶಂಸೆಗೆ ಕಾರಣವಾಗಿರುವ ಗ್ಯಾರಂಟಿ ಯೋಜನೆಗಳು, ಜಗತ್ತಿನ ಮೂಲೆಮೂಲೆಗಳಿಂದ ಅಬಾಧಿತವಾಗಿ ಬಂಡವಾಳ ಹರಿದು ಬರಲು ಕಾರಣವಾಗಿರುವ ಅಭಿವೃದ್ಧಿ ಯೋಜನೆಗಳು, ಭೌಗೋಳಿಕ, ಸಾಮಾಜಿಕ ಕಂದರಗಳನ್ನು ಮೀರಿರುವ ಕಲ್ಯಾಣ ಯೋಜನೆಗಳು.. ಇವೆಲ್ಲವೂ ಕರ್ನಾಟಕದ ಪ್ರಗತಿಯ ಸಾಧನೆಯನ್ನು ಸಾರಿ ಸಾರಿ ಹೇಳುತ್ತಿವೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮಾನವಿಕ, ಸಾಮಾಜಿಕ, ಆರ್ಥಿಕ ಪ್ರಗತಿಗೆ ಅಪಾರ ಕೊಡುಗೆ ನೀಡುವಂತಹ ಹತ್ತು ಹಲವು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಕೃಷಿ ಕ್ಷೇತ್ರದಿಂದ ಐಟಿ–ಬಿಟಿಯವರೆಗೆ, ಪಾರಂಪರಿಕ ಉದ್ಯಮಗಳಿಗೆ ಉತ್ತೇಜನ ನೀಡುವುದರಿಂದ ಹಿಡಿದು ನವೋದ್ಯಮಗಳ ನೆಚ್ಚಿನ ಜಾಗತಿಕ ತಾಣ ಎನ್ನುವ ಗರಿಮೆಯನ್ನು ಪಡೆಯುವವರೆಗೆ ಕಾಂಗ್ರೆಸ್ ಸರ್ಕಾರದ ಪ್ರಗತಿಯ ಮಾದರಿಯಿಂದ ಯಾವುದೇ ಕ್ಷೇತ್ರವಾಗಲಿ ಅಥವಾ ವ್ಯಕ್ತಿಯಾಗಲಿ ಹೊರಗುಳಿದಿಲ್ಲ.

ಸಮ ಸಮಾಜದ ಪರಿಕಲ್ಪನೆಯಲ್ಲಿ ಅಧಿಕಾರ ಸ್ವೀಕಾರದ ಹೊಸ್ತಿಲಲ್ಲಿ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರ ನೀಡಿದ್ದ ಪಂಚ ಗ್ಯಾರಂಟಿ ಯೋಜನೆಗಳು ಸರ್ಕಾರದ ಜನಪರ ಕಾಳಜಿಯ ಪ್ರತೀಕವಾಗಿದ್ದವು. ಮಾತ್ರವಲ್ಲ, ಎಲ್ಲರಿಗೂ ಘನತೆಯುಕ್ತ ಬದುಕು, ಸಮಾನ ಅವಕಾಶ ಕಲ್ಪಿಸುವ ಸಂವಿಧಾನದ ಆಶಯದ ಪರಿಪಾಲನೆಯೂ ಆಗಿತ್ತು. ಕಾಂಗ್ರೆಸ್ ಸರ್ಕಾರವು ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನರ ಬದುಕಿಗೆ ಭದ್ರತೆ ಒದಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,39,123 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗಾಗಿ ವೆಚ್ಚಮಾಡಲಾಗಿದೆ. ರಾಜ್ಯದ ಹಣಕಾಸು ಪರಿಸ್ಥಿತಿ ಆಯೋಮಯವಾಗುತ್ತದೆ ಎಂದು ಟೀಕಿಸಿದವರ ಪಾಲಿಗೆ ಈ ಯೋಜನೆಗಳ ಜನಪ್ರಿಯತೆಯು ಉತ್ತರ ನೀಡಿವೆ.

ಬಡವರ, ದಲಿತರ, ಕಾರ್ಮಿಕರ, ಮಹಿಳೆಯರ ಮತ್ತು ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಣೆ, ಸಕಾರಾತ್ಮಕ ಬದಲಾವಣೆ ಸರ್ಕಾರದ ಗುರಿ. ಸರ್ವೋದಯ, ಸಮಾನತೆ ಸಮೃದ್ಧಿ, ಸಹಬಾಳ್ವೆ, ಸಬಲೀಕರಣಗಳ ಧ್ಯೇಯ ಮಂತ್ರವನ್ನು ಪಾಲಿಸುತ್ತಾ ಪಂಚ ಗ್ಯಾರಂಟಿ ಯೋಜನೆಗಳೊಂದಿಗೆ ರಾಜ್ಯ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಆರ್ಥಿಕ ಶಿಸ್ತುಪಾಲನೆಯ ಚೌಕಟ್ಟಿನೊಳಗೆ ಸರ್ಕಾರ ಅನುಸರಿಸಿದ ರೀತಿ–ನೀತಿಗಳು ದೇಶದ ಇತರ ರಾಜ್ಯಗಳು ಕರ್ನಾಟಕ ರಾಜ್ಯವನ್ನು ಅನುಕರಿಸುವಷ್ಟರ ಮಟ್ಟಿಗೆ ಮಾದರಿ ಪ್ರಬಲ ಯೋಜನೆಗಳಾಗಿವೆ.

ಸರ್ಕಾರ ಸಾಮಾಜಿಕ ನ್ಯಾಯದತ್ತ ಪ್ರಾಮಾಣಿಕ ಹೆಜ್ಜೆಗಳನ್ನಿರಿಸಿದೆ. ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯಡಿ ರೂಪಿಸಲಾದ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಯ ದೈನಂದಿನ ಬದುಕಿನ ಮೇಲೆ ಬೀಳುತ್ತಿರುವ ಆರ್ಥಿಕ ಹೊರೆಯ ಒಂದು ಪಾಲನ್ನು ಸರ್ಕಾರ ಹೊರುತ್ತಿದೆ. ಸರ್ಕಾರದ ಈ ನಡೆಯನ್ನು ಜನತೆ ಇಂದು ಹೆಮ್ಮೆಯಿಂದ ಹಾಗೂ ಕೃತಜ್ಞತೆಯಿಂದ ಸ್ಮರಿಸುತ್ತಿದ್ದಾರೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆಯೊಂದರಲ್ಲೇ ರಾಜ್ಯದ ಮಹಿಳೆಯರು ಕಳೆದ ಮೂರು ವರ್ಷಗಳಲ್ಲಿ 726 ಕೋಟಿ (ಟಿಕೆಟ್) ಉಚಿತ ಪ್ರಯಾಣ ನಡೆಸಿದ್ದಾರೆ. ಇದಕ್ಕಾಗಿ ಸರ್ಕಾರದಿಂದ 18,945 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಕುಟುಂಬದ ಮುಖ್ಯಸ್ಥೆಗೆ ಮಾಸಿಕ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಯಲ್ಲಿ 1.24 ಕೋಟಿ ಮಹಿಳೆಯರಿಗೆ 74,216 ಕೋಟಿ ರೂ.ಗಳನ್ನು ನೀಡಲಾಗಿದೆ. ಉಚಿತ ವಿದ್ಯುತ್ ಮೂಲಕ ಮನೆಯನ್ನು ಬೆಳಗುವ ಗೃಹ ಜ್ಯೋತಿ ಯೋಜನೆಯಲ್ಲಿ 1.67 ಕೋಟಿ ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. ಇದಕ್ಕಾಗಿ ಸರ್ಕಾರ ಮೂರು ವರ್ಷಗಳಲ್ಲಿ ವ್ಯಯಿಸಿರುವುದು 26,115 ಕೋಟಿ ರೂ.ಗಳಾಗಿವೆ. ಅನ್ನಭಾಗ್ಯ ಯೋಜನೆಯಲ್ಲಿ 30.88 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ವಿತರಣೆ ಮಾಡಲಾಗಿದೆ. ಅಲ್ಲದೇ 4.44 ಕೋಟಿ ಜನರಿಗೆ ನೇರವಾಗಿ ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ 18,897 ಕೋಟಿ ರೂ.ಗಳನ್ನು ಈವರೆಗೆ ಜಮೆ ಮಾಡಲಾಗಿದೆ. ಅಲ್ಲದೇ 3.38 ಲಕ್ಷ ನಿರುದ್ಯೋಗಿ ಯುವ ಜನತೆಗೆ ಯುವನಿಧಿ ಯೋಜನೆಯಲ್ಲಿ 950 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಪಂಚ ಗ್ಯಾರಂಟಿಗಳಾಗಿ ಉಳಿಯದೇ ಷಡ್‌ಗ್ಯಾರಂಟಿಗಳಾಗಿವೆ. ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಬಂದಿದೆ.

ಉದ್ಯೋಗ ಸೃಷ್ಟಿ: ಮುಂಚೂಣಿಯಲ್ಲಿ ಕರ್ನಾಟಕ

ದೇಶದಲ್ಲೆಡೆ ಉದ್ಯೋಗ ಹಂಚಿಕೆ ಕಂಡು ಬರುತ್ತಿರುವಾಗಲೂ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಕಾಂಗ್ರೆಸ್ ಸರ್ಕಾರ ಯಶಸ್ವಿಯಾಗಿರುವ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಕರ್ನಾಟಕದ ಪ್ರಗತಿಯ ಕಥೆಗೆ ಕನ್ನಡಿ ಹಿಡಿಯಲು ಇಂದು ದೇಶದ ಮೂಲೆಮೂಲೆಗಳಿಂದ ರಾಜ್ಯಕ್ಕೆ ಉದ್ಯೋಗಾವಕಾಶಗಳನ್ನು ಅರಸಿ ಬರುವ ವಲಸೆ ಪ್ರಮಾಣದಲ್ಲಿ ಉಂಟಾಗಿರುವ ಹೆಚ್ಚಳ ನೋಡಬಹುದು. ಕರ್ನಾಟಕವೆಂದರೆ ಪ್ರಗತಿ ಎನ್ನುವುದು ದೇಶಕ್ಕೇ ಇಂದು ತಿಳಿದಿದೆ. ಅದೇ ರೀತಿ, ಒಳಮೀಸಲಾತಿ, ಉಪಯೋಜನೆಗಳು, ಗುತ್ತಿಗೆಯಲ್ಲಿನ ಮೀಸಲಾತಿ ನೀಡುವಂತಹ ಕ್ರಾಂತಿಕಾರಿ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯದ ಬೇರುಗಳು ಆಳವಾಗಲು ಶ್ರಮಿಸಿದೆ.

ಭೂ ಗ್ಯಾರಂಟಿ ಯೋಜನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದೆ. ದಶಕಗಳಿಂದ ಕಂದಾಯ ವ್ಯಾಪ್ತಿಗೆ ಬಾರದ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅದರಲ್ಲಿನ ಕುಟುಂಬಗಳಿಗೆ ಉಳುವವನೇ ಭೂಮಿಯ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯ ಒಡೆಯ ಎಂದು ಹಕ್ಕುಪತ್ರಗಳನ್ನು ವಿತರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕರ್ನಾಟಕದ ಭೂಮಿ ಹಕ್ಕುಪತ್ರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಮಹತ್ವದ ಯೋಜನೆಯನ್ನಾಗಿ, ಸರ್ಕಾರಕ್ಕೆ ಎರಡು ವರ್ಷ ಭರ್ತಿಯಾದಾಗ ಈ ಯೋಜನೆ ಜಾರಿಗೊಳಿಸಲಾಯಿತು. ಈವರೆಗೆ ತಾಂಡಾ, ಹಟ್ಟಿ ಪ್ರದೇಶಗಳಲ್ಲಿ ವಾಸಿಸುತ್ತಿರುವ 2.20 ಲಕ್ಷ ಜನರಿಗೆ ಭೂದಾಖಲೆಗಳನ್ನು ಉಚಿತವಾಗಿ ನೀಡಿ ಭೂ ರಕ್ಷಣೆ ಒದಗಿಸಿದೆ. ಸರ್ಕಾರದ ಮೂರನೇ ವರ್ಷದ ಸಂಭ್ರಮಾಚರಣೆ ಸಂದರ್ಭದಲ್ಲಿ ಭೂಗ್ಯಾರಂಟಿ ಯೋಜನೆಯಲ್ಲಿ 1,52,492 ಕುಟುಂಬಗಳಿಗೆ ಹಕ್ಕುಪತ್ರ/ದಾಖಲೆ/ಆದೇಶಪತ್ರಗಳನ್ನು ವಿತರಿಸಲಾಯಿತು.

ಬೆಂಗಳೂರು ನಗರದಲ್ಲಿ ಈ ಯೋಜನೆಯಲ್ಲಿ ಆಸ್ತಿ ದಾಖಲೆಗಳ ಡಿಜಿಟಲೀಕರಣ ಮತ್ತು ಬಿ ಖಾತಾವನ್ನು ಎ ಖಾತಾವಾಗಿ ಸುಲಭವಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲದೇ ಬಿ ಖಾತಾವನ್ನು ಎ ಖಾತಾಕ್ಕೆ ಬದಲಾಯಿಸಲು ಇದ್ದ ಮಾರ್ಗಸೂಚಿ ಶುಲ್ಕವನ್ನು ಶೇ.5ರಿಂದ ಶೇ. 2ಕ್ಕೆ ಇಳಿಸಲಾಗಿದೆ.

ಜನಸಾಮಾನ್ಯರ ಪರವಾಗಿ ನಮ್ಮ ಸರ್ಕಾರ ಕೈಗೊಂಡ ಯೋಜನೆಗಳಿಗೆ ಸಿಕ್ಕಿರುವ ಅಭೂತಪೂರ್ವ ಸ್ಪಂದನೆ ನೋಡಿದಾಗ ಮೂರು ವರ್ಷದ ಪರಿಶ್ರಮ ಸಾರ್ಥಕ ಭಾವ ಮೂಡಿಸುತ್ತದೆ. ನಮ್ಮ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮ ಸರ್ಕಾರದ ಆಡಳಿತದ ಮೂಲಮಂತ್ರವೇ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು. ಕಳೆದ ಮೂರು ವರ್ಷಗಳಲ್ಲಿ ನಾವು ಎದುರಿಸಿದ ಸವಾಲುಗಳು ಅನೇಕ. ಆದರೆ, ಕನ್ನಡಿಗರ ಹಿತರಕ್ಷಣೆಯ ವಿಷಯದಲ್ಲಿ ನಾವು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಮಾಹಿತಿ ತಂತ್ರಜ್ಞಾನ, ನವೋದ್ಯಮ, ಮೂಲಸೌಕರ್ಯ, ಕೃಷಿ, ಆರೋಗ್ಯ ಕ್ಷೇತ್ರಗಳಲ್ಲಿ ಕರ್ನಾಟಕವು ಜಾಗತಿಕ ಮಟ್ಟದಲ್ಲಿ ತನ್ನ ಮುಂಚೂಣಿ ಸ್ಥಾನವನ್ನು ಕಾಯ್ದುಕೊಂಡಿದೆ. ನಾವು ನಡೆದು ಬಂದ ಹಾದಿ ತೃಪ್ತಿ ತಂದಿದೆ, ತಲುಪಬೇಕಾದ ಗುರಿ ಇನ್ನೂ ದೂರವಿದೆ. ನವ ಕರ್ನಾಟಕದ ನಿರ್ಮಾಣದತ್ತ ನಮ್ಮ ಪಯಣ ಹೀಗೆಯೇ ಮುಂದುವರಿಯಲಿದೆ.

■ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನೆಯ ಮೈಲಿಗಲ್ಲುಗಳು

- **2023 ಮೇ 20 –** ಸಿದ್ದರಾಮಯ್ಯ ಎರಡನೇ ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ
- **2023 ಜೂನ್ 2 –** ಮೊದಲ ಸಚಿವ ಸಂಪುಟ ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಜಾರಿಗೊಳಿಸಲು ನಿರ್ಣಯ
- **2023 ಜೂನ್ 11** – ಶಕ್ತಿ ಯೋಜನೆ ಜಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಜುಲೈ 1 –** ಅನ್ನಭಾಗ್ಯ ಯೋಜನೆ ಜಾರಿ; ತಲಾ 10 ಕೆಜಿ ಅಕ್ಕಿ ವಿತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ
- **2023 ಜುಲೈ 7 –** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 14ನೇ ಬಾರಿಗೆ ಬಜೆಟ್ ಮಂಡನೆ
- **2023 ಆಗಸ್ಟ್ 5 –** ಗೃಹಜ್ಯೋತಿ ಯೋಜನೆಗೆ ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2023 ಅಕ್ಟೋಬರ್ 11** – ರಾಜ್ಯ ಶಿಕ್ಷಣ ನೀತಿ (ಎಸ್ ಇಪಿ) ರೂಪಿಸಲು ಪ್ರೊ. ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ 15 ಸದಸ್ಯರ ಸಮಿತಿ ರಚನೆ
- **2024 ಜನವರಿ 12 –** ಯುವನಿಧಿ ಯೋಜನೆಗೆ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಫೆಬ್ರವರಿ 16 –** ಮುಖ್ಯಮಂತ್ರಿ ಅವರಿಂದ 15ನೇ ಬಾರಿಗೆ ಬಜೆಟ್ ಮಂಡನೆ
- **2024 ಫೆಬ್ರವರಿ 22 –** ಸರ್ಕಾರಿ ಶಾಲಾ ಮಕ್ಕಳಿಗೆ ಬಹುಪೌಷ್ಠಿಕಾಂಶವುಳ್ಳ ಸಾಯಿ ಶ್ಯೂರ್ ರಾಗಿ ಮಾಲ್ಟ್ ನೀಡುವ ಕಾರ್ಯಕ್ರಮಕ್ಕೆ ಚಾಲನೆ
- **2024 ಆಗಸ್ಟ್ 25 –** ದಕ್ಷಿಣ ಭಾರತದ ಪ್ರಪ್ರಥಮ ಹವಾನಿಯಂತ್ರಿತ ಪಾಲಿಕೆ ಬಜಾರ್ ಬೆಂಗಳೂರಿನಲ್ಲಿ ನಿರ್ಮಾಣ
- **2024 ಸೆಪ್ಟೆಂಬರ್ 26 –** ಮಹತ್ವಾಕಾಂಕ್ಷೆಯ ನಾಲೆಡ್ಜ್–ಹೆಲ್ತ್–ಇನ್ನೋವೇಶನ್–ರಿಸರ್ಚ್ ಸಿಟಿ (ಕ್ವಿನ್ ಸಿಟಿ) ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2024 ಅಕ್ಟೋಬರ್ 24 –** ಮನೆ ಮನೆಗೆ ತೆರಳಿ ಆರೋಗ್ಯ ತಪಾಸಣೆ ಮಾಡುವ ಗೃಹ ಆರೋಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ
- **2025 ಫೆಬ್ರವರಿ 12 –** ಇನ್‌ವೆಸ್ಟ್ ಕರ್ನಾಟಕ ಸಮಾವೇಶಕ್ಕೆ ಚಾಲನೆ 10.27 ಲಕ್ಷ ಕೋಟಿ ರೂ.ಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ
- **2025 ಮಾರ್ಚ್ 7 –** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 16ನೇ ಬಾರಿಗೆ ಬಜೆಟ್ ಮಂಡನೆ
- **2025 ಏಪ್ರಿಲ್ 11–** ದೇಶದಲ್ಲೇ ಮೊದಲ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಮಸೂದೆಗೆ ಸಚಿವ ಸಂಪುಟ ಅಸ್ತು
- **2025 ಮೇ 1 –** ಬೆಂಗಳೂರು ನಗರದ 12,692 ಗುತ್ತಿಗೆ ಪೌರಕಾರ್ಮಿಕರ ಸೇವೆ ಖಾಯಂ
- **2025 ಮೇ 20 –** ರಾಜ್ಯ ಸರ್ಕಾರದ ಎರಡನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ 1,11,111 ಹಕ್ಕುಪತ್ರಗಳ ವಿತರಣೆ
- **2025 ಜೂನ್ 20 –** ಸರ್ಕಾರಿ ನೌಕರರು, ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಆರೋಗ್ಯ ಭದ್ರತೆ; 50 ಲಕ್ಷ ರೂ.ವರೆಗೆ ನಗದು ರಹಿತ ಚಿಕಿತ್ಸೆಯ ಸೌಲಭ್ಯ
- **2025 ಸೆಪ್ಟೆಂಬರ್ 22 –** ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025ಕ್ಕೆ ಚಾಲನೆ
- **2026 ಮಾರ್ಚ್ 6 –** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ 17ನೇ ಬಾರಿಗೆ ಬಜೆಟ್ ಮಂಡನೆ
- **2026 ಏಪ್ರಿಲ್ 24 –** ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ (ಎಡಗೈ ಸಮುದಾಯ – ಶೇ.5.25, ಬಲಗೈ ಸಮುದಾಯ – ಶೇ. 5.25 ಮತ್ತು ಇತರೆ ಉಪಜಾತಿ – ಶೇ.4.5)
- **2026 ಏಪ್ರಿಲ್ 28 –** ವಿವಿಧ ಇಲಾಖೆಗಳಲ್ಲಿನ 56,432 ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ



ಸೇವೆಗಳ ಏಕೀಕರಣಕ್ಕಾಗಿ ಏಕಗವಾಕ್ಷಿ ವ್ಯವಸ್ಥೆ

ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ. ಸುಗಮ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆಯನ್ನು ತರುವ ಸಲುವಾಗಿ ಕಾಂಗ್ರೆಸ್ ಸರ್ಕಾರವು ಕಂದಾಯ ಇಲಾಖೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದೆ. ಭೂಮಿ ಹಾಗೂ ಕಾವೇರಿ ತಂತ್ರಾಂಶಗಳನ್ನು ಆಧುನೀಕರಣಗೊಳಿಸಲಾಗಿದೆ. ಇವೂ ಹಲವು ತಂತ್ರಜ್ಞಾನಸ್ನೇಹಿ ಯೋಜನೆಗಳ ಅನುಷ್ಠಾನದ ಮೂಲಕ ಇಲಾಖೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿಪಡಿಸಲಾಗಿದೆ.

ದೇವಸ್ಥಾನಗಳ ಸಂರಕ್ಷಣೆಗೆ ಭೂ–ವರಾಹ ಯೋಜನೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಾಮಾನ್ಯ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ದೇವಾಲಯಗಳು, ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ನಿರ್ಮಾಣ ಮತ್ತು ವಿವಿಧ ಕಾಮಗಾರಿಗಳಿಗೆ ಸರ್ಕಾರದಿಂದ 6,311 ಧಾರ್ಮಿಕ ಸಂಸ್ಥೆಗಳಿಗೆ ಒಟ್ಟು 411.28 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಅಲ್ಲದೇ ರಾಜ್ಯದಲ್ಲಿ ಒತ್ತುವರಿಯಾಗಿರುವ 328 ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸಿ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲು ಭೂ ವರಾಹ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಇದಕ್ಕಾಗಿ 15 ಕೋಟಿ ರೂ.ಅನುದಾನ ಒದಗಿಸಲಾಗಿದೆ. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳಿಗೆ ಪಾವತಿಸುತ್ತಿರುವ ವರ್ಷಾಶನ ಮೊತ್ತವನ್ನು 60,000 ರೂ.ಗಳಿಂದ 72,000 ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯದ ಪ್ರಮುಖ 400 ದೇವಾಲಯಗಳು ಹಾಗೂ ಹೊರ ರಾಜ್ಯದಲ್ಲಿ ಲಭ್ಯವಿರುವ ಅಂದಾಜು 3,500 ಕೊಠಡಿಗಳಲ್ಲಿ ಯಾತ್ರಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ದೇವಾಲಯಗಳ ವಸತಿ ಕೋಶ ಯೋಜನೆಯಡಿ 1 ಕೋಟಿ ರೂ.ಒದಗಿಸಲಾಗಿದೆ. ಆನ್‌ಲೈನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸಿಕೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.



ದೇಶದ ಬೆನ್ನೆಲುಬು ರೈತರ ಸಬಲೀಕರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುವ ಮೂಲಕ ರೈತರ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ ಇರಿಸಿದೆ. ಒಟ್ಟು 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಿಸಿರುವುದೂ ಸೇರಿದಂತೆ ಅನೇಕ ಮಹತ್ವದ ಕ್ರಮಗಳ ಮೂಲಕ ಕೃಷಿ ವಲಯದಲ್ಲಿ ಚೈತನ್ಯಕ್ಕೆ ಕಾರಣವಾಗಿದೆ. ಇದರ ಪ್ರತಿಫಲನ ಎನ್ನುವಂತೆ ದೇಶದಲ್ಲಿಯೇ ಉತ್ತಮವಾದ ಶೇ.9.1ರ ಕೃಷಿ ಬೆಳವಣಿಗೆ ದರವನ್ನು ಕರ್ನಾಟಕವು ಸಾಧಿಸುವಲ್ಲಿ ಸಫಲವಾಗಿದೆ.

ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಮಾಹಿತಿ

ಗ್ಯಾರಂಟಿ ಯೋಜನೆಗಳ ಹೆಸರು	ಫಲಾನುಭವಿಗಳ ಸಂಖ್ಯೆ	ವೆಚ್ಚ (ರೂ. ಕೋಟಿಗಳಲ್ಲಿ)
ಶಕ್ತಿ ಯೋಜನೆ (ಮಹಿಳೆಯರಿಗೆ ಉಚಿತ ಪ್ರಯಾಣ)	726 ಕೋಟಿ	18,945
ಗೃಹಲಕ್ಷ್ಮಿ ಯೋಜನೆ	1.24 ಕೋಟಿ	74,216
ಗೃಹ ಜ್ಯೋತಿ ಯೋಜನೆ	1.67 ಕೋಟಿ	26,115
ಅನ್ನಭಾಗ್ಯ ಯೋಜನೆ (ಡಿಬಿಟಿ)	4.44 ಕೋಟಿ	18,897
ಆಹಾರ ಧಾನ್ಯಗಳ ವಿತರಣೆ	30.88 ಲಕ್ಷ ಮೆಟ್ರಿಕ್ ಟನ್	
ಯುವನಿಧಿ	3.38 ಲಕ್ಷ	950
ಗ್ಯಾರಂಟಿ ಯೋಜನೆಗಳ ಒಟ್ಟು ವೆಚ್ಚ		1,39,123

ಅಭಿವೃದ್ಧಿಗೆ ಟೊಂಕ ಕಟ್ಟಿದ ಸರ್ಕಾರ

ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ಟೊಂಕಕಟ್ಟಿ ನಿಂತಿದೆ. ಕರ್ನಾಟಕದ ಸಂಪರ್ಕ ವ್ಯವಸ್ಥೆಯನ್ನು ಭವಿಷ್ಯದತ್ತ ಹೊಸ ಹೆಜ್ಜೆಗಳನ್ನಿಟ್ಟಿದೆ. ಭಾರೀ ಪ್ರಮಾಣದ ಹೂಡಿಕೆಯೊಂದಿಗೆ ಒಂಭತ್ತು ಹೊಸ ವೆಚ್ಚ ಹಂಚಿಕೆ ರೈಲು ಮಾರ್ಗಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಬಹುಕಾಲದ ನಿರೀಕ್ಷೆಯಲ್ಲಿದ್ದ ಬೆಂಗಳೂರು ಉಪನಗರ ರೈಲು ಯೋಜನೆಗೆ ವೇಗ ನೀಡಲಾಗಿದೆ. ಸಮಾನ ಪ್ರಾದೇಶಿಕ ಅಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತಿದೆ.

ತಲಾದಾಯದಲ್ಲಿ ದೇಶದಲ್ಲೇ ಪ್ರಥಮ

ಇಂದು ಕರ್ನಾಟಕವು ತಲಾದಾಯದಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. 2025–26ನೇ ಸಾಲಿನಲ್ಲಿ ದೇಶದ ಜಿಡಿಪಿಯು ಶೇ. 7.4ರ ದರದಲ್ಲಿ ಪ್ರಗತಿ ಸಾಧಿಸಿದ್ದರೆ, ರಾಜ್ಯದ ಜಿಎಸ್‌ಡಿಪಿಯು ಶೇ.8.1ರ ದರದಲ್ಲಿ ಪ್ರಗತಿ ಕಂಡಿದೆ. ಜಿಎಸ್‌ಟಿ ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯವು ದೇಶದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ಹೂಡಿಕೆಯ ವಿಚಾರವನ್ನು ಗಮನಿಸುವುದಾದರೆ, 2025–26ನೇ ಸಾಲಿನ ಪೂರ್ವಾರ್ಧದಲ್ಲಿ ರಾಜ್ಯವು 9.4 ಬಿಲಿಯನ್ ಅಮೆರಿಕನ್ ಡಾಲರ್ ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ದೇಶದಲ್ಲಿಯೇ ಮುಂಚೂಣಿಯಲ್ಲಿತ್ತು. ಇದು ಈ ಅವಧಿಯಲ್ಲಿನ ದೇಶದ ಒಟ್ಟು ವಿದೇಶಿ ಒಳಹರಿವಿನ ಶೇ.26.7ರಷ್ಟು ಎನ್ನುವುದು ಗಮನಾರ್ಹ. ಕರ್ನಾಟಕವು ವೈವಿಧ್ಯಮಯ ಹೂಡಿಕೆಗೆ ಪ್ರಶಸ್ತ ತಾಣವಾಗಿರುವುದಕ್ಕೆ ಇದುವೇ ನಿಚ್ಚಳ ಉದಾಹರಣೆಯಾಗಿದೆ.





ಬಂಡವಾಳ ಆಕರ್ಷಿಸಲು ಯಶಸ್ವಿ

ಕರ್ನಾಟಕವು ಇಂದು ದೇಶದಲ್ಲಿಯೇ ವ್ಯಾಪಕವಾಗಿ ವಿದೇಶಿ ಹೂಡಿಕೆಯನ್ನು ಬಹು ವಲಯಗಳಲ್ಲಿ ಆಕರ್ಷಿಸುತ್ತಿದೆ. ಐಟಿ, ಬಿಟಿ ಕ್ಷೇತ್ರಗಳಲ್ಲಿ ಮುಂಚೂಣಿ ಕಾಯ್ದುಕೊಳ್ಳುವುದರೊಂದಿಗೆ ಏರೋಸ್ಪೇಸ್, ರಕ್ಷಣಾ ಕ್ಷೇತ್ರ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ವಿನ್ಯಾಸ ಕ್ಷೇತ್ರದಲ್ಲಿಯೂ ಮಹತ್ವದ ಸಾಧನೆಗಳನ್ನು ಮಾಡಿದೆ. ಜಾಗತಿಕವಾಗಿ ನವೋದ್ಯಮಗಳಿಗೆ ಪ್ರಶಸ್ತ ತಾಣವಾಗಿದೆ. ರಾಜ್ಯವು ದೂರದರ್ಶಿತ್ವದ ನೀತಿಗಳನ್ನು ಹೊಂದಿದ್ದು ಕೈಗಾರಿಕಾ ನೀತಿ 2025–2030, ಗ್ಲೋಬಲ್ ಕೆಪಬಿಲಿಟಿ ಸೆಂಟರ್ ನೀತಿ, ಬೈನ್ಸ್ ರೋಬೋಟಿಕ್ಸ್ ಮತ್ತು ಎಐ ಕ್ಯಾಂಪಸ್, ಕ್ವಿನ್ ಸಿಟಿ, ನಾಲೆಜ್ ಸಿಟಿ, ಕ್ವಾಂಟಂ ರೋಡ್ ಮ್ಯಾಪ್, ಸ್ಥಳೀಯ ಆರ್ಥಿಕ ಆಕ್ಸಿಲರೇಟರ್ ಕಾರ್ಯಕ್ರಮ (ಎಲ್‌ಇಎಪಿ), ಎರಡು ಮತ್ತು ಮೂರನೇ ಹಂತದ ಲ್ಯಾಟ್ಸ್ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇನ್ವೆಸ್ಟ್ ಕರ್ನಾಟಕ ಸಮಾವೇಶದ ಮೂಲಕ 10.27 ಲಕ್ಷ ನಗರಗಳಲ್ಲಿ ಉದ್ಯಮ, ನವೋದ್ಯಮಗಳನ್ನು ಉತ್ತೇಜಿಸುವ ಬಿಯಾಂಡ್ ಬೆಂಗಳೂರು ಯೋಜನೆ, ಲೀಪ್ ಕೋಟಿಗೂ ಅಧಿಕ ಬಂಡವಾಳ ಹೂಡಿಕೆ ಭರವಸೆ ಪಡೆದಿದೆ. ಸೆಮಿಕಂಡಕ್ಟರ್ ವಲಯದಲ್ಲಿಯಂತೂ ಜಾಗತಿಕ ಪ್ರತಿಷ್ಠಿತ ಕಂಪನಿಗಳಿಂದ 45 ಸಾವಿರ ಕೋಟಿ ರೂ.ಗೂ ಹೆಚ್ಚಿನ ಮೊತ್ತದ ಅಗಾಧ ಹೂಡಿಕೆಯಾಗಿದೆ. ಹೂಡಿಕೆ ಪ್ರಸ್ತಾವನೆಗಳ ತ್ವರಿತ, ಸುಗಮ ಅನುಮೋದನೆಗೆ ಅಗತ್ಯವಾದ ದೇಶಾದ್ಯಂತ ಮನ್ನಣೆ ಪಡೆದಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ರಾಜ್ಯವು ಹೊಂದಿದೆ. ಸುಮಾರು 30 ಇಲಾಖೆಗಳ 100ಕ್ಕೂ ಹೆಚ್ಚು ಸೇವೆಗಳನ್ನು ಇದರಡಿ ಏಕೀಕರಣಗೊಳಿಸಲಾಗಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕಾಂಗ್ರೆಸ್ ಸರ್ಕಾರದ ಪಣ

ಕರ್ನಾಟಕದಲ್ಲಿನ ಜಿಲ್ಲೆಗಳು ಮತ್ತು ತಾಲೂಕುಗಳ ನಡುವಿನ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಸಮಗ್ರ ಅಭಿವೃದ್ಧಿ ಖಚಿತಪಡಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಪಣ ತೊಟ್ಟಿದೆ. ಇದಕ್ಕಾಗಿ ಆರ್ಥಿಕ ತಜ್ಞ ಪ್ರೊ. ಎಂ. ಗೋವಿಂದ ರಾವ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ನೀಡಿದ ವರದಿಯ ಶಿಫಾರಸ್ಸುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಒಪ್ಪಿಕೊಂಡಿದೆ. ಅಲ್ಲದೇ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ 9288.70 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದರಲ್ಲಿ ಒಟ್ಟು 12,393 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಕರ್ನಾಟಕ

ಬುಧವಾರ
20 ಮೇ 2026
ಮಂಗಳೂರು

ಬೀದಿ ನಾಯಿ ಹಾವಳಿ ನಿರ್ಲಕ್ಷ್ಯ ಸಲ್ಲ

ಪುಟ ೧➡ಪರಿಣಾಮ, ಪ್ರಸ್ತುತ ನಿಯಮಾವಳಿಯ ಆಶಯಗಳು ಇದುವರೆಗೂ ಈಡೇರಿಲ್ಲ ಎಂದು ನ್ಯಾಯಾಲಯ ಕಲಾಪ ಸಂದರ್ಭ ಛೀಮಾರಿ ಹಾಕಿತು. ರಾಜ್ಯಗಳು ಅಗತ್ಯ ದೂರದೃಷ್ಟಿಯಿಂದ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಪ್ರಸ್ತುತ ಸನ್ನಿವೇಶ ಆತಂಕಕಾರಿ ಮಟ್ಟಕ್ಕೆ ತಲುಪುತ್ತಿರಲಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನಾಲ್ಕು ತಿಂಗಳಲ್ಲಿ 2 ಲಕ್ಷ ನಾಯಿ ಕಡಿತ: ಬೀದಿ ನಾಯಿ ಕಡಿತ ಪ್ರಕರಣಗಳು ನಿರಂತರಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ನ್ಯಾಯಾಲಯ, ರಾಜಸ್ಥಾನದ ಶ್ರೀಗಂಗಾನಗರ ನಗರದಲ್ಲಿ ಒಂದು ತಿಂಗಳಲ್ಲಿ 1084 ನಾಯಿ ಕಡಿತ ಪ್ರಕರಣಗಳಾಗಿವೆ. ತಮಿಳ್ನಾಡಲ್ಲಿ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಇಂತಹ 2ಲಕ್ಷ ಘಟನೆಗಳಾಗಿವೆ. ಬೀದಿನಾಯಿಗಳು ಎಳೆ ಮಕ್ಕಳನ್ನು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿಸಿರುವುದು ವರದಿಗಳಿಂದ ದೃಢಪಟ್ಟಿದೆ. ಇಂತಹ ದುರ್ಘಟನೆಗಳಿಗೆ ರಾಜ್ಯಗಳು ಅಥವಾ ಸರಕಾರಗಳು ಮೂಕಪ್ರೇಕ್ಷಕರಾಗಕೂಡದು. ಬೀದಿ ನಾಯಿಗಳು ವಿದೇಶಿ ಪ್ರವಾಸಿಗರನ್ನೂ ಬಿಡದೆ ದಾಳಿ ನಡೆಸಿವೆ. ನಾಯಿ ಕಡಿತದಿಂದ ಗಾಯಗೊಳ್ಳುವ ಭೀತಿ ಮುಕ್ತರಾಗಿ ಜೀವಿಸುವ ಹಕ್ಕು ಜನರಿಗಿದೆ. ಇದು ಘನತೆಯಿಂದ ಬದುಕುವ ಹಕ್ಕಿನ ವ್ಯಾಪ್ತಿಯಲ್ಲಿದೆ. ಮಕ್ಕಳು, ವೃದ್ಧರು, ವಿದೇಶಿ ಪ್ರವಾಸಿಗರನ್ನೂ ಬೀದಿ ನಾಯಿಗಳು ಕಚ್ಚಿ ಎಳೆದಾಡಿ ಗಂಭೀರ ಗಾಯಗೊಳಿಸುವ ದುರ್ಘಟನೆಗಳಿಗೆ ನ್ಯಾಯಾಲಯ ಕೂಡ ಮೂಕ ಪ್ರೇಕ್ಷಕನಾಗಿರಲು ಸಾಧ್ಯವಿಲ್ಲ ಎಂದು ಸರಕಾರಗಳನ್ನು ಕಟುವಾಗಿ ತರಾಟೆಗೆತ್ತಿಕೊಂಡಿತು.

ಆಕ್ರಮಣಕಾರಿ ನಾಯಿಗಳಿಗೆ ದಯಾಮರಣ ಅವಕಾಶ


ಪುಟ ೧➡ಜನಸಂದಣಿ ಹೆಚ್ಚಿರುವ ಸಾರ್ವಜನಿಕ ಸಂಸ್ಥೆಗಳ ವ್ಯಾಪ್ತಿಯಿಂದ ಬೀದಿ ನಾಯಿಗಳನ್ನು ತೆರವುಗೊಳಿಸಬೇಕೆಂಬ ತನ್ನ 2025ರ ನವೆಂಬರ್ 7ರ ಆದೇಶ ಹಿಂಪಡೆಯಲು ನಿರಾಕರಿಸಿದೆ. ಬೀದಿ ನಾಯಿಗಳನ್ನು ಲಸಿಕೆ ಹಾಗೂ ಸಂತಾನಹರಣ ಮಾಡಿದ ಬಳಿಕ ಮತ್ತೆ ಅದೇ ಸಾರ್ವಜನಿಕ ಸಂಸ್ಥೆಗಳ ಆವರಣಕ್ಕೆ ಬಿಡಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿತು. ಆದೇಶ ಪಾಲಿಸದಿದ್ದರೆ ನ್ಯಾಯಾಂಗ ನಿಂದನೆ ಕ್ರಮಕ್ಕೂ ಒಳಗಾಗಬೇಕಾಗುತ್ತದೆ ಎಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಚ್ಚರಿಕೆ ನೀಡಿತು.

ಮಕ್ಕಳು, ವೃದ್ಧರು ದೈಹಿಕ ಶಕ್ತಿಯ ಬಲವಿದ್ದರೆ ಮಾತ್ರ ಬದುಕಬಹುದೆಂಬ ಸಮಾಜ ವ್ಯವಸ್ಥೆಯನ್ನು ಸಂವಿಧಾನ ಕಲ್ಪಿಸಿಕೊಳ್ಳುವುದೂ ಇಲ್ಲ. ಹಾಗಾಗಿ ಈ ವಿಚಾರದಲ್ಲಿ ನ್ಯಾಯಾಲಯದ ನಿರ್ದೇಶಗಳ ಪಾಲನೆಯಲ್ಲಿ ಯಾವುದೇ ರೀತಿ ವೈಫಲ್ಯವಾದರೂ ಗಂಭೀರ ಪರಿಗಣಿಸಲಾಗುವುದು. ಆದೇಶಗಳನ್ನು ಜಾರಿ ಮಾಡದಿರುವುದನ್ನು ನ್ಯಾಯಾಂಗ ನಿಂದನೆಯಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಮತ್ತು ರಾಜ್ಯಗಳ ವಿರುದ್ಧ ಅಪರಾಧಗಳ ಹೊಣೆಗಾರಿಕೆ ಆಪಾದನೆ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಸುಪ್ರೀಂಕೋರ್ಟ್ ಎಚ್ಚರಿಸಿದೆ.

ಇರಾನ್‌ಗೆ ಟ್ರಂಪ್ ಹೊಸ ದಾಳಿ ಬೆದರಿಕೆ

ಪುಟ ೧➡ದೋಣಿಗಳು, ಯುದ್ಧನೌಕೆಗಳು ಎಲ್ಲವೂ ತಯಾರಿದ್ದವು. ಎಲ್ಲವೂ ಬಾಂಬ್‌ಗಳಿಂದ ತುಂಬಿದ್ದವು. ನಾವು ಹೊಸ ದಾಳಿ ನಡೆಸಲು ಸಂಪೂರ್ಣ ಸಿದ್ಧರಾಗಿದ್ದೆವು. ನಾನು ದಾಳಿಗೆ ಸಿದ್ಧತೆ ನಡೆಸಿದ್ದೇನೆಂದು ಇರಾನ್‌ನವರಿಗೆ ತಿಳಿದಿದ್ದು, ಇನ್ನೂ ಎರಡರಿಂದ ಮೂರು ದಿನಗಳ ಅವಕಾಶ ನೀಡುವಂತೆ ದೂರವಾಣಿ ಕರೆಮಾಡಿದ್ದರು. ಹಾಗಾಗಿ ದಾಳಿಗೂ ಒಂದು ಗಂಟೆ ಉಳಿದಿದ್ದಾಗ ದಾಳಿ ರದ್ದುಗೊಳಿಸಿದ್ದೇನೆ. ಆದರೆ ಯಾವುದೇ ಕಾರಣಕ್ಕೂ ಇರಾನ್ ಹೊಸ ಪರಮಾಣು ಬಾಂಬ್ ತಯಾರಿಸಲು ಸಮಯಾವಕಾಶ ನೀಡಲ್ಲ. ಇರಾನ್ ಪರಮಾಣು ಬಾಂಬ್ ಹೊಂದಿದರೆ, ಮೊದಲು ಇಸ್ರೇಲ್ ಮೇಲೆ ಪ್ರಯೋಗ ಮಾಡಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಇದಕ್ಕೂ ಮುನ್ನ ಗಲ್ಫ್ ರಾಷ್ಟ್ರಗಳ ನಾಯಕರ ಕೋರಿಕೆಯ ಮೇರೆಗೆ ಮಂಗಳವಾರದಂದು ಇರಾನ್ ವಿರುದ್ಧ ನಡೆಸಲು ಯೋಜಿಸಲಾಗಿದ್ದ ಸೇನಾ ದಾಳಿಯನ್ನು ತಡೆಹಿಡಿಯಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟ್ರುಥ್ ಸೋಷಿಯಲ್‌ನಲ್ಲಿ ಪ್ರಕಟಿಸಿದ್ದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗ್ಯಾರಂಟಿಗಾಗಿ ವಿದ್ಯುತ್, ಬಸ್, ಮದ್ಯದ ದರವನ್ನು ಎಷ್ಟು ಬಾರಿ ಹೆಚ್ಚಿಸಲಾಗಿದೆ ಎಂಬುದರ ಪಟ್ಟಿ ನೀಡಲಿ – **ಕುಮಾರಸ್ವಾಮಿ**

– ಅದನ್ನು ಅಡಗಿಸಲೆಂದೇ ಅವರು ಬೊಬ್ಬೆ ಹಾಕುತ್ತಿರೋದು.ತಮ್ಮ ನೂರು ತಪ್ಪುಗಳನ್ನು ಅಡಗಿಸಲು ಎದುರಾಳಿಯ ಬಗ್ಗೆ ಅಲ್ಲದ ಸಲ್ಲದ ಆರೋಪಗಳನ್ನು ಜೋರಾದ ಸ್ವರದಲ್ಲಿ ಹೇಳುವುದು ರಾಜಕೀಯ ಬುದ್ಧಿವಂತಿಕೆ!

ದಿನ ಭವಿಷ್ಯ

ಮೇಷ ತಿನ್ನುವುದರ ಮೇಲೆ ಎಚ್ಚರವಿರಲಿ. ಹೊಟ್ಟೆ ಕೆಡಬಹುದು. ಹೊಸ ಬಗೆಯ ವ್ಯವಹಾರಕ್ಕೆ ಕೈಹಚ್ಚಲು ಕಾಲ ಸೂಕ್ತ. ಯಶಸ್ಸು ಸಿಗಲಿದೆ.

ವೃಷಭ ವೃತ್ತಿಯಲ್ಲಿ ಕಠಿಣ ಪರಿಸ್ಥಿತಿ ಎದುರಿಸುವಿರಿ. ಆದರೆ ಕೆಲವರ ಸಹಕಾರ ಲಭ್ಯ. ಸಂಬಂಧ ವೃದ್ಧಿ. ಹಣ ಗಳಿಕೆಯ ಪ್ರಯತ್ನ ಹೆಚ್ಚು ಫಲ ನೀಡದು.

ಮಿಥುನ ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹೆಣಗುವಿರಿ. ಕಾರ್ಯ ವಿಳಂಬ. ಆಪ್ತರ ಹಿತರಕ್ಷಣೆ ನಿಮ್ಮ ಆದ್ಯತೆಯಾಗಲಿದೆ. ಧನ ಗಳಿಕೆಗೆ ತೊಡಕು.

ಕಟಕ ಹಲವಾರು ಕಾರ್ಯಗಳಲ್ಲಿ ವ್ಯಸ್ತ. ಹಾಗಾಗಿ ಖಾಸಗಿ ವ್ಯವಹಾರಕ್ಕೆ ಸಮಯ ಸಿಗದು. ಸಂಗಾತಿ ಜತೆ ಪ್ರಾಮಾಣಿಕ ನಡೆ ನುಡಿ ಪ್ರದರ್ಶಿಸಿ.

ಸಿಂಹ ಕ್ಲಿಷ್ಟಕರವಾಗಿ ದಿನ ಆರಂಭ. ಬಿಡುವಿಲ್ಲದ ಕಾರ್ಯ. ಸಂಜೆ ವೇಳೆ ನಿರಾಳತೆ ತರುವ ಬೆಳವಣಿಗೆ. ಆರೋಗ್ಯ ಚಿಂತೆ ಪರಿಹಾರ.

ಕನ್ಯಾ ಕಷ್ಟದ ಪರಿಸ್ಥಿತಿಯನ್ನು ನಿರ್ಮಲ ಚಿತ್ತದಿಂದ ನಿಭಾಯಿಸಿ. ಗೊಂದಲ ಮಾಡಿಕೊಳ್ಳದಿರಿ. ಆಪ್ತರ ಕರೆ ಮುದ ತರಲಿದೆ.

ತುಲಾ ಏಕಕಾಲದಲ್ಲಿ ಹಲವಾರು ಕಾಯಕ ಮಾಡುವ ಉಮೇದು. ಆದರೆ ಧಾವಂತ ಬೇಡ. ನಿಧಾನವಾಗಿ ಕಾರ್ಯ ಪೂರೈಸಿದರೆ ಒಳಿತು.

ವೃಶ್ಚಿಕ ಸವಾಲಿನ ದಿನ. ದಿನವಿಡೀ ವಿವಾದದಲ್ಲಿ ಸಿಲುಕುವಿರಿ. ಹದತಪ್ಪಿ ಮಾತು ಆಡಬೇಡಿ. ತಾಳ್ಮೆಯಿಂದ ವರ್ತಿಸಿ. ಕೌಟುಂಬಿಕ ಒತ್ತಡ.

ಧನು ಒಂದೇಬಾರಿ ಹಲವು ಹೊಣೆ ಹೆಗಲೇರುವುದು. ಕಂಗೆಡಬೇಡಿ. ಸೂಕ್ತ ನೆರವು ಒದಗಲಿದೆ. ಬಂಧುಗಳ ಜತೆ ಮನಸ್ತಾಪ ಉಂಟಾದೀತು.

ಮಕರ ಆತ್ಮವಿಶ್ವಾಸ ಕುಂದಿಸುವ ಬೆಳವಣಿಗೆ. ಟೀಕೆ ಎದುರಿಸುವಿರಿ. ಪಾಲುದಾರರ ವಿರೋಧ ಕಟ್ಟಿಕೊಳ್ಳುವಿರಿ. ತಾಳ್ಮೆಯಿಂದ ನಿಭಾಯಿಸಿ.

ಕುಂಭ ಹಣದ ವ್ಯವಹಾರ ಸುಗಮ. ಗಳಿಕೆಯ ಹೊಸ ದಾರಿ ತೋರಬಹುದು. ಆಹಾರ ಹಿತಮಿತ ಆಗಿರಲಿ. ಉದರ ಸಂಬಂಧಿ ಸಮಸ್ಯೆ.

ಮೀನ ಪ್ರೀತಿ, ದ್ವೇಷ ಎರಡನ್ನೂ ತೀವ್ರವಾಗಿ ಅನುಭವಿಸುವಿರಿ. ಹೊಸ ಯೋಜನೆ ಈಗ ಬೇಡ. ತಂಪು ಆಹಾರ ಸೇವನೆ ಆರೋಗ್ಯ ಕೆಡಿಸೀತು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,0,2,7

ರಾಜ್ಯ ಪೊಲೀಸ್ ಇಲಾಖೆಯ ವಿವಿಧ ದತ್ತಾಂಶಗಳ ಸಂಗ್ರಹ

ಡೇಟಾ ಸೆಂಟರ್‌ಗೆ ಐಎಸ್‌ಒ ಪ್ರಶಸ್ತಿ



ಪ್ರಮುಖ ಪ್ರಯೋಜನ

- **ಮಾಹಿತಿ ಭದ್ರತೆ:** ಸೈಬರ್ ದಾಳಿಗಳು ಹಾಗೂ ಅನಧಿಕೃತ ಪ್ರವೇಶದ ವಿರುದ್ಧ ಇಲಾಖೆಗೆ ಹೆಚ್ಚಿನ ರಕ್ಷಣೆ ಸಿಗಲಿದೆ.
- **ಪಾರದರ್ಶಕತೆ:** ದತ್ತಾಂಶ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಜವಾಬ್ದಾರಿತನ ಮೂಡಲಿದೆ.
- **ನಾಗರಿಕರ ಗೌಪ್ಯತೆ:** ಸಾರ್ವಜನಿಕರ ಮಾಹಿತಿಯ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಯ್ದುಕೊಳ್ಳಬಹುದು.
- **ವಿಶ್ವಾಸ ವೃದ್ಧಿ:** ಡಿಜಿಟಲ್ ಪೊಲೀಸ್ ಸೇವೆಗಳಲ್ಲಿ ಸಾರ್ವಜನಿಕರಿಗೆ ಇಲಾಖೆಯ ಮೇಲಿರುವ ನಂಬಿಕೆ ಮತ್ತು ವಿಶ್ವಾಸ ಮತ್ತಷ್ಟು ವೃದ್ಧಿ.

• **ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯ ವಿವಿಧ ತಂತ್ರಾಂಶಗಳ ಅನುಷ್ಠಾನ ಹಾಗೂ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ, ನಿರ್ವಹಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ರಾಜ್ಯ ಪೊಲೀಸ್ ಡೇಟಾ ಸೆಂಟರ್‌ಗೆ ಅಂತರರಾಷ್ಟ್ರೀಯ ಮಟ್ಟದ ಐಎಸ್‌ಒ/ಐಇಸಿ 27001 (ಮಾಹಿತಿ ಭದ್ರತಾ ನಿರ್ವಹಣಾ ವ್ಯವಸ್ಥೆ) ಪ್ರಮಾಣಪತ್ರ ಲಭಿಸಿದೆ.

ವಿವಿಧ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳು ಹಾಗೂ ಇಲಾಖೆಯ ದತ್ತಾಂಶಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು, ಸಂಸ್ಕರಿಸಲು ಮತ್ತು ನಿರ್ವಹಿಸಲು ವಿಶೇಷ ದತ್ತಾಂಶ ಕೇಂದ್ರವನ್ನು (ಡೇಟಾ ಸೆಂಟರ್) ಸ್ಥಾಪಿಸಿ ಯಶಸ್ವಿ ಯಾಗಿ ಕಾರ್ಯನಿರ್ವಹಿಸುತ್ತಿರುವ ದೇಶದ ಮೊದಲ ರಾಜ್ಯ ಪೊಲೀಸ್ ಪಡೆಗಳಲ್ಲಿ ಕರ್ನಾಟಕ ಪೊಲೀಸ್ ಕೂಡ ಒಂದಾಗಿದೆ.

ಸುರಕ್ಷಿತ ದತ್ತಾಂಶ ನಿರ್ವಹಣೆ: ಪ್ರಸ್ತುತ ಈ ಡೇಟಾ ಸೆಂಟರ್‌ನಲ್ಲಿ ಅಪರಾಧ ದಾಖಲೆಗಳು, ಪೊಲೀಸ್ ಐಟಿ ವ್ಯವಸ್ಥೆಗಳು, ಸಿಸಿಟಿಎನ್‌ಎಸ್, ಐಸಿಜೆಎಸ್, ಎಎಫ್‌ಐಎಸ್, ಸೈಬರ್ ಅಪರಾಧ ಮಾಹಿತಿ ವ್ಯವಸ್ಥೆಗಳು, ಕೆಎಸ್‌ಪಿ ಮೊಬೈಲ್ ಆಪ್, ಎಂ-ಸಿಸಿಟಿಎನ್‌ಎಸ್ ಮೊಬೈಲ್ ಆಪ್ ಹಾಗೂ ಸ್ಮಾರ್ಟ್ ಇ-ಬೀಟ್ ನಂತಹ ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ನಾಗರಿಕ ಕೇಂದ್ರಿತ ಡಿಜಿಟಲ್ ಸೇವೆಗಳನ್ನು ಸುರಕ್ಷಿತವಾಗಿ ಹೋಸ್ಟ್ ಮಾಡಿ ನಿರ್ವಹಿಸಲಾಗುತ್ತಿದೆ.

ಅಧಿಕಾರಿಗಳ ಪರಿಶ್ರಮಕ್ಕೆ ಸಂದ ಗೌರವ: ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ, ಅವರ ಸಮರ್ಥ ಮಾರ್ಗದರ್ಶನದಲ್ಲಿ, ಪೊಲೀಸ್ ಗಣಕ ವಿಭಾಗದ ತಾಂತ್ರಿಕ ತಂಡ, ಡೇಟಾ ಸೆಂಟರ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಮನ್ವಯಿತ ನಿರಂತರ ಪರಿಶ್ರಮದಿಂದಾಗಿ ಇಲಾಖೆಗೆ ಈ ಜಾಗತಿಕ ಮಟ್ಟದ ಗೌರವ ಲಭಿಸಿದೆ.

ಸೌಹಾರ್ದಯುತ ಸಂಬಂಧ ಇರಲಿ: ಸಲೀಂ

• **ಬೆಂಗಳೂರು:** ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸೌಹಾರ್ದಯುತ ನಿಯಮಿತ ಸಂಪರ್ಕ ಇಟ್ಟುಕೊಳ್ಳುವ ಮೂಲಕ ಅಪರಾಧ ನಿಯಂತ್ರಣ, ರೌಡಿಗಳ ಮಟ್ಟ ಹಾಕುವುದು, ಕಳ್ಳತನ ಪ್ರಕರಣಗಳ ಪತ್ತೆ ಸೇರಿದಂತೆ ಕಠಿಣ ಪ್ರಕರಣಗಳನ್ನು ಸಲೀಸಾಗಿ ಬಗೆಹರಿಸಬಹುದಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ತಿಳಿಸಿದರು. ಎಲ್ಲಾ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯ ನಿವೃತ್ತ ಪೊಲೀಸ್ ಅಧಿಕಾರಿಗಳೊಂದಿಗೆ ಸೌಹಾರ್ದ ಹಾಗೂ ಬಾಂಧವ್ಯದ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರ ಸುದೀರ್ಘ ಅನುಭವದ ಪ್ರಯೋಜನ ಪಡೆದು ಸಮಾಜದ ಶಾಂತಿ, ಸುವ್ಯವಸ್ಥೆಯನ್ನು ಜಾಗೃತಗೊಳಿಸಬೇಕಾಗಿದೆ ಎಂದಿದ್ದಾರೆ.

ಅನುಭವದ ಸದ್ಬಳಕೆ: ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಅನುಭವ, ಕೌಶಲ್ಯ ಹಾಗೂ ಸೇವೆಯನ್ನು ಉತ್ತಮ ಪದ್ಧತಿಯನ್ನಾಗಿ ಪೊಲೀಸ್ ಇಲಾಖೆಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬೇಕು. ಪೊಲೀಸ್ ವ್ಯವಸ್ಥೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸುವ ಸದುದ್ದೇಶದಿಂದ ಈ ಹೊಸ ಕ್ರಮಕ್ಕೆ ಮುಂದಾಗಿದ್ದೇವೆ. ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕೇವಲ ನಿವೃತ್ತಿ ಹೊಂದಿದವರೆಂದು ದೂರ ಇಡಬಾರದು, ಅವರ ದಕ್ಷ ಮತ್ತು ಸಮರ್ಥ ಕಾರ್ಯಚರಣೆಯ ಅನುಭವವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಅವರ ವಿಶ್ವಾಸವನ್ನು ಗಳಿಸಿಕೊಳ್ಳಬೇಕಾಗಿದೆ.

ಇಂದಿನ ಕೆಎಸ್ಸಾರ್ಟಿಸಿ ಮುಷ್ಕರಕ್ಕೆ ಹೈ ತಡೆ

ಪುಟ ೧➡ನಾವು ಮುಷ್ಕರ ಸಂಬಂಧ ಸರ್ಕಾರಕ್ಕೆ ಮೊದಲೇ ಮಾಹಿತಿ ನೀಡಿದ್ದೆವು. ಹೈಕೋರ್ಟ್ ಮುಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ಬಂದಿತ್ತು. ವಾದ –ಪ್ರತಿವಾದ ಆಲಿಸಿದ ನಂತರ ಮುಷ್ಕರ



ಬಿಟ್ಟು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಹೇಳಿರುವ ಹೈಕೋರ್ಟ್ ಮುಷ್ಕರ ಹಿಂದಕ್ಕೆ ಪಡೆಯುವಂತೆ ನಿರ್ದೇಶನ ನೀಡಿದೆ. ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶೀಘ್ರವೇ ಸಮಯ ನಿಗದಿಗೊಳಿಸಿ, ಸಂಘಟನೆಯೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವಂತೆ ರಾಜ್ಯ ಸರ್ಕಾರಕ್ಕೂ ತಿಳಿಹೇಳಿದೆ. ಆದ್ದರಿಂದ ಹೈಕೋರ್ಟ್ ಆದೇಶವನ್ನು ಗೌರವಿಸಿ, ಪ್ರತಿಭಟನೆ ಹಿಂಪಡೆದಿದ್ದೇವೆ ಎಂದರು. ವಿವಿಧ ರಸ್ತೆ ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆ ಹಾಗೂ ಹಿಂಬಾಕಿ ಮೊತ್ತ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆನೀಡಿದ್ದರು.

ಜಂಟಿ ಕ್ರಿಯಾಸಮಿತಿಯಿಂದ ಹೊರಬಂದ ಸಾರಿಗೆ ಸಂಸ್ಥೆ ನೌಕರರ ಸಂಘ: ಸರ್ಕಾರದ ಕಾರ್ಯಕ್ರಮ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಮನವೊಲಿಸಿ ಆದಷ್ಟು ಬೇಗ ಬೇಡಿಕೆಗಳ ಬಗ್ಗೆ ಮಾತುಕಡೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಭರವಸೆ ನೀಡಿದ್ದರು. ಆದರಿಂದ ವ್ಯವಸ್ಥಾಪಕ ನಿರ್ದೇಶಕರ ಮಾತಿಗೆ ಗೌರವ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘದ ಪದಾಧಿಕಾರಿಗಳು ಜಂಟಿ ಕ್ರಿಯಾಸಮಿತಿ ಮುಷ್ಕರಕ್ಕೆ ನೀಡಿದ್ದ ಬೆಂಬಲ ಹಿಂಪಡೆದಿರುವುದಲ್ಲದೆ ಜಂಟಿ ಕ್ರಿಯಾ ಸಮಿತಿಯಿಂದ ಹೊರಬರಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಜಗದೀಶ್ ಎಚ್.ಆರ್. ತಿಳಿಸಿದ್ದಾರೆ.

ಸಿಲಿಗುರಿ ಕಾರಿಡಾರ್‌ಗೆ 120 ಎಕರೆ ಜಾಗ

ಪುಟ ೧➡**ಕಿರಿದಾದ ಲ್ಯಾಂಡ್ ಲಿಂಕ್ :** ಈಶಾನ್ಯ ವಲಯದ ರಾಜ್ಯಗಳನ್ನು ದೇಶದ ಇತರ ಪ್ರದೇಶಗಳ ಜತೆ ಜೋಡಿಸುವ ಏಕೈಕ ಕಿರಿದಾದ ಭೂ ಸಂಪರ್ಕವಾಗಿದೆ ಚಿಕನ್ ನೆಕ್. ಹಾಗಾಗಿ ಈ ವಲಯದ ಭೂಮಿಗೆ ಸಂಬಂಧಪಟ್ಟಂತೆ ಯಾವುದೇ ನಿರ್ಧಾರ ಕೂಡ ಬಲು ಮಹತ್ವ ಪಡೆಯುತ್ತದೆ. ಎಂಟು ಈಶಾನ್ಯ ರಾಜ್ಯಗಳಿಗೆ ಪೂರೈಕೆ ಕೊಂಡಿ, ಮಿಲಿಟರಿ ಚಲನ ವಲನ-ಚಟುವಟಿಕೆಗಳು, ವ್ಯಾಪಾರ, ಸಾರಿಗೆ ಇತ್ಯಾದಿ ಎಲ್ಲಕ್ಕೂ ಈ ಹಾದಿ ಜೀವ ನಾಡಿ ಎನಿಸಿದೆ. ಅಗಾಧ ವ್ಯೂಹಾತ್ಮಕ ಮೌಲ್ಯದಿಂದಾಗಿ, ಸುದೀರ್ಘ ಕಾಲದಿಂದ ಈ ಕಾರಿಡಾರ್ ಭಾರತದ ರಕ್ಷಣಾ ಪ್ಲ್ಯಾನಿಂಗ್ ಮತ್ತು ಗಡಿ ಭದ್ರತಾ ಉಪಕ್ರಮಗಳಿಗೆ ಪ್ರಧಾನವಾಗಿ ಪರಿಗಣಿತವಾಗಿದೆ.

ಚಿಕನ್‌ನೆಕ್ ಭೂ ವರ್ಗಾವಣೆ ಹಿಂದಿನ ಆಶಯವನ್ನು ಕೇಂದ್ರ ಸರಕಾರ ಅಧಿಕೃತವಾಗಿ ವಿಷದೀಕರಿಸಿಲ್ಲ. ಆದರೂ, ವಲಯದಲ್ಲಿ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿ, ಲಾಜಿಸ್ಟಿಕ್ಸ್ ಕೇಂದ್ರಗಳು, ಸಂಪರ್ಕ ವ್ಯವಸ್ಥೆ ವಿಸ್ತರಣೆ ಅಥವಾ ಭದ್ರತೆಗೆ ಸಂಬಂಧಿತ ಯೋಜನೆಗಳ ಸಾಕಾರಕ್ಕೆ ಪ್ರಸ್ತುತ ಭೂಮಿಯು ಹಾದಿ ಸುಗಮಗೊಳಿಸುವ ಸಾಧ್ಯತೆಗಳಿವೆ.

ಬಾಂಗ್ಲಾದಿಂದ ಭಾರತಕ್ಕೆ ಅಕ್ರಮ ನುಸುಳುವಿಕೆ ಅಥವಾ ಅಕ್ರಮ ನುಸುಳುಕೋರರ ಹಾವಳಿಯನ್ನು ಶಾಶ್ವತವಾಗಿ ತಡೆಯುವ ಯತ್ನವಾಗಿ ಗಡಿಬೇಲಿ ನಿರ್ಮಿಸಲು ನಿಕಟಪೂರ್ವ ಟಿಎಂಸಿ ಸರಕಾರದ ಆಡಳಿತದಲ್ಲಿ ಸಾಧ್ಯವಾಗಿಲ್ಲ. ದೀದಿ ಸರಕಾರದ ಉದ್ದೇಶಪೂರ್ವಕ ಅಸಹಕಾರದಿಂದಾಗಿಯೇ ಬೇಲಿ ನಿರ್ಮಾಣವಾಗಿರಲಿಲ್ಲ. ಇದೀಗ ಪ.ಬಂಗಾಳದಲ್ಲಿ ಬಿಜೆಪಿ ಮೈಲಿಗಲ್ಲಿನ ವಿಜಯ ಸಾಧಿಸಿ ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ, ವ್ಯೂಹಾತ್ಮಕ ಚಿಕನ್‌ನೆಕ್ ಭೂಮಿಯನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ವೇಗ ದೊರೆತಿದೆ. ಈ

ಮಾರ್ಗಗಳನ್ನು ಕೇಂದ್ರ ಏಜೆನ್ಸಿಗಳಿಗೆ ಹಸ್ತಾಂತರಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಮಮತಾ ಬ್ಯಾನರ್ಜಿ ಸರ್ಕಾರದ ಮೇಲೆ ಬಿಜೆಪಿ ನಿರಂತರವಾಗಿ ದಾಳಿ ನಡೆಸಿತ್ತು.

ಪಾಕ್ ಸ್ಲೀಪರ್ ಸೆಲ್‌ನಲ್ಲಿ ಅಪ್ರಾಪ್ತರು: ಎನ್‌ಐಎ

ಪುಟ ೧➡ಪ್ರಕರಣದಲ್ಲಿ ಈವರೆಗೆ 21 ಆರೋಪಿಗಳ ಬಂಧನವಾಗಿದೆ. ಇವರಲ್ಲಿ ಐವರು ಅಪ್ರಾಪ್ತರಾಗಿದ್ದಾರೆ. ಇವರೆಲ್ಲರೂ ಪಾಕ್ ಭಯೋತ್ಪಾದಕರು ಮತ್ತು ಉಗ್ರ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರೆಂಬ ಆತಂಕ ಕಾರಿ ಮಾಹಿತಿ ಬೆಳಕಿಗೆ ಬಂದಿದೆ. ಎನ್‌ಐಎ ಪ್ರಕಾರ, ಜಿಯೋ-ಟ್ಯಾಗ್‌ನೊಂದಿಗೆ ಸಂವೇದನಾಶೀಲ ಪ್ರದೇಶ ಗಳ ದೃಶ್ಯಗಳನ್ನು ಸೆರೆ ಹಿಡಿದು ಕಳುಹಿಸುವುದು.

ಕೆಲವು ಪ್ರಮುಖ ಸ್ಥಳಗಳು, ಮೂಲಸೌಕರ್ಯಗಳ ಜಿಪಿಎಸ್ ಲೊಕೇಶನ್‌ನೊಂದಿಗೆ ಚಿತ್ರಗಳು ಮತ್ತು ವಿಡಿಯೋಗಳನ್ನು ಕಳುಹಿಸುವುದು. ಈ ರೀತಿ ರಹಸ್ಯ ಮಾಹಿತಿ ಸೋರಿಕೆ ಮಾಡುವುದು ದೇಶದ ಸಾರ್ವಭೌಮತ್ವ, ಒಗ್ಗಟ್ಟು, ಸಮಗ್ರತೆ ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ರಾಜಿ ಮಾಡಿಕೊಂಡಂತೆ ಎಂದು ಎನ್‌ಐಎ ನ್ಯಾಯ ಮಂಡಳಿಗೆ ಮನದಟ್ಟು ಮಾಡಿದೆ. ಉಗ್ರರೊಂದಿಗೆ ಸಂವಹನ ನಡೆಸಲು ಬಳಕೆಯಾದ ಭಾರತೀಯ ಸಿಮ್‌ಗಳು, ವಾಟ್ಸ್ಯಾಪ್ ಚಾಟ್ ದಾಖಲೆಗಳನ್ನು ಎನ್‌ಐಎ ಪ್ರಸ್ತುತಪಡಿಸಿದೆ.

ನ್ಯಾಯಾಂಗ ನಿಂದನೆ: ಕೇಜ್ರಿ, ಸಿಸೋಡಿಯಾಗೆ ನೋಟಿಸ್

ಪುಟ ೧➡ಅಬಕಾರಿ ನೀತಿ ಪ್ರಕರಣದ ವಿಚಾರಣೆಗಳಿಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಯೋಜಿತ ಅಭಿಯಾನ ನಡೆಸಿದ್ದಕ್ಕಾಗಿ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ಆಪ್ ನಾಯಕರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ಆರಂಭಿಸಿದ್ದಾರೆ. ನ್ಯಾಯಮೂರ್ತಿ ನವೀನ್ ಚಾವ್ಲಾ ಮತ್ತು ನ್ಯಾಯಮೂರ್ತಿ ರವೀಂದರ್ ದುಡೇಜಾ ಅವರನ್ನೊಳಗೊಂಡ ವಿಭಾಗೀಯ ಪೀಠವು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ನಾಲ್ಕು ವಾರಗಳಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ಸಲ್ಲಿಸಲು ಎಲ್ಲಾ ನಾಯಕರಿಗೆ ಸೂಚಿಸಿದೆ.

ಉತ್ತರಾಖಂಡ ಮಾಜಿ ಸಿಎಂ ಬಿ.ಸಿ. ಖಂಡೂರಿ ಇನ್ನಿಲ್ಲ

ಪುಟ ೧➡ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಎರಡು ಅವಧಿಗಳಿಗೆ ಸೇವೆ ಸಲ್ಲಿಸಿದ್ದರು. ಮೊದಲ ಬಾರಿಗೆ 2007ರಿಂದ 2009ರವರೆಗೆ ಮತ್ತು ಎರಡನೇ ಬಾರಿಗೆ 2011 ರಿಂದ 2012 ರವರೆಗೆ ರಾಜ್ಯದ ಆಡಳಿತ ಮುನ್ನಡೆಸಿದ್ದರು. ತಮ್ಮ ಆಡಳಿತಾವಧಿಯಲ್ಲಿ ಅವರು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರು. ಪಾರದರ್ಶಕ, ಶಿಸ್ತುಬದ್ಧ ಆಡಳಿತಕ್ಕೆ ಒತ್ತು ನೀಡಿದ್ದರು. ಉತ್ತರಾಖಂಡದ ಪ್ರಸ್ತುತ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಖಂಡೂರಿ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಅವರು ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಸಾರ್ವಜನಿಕ ಸೇವೆಯ ಪರಂಪರೆಯನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದ್ದಾರೆ.

ದ್ವಿಪಕ್ಷೀಯ ಸಹಕಾರಕ್ಕೆ ತ್ರಿರಾಷ್ಟ್ರಗಳ ಬೆಂಬಲ

ಪುಟ ೧➡ನೀಲಿ ಆರ್ಥಿಕತೆ ರಂಗದಲ್ಲಿ ಐಲ್ಯಾಂಡ್‌ನ ಸಾಮರ್ಥ್ಯ ಪ್ರಶಂಸಾರ್ಹವೆಂದು ಮೆಚ್ಚುಗೆ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ಚಾರಿತ್ರಿಕವಾದ ಭಾರತ- ಇಎಫ್‌ಟಿಎ ಟಿಇಪಿಎಯು ವ್ಯಾಪಾರ ಮತ್ತು ಹೂಡಿಕೆಗಳಿಗೆ ಮತ್ತಷ್ಟು ಒತ್ತು ನೀಡುವ ಭರವಸೆಯನ್ನು ನಾವು ಹೊಂದಿದ್ದೇವೆ ಎಂದಿದ್ದಾರೆ. ಫಿನ್‌ಲ್ಯಾಂಡ್ ಪ್ರಧಾನಿ ಓರ್ಪೊ ಜತೆ ಮಾತುಕತೆ ನಡೆಸಿದ ಪ್ರಧಾನಿ ಮೋದಿ, ವ್ಯಾಪಾರ ಮತ್ತು ಹೂಡಿಕೆ, ಡಿಜಿಟಲೀಕರಣ, ಕೃತಕ ಬುದ್ಧಿಮತ್ತೆ, 5ಜಿ, 6ಜಿ , ಕ್ವಾಂಟಮ್ ಟೆಕ್ನಾಲಜೀಸ್, ಸುಸ್ಥಿರತೆ, ನವೀಕರಿಸಬಹುದಾದ ಇಂಧನ ಮತ್ತು ಆವರ್ತನ ಆರ್ಥಿಕತೆ ರಂಗದಲ್ಲಿ ಸಹಕಾರ ವರ್ಧನೆ ಕುರಿತು ಚರ್ಚಿಸಿದರು. ಆವಿಷ್ಕಾರ, ಶಿಕ್ಷಣ, ಜನ-ಜನ ಬಾಂಧವ್ಯ ಇತ್ಯಾದಿ ಬಗ್ಗೆಯೂ ಚರ್ಚಿಸಿದರು.

ಎಫ್‌ಟಿಎ ಶೀಘ್ರ ಅನುಷ್ಠಾನ ಬಗ್ಗೆ ಚರ್ಚೆ: ಭಾರತ-ಯುರೋಪ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದದ ಶೀಘ್ರ ಅನುಷ್ಠಾನದ ಅಗತ್ಯವನ್ನು ಉಭಯ ನಾಯಕರು ಪ್ರತಿಪಾದಿಸಿದ್ದಾರೆ.

ಹೂಡಿಕೆಗೆ ಪಿಎಂ ಮೋದಿ ಆಹ್ವಾನ

ಪುಟ ೧➡ಮುಂಬರುವ ವರ್ಷಗಳಲ್ಲಿ ಫಿನ್‌ಟೆಕ್, ಉದ್ದಿಮೆಗಳು, ರಕ್ಷಣಾ ರಂಗ, ಆವಿಷ್ಕಾರ ಮತ್ತಿತರ ರಂಗಗಳಲ್ಲೂ ಇದೇ ರೀತಿ ಸಹಕಾರ ವರ್ಧನೆಗೆ ಮುಂದಾಗಲಿದ್ದೇವೆ ಎಂದಿರುವ ಪ್ರಧಾನಿ ಮೋದಿ, ಭಾರತದಲ್ಲಿ ಹೂಡಿಕೆ ಹೂಡುವಂತೆ ಡ್ಯಾನಿಶ್ ಪೆನ್ಷನ್ ಫಂಡ್‌ಗಳನ್ನು ಆಮಂತ್ರಿಸಿದರು.

ನಾರ್ವೆ ಭೇಟಿ ಮುಕ್ತಾಯ: ಇಟಲಿ ತಲುಪಿದ ಮೋದಿ

ಭಾರತ-ನಾರ್ಡಿಕ್ ಸಂಬಂಧಗಳನ್ನು ಹಸಿರು ತಂತ್ರಜ್ಞಾನ ಮತ್ತು ನಾವೀನ್ಯತೆ ಕಾರ್ಯತಂತ್ರದ ಸಹಭಾಗಿತ್ವಕ್ಕೆ ಏರಿಸಿದ ನಾರ್ವೆ ಭೇಟಿಯನ್ನು ಮುಕ್ತಾಯಗೊಳಿಸಿದ ನಂತರ ಮೋದಿ ಮಂಗಳವಾರ ಇಟಲಿಗೆ ತೆರಳಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಇಟಲಿಗೆ ಭೇಟಿ ನೀಡುತ್ತಿದ್ದಾರೆ.

ನುಡಿದಂತೆ ನಡೆದಿದ್ದೇವೆ

ಪುಟ ೧➡ನಮ್ಮ ಸರ್ಕಾರ ಯಾವುದೇ ಜಾತಿ, ಧರ್ಮ ಅಥವಾ ಬೇಧ-ಭಾವವಿಲ್ಲದೆ, ಎಲ್ಲಾ ಸಮುದಾಯಗಳ ಬಡ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಕೆಲಸ ಮಾಡಿದೆ ಎಂದು ತಿಳಿಸಿದರು.

ಗ್ಯಾರಂಟಿ ಅಭಿವೃದ್ಧಿ: ನಮ್ಮ ಪಂಚ ಗ್ಯಾರಂಟಿ ಯೋಜನೆಗಳನ್ನು ವಿರೋಧ ಪಕ್ಷದವರು ಹಾಗೂ ಸ್ವತಃ ದೇಶದ ಪ್ರಧಾನಮಂತ್ರಿಯವರೂ ಸೇರಿದಂತೆ ಹಲವರು ಈ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವೇ ಇಲ್ಲ, ಒಂದು ವೇಳೆ ಜಾರಿ ಮಾಡಿದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ಹಣವಿರುವುದಿಲ್ಲ ಎಂದು ಟೀಕಿಸಿದ್ದರು. ಆದರೆ, ನಾವು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಈ ಎಲ್ಲಾ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದೇವೆ. ಇದಕ್ಕಾಗಿ ರಾಜ್ಯ ಸರ್ಕಾರ ಈವರೆಗೆ 1.40ಲಕ್ಷ ಕೋಟಿ ರೂ.ಗಳನ್ನು ವೆಚ್ಚ ಮಾಡಿದೆ. ಅಲ್ಲದೆ, ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿಪಥದತ್ತ ಕೊಂಡೊಯ್ದಿದ್ದೇವೆ ಎಂದು ತಿಳಿಸಿದರು.

ವಿಶ್ವಕ್ಕೇ ಗ್ಯಾರಂಟಿಗಳು ಮಾದರಿ: ಡಿಸಿಎಂ ಡಿ.ಕೆ.ಶಿವಕುಮಾರ್

ಪುಟ ೧➡**ತುಮಕೂರು ಅಭಿವೃದ್ಧಿಗೆ ಬೆಂಬಲ: ಬೆಂಗಳೂರಿನ ಜನಸಂಖ್ಯೆ ಮತ್ತು ಒತ್ತಡ ನಿಯಂತ್ರಿಸಲು ಬೆಂಗಳೂರಿನ**



ಉತ್ತರ ಭಾಗದಲ್ಲಿರುವ ತುಮಕೂರು ನಗರವನ್ನು 'ಎರಡನೇ ಬೆಂಗಳೂರು' ಆಗಿ ಪರಿವರ್ತಿಸಬೇಕು ಎಂಬುದು ಸಚಿವ ಡಾ.ಜಿ. ಪರಮೇಶ್ವರ ಅವರ ದೊಡ್ಡ ಸಂಕಲ್ಪವಾಗಿದೆ. ಈ ಐತಿಹಾಸಿಕ ಕಲ್ಪತರು ನಾಡನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸಲು ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ರಾಜ್ಯದ ಸುಮಾರು 1 ಕೋಟಿ 11 ಲಕ್ಷ ಜನರಿಗೆ ಭೂ ಗ್ಯಾರಂಟಿ ಯೋಜನೆಯ ಸೌಲಭ್ಯ ಸಿಗುತ್ತಿದೆ. ಕೇವಲ ಬೆಂಗಳೂರು ನಗರವೊಂದರಲ್ಲೇ 27 ಲಕ್ಷಕ್ಕೂ ಹೆಚ್ಚು ಜನರಿಗೆ ಖಾತೆ ಬದಲಾವಣೆ, ಆಸ್ತಿ ದಾಖಲೆಗಳು, ಪೋಟೋ ಸೇರಿದಂತೆ ಅಗತ್ಯ ದಾಖಲೆ ಒದಗಿಸುವ ಮೂಲಕ ಅವರ ಮುಂದಿನ ಪೀಳಿಗೆಗೆ ಭದ್ರತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹಕ್ಕುಪತ್ರ ವಿತರಣೆ ಗಿನ್ನಿಸ್ ದಾಖಲೆ: ಪರಮೇಶ್ವರ್

ಪುಟ ೧➡ರಾಜ್ಯದ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಕಟಿಬದ್ಧವಾಗಿದೆ.



ಬಡವರು, ರೈತರು, ಕಾರ್ಮಿಕರು ಮತ್ತು ಶೋಷಿತರ ಸ್ವಾಭಿಮಾನದ ಬದುಕಿಗಾಗಿ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದಕ್ಕಾಗಿ ಈ ನಾಲ್ಕು ವರ್ಷಗಳಲ್ಲಿ ಬರೋಬ್ಬರಿ 2 ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದರು.

ದೇಶದಲ್ಲೇ ಎರಡನೇ ಸ್ಥಾನ: ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು, ವಿದೇಶಿ ನೇರ ಹೂಡಿಕೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನ ಕಾಯ್ದುಕೊಂಡಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದ ಮೂಲಕ ರಾಜ್ಯಕ್ಕೆ 10 ಲಕ್ಷದ 24 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹರಿದುಬಂದಿದೆ ಎಂದು ತಿಳಿಸಿದರು. ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ನೀಡಿದ ಪ್ರತಿ ಮಾತನ್ನು ಉಳಿಸಿಕೊಂಡಿದ್ದಾರೆ ಎಂದು ಹೇಳಿದರು.

ಕಂದಾಯ ಇಲಾಖೆಯಿಂದ ಕ್ರಾಂತಿಕಾರಿ ಬದಲಾವಣೆ

ಪುಟ ೧➡ಕಂದಾಯ ಇಲಾಖೆಯಲ್ಲಿ ಎಷ್ಟೇ ಕೆಲಸ ಮಾಡಿದರೂ ಮುಗಿಯುವುದಿಲ್ಲ. ಮಾಡಬೇಕಾದದ್ದು ಬಾಕಿ ಇರುತ್ತದೆ. ಸಾರ್ವಜನಿಕರ ಪ್ರೋತ್ಸಾಹ ಮತ್ತು ಶಕ್ತಿಯಿಂದ ಬಾಕಿ ಉಳಿದಿರುವ ಎಲ್ಲಾ ಕಂದಾಯ ಸೇವೆಗಳನ್ನು ಶೀಘ್ರದಲ್ಲೇ ಜನರ ಬಾಗಿಲಿಗೆ ತಲುಪಿಸಲು ನಮ್ಮ ಇಲಾಖೆ ಬದ್ಧವಾಗಿದೆ.



ವಿಧಾನಸೌಧದಲ್ಲಿ ನಮಗೆ ದೊರೆತಿರುವ ಅಧಿಕಾರವು ಕೇವಲ ಆಡಳಿತ ನಡೆಸುವುದಕ್ಕಾಗಿ ಅಲ್ಲ. ಬದಲಿಗೆ ಸಾರ್ವಜನಿಕರ ಸೇವೆಗಾಗಿ ಎಂಬುದನ್ನು ಅರಿತಿದ್ದೇವೆ ಎಂದರು. ರಾಜ್ಯದಲ್ಲಿನ ಲಂಬಾಣಿ ತಾಂಡಾಗಳು, ಗೊಲ್ಲರಹಟ್ಟಿ ಹಾಗೂ ನಾಯಕರ ಹಟ್ಟಿಗಳ ನಿವಾಸಿಗಳಿಗೆ ಶಾಶ್ವತ ನೆಲೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರವು ಆಂದೋಲನದ ರೂಪದಲ್ಲಿ ಅವರ ಮನೆ ಬಾಗಿಲಿಗೆ ಹೋಗಿ ಹಕ್ಕುಪತ್ರ ವಿತರಿಸುವ ಐತಿಹಾಸಿಕ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಹಿಂದೆ ಕೃಷಿ ಹಾಗೂ ಕೂಲಿ ಕಾರ್ಮಿಕರಾಗಿ ಊರಿನ ಹೊರಗಿನ ವಸತಿಪ್ರದೇಶಗಳಲ್ಲಿ ಜನರು ವಾಸಿಸುತ್ತಿದ್ದರು. ಅವರಿಗೆ ಯಾವುದೇ ಹಕ್ಕುಪತ್ರ ಇರಲಿಲ್ಲ. ಇಂದು ಕೃಷಿ ಮತ್ತು ಕೂಲಿ ಕಾರ್ಮಿಕರಿಗೆ ಹಕ್ಕುಪತ್ರವನ್ನು ನಮ್ಮ ಸರ್ಕಾರ ನೀಡುತ್ತಿದೆ ಎಂದು ತಿಳಿಸಿದರು.

ಮೂರು ವರ್ಷಗಳ ಸಾಧನೆಯ ಕಿರುಹೊತ್ತಗೆ ಬಿಡುಗಡೆ

ಕಂದಾಯ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಾಲನೆ ನೀಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿದ್ದ ಸರ್ಕಾರದ 3 ವರ್ಷಗಳ ಸಾಧನೆಗಳನ್ನು ಬಿಂಬಿಸುವ ಕಿರುಹೊತ್ತಗೆಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ಕಂದಾಯ ಇಲಾಖೆಯ ಜನಪರ ಯೋಜನೆಗಳು ಹಾಗೂ ಸೌಲಭ್ಯಗಳ ವಿತರಣೆಯ ಮಾಹಿತಿ ಒಳಗೊಂಡ ಬೃಹತ್ ವಸ್ತುಪ್ರದರ್ಶನವನ್ನು ಸಾರ್ವಜನಿಕರಿಗಾಗಿ ಆಯೋಜಿಸಲಾಗಿತ್ತು. ಸಚಿವರಾದ ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ್, ಎಂ.ಬಿ.ಪಾಟೀಲ್, ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ, ಆರ್.ಬಿ.ತಿಮ್ಮಾಪುರ, ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಸುರೇಶ್ ಬಿ.ಎಸ್., ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ಎಸ್.ವೈದ್ಯ, ಮಧು ಬಂಗಾರಪ್ಪ, ಡಾ.ಎಂ.ಸಿ.ಸುಧಾಕರ್, ಎನ್.ಎಸ್.ಬೋಸರಾಜು, ಸರ್ಕಾರದ ಮುಖ್ಯಸಚೇತಕ ಸಲೀಂ ಅಹಮದ್ ಹಾಗೂ ಶಾಸಕರು, ಸರ್ಕಾರದ ಅಪರ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಸಿಇಒ ಬಿ.ವಿ.ಅಶ್ವಿಜ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಮೇಶ್ವರ್ ನೇತೃತ್ವದ ಪ್ರಣಾಳಿಕೆ ಸಮಿತಿ ನೀಡಿದ್ದ 580 ಭರವಸೆಗಳಲ್ಲಿ 290 ಜಾರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ತಲಾದಾಯದಲ್ಲಿ ಕನ್ನಡಿಗರೇ ನಂಬರ್ 1

ತುಮಕೂರು: ನಾವು ನುಡಿದಂತೆ ನಡೆದಿದ್ದೇವೆ, ತಲಾ ಆದಾಯದಲ್ಲಿ ಕನ್ನಡಿಗರು ಇಡೀ ದೇಶದಲ್ಲೇ ನಂಬರ್ ಒನ್, ಇಡೀ ದೇಶದ ಜಿಡಿಪಿಗೆ ನಮ್ಮ ಕೊಡುಗೆ ಅಪಾರ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸರ್ಕಾರದ ಮೂರು ವರ್ಷಗಳ ಸಾಧನೆ ಜತೆಗೆ, ಕೇಂದ್ರ ಸರ್ಕಾರದ ವೈಫಲ್ಯಗಳನ್ನೂ ಪಟ್ಟಿ ಮಾಡಿದರು.

ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಮಂಗಳವಾರ ತುಮಕೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಆಯೋಜಿಸಿದ್ದ, ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿ ಬಳಿಕ, ನವ ಕರ್ನಾಟಕ ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನ ಮತ್ತು ತುಮಕೂರು ಜಿಲ್ಲೆಯಲ್ಲಿ ನಡೆದಿರುವ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ದೇಶದ ತಲಾ ಆದಾಯಕ್ಕಿಂತ ರಾಜ್ಯದ ಆದಾಯ ಹೆಚ್ಚಾಗಿರುವ ರೀತಿಯಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆ ಎಂದು ಹೇಳಿದರು. ನಾವು ನುಡಿದಂತೆ ನಡೆದು ಸಾಬೀತುಪಡಿಸಿರುವುದರಿಂದ ಮತ್ತೆ 2028ರ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಶತಸಿದ್ಧ. ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯದ ನಾಡನ್ನು ಇನ್ನಷ್ಟು ಗಟ್ಟಿಯಾಗಿ ರೂಪಿಸುತ್ತೇವೆ. ಸಂವಿಧಾನಬದ್ಧ ಅಭಿವೃದ್ಧಿ ಮಾರ್ಗದಲ್ಲಿ ನಾಡನ್ನು ಮುನ್ನಡೆಸುತ್ತೇವೆ ಎಂದು ಭರವಸೆ ಅವರು ನೀಡಿದರು. ನಾವು ನೆಮ್ಮದಿಯ ನಾಡು ಕಟ್ಟುವ ಸರ್ಕಾರ ಕೊಟ್ಟಿದ್ದೇವೆ. ಮೋದಿ ದೇಶದ ನೆಮ್ಮದಿ ಕಸಿಯುವ ಸರ್ಕಾರ ಕೊಟ್ಟಿದ್ದಾರೆ ಎಂದರು.

ಗುಜರಾತ್‌ನ ಅಭಿವೃದ್ಧಿ ಟೊಳ್ಳು: ಕಳೆದ 35 ವರ್ಷಗಳಿಂದ ಗುಜರಾತ್‌ನಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ಇಲ್ಲಿ ಅಭಿವೃದ್ಧಿಯೇ ಆಗಿಲ್ಲ ಎಂದು ಸಿಎಂ ಟೀಕಿಸಿದರು. ಮೊನ್ನೆಯಷ್ಟೆ ಕೇವಲ 2500 ರೂ ಮನೆ ಬಾಡಿಗೆ ಕಟ್ಟಲಾಗದ ಕಾರಣಕ್ಕೆ ಬಾಡಿಗೆಗಿದ್ದ ಬಡ ಕುಟುಂಬದ 13 ವರ್ಷದ ಮಗಳ ಮೇಲೆ ಮನೆ ಮಾಲೀಕ ಅತ್ಯಾಚಾರ ಎಸಗಿರುವ ಘಟನೆ ಗುಜರಾತ್‌ನಲ್ಲಿ ನಡೆದಿದೆ. ಇದು ನಿಜವಾದ ಗುಜರಾತ್ ಮಾದರಿ. ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಗುಜರಾತ್ ಮಾದರಿ ಟೊಳ್ಳು ಎಂದು ಅವರು ಪ್ರತಿಪಾದಿಸಿದರು.



ನೀಟ್ ಪರೀಕ್ಷೆ ರದ್ದಿಗೆ ಮೋದಿ ಸರ್ಕಾರ ಕಾರಣ

ನೀಟ್ ಪರೀಕ್ಷೆ ರದ್ದಾಗಿ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಿ, ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ಕಾರಣ ಎಂದು ಬಲವಾಗಿ ಟೀಕಿಸಿದರು. ರಾಜ್ಯದ ಸಿಇಟಿ ಮಾದರಿಯಲ್ಲಿ ಪರೀಕ್ಷೆ ನಡೆಸಿ ಎಮ್ನುವ ನಮ್ಮ ಸಲಹೆಯನ್ನು ತಿರಸ್ಕರಿಸಿ ನೀಟ್‌ನಲ್ಲಿ ಅಧ್ವಾನ ಮಾಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯ ಅಚ್ಚೇ ದಿನ ಬರಲಿಲ್ಲ. ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯದ ಮೋದಿ ಸರ್ಕಾರ, ರೈತರ ಆದಾಯವನ್ನೂ ದುಪ್ಪಟ್ಟು ಮಾಡಲಿಲ್ಲ. ಕಪ್ಪು ಹಣ ತರಲಿಲ್ಲ. ಹೀಗಾಗಿ ಬಿಜೆಪಿ-ಆರ್‌ಎಸ್‌ಎಸ್ ಸರ್ಕಾರ ಸಂಪೂರ್ಣ ವಿಫಲವಾಗಿ ದೇಶದ ಸಾಲವನ್ನು 220 ಲಕ್ಷ ಕೋಟಿ ರೂ.ಗೆ ಹೆಚ್ಚಿಸಿದ್ದಾರೆ ಎಂದು ಆರೋಪಿಸಿದರು.

- ಕರ್ನಾಟಕ ಮಾದರಿ ಅಭಿವೃದ್ಧಿ ಮುಂದೆ ಮಂಕು
- ಸಮರ್ಪಣಾ ಸಂಕಲ್ಪದಲ್ಲಿ ಸಿದ್ದರಾಮಯ್ಯ ಟೀಕೆ
- ದೇಶ ತಲಾ ಆದಾಯಕ್ಕಿಂತ ಕನ್ನಡಿಗರ ತಲಾದಾಯವೇ ಹೆಚ್ಚು
- ಗುಜರಾತ್ ಅಭಿವೃದ್ಧಿ ಮಾದರಿ ಟೊಳ್ಳು

ಬೆಲೆ ಏರಿಕೆಗೆ ಮೋದಿ ಕಾರಣ: ಮೋದಿಯವರು ಪ್ರಧಾನಿ ಆಗುವ ಮೊದಲು ದೇಶದಲ್ಲಿ ಡೀಸೆಲ್, ಪೆಟ್ರೋಲ್, ಚಿನ್ನದ ಬೆಲೆ ಎಷ್ಟಿತ್ತು. ಈಗ ಅದು ಆಕಾಶಕ್ಕೆ ಏರಿದೆ. ಟ್ರಂಪ್ ಬಾಲ ಹಿಡಿದು ಸುತ್ತುತ್ತಿದ್ದ ಮೋದಿಯವರೇ ಈ ಬೆಲೆ ಏರಿಕೆಗೆ ಕಾರಣ. ಮೋದಿ ದರ್ಬಾರಿನಲ್ಲಿ ಅಂಬಾನಿ ಮತ್ತು ಅದಾನಿ ಮಾತ್ರ ಲಾಭ ಮಾಡಿಕೊಂಡು ಈಗ ಇವರ ಆಸ್ತಿ 8 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಬಡವರು ಮತ್ತು ಮಧ್ಯಮ ವರ್ಗದವರ ಆದಾಯ ಮತ್ತು ಬದುಕು ನೆಲಕಚ್ಚಿದೆ ಎಂದು ಆರೋಪಿಸಿದರು. ಮೋದಿ ಮೋದಿ ಎಂದು ಕುಣಿಯುತ್ತಿದ್ದ ಭಾರತದ ಬಡ ಜನರು ಮತ್ತು ಮಧ್ಯಮ ವರ್ಗದವರಿಗೆ ಭ್ರಮನಿರಸನವಾಗಿದೆ ಎಂದರು.

ಸಾಧನಾ ಸಮರ್ಪಣಾ ಸಮಾವೇಶದಲ್ಲಿ ಡಿಸಿಎಂ ಡಿಕೆಶಿ ವಿಶ್ವಾಸ

2028ರಲ್ಲೂ ಕಾಂಗ್ರೆಸ್‌ಗೆ ಅಧಿಕಾರ

ತುಮಕೂರು: 2028ಕ್ಕೆ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ. ಜನತಾದಳ ಹಾಗೂ ಬಿಜೆಪಿಯವರು ಇದನ್ನು ಬರೆದಿಟ್ಟುಕೊಳ್ಳಿ. ಜನರು ಕೂಡ ಇದನ್ನು ನೆನಪಿನಲ್ಲಿಟ್ಟುಕೊಳ್ಳಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ರಾಜ್ಯ ಸರ್ಕಾರಕ್ಕೆ ಮೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ನಡೆದ 'ಸಾರ್ಥಕ ಸೇವೆಯ ಸಮರ್ಪಣೆ' ಸಮಾವೇಶದಲ್ಲಿ ಶಿವಕುಮಾರ್ ಅವರು ಮಾತನಾಡಿದರು.

ನಿಮ್ಮ ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ಬದುಕಿನಲ್ಲಿ ಬದಲಾವಣೆ ತಂದಿದೆ. ಇಡೀ ದೇಶಕ್ಕೆ ಒಂದು ಮಾದರಿ ಸರ್ಕಾರ ಕೊಟ್ಟಿದೆ, ಅದನ್ನು ಉಳಿಸಿಕೊಂಡು ಹೋಗುತ್ತೇವೆ.

ನಿಮ್ಮ ಆಶೀರ್ವಾದ ಸದಾ ಇರಲಿ. ಪರಿಶ್ರಮ ಇದ್ದ ಕಡೆ ಇತಿಹಾಸ ಸೃಷ್ಟಿ ಆಗುತ್ತದೆ. ನಂಬಿಕೆ ಇದ್ದ ಕಡೆ ಅದ್ಭುತಗಳು ನಡೆಯುತ್ತವೆ. ಸತ್ಯ ಇದ್ದ ಕಡೆ ಗೆಲುವು ಇದ್ದೇ ಇರುತ್ತದೆ ಎಂದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ನಡೆಸಿದ ಅಧ್ಯಯನದ ಪ್ರಕಾರ, ಕರ್ನಾಟಕದ ಪಂಚ ಗ್ಯಾರಂಟಿಗಳು ಇಡೀ ವಿಶ್ವದಲ್ಲೇ ಬಡವರ ಬದುಕಿನಲ್ಲಿ ಸಾಮಾ ಜಿಕ ಬದಲಾವಣೆಯನ್ನು ತಂದಂತಹ ಕಾರ್ಯಕ್ರಮಗಳಾಗಿವೆ. ಇವು ವಿಶ್ವಕ್ಕೆ ಒಂದು ಮಾದರಿ ಎಂದರು.



- ಎಲ್ಲಾ ರಾಜ್ಯಗಳಿಂದಲೂ ಕಾಂಗ್ರೆಸ್ ಗ್ಯಾರಂಟಿ ಮಾದರಿ ಅನುಕರಣೆ
- ಬಿಜೆಪಿ, ಬೇರೆ ಪಕ್ಷದವರೂ ಕಾಪಿ
- ಆಕ್ಸ ರ್ಡ್ ಯುನಿವರ್ಸಿಟಿಯವರೇ ಗ್ಯಾರಂಟಿ ಕೊಂಡಾಡಿದ್ದಾರೆ
- ಕೊಟ್ಟ ಕುದುರೆ ಏರಲು ಆಗದ ಕುಮಾರಸ್ವಾಮಿ: ಡಿಕೆಶಿ
- ಮಾತು ಕೊಡೋದು ಮುಖ್ಯವಲ್ಲ, ಕೊಟ್ಟ ಮಾತು ಉಳಿಸುವುಸು ಮುಖ್ಯ



ಜನರಿಗೆ ಭೂಮಿ ಗ್ಯಾರಂಟಿ

ಆರನೇ ಗ್ಯಾರಂಟಿಯಾಗಿ ಕೃಷ್ಣ ಬೈರೇಗೌಡರ ನೇತೃತ್ವದಲ್ಲಿ 1,11,11,111 ಜನರಿಗೆ ಭೂಮಿ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ 27 ಲಕ್ಷದ ಜನರಿಗೆ ಭೂಮಿ ಗ್ಯಾರಂಟಿಯನ್ನು ನಾವು ಕೊಟ್ಟಿದ್ದೇವೆ. ಬಿಜೆಪಿ, ಜನತಾದಳದ ಸ್ನೇಹಿತರಲ್ಲಿ ಕೆಲವರು ಇದನ್ನು ಟೀಕೆ ಮಾಡ್ತಾ ಇದ್ದಾರೆ. ಭಗವಂತ ನಿಮಗೆ ಅವಕಾಶ ಕೊಟ್ಟಿದ್ದಾಗ. ಡಬಲ್ ಎಂಜಿನ್ ಸರ್ಕಾರ ಇದ್ದಾಗ ಇಂತಹ ಜನಪರ ಕೆಲಸವನ್ನು ನೀವು ಏಕೆ ಮಾಡಲು ಆಗಲಿಲ್ಲ. ಕೋವಿಡ್ ವೇಳೆ ಮರಣ ಹೊಂದಿದ, ನರಳಿದ ಜನರಿಗೆ ನಿಮ್ಮ ಕೈಯಲ್ಲಿ ಸರಿಯಾಗಿ ನ್ಯಾಯ ಒದಗಿಸಿಕೊಡಲು ಆಗಲಿಲ್ಲ. ಇತ್ತೀಚೆಗೆ ನಾನು, ಸಿದ್ದರಾಮಯ್ಯನವರು ಚಾಮರಾಜನಗರ ಜಿಲ್ಲೆಯ ಆಕ್ಸಿಜನ್ ದುರಂತದಲ್ಲಿ ಸತ್ತಂತ ಜನರ ಕುಟುಂಬ ಸದಸ್ಯರಿಗೆ ಸರ್ಕಾರಿ ಕೆಲಸ ನೀಡಿದ್ದೇವೆ ಎಂದು ಹೇಳಿದರು.

ಗ್ಯಾರಂಟಿ ಎಲ್ಲರಿಗೂ ಮಾದರಿ ಯೋಜನೆ

ನಮ್ಮ ಬಿಜೆಪಿ ಸ್ನೇಹಿತರುಗಳು, ಪ್ರಧಾನಮಂತ್ರಿಗಳು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆಗಳ ಸುರಿಮಳೆಯನ್ನೇ ಮಾಡಿದರು. ಇವತ್ತು ಪ್ರತಿಯೊಂದು ರಾಜ್ಯದಲ್ಲೂ ಅವರೇ ಗ್ಯಾರಂಟಿ ಯೋಜನೆ ಪ್ರಕಟಿಸುತ್ತಿದ್ದಾರೆ. ಯಾವುದೇ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಗ್ಯಾರಂಟಿಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ ಎಂದರು. ನಾವು ಅಂದು ಜನಸಾಮಾನ್ಯರ ಜೀವನ ಉಳಿಯಬೇಕು ಎಂದು ಬದ್ಧತೆಯಿಂದ ಕೆಲಸ ಮಾಡಿದೆವು. ಈಗ ಎಲ್ಲ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಹೋಗುತ್ತಿದೆ. ಆದಾಯ ಪಾತಳಕ್ಕೆ ಇಳಿದಿದೆ. ಇಂತಹದಕ್ಕೆ ಸಹಾಯ ಮಾಡಬೇಕು ಅಂತಲೇ ನಾವು ಗ್ಯಾರಂಟಿ ಯೋಜನೆಗಳನ್ನು ಪ್ರಾರಂಭ ಮಾಡಿದೆವು.

- ಸ್ವಯಂ ಸ್ಫೂರ್ತಿಯಿಂದ ಸಾಧನಾ ಸಮರ್ಪಣಾ ಸಮಾವೇಶ ಆಯೋಜನೆ
- ಜಿ.ಪರಮೇಶ್ವರ್ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ಧ ಮಾಡಿದ್ದ 580 ಭರವಸೆಗಳಲ್ಲಿ 290ಕ್ಕೂ ಜಾರಿ
- ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳ ಈಡೇರಿಸುತ್ತೇವೆ ಎಂದ ಸಿಎಂ ಸಿದ್ದರಾಮಯ್ಯ

ಪರಮೇಶ್ವರ್, ಕೃಷ್ಣ ಬೈರೇಗೌಡರಿಗೆ ಶ್ಲಾಘನೆ

ತುಮಕೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ಸಿದ್ದಪಡಿಸಿದ್ದ ಪ್ರಣಾಳಿಕೆಯಲ್ಲಿನ 580 ಭರವಸೆಗಳಲ್ಲಿ 290ಕ್ಕೂ ಹೆಚ್ಚು ಭರವಸೆ ಈಡೇರಿಸಿದ್ದು, ಉಳಿದ ಎರಡು ವರ್ಷಗಳಲ್ಲಿ ಬಾಕಿ ಭರವಸೆಗಳನ್ನೂ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಾಳೆಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ತುಂಬುತ್ತಿರುವ ಹೊತ್ತಲ್ಲಿ ಜಿ.ಪರಮೇಶ್ವರ್ ಅವರು ಸರ್ಕಾರದ ಸಾಧನಾ ಸಮರ್ಪಣಾ ಸಮಾವೇಶ ಮತ್ತು ಕಂದಾಯ ಇಲಾಖೆಯ ಕ್ರಾಂತಿಕಾರಿ ಜನೋಪಯೋಗಿ ಕೆಲಸಗಳ ಜನಾರ್ಪಣೆ ಸಮಾವೇಶವನ್ನು ಸ್ವಯಂಸ್ಫೂರ್ತಿಯಿಂದ ತುಮಕೂರಿನಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಪ್ರಮುಖವಾಗಿ ನಾವು ಘೋಷಿಸಿದ್ದ ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಒಂದೊಂದಾಗಿ ಈಡೇರಿಸಿದ್ದಲ್ಲದೆ ಉಳಿದ ಭರವಸೆಗಳನ್ನೂ ಈಡೇರಿಸಿ ನಾವು ನಿಮ್ಮ ಮುಂದೆ ಧನ್ಯತೆ ಅರ್ಪಿಸಲು ಇಲ್ಲಿ ನಿಮ್ಮ ಮುಂದೆ ನಿಂತಿದ್ದೇವೆ ಎಂದರು. ನಾವು ಅಧಿಕಾರಕ್ಕೆ ಬಂದ ಬಳಿಕ ಸರ್ವ ಜಾತಿ, ಸರ್ವ ಧರ್ಮದ ಸಕಲ ಜನತೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಿಜೆಪಿಯವರ ರೀತಿ ಜಾತಿ ಧರ್ಮದದ ಹೆಸರಲ್ಲಿ ಮನುಷ್ಯರನ್ನು ವಿಭಜಿಸುವ ಕೆಟ್ಟ ರಾಜಕಾರಣ ನಾವು ಮಾಡಲಿಲ್ಲ. ಬಿಜೆಪಿಯವರ ಎಲ್ಲಾ ಅಪಪ್ರಚಾರಗಳನ್ನು ಸುಳ್ಳಾಗಿಸಿ ನಾವು ಅಭಿವೃದ್ಧಿ ಮಾಡಿ ತೋರಿಸಿದ್ದೇವೆ ಎಂದು ಹೇಳಿದರು.



ಕಿರುಸುದ್ದಿ

ಸರ್ಕಾರದ ನಡೆಗೆ ವಿಜಯೇಂದ್ರ ಟೀಕೆ

ಬೆಂಗಳೂರು: ತುಮಕೂರಿನಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ಆಯೋಜಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯ ಯೋಜನೆಗಳನ್ನು ತಮ್ಮ ಸರ್ಕಾರದ ಯೋಜನೆಗಳು ಎಂಬಂತೆ ಈಗಿನ ಕಾಂಗ್ರೆಸ್ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಜಾಹೀರಾತು ಮೂಲಕ ಆರ್ಥಿಕ ಮತ್ತು ಕಾನೂನು ಸ್ಥಿತಿ ಚೆನ್ನಾಗಿದೆ ಎಂದು ಜನರಿಗೆ ತೋರಿಸುತ್ತಿದ್ದಾರೆ. ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸವನ್ನು ಸಮಾವೇಶದ ಮೂಲಕ ಮಾಡುತ್ತಿದ್ದಾರೆ. ಹಳೆ ಸರ್ಕಾರದ ಕೆಲಸಗಳನ್ನು ತಮ್ಮ ಕೆಲಸ ಎಂದು ಜನರಿಗೆ ತೋರಿಸುತ್ತಿದ್ದಾರೆ ಎಂದು ದೂರಿದರು. ಇವರ ಸಾಧನೆ ಏನೂ ಇಲ್ಲ. ಕುರ್ಚಿ ಪೈಪೋಟಿಯಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದುಹೋಗಿದೆ. ಇವರ ಬಳಿ ಬೇರೆ ಬಂಡವಾಳ ಏನೂ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಜನರ ಹಣವನ್ನು ಪೋಲು ಮಾಡುತ್ತಿದ್ದಾರೆ ಎಂದರು. ಬಿಜೆಪಿ ಜೆಡಿಎಸ್ ಮೈತ್ರಿ ಬಗ್ಗೆ ಕೇಂದ್ರದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನಕ್ಕೆ ನಾವು ಬದ್ಧರು. ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನು ಯಾವ ಕಾರಣಕ್ಕೆ ಭೇಟಿ ಮಾಡಿದ್ದಾರೆ ಎಂಬುದು ತಿಳಿದಿಲ್ಲ. ರಾಜ್ಯಸಭೆ ಬಗ್ಗೆ, ವಿಧಾನಸಭೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದು ಇನ್ನೂ ಚರ್ಚೆ ಆರಂಭವಾಗಿಲ್ಲ. ದಿಲ್ಲಿಯಿಂದ ನಿರ್ದೇಶನ ಬಂದಿಲ್ಲ ಎಂದರು.



ಲಿಫ್ಟ್‌ನಲ್ಲಿ ಸಿಲುಕಿದ ಒಂಬತ್ತು ಮಂದಿ ರಕ್ಷಣೆ

ಶಿವಮೊಗ್ಗ: ಆಲ್ಕೊಳ ಸರ್ಕಲ್ ಸಮೀಪದ ವಿಶಾಲ್ ಮಾರ್ಟ್‌ನಲ್ಲಿ ಸೋಮವಾರ ರಾತ್ರಿ ಲಿಫ್ಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು 9 ಮಂದಿ ಸಿಲುಕಿದ್ದ ಘಟನೆ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಇಬ್ಬರು ಮಕ್ಕಳು ಹಾಗೂ ಮಹಿಳೆಯರು ಸೇರಿದಂತೆ ಒಟ್ಟು 9 ಜನರನ್ನು ರಕ್ಷಿಸಿದ್ದಾರೆ. ವಿಶಾಲ್ ಮಾಟ್ ್ನಲ್ಲಿ ಸಾಮಗ್ರಿ ಖರೀದಿಸಲು ಬಂದಿದ್ದ ಗ್ರಾಹಕರು ಲಿಫ್ಟ್ ಮೂಲಕ ಕೆಳಕ್ಕೆ ಬರುತ್ತಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಇದರಿಂದ ಲಿಫ್ಟ್ ಮಧ್ಯದಲ್ಲೇ ಸ್ಥಗಿತಗೊಂಡಿತ್ತು. ಮಾಲ್ ಸಿಬ್ಬಂದಿ ಬಾಗಿಲು ತೆರೆಯಲು ಪ್ರಯತ್ನ ನಡೆಸಿದರೂ ಸಾಧ್ಯವಾಗಲಿಲ್ಲ. ಇದರಿಂದಾಗಿ ಒಳಗಿದ್ದ ಗ್ರಾಹಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಲಿಫ್ಟ್‌ನಲ್ಲಿ ಗಾಳಿಯಾಡದೆ ಇದ್ದುದರಿಂದ ಓರ್ವ ಮಹಿಳೆಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಲಿಫ್ಟ್ ಬಾಗಿಲು ತೆರೆಯುವಲ್ಲಿ ಯಶಸ್ವಿಯಾದರು. ಸುಮಾರು ಒಂದು ಗಂಟೆ ಲಿಫ್ಟ್ ಒಳಗೆ ಸಿಲುಕಿದ್ದ ಒಂಭತ್ತೂ ಜನರನ್ನು ಸುರಕ್ಷಿತವಾಗಿ ಹೊರತಂದರು. ಅಗ್ನಿಶಾಮಕ ಠಾಣಾಧಿಕಾರಿ ಬಿ.ಎಸ್. ಅಶೋಕ್ ಕುಮಾರ್, ಆರ್.ಎಫ್.ಟಿ ರಾಮು, ಎಫ್.ಎಸ್.ಟಿ.ಒ ಮುಕ್ತಾಮ್ ಹುಸೇನ್ ಹಾಗೂ ಸಿಬ್ಬಂದಿ ಸುನೀಲ್, ಸತೀಶ್, ಸಂತೋಷ್ ಮತ್ತು ಮನೋಜ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಔಷಧ ಮಳಿಗೆ ಬಂದ್

ಬೆಂಗಳೂರು: ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ರಾಜ್ಯದಾದ್ಯಂತ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಔಷಧಿ ಮಳಿಗೆಯನ್ನು ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಔಷಧಿ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಆರ್.ರಘುನಾಥ ರೆಡ್ಡಿ, ರಾಜ್ಯದಲ್ಲಿ ಸುಮಾರು 26 ಸಾವಿರ ಔಷಧಿ ಮಳಿಗೆಗಳ ಪೈಕಿ ಬೆಂಗಳೂರಿನಲ್ಲಿ 6,500 ಸಾವಿರ ಔಷಧಿ ಮಳಿಗೆಗಳು ಬಂದ್ ಆಗಲಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಆಸ್ಪತ್ರೆ ಬಳಿಯೊಂದಿಗಿರುವ ಔಷಧಿ ಮಳಿಗೆಗಳಿಗೆ ಬಂದ್ ಮಾಡುತ್ತಿಲ್ಲ. ಇ ಫಾರ್ಮಸಿ ಮೂಲಕ ಔಷಧಿ ಮಾರಾಟ ಮಾಡುವುದು ಕಾನೂನಿನಲ್ಲಿ ಅವಕಾಶವಿಲ್ಲ. ಈ ಬಗ್ಗೆ ಹೈಕೋರ್ಟ್ ಆದೇಶಗಳಿವೆ, ಆದರೆ ಅವುಗಳನ್ನು ಪಾಲಿಸುತ್ತಿಲ್ಲ ಎಂದರು.



ಇ ಫಾರ್ಮಸಿಗಳು ರಿಯಾಯತಿಯನ್ನು ನೀಡುತ್ತದೆ, ಅದು ಶೇ.16ರಿಂದ 20ರವರೆಗೆ ನಿಯಂತ್ರಿತ ಮಾರ್ಜಿನ್ ರಚನೆಗೆ ಅಡ್ಡಿಪಡಿಸುತ್ತಿದೆ ಮತ್ತು ಸಣ್ಣ ಚಿಲ್ಲರೆ ವ್ಯಾಪಾರಿಗಳ ವ್ಯಾಪರಕ್ಕೆ ಕುಂಟಿತ ಆಗುತ್ತಿದೆ ಎಂದು ಹೇಳಿದರು.

ಸಂಪೂರ್ಣ ಔಷಧಿ ಮಳಿಗೆ ಬಂದ್: ಬಂದ್ ಮಾಡಲೇಬೇಕು, ಯಾಕೆಂದರೆ ಆನ್‌ಲೈನ್‌ನಲ್ಲಿ ಔಷಧಿ ಮಾರಾಟ ಮಾಡುವುದರಿಂದ ಮಾರಾಟ ಮಾಡುವವರಿಗೆ ಶೇ.50ರಷ್ಟು ನಷ್ಟವಾಗಿದೆ. ರಿಯಾಯತಿಯನ್ನು ನೀಡುವುದರಿಂದ ನಮಗೆ ಅದನ್ನು ಮೀರಿಸಲು ಸಾಧ್ಯವಿಲ್ಲ, ಆನ್‌ಲೈನ್ ಯಾವ ಆಧಾರದಲ್ಲಿ ರಿಯಾಯತಿ ನೀಡುತ್ತಿದ್ದಾರೆ ಎಂಬುದು ನಮಗೆ ತಿಳಿಯಬೇಕಾಗಿದೆ. ಜನರಿಗೆ ತೊಂದರೆ ಆಗಲಿದೆ, ಸರ್ಕಾರಕ್ಕೆ ಹಲವು ಭಾರಿ ಮನವಿ ಮಾಡಿದರು ಎಚ್ಚೆತ್ತುಕೊಳ್ಳಲಿಲ್ಲ. ಹಾಗಾಗಿ ಪ್ರತಿಭಟನೆ ಮಾಡಲೇಬೇಕಾದ ಪರಿಸ್ಥಿತಿಯಿದೆ ಎಂದು ಔಷಧಿ ಮಳಿಗೆ ಮಾಲೀಕ ವೆಂಕಟೇಶ್ ಹೇಳಿದ್ದಾರೆ.

ಕೆಎಸ್‌ಡಿಎಲ್‌ಗೆ ಝೆಪ್ಟೋ ಪುರಸ್ಕಾರ

ಬೆಂಗಳೂರು: ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಸಂಸ್ಥೆಯು ತನ್ನ ಪಾರಂಪರಿಕ ಉತ್ಪನ್ನವಾಗಿರುವ ಮೈಸೂರು ಸ್ಯಾಂಡಲ್ ಸೋಪ್ ವಹಿವಾಟು ಉಪಕ್ರಮಕ್ಕಾಗಿ ತ್ವರಿತ ವಾಣಿಜ್ಯ ವಹಿವಾಟು (ಕ್ವಿಕ್ ಕಾಮರ್ಸ್) ವಿಭಾಗದಲ್ಲಿ ಪ್ರತಿಷ್ಠಿತ ಝೆಪ್ಟೋ ಕಂಪನಿಯ ಪೂರೈಕೆ ಸರಪಳಿ ಉತ್ಕೃಷ್ಟತಾ ಪುರಸ್ಕಾರಕ್ಕೆ ಪಾತ್ರವಾಗಿದೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸಚಿವ ಎಂ.ಬಿ ಪಾಟೀಲ ಅವರು, ಸಂಸ್ಥೆಯ ಅಧ್ಯಕ್ಷ ಸಿ.ಎಸ್ ಅಪ್ಪಾಜಿ ನಾಡಗೌಡ, ವ್ಯವಸ್ಥಾಪಕ ನಿರ್ದೇಶಕ ಪಿ.ಕೆ.ಎಂ ಪ್ರಶಾಂತ್ ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವನ್ನು ಅಭಿನಂದಿಸಿದ್ದು, ಕೆಎಸ್‌ಡಿಎಲ್ ಸಂಸ್ಥೆಯು ತನ್ನ ಪರಂಪರೆ ಮತ್ತು ನಂಬಿಕೆಗಳನ್ನು ಬಿಟ್ಟುಕೊಡದೆ, ಇ-ಕಾಮರ್ಸ್, ಕ್ವಿಕ್ ಕಾಮರ್ಸ್ ವಹಿವಾಟು ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಅದರಲ್ಲಿ ಯಶಸ್ಸು ಸಾಧಿಸಿರುವುದನ್ನು ಈ ಪ್ರಶಸ್ತಿಯು ಪ್ರತಿಫಲಿಸುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ಸ್ಯಾಂಡಲ್ ಪ್ರಥಮ: ಝೆಪ್ಟೋ ತ್ವರಿತ ವಹಿವಾಟು ವೇದಿಕೆಗಳಲ್ಲಿ ಎರಡು ವರ್ಷಗಳ ಹಿಂದೆ ತಿಂಗಳಿಗೆ ಕೇವಲ 10 ಲಕ್ಷ ರೂಪಾಯಿ ಮೌಲ್ಯದ ಮೈಸೂರು ಸ್ಯಾಂಡಲ್ ಸೋಪ್ ಮಾರಾಟವಾಗುತ್ತಿತ್ತು.

ಲೋಕಾ ಬಲೆಗೆ ಮನೋಜ್, ಕಾಂತರಾಜ್

ಬೆಂಗಳೂರು: ತಾತ್ಕಾಲಿಕ ವಿದ್ಯುತ್ ಮೀಟರ್‌ಗೆ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಸಂಪರ್ಕ ಮಂಜೂರು ಮಾಡಲು 50 ಸಾವಿರ ಲಂಚ ಪಡೆಯುತ್ತಿದ್ದ ಜೆ.ಪಿ. ನಗರದ ಬೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರು ಹಾಗೂ ಅವರ ಪರವಾಗಿ ಹಣ ಪಡೆಯುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಮಂಗಳವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಬೆಸ್ಕಾಂ ಎಸ್12 ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತ ಮನೋಜ್ ಕುಮಾರ್ ಬಿ. (53) ಮತ್ತು ಅವರ ಪರವಾಗಿ ಲಂಚದ ಹಣ ಸ್ವೀಕರಿಸುತ್ತಿದ್ದ ಖಾಸಗಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜು ಬಂಧಿತ ಆರೋಪಿಗಳಾಗಿದ್ದಾರೆ. ಪೀಣ್ಯದ ಹೆಗ್ಗನಹಳ್ಳಿಯ ನಿವಾಸಿ ಎನ್. ರಘುರಾಜ್ ಎಂಬವರು ತಮ್ಮ ಕೆಲಸವೊಂದಕ್ಕೆ ತಾತ್ಕಾಲಿಕ ಮೀಟರ್‌ಗಾಗಿ ಹೆಚ್ಚುವರಿ 25 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿ ಕೋರಿ ಜೆ.ಪಿ. ನಗರದ 7ನೇ ಹಂತದಲ್ಲಿರುವ ಬೆಸ್ಕಾಂ ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಈ ಅಧಿಕೃತ ಕೆಲಸ ಮಾಡಿಕೊಡಲು ಎಇಇ ಮನೋಜ್ ಕುಮಾರ್ ಅವರು 50,000 ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ಈ ಬಗ್ಗೆ ರಘುರಾಜ್ ಅವರು ನಗರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ರೆಡ್ ಹ್ಯಾಂಡ್‌ಆಗಿ ಆರೋಪಿಗಳ ವಶಕ್ಕೆ: ದೂರಿನ ಅನ್ವಯ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡ ಲೋಕಾ ಪೊಲೀಸರು ಕಾರ್ಯಾಚರಣೆ ನಡೆಸಿದರು. ಯೋಜನೆಯ ಪ್ರಕಾರ, ದೂರುದಾರರು ಹಣ ತರುತ್ತಿದ್ದಂತೆ ಎಇಇ ಮನೋಜ್ ಕುಮಾರ್ ಆ ಲಂಚದ ಹಣವನ್ನು ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಕಾಂತರಾಜುಗೆ ನೀಡುವಂತೆ ಸೂಚಿಸಿದ್ದರು. ಅದರಂತೆ ಕಾಂತರಾಜು ದೂರುದಾರರಿಂದ 50,000 ರೂ. ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಆತನನ್ನು ರೆಡ್ ಹ್ಯಾಂಡ್‌ಆಗಿ ವಶಕ್ಕೆ ಪಡೆದು, ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ.

ಲೋಕಾಯುಕ್ತ ಬೆಂಗಳೂರು ನಗರ -2 ರ ಎಸ್.ಪಿ. ಶಿವಪ್ರಕಾಶ್ ದೇವರಾಜು, ಅವರ ಮಾರ್ಗದರ್ಶನದಲ್ಲಿ ಹಾಗೂ ಡಿಎಸ್ಪಿ ಸತೀಶ್ ಎಂ.ಎಚ್. ಅವರ ಮೇಲ್ವಿಚಾರಣೆಯಲ್ಲಿ ಈ ಯಶಸ್ವಿ ದಾಳಿ ನಡೆದಿದೆ.

ಜೆಡಿಎಸ್ ಮುಖಂಡರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಕೆ

ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ

ಬೆಂಗಳೂರು: ನನಗೆ ಲೆಟರ್ ಹೆಡ್, ವಿಸಿಟಿಂಗ್ ಕಾರ್ಡ್ ಜಿಲ್ಲಾಧ್ಯಕ್ಷರು ಬೇಕಾಗಿಲ್ಲ. ಸಕ್ರಿಯವಾಗಿ ಪಕ್ಷದ ಕೆಲಸವನ್ನು ನಿಷ್ಠೆಯಿಂದ ಮಾಡುವವರು ಬೇಕು. ಮುಂದಿನ ದಿನಗಳಲ್ಲಿ ಅಂಥವರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜೆಡಿಎಸ್ ಮುಖಂಡರಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಜಿಲ್ಲಾಧ್ಯಕ್ಷರ ಸಭೆ ಉದ್ದೇಶಿಸಿ ಮಾತನಾಡಿ, ಪಕ್ಷ ಸಂಘಟನೆಯನ್ನು ನಿಷ್ಠೆಯಿಂದ ಮಾಡಬೇಕು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಕೇವಲ ವಿಸಿಟಿಂಗ್ ಕಾರ್ಡ್ ಮತ್ತು ಲೆಟರ್ ಹೆಡ್ ಶೋಕಿ ಇರುವ ಜನ ನನಗೆ ಬೇಕಿಲ್ಲ. ಅಂಥವರಿಂದ ಪಕ್ಷಕ್ಕೆ ಯಾವುದೇ ಉಪಯೋಗ ಇಲ್ಲ ಎಂದು ತೀಕ್ಷ್ಣವಾಗಿ ನುಡಿದರು. ಯಾವುದೇ ಹುದ್ದೆ ಸಿಕ್ಕಿದೆ ಎಂದರೆ ಅದು ಅಜೀವ ಹುದ್ದೆ ಅಲ್ಲ. ಯಾವುದೇ ಜವಾಬ್ದಾರಿ ಸಿಕ್ಕಿದರೂ ಪಕ್ಷದ ಕೆಲಸ ಮಾಡುವುದಕ್ಕೆ ಸಿಕ್ಕಿದ ಅವಕಾಶ ಅಷ್ಟೇ. ಹೀಗಾಗಿ ಪ್ರತಿಯೊಬ್ಬರೂ ಪಕ್ಷದ ಕೆಲಸ ಮಾಡಬೇಕು ಎಂದು ಹೇಳಿದರು.



ಅಖಂಡ ಶ್ರೀನಿವಾಸಮೂರ್ತಿ ಶೀಘ್ರವೇ ಜೆಡಿಎಸ್‌ಗೆ?

ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಜೆಡಿಎಸ್ ಸೇರುವುದು ಖಚಿತವಾಗಿದ್ದು, ಈ ವಿಷಯವನ್ನು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೆ ಖಚಿತಪಡಿಸಿದ್ದಾರೆ. ಮಂಗಳವಾರ ಬೆಳಗ್ಗೆ ಕಾವಲ್‌ಬೈರಸಂದ್ರದಲ್ಲಿರುವ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಭೇಟಿ ನೀಡಿದ ಕುಮಾರಸ್ವಾಮಿ ಸುಮಾರು ಒಂದು ತಾಸಿನ ಅವರ ಮನೆಯಲ್ಲಿದ್ದು ಮಾತುಕತೆ ನಡೆಸಿದ ನಂತರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಇದೊಂದು ಗೌರವಪೂರ್ವಕ ಭೇಟಿಯಾಗಿದ್ದು, ಜೆಡಿಎಸ್ ಪಕ್ಷ ಸೇರಲು ಅವರು ಉತ್ಸುಕರಾಗಿದ್ದಾರೆ. ಸದ್ಯದಲ್ಲೇ ದಿನಾಂಕ ನಿಗದಿ ಮಾಡಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಪಕ್ಷದ ಬಲವರ್ಧನೆಗೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಈಗಿನಿಂದಲೇ ಪಕ್ಷಕ್ಕೆ ಶಕ್ತಿ ತುಂಬುತ್ತಿದ್ದೇವೆ. ಅದರ ಭಾಗವಾಗಿ ಅಖಂಡ ಶ್ರೀನಿವಾಸ ಮೂರ್ತಿ ಅವರು ಜೆಡಿಎಸ್ ಸೇರುತ್ತಿದ್ದಾರೆ ಎಂದು ಖಚಿತಪಡಿಸಿದರು. ಸಂಸದ ಮಲ್ಲೇಶ್ ಬಾಬು, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಮ್. ರಮೇಶ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ ಸೇರಿದಂತೆ ಅನೇಕ ಮುಖಂಡರು ಇದ್ದರು.

ಕಾದಾಟದಲ್ಲಿ ಗಾಯಗೊಂಡಿದ್ದ ಮಾರ್ತಾಂಡ ಆನೆ ಸಾವು

ಮಡಿಕೇರಿ: ದುಬಾರೆ ಶಿಬಿರದಲ್ಲಿ ಸೋಮವಾರ ಎರಡು ಸಾಕಾನೆಗಳ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 'ಮಾರ್ತಾಂಡ' ಆನೆ ಮಂಗಳವಾರ ಮುಂಜಾನೆ ಸಾವಿಗೀಡಾಗಿದೆ.

ಸೋಮವಾರ ಆನೆಗಳ ಸ್ನಾನದ ಸಂದರ್ಭ ದಸರಾ ಆನೆ ಕಂಜನ್ ಮತ್ತು ಮಕನಾ ಆನೆ ಮಾರ್ತಾಂಡ ನಡುವೆ ನಡೆದ ಕಾಳಗದ ಸಂದರ್ಭ ಸ್ಥಳದಲ್ಲಿದ್ದ ಚೆನ್ನೈ ಮೂಲದ ಪ್ರವಾಸಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದರು. ಜೊತೆಗೆ ಆನೆಯೂ ತೀವ್ರವಾಗಿ ಗಾಯಗೊಂಡಿತ್ತು. ಕಂಜನ್ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ (34) ಆನೆಗೆ ವನ್ಯಜೀವಿ ತಜ್ಞ ವೈದ್ಯ ಮುಜೀಬ್ ಅವರು ಚಿಕಿತ್ಸೆ ನೀಡುತ್ತಿದ್ದರು.

ಆದರೆ ಕಂಜನ್ ಆನೆ ದಾಳಿಯ ತಿವಿತದಿಂದ ಗಂಭೀರ ಗಾಯಗೊಂಡಿದ್ದ ಮಾರ್ತಾಂಡ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮುಂಜಾನೆ ಮೃತಪಟ್ಟಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಕೊಡಗು ಜಿಲ್ಲಾಡಳಿತಕ್ಕೆ ಸಚಿವ ಎನ್.ಎಸ್. ಭೋಸರಾಜು ಸೂಚನೆ

ದುಬಾರೆ ಶಿಬಿರದಲ್ಲಿ ಮಾರ್ಗಸೂಚಿ ಪಾಲಿಸಿ

ಬೆಂಗಳೂರು: ಕೊಡಗು ಜಿಲ್ಲೆಯ ಪ್ರಸಿದ್ಧ ದುಬಾರೆ ಆನೆ ಶಿಬಿರದಲ್ಲಿ ಸಾಕಾನೆಗಳ ಕಾದಾಟದ ವೇಳೆ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅತ್ಯಂತ ದುರದೃಷ್ಟಕರ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ದುಬಾರೆ ಶಿಬಿರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸುವಂತೆ ಕೊಡಗು ಜಿಲ್ಲಾಡಳಿತಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚನೆ ನೀಡಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ದುರಂತದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲಾಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ, ಪ್ರಾಥಮಿಕ ಮಾಹಿತಿ ಪಡೆದುಕೊಂಡಿದ್ದೇನೆ. ಘಟನೆಗೆ ನಿಖರ ಕಾರಣಗಳೇನು ಮತ್ತು ಪ್ರವಾಸಿ ಮಾರ್ಗಸೂಚಿ ನಿರ್ವಹಣೆಯಲ್ಲಿ ಏನಾದರೂ ಲೋಪವಾಗಿದೆಯೇ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದ್ದಾರೆ.

ಮಾರ್ತಾಂಡ ಸಾವಿಗೆ ಕಂಬನಿ

ಇದೇ ವೇಳೆ, ಸೋಮವಾರ ದುಬಾರೆ ಶಿಬಿರದಲ್ಲಿ ನಡೆದ ಸಾಕಾನೆಗಳ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಮಾರ್ತಾಂಡ ಆನೆಯು ಮಂಗಳವಾರ ಬೆಳಗ್ಗೆ ಮೃತಪಟ್ಟಿರುವ ಸುದ್ದಿ ತಿಳಿದು ಸಚಿವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಮಾರ್ತಾಂಡನ ಅಗಲಿಕೆ ಶಿಬಿರದ ಸಿಬ್ಬಂದಿ ಹಾಗೂ ಪ್ರಾಣಿ ಪ್ರಿಯರಿಗೆ ನೋವು ತಂದಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.

ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಆನೆ ಶಿಬಿರಗಳಲ್ಲಿ ಕಟ್ಟುನಿಟ್ಟಾಗಿ ಪ್ರವಾಸಿಗರ ನಿರ್ವಹಣೆಗೆ ಮಾರ್ಗಸೂಚಿ ಜಾರಿಗೆ ತರಲು ಸಚಿವರು ನಿರ್ದೇಶಿಸಿದ್ದಾರೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವಂತೆ ನಿಗಾವಹಿಸಬೇಕು. ಜಿಲ್ಲಾಡಳಿತವು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಾಡುಪ್ರಾಣಿಗಳ ನಡವಳಿಕೆಯನ್ನು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ನಿಖರವಾಗಿ ಊಹಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಅರಣ್ಯ ಪ್ರದೇಶಗಳು ಹಾಗೂ ಆನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರಾಣಿಗಳನ್ನು ವೀಕ್ಷಿಸುವಾಗ ಅಂತರ ಕಾಯ್ದುಕೊಳ್ಳುವ ಜೊತೆಗೆ ತಮ್ಮ ಸುರಕ್ಷತೆಯ ಬಗ್ಗೆ ತೀವ್ರ ಎಚ್ಚರಿಕೆ ವಹಿಸಬೇಕು ಎಂದು ಸಚಿವರು ಪ್ರವಾಸಿಗರಲ್ಲಿ ಕಾಳಜಿಯ ಮನವಿ ಮಾಡಿದ್ದಾರೆ.

ಸಂಪಾದಕೀಯ

ಓಲೈಕೆಯ ರಾಜಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿ ತೆರೆ

ಪಶ್ಚಿಮ ಬಂಗಾಳದ ರಾಜಕಾರಣವು ಹಲವು ದಶಕಗಳಿಂದ ಒಂದು ವಿಚಿತ್ರ ದಿಕ್ಕಿನಲ್ಲಿ ಸಾಗುತ್ತಿತ್ತು. ಆಡಳಿತದ ಕೇಂದ್ರಬಿಂದು ಜನಸಾಮಾನ್ಯರ ಹಿತಾಸಕ್ತಿ ಅಥವಾ ರಾಷ್ಟ್ರೀಯ ಭದ್ರತೆ ಆಗಿರದೆ ಬದಲಾಗಿ ನಿರ್ದಿಷ್ಟ ಸಮುದಾಯದ ಓಲೈಕೆ ಎಂಬ ಆರೋಪವೇ ಹೆಚ್ಚಾಗಿ ಕೇಳಿಬರುತ್ತಿತ್ತು. ಪರಿಣಾಮವಾಗಿ, ಸಾಮಾನ್ಯ ನಾಗರಿಕರ ಜೀವನಕ್ಕೆ ಸಂಬಂಧಿಸಿದ ಅನೇಕ ನಿರ್ಧಾರಗಳು ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದಲ್ಲೇ ಸಿಲುಕಿಕೊಂಡಿದ್ದವು.



ಇದೀಗ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ನೂತನ ಬಿಜೆಪಿ ಸರ್ಕಾರ ಆ ಪ್ರವೃತ್ತಿಗೆ ಸ್ಪಷ್ಟ ಬ್ರೇಕ್ ಹಾಕುವ ಕೆಲಸ ಆರಂಭಿಸಿರುವುದು ಗಮನಾರ್ಹ.

ದೇಶದ ಭದ್ರತಾ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಪ್ರದೇಶವೆಂದೇ ಪರಿಗಣಿಸಲ್ಪಡುವ ಸಿಲಿಗುರಿ ಕಾರಿಡಾರ್‌ಗೆ ಅಗತ್ಯ ಭೂಮಿ ನೀಡುವ ವಿಚಾರ ವರ್ಷಗಳಿಂದ ರಾಜಕೀಯದ ಕಾರಣಕ್ಕೆ ವಿಳಂಬವಾಗಿತ್ತು. 'ಚಿಕನ್ ನೆಕ್' ಎಂದೇ ಕರೆಯಲ್ಪಡುವ ಈ ಪ್ರದೇಶ ದೇಶದ ಈಶಾನ್ಯ ಭಾಗವನ್ನು ಉಳಿದ ಭಾರತಕ್ಕೆ ಸಂಪರ್ಕಿಸುವ ಜೀವನಾಡಿ. ಇಂಥ ವ್ಯೂಹಾತ್ಮಕ ಮಹತ್ವದ ಪ್ರದೇಶದಲ್ಲಿ ಕೇಂದ್ರದ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಅಡ್ಡಿಯಾಗಿದ್ದರೆ ಅದು ಕೇವಲ ಆಡಳಿತ ವೈಫಲ್ಯವಲ್ಲ, ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಎನ್ನಬೇಕಾಗುತ್ತದೆ. ಈಗಿನ ಸರ್ಕಾರ ಅದನ್ನು ಮನಗಂಡು ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ.

ಅದೇ ರೀತಿ, ಬಾಂಗ್ಲಾದೇಶ ಗಡಿಯಲ್ಲಿ ಬೇಲಿ ನಿರ್ಮಾಣಕ್ಕೆ ಅಗತ್ಯ ಭೂಮಿ ನೀಡಿರುವ ಕ್ರಮವೂ ಮಹತ್ವದ್ದಾಗಿದೆ. ಅಕ್ರಮ ನುಸುಳುವಿಕೆ, ಕಳ್ಳಸಾಗಣೆ, ಭಯೋತ್ಪಾದಕ ಚಟುವಟಿಕೆಗಳ ತಡೆಗೆ ಗಡಿ ಭದ್ರತೆ ಅತ್ಯವಶ್ಯಕ.

ಆದರೆ ಹಿಂದಿನ ಸರ್ಕಾರಗಳು ಮತಬ್ಯಾಂಕ್ ರಾಜಕಾರಣದ ಕಾರಣಕ್ಕೆ ಈ ವಿಚಾರದಲ್ಲಿ ಗಂಭೀರತೆ ತೋರಲಿಲ್ಲ ಎಂಬ ಟೀಕೆ ಸಾಮಾನ್ಯವಾಗಿತ್ತು. ಈಗಿನ ಸರ್ಕಾರ ಆ ರಾಜಕೀಯ ಭಯವನ್ನು ಬದಿಗಿಟ್ಟು ಕಾರ್ಯೋನ್ಮುಖವಾಗಿದೆ.

ಮೌಲ್ವಿಗಳಿಗೆ ನೀಡಲಾಗುತ್ತಿದ್ದ ಗೌರವಧನವನ್ನು ಸ್ಥಗಿತಗೊಳಿಸಿರುವ ಕ್ರಮವೂ ಸಮಾನತೆಯ ತತ್ವದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸರ್ಕಾರವು ಧರ್ಮಾಧಾರಿತ ಪ್ರೋತ್ಸಾಹದ ಕೇಂದ್ರವಾಗಬಾರದು. ಧರ್ಮನಿರಪೇಕ್ಷ ಆಡಳಿತ ಎಂದರೆ ಎಲ್ಲ ಧರ್ಮಗಳಿಗೆ ಸಮಾನ ಅಂತರ ಕಾಯ್ದುಕೊಳ್ಳುವುದೇ ಹೊರತು, ತೆರಿಗೆದಾರರ ಹಣವನ್ನು ನಿರ್ದಿಷ್ಟ ಸಮುದಾಯದ ಧಾರ್ಮಿಕ ನಾಯಕರಿಗೆ ಹಂಚುವುದಲ್ಲ. ಇದೇ ಮಾತು ಸಾರ್ವಜನಿಕ ರಸ್ತೆಗಳಲ್ಲಿ ನಮಾಜ್ ನಡೆಸುವ ವಿಚಾರಕ್ಕೂ ಅನ್ವಯಿಸುತ್ತದೆ. ಸಾರ್ವಜನಿಕ ಸ್ಥಳಗಳು ಎಲ್ಲರಿಗೂ ಸೇರಿದ್ದಾಗಿದ್ದು, ಅವುಗಳ ಬಳಕೆ ಸಾಮಾನ್ಯ ಜನರ ಸಂಚಾರ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವಂತಿರಬಾರದು.

ಒಟ್ಟಿನಲ್ಲಿ, ಪಶ್ಚಿಮ ಬಂಗಾಳದಲ್ಲಿ ಈಗ ಕಾಣಿಸುತ್ತಿರುವುದು ಕೇವಲ ಸರ್ಕಾರ ಬದಲಾವಣೆ ಅಲ್ಲ; ಆಡಳಿತದ ಮನೋಭಾವದ ಬದಲಾವಣೆ. ಓಲೈಕೆಯ ರಾಜಕಾರಣದಿಂದ ಹೊರಬಂದು ರಾಷ್ಟ್ರೀಯ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಸಾಮಾನ್ಯ ಜನರ ಹಿತಾಸಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುವ ದಿಕ್ಕಿನಲ್ಲಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಸಾಗುತ್ತಿರುವುದು ಸ್ಪಷ್ಟ.

ಜನಪರ ಆಡಳಿತವೆಂದರೆ ಇದೇ ಎಂಬ ಸಂದೇಶ ವನ್ನು ಬಂಗಾಳ ಈಗ ದೇಶಕ್ಕೆ ನೀಡುತ್ತಿದೆ. ಇದಕ್ಕಿಂತಲೂ ಮುಖ್ಯವಾಗಿ, ಈ ನಿರ್ಧಾರಗಳು ಪಶ್ಚಿಮ ಬಂಗಾಳದಲ್ಲಿ ವರ್ಷಗಳಿಂದ ಬೆಳೆದಿದ್ದ 'ರಾಜ್ಯಕ್ಕಿಂತ ಸಮುದಾಯ ದೊಡ್ಡದು' ಎಂಬ ಅಪಾಯಕಾರಿ ರಾಜಕೀಯ ಮನೋಭಾವಕ್ಕೆ ಸವಾಲು ಹಾಕುತ್ತಿವೆ.

ಕಾನೂನು ಎಲ್ಲರಿಗೂ ಒಂದೇ ಆಗಬೇಕು, ಸಾರ್ವಜನಿಕ ವ್ಯವಸ್ಥೆ ಎಲ್ಲರಿಗೂ ಸಮಾನವಾಗಿರಬೇಕು ಮತ್ತು ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಯಾವುದೇ ರಾಜಕೀಯ ಸಂಶಯ ಇರಬಾರದು ಎಂಬ ಸಂದೇಶವನ್ನು ಹೊಸ ಸರ್ಕಾರ ಸ್ಪಷ್ಟವಾಗಿ ನೀಡುತ್ತಿದೆ. ದೀರ್ಘಕಾಲದ ಓಲೈಕೆ ರಾಜಕಾರಣದಿಂದ ಆಡಳಿತದ ಮೇಲೆ ಜನರಲ್ಲಿ ಮೂಡಿದ್ದ ಅನಿಶ್ಚಿತತೆಯನ್ನು ದೂರ ಮಾಡುವ ಪ್ರಯತ್ನವೂ ಇದಾಗಿದೆ. ಆಡಳಿತದ ಕೇಂದ್ರಬಿಂದು ಮತಬ್ಯಾಂಕ್ ಅಲ್ಲ, ನಾಗರಿಕರ ಹಕ್ಕು ಮತ್ತು ದೇಶದ ಭದ್ರತೆ ಎಂಬ ತತ್ವಕ್ಕೆ ಮರಳುತ್ತಿರುವುದು ಪ್ರಜಾಪ್ರಭುತ್ವದ ಆರೋಗ್ಯಕರ ಬೆಳವಣಿಗೆಯೆಂದೇ ಪರಿಗಣಿಸಬೇಕು.

ಪ್ರಾಣಕ್ಕೆ ಸಂಚಕಾರ ತರುವಂಥವುಗಳು

ಅಗ್ನಿಶಾಪಃ ಸ್ತ್ರೀಯೋ ಮೂರ್ಖಃ ಸರ್ಪೋ ರಾಜಕುಲಾನಿ ಚ ।
ನಿತ್ಯಂ ಯತ್ನೇನ ಸೇವ್ಯಾನಿ ಸದ್ಯಃ ಪ್ರಾಣಹರಾಣಿ ಷಟ್ ॥

– ಸಮಯೋಚಿತ ಪದ್ಯಮಾಲಿಕಾ

ಅಗ್ನಿ, ನೀರು, ಸ್ತ್ರೀಯರು, ಮೂರ್ಖ, ಸರ್ಪ ಮತ್ತು ರಾಜಕುಲಗಳು ಇವು ಆರನ್ನೂ ಪ್ರಯತ್ನದಿಂದಲೇ ಸೇವಿಸಬೇಕು. ಇಲ್ಲದಿದ್ದಲ್ಲಿ ಪ್ರಾಣಕ್ಕೆ ಸಂಚಕಾರವನ್ನು ತರುತ್ತವೆ – ಎಂಬುದು ಶ್ಲೋಕಾರ್ಥ.

'ಜಾತಸ್ಯ ಹಿ ಧ್ರುವೋ ಮೃತ್ಯುಃ' ಹುಟ್ಟಿದವರಿಗೆ ಸಾವು ನಿಶ್ಚಿತ. ಇದು ಜನಪ್ರಿಯ ಉಕ್ತಿ. ಹುಟ್ಟಿದವುಗಳಿಗೆ ಸಾವು ಕಟ್ಟಿಟ್ಟ ಬುತ್ತಿ. ಹುಟ್ಟಿದವರಾರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಂದಲ್ಲ ನಾಳೆ ಸಾವು ಬಂದೇ ಬರುತ್ತದೆ. ಸಾವು ಬರದಿರುವುದಕ್ಕೆ ಏಕೈಕ ಮಾರ್ಗವೆಂದರೆ ಹುಟ್ಟದಿರುವುದು. ಹುಟ್ಟಿದವರಿಗೆ ಸಾವೆಂಬುದು ಪ್ರಕೃತಿಯ ನಿಯಮ.



ಸಾವು ಸಹಜವಾಗಿರಬೇಕು. ಅದೆಂದೂ ಬಲಾತ್ಕಾರದ ಸಾವಾಗ ಬಾರದು. ಆದರೆ ಕೆಲವು ಸಂದರ್ಭಗಳಲ್ಲಿ ನಮ್ಮ ಅವಿವೇಕ, ಅತ್ಯುತ್ಸಾಹ, ಹದ ಮೀರಿದ ಸಾಹಸ, ವಿಚಾರಿಸದೇ ಮುಂದುವರಿಯುವುದು, ದುಡುಕು ಸ್ವಭಾವ ಇವೆಲ್ಲವೂ ಅಸಹಜ ಸಾವಿಗೆ ಕಾರಣವಾಗುತ್ತದೆ.

ಇನ್ನು ಕೆಲವು ಸಂದರ್ಭಗಳಲ್ಲಿ ನಮ್ಮ ಕುತೂಹಲವೂ ಸಾವಿಗೆ ಕಾರಣವಾಗಬಹುದು. ನಾವು ಮಾಡಬೇಕಾದ ಕೆಲಸ, ಬೆಳೆಸಿಕೊಳ್ಳುವ ಸಹವಾಸ ಇತ್ಯಾದಿಗಳು ಸಾವಿಗೆ ಕಾರಣವಾಗುತ್ತವೆ. ಆದ್ದರಿಂದ ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದು ಮುಖ್ಯವೆನಿಸುತ್ತದೆ. ಯಾರೊಂದಿಗೆ ಸಹವಾಸ ಮಾಡಬೇಕು, ಹೇಗೆ ವ್ಯವಹರಿಸಬೇಕು ಎಂಬುದೂ ಮುಖ್ಯವಾಗುತ್ತದೆ.

ಬೆಂಕಿಯೊಂದಿಗೆ ಸರಸ ಸಲ್ಲದು. ಸುಡುವುದು ಅದರ ಗುಣ, ನಾವು ಎಚ್ಚರ ಮೀರಿ ಅಗ್ನಿಯೊಂದಿಗೆ ಸರಸಕ್ಕೆ ಅಥವಾ ಸಾಹಸಕ್ಕೆ ಮುಂದಾದರೆ ಸಾವು ಖಚಿತ. ಆದ್ದರಿಂದ ಬೆಂಕಿಯೊಂದಿಗೆ ಕೆಲಸ ಮಾಡುವಾಗ ಎಚ್ಚರ ವಹಿಸಬೇಕು.

ನೀರಿನೊಂದಿಗೂ ಇದೇ ನಿಯಮ ಅನ್ವಯ. ಈಜು ಬರದಿದ್ದರೆ ಸಮುದ್ರ, ನದಿ ಇತ್ಯಾದಿ ಕಡೆ ಇಳಿಯಬಾರದು. ಸ್ವಲ್ಪವೇ ಮೈಮರೆತರೂ ಅಪಾಯ ತಪ್ಪಿದ್ದಲ್ಲ.

ಸ್ತ್ರೀಯರ ಸಹವಾಸ ಮಾಡುವಾಗಲೂ ಯೋಚಿಸಿ ಅಡಿಯಿಡಬೇಕು. 'ಸ್ತ್ರೀಣಾಂ ಮನಃ ಕ್ಷಣಿಕಮ್' ಎಂದು ಚಾಣಕ್ಯ ಹೇಳಿದ್ದಾನೆ. 'ಸ್ತ್ರೀಣಾಂ ಅಪಾಂಗದೃಷ್ಟ್ಯೈವ ಜೀಯತೇ ಜಗತಾಂ ತ್ರಯಮ್' ಎಂಬ ಮಾತಿದೆ. ಸ್ತ್ರೀಯರ ಸಹವಾಸ ಮಾಡಿ ಎಲ್ಲವನ್ನೂ ಕಳೆದುಕೊಂಡವರು ಸಾಕಷ್ಟಿದ್ದಾರೆ. ಆದ್ದರಿಂದ ಸ್ತ್ರೀಯ ಸಹವಾಸ ಮಾಡುವಾಗ ನೂರು ಬಾರಿ ಯೋಚಿಸಬೇಕು.

ಮೂರ್ಖರ ಸಹವಾಸವನ್ನು ಮಾಡಬಾರದು. ಅವರಿಗೆ ಯಾವ ಸಿದ್ಧಾಂತವೂ ಇರುವುದಿಲ್ಲ. ಯಾವ ಬದ್ಧತೆಯೂ ಇರುವುದಿಲ್ಲ. ಇಂಥವರ ಸಹವಾಸ ಮಾಡಿ ಅಪಾಯ ತಂದುಕೊಳ್ಳಬಾರದು. ರಾಜಕುಲ ಸ್ವಾರ್ಥಿಗಳ ಕೂಟ. ಅಲ್ಲಿರುವ ಪ್ರತಿಯೊಬ್ಬರೂ ಸ್ವಾರ್ಥಿಗಳೇ ರಾಜನ ಪ್ರೀತಿ ಗಳಿಸಲು ಯಾರನ್ನೂ ಬೇಕಾದರೂ ಬಲಿ ಕೊಡುತ್ತಾರೆ. ರಾಜಕುಲದ ಸೇವೆಯೆಂಬುದು ಕತ್ತಿಯ ಅಲಗಿನ ಮೇಲೆ ನಡೆದಂತೆ.

ಆದ್ದರಿಂದ ಉತ್ತಮ ಬದುಕನ್ನು ಬಯಸುವವರು ಈ ಆರು ವಿಷಯದ ಕುರಿತು ಎಚ್ಚರದಿಂದ ವ್ಯವಹರಿಸಬೇಕು. ಎಚ್ಚರ ತಪ್ಪಿದರೆ ಅಪಾಯ ತಪ್ಪದು.

ಭರವಸೆಯ ಕಿರಣವಾಗಿ ಇಂಡೋ-ಮೆಡಿಟರೇನಿಯನ್ ಪಾಲುದಾರಿಕೆ

'ಧರ್ಮ' ಮತ್ತು 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಸಮಾಜಗಳನ್ನು ಒಂದುಗೂಡಿಸುತ್ತದೆ. ಇದರ ಆಧಾರದಲ್ಲಿ ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.



▸ ನರೇಂದ್ರ ಮೋದಿ, ಭಾರತದ ಪ್ರಧಾನ ಮಂತ್ರಿ



▸ ಜಾರ್ಜಿಯಾ ಮೆಲೋನಿ, ಇಟಲಿ ಪ್ರಧಾನ ಮಂತ್ರಿ

ಭಾರತ ಮತ್ತು ಇಟಲಿ ದೇಶಗಳ ನಡುವಿನ ಸಂಬಂಧವು ಈಗ ಒಂದು ಪ್ರಮುಖ ಹಂತವನ್ನು ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ನಡುವಿನ ಬಾಂಧವ್ಯವು ಅಭೂತಪೂರ್ವ ವೇಗದಲ್ಲಿ ಬೆಳೆದಿದೆ. ಕೇವಲ ಸಾಮಾನ್ಯ ಸ್ನೇಹವಾಗಿದ್ದ ನಮ್ಮ ಒಡನಾಟ ಈಗ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಭವಿಷ್ಯದ ಸಮಾನ ದೃಷ್ಟಿಕೋನವನ್ನು ಆಧರಿಸಿದ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬದಲಾಗಿದೆ.

ಜಾಗತಿಕ ವ್ಯವಸ್ಥೆಯು ದೊಡ್ಡ ಬದಲಾವಣೆಗೆ ಒಳಗಾಗುತ್ತಿರುವ ಈ ಸಮಯದಲ್ಲಿ, ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆಯು ಉನ್ನತ ರಾಜಕೀಯ ಹಾಗೂ ಸಾಂಸ್ಥಿಕ ಮಟ್ಟದ ನಿಯಮಿತ ಭೇಟಿ ಮತ್ತು ಮಾತುಕತೆಗಳಿಂದ ಮುನ್ನಡೆಯುತ್ತಿದೆ. ಇದು ನಮ್ಮ ಆರ್ಥಿಕ ಚೈತನ್ಯ, ಸಾಮಾಜಿಕ ಸೃಜನಶೀಲತೆ ಮತ್ತು ಸಾವಿರಾರು ವರ್ಷಗಳ ಹಳೆಯ ನಾಗರಿಕತೆಯ ಜ್ಞಾನವನ್ನು ಒಟ್ಟುಗೂಡಿಸುವ ಒಂದು ಹೊಸ ಹಾಗೂ ಉನ್ನತ ಆಯಾಮವನ್ನು ಪಡೆದುಕೊಳ್ಳುತ್ತಿದೆ. 21ನೇ ಶತಮಾನದ ಪ್ರಗತಿ ಮತ್ತು ಭದ್ರತೆಯು ಹೊಸ ಆವಿಷ್ಕಾರಗಳನ್ನು ಮಾಡುವ, ಇಂಧನ ಪರಿವರ್ತನೆಯನ್ನು ಸರಿಯಾಗಿ ನಿರ್ವಹಿಸುವ ಮತ್ತು ತನ್ನ ದೇಶದ ಸಾರ್ವಭೌಮತ್ವವನ್ನು ಬಲಪಡಿಸುವ ರಾಷ್ಟ್ರಗಳ ಸಾಮರ್ಥ್ಯದ ಮೇಲೆ ನಿರ್ಧಾರವಾಗುತ್ತದೆ ಎಂಬ ಸಾಮೂಹಿಕ ಅರಿವು ನಮ್ಮ ಸಹಕಾರದಲ್ಲಿದೆ. ಈ ಉದ್ದೇಶಕ್ಕಾಗಿ, ಹೊಸ ಗುರಿಗಳನ್ನು ತಲುಪಲು ಮತ್ತು ನಮ್ಮ ಪರಸ್ಪರ ಪೂರಕ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವ ಸಲುವಾಗಿ ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಾಢವಾಗಿಸಲು ಹಾಗೂ ವೈವಿಧ್ಯಮಯಗೊಳಿಸಲು ನಾವು ಬದ್ಧರಾಗಿದ್ದೇವೆ.

ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲ ಶಕ್ತಿಯಾಗಿ ಇಟಲಿ ಹೊಂದಿರುವ ಸ್ಥಾನವನ್ನು ಬಿಂಬಿಸುವ ಇಟಾಲಿಯನ್ ವಿನ್ಯಾಸ, ಅತ್ಯುತ್ತಮ ಉತ್ಪಾದನಾ ಸಾಮರ್ಥ್ಯ ಹಾಗೂ ವಿಶ್ವದರ್ಜೆಯ ಸೂಪರ್ ಕಂಪ್ಯೂಟರ್‌ಗಳನ್ನು ಭಾರತದ ತ್ವರಿತ ಆರ್ಥಿಕ ಪ್ರಗತಿ, ಎಂಜಿನಿಯರಿಂಗ್ ಪ್ರತಿಭೆ, ಬೃಹತ್ ಮಾರುಕಟ್ಟೆ ಹಾಗೂ 100ಕ್ಕೂ ಹೆಚ್ಚು ಯುನಿಕಾರ್ನ್‌ಗಳು ಮತ್ತು 2,00,000 ನವೋದ್ಯಮಗಳನ್ನು ಒಳಗೊಂಡ ನಾವೀನ್ಯತೆಯ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿ ಒಂದು ಪ್ರಬಲ ಸಮನ್ವಯತೆಯನ್ನು ರೂಪಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಇದು ಕೇವಲ ಎರಡು ವ್ಯವಸ್ಥೆಗಳ ಸಾಮಾನ್ಯ ಜೋಡಣೆಯಲ್ಲ, ಬದಲಿಗೆ ನಮ್ಮ ಕೈಗಾರಿಕಾ ಸಾಮರ್ಥ್ಯಗಳು ಪರಸ್ಪರ ಶಕ್ತಿಯನ್ನು ಹೆಚ್ಚಿಸುವಂತಹ ಒಂದು ಮೌಲ್ಯಾಧಾರಿತ ಸಹ-ಸೃಷ್ಟಿಯಾಗಿದೆ.

ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಉಭಯ ದೇಶಗಳಲ್ಲಿ ವ್ಯಾಪಾರ ಹಾಗೂ ಹೂಡಿಕೆಯನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ. ರಕ್ಷಣೆ ಮತ್ತು ಏರೋಸ್ಪೇಸ್, ಹಸಿರು ತಂತ್ರಜ್ಞಾನ, ಯಂತ್ರೋಪಕರಣ, ವಾಹನ ಬಿಡಿಭಾಗ, ರಾಸಾಯನಿಕ, ಔಷಧೀಯ ಉತ್ಪನ್ನ, ಜವಳಿ, ಕೃಷಿ-ಆಹಾರ ಮತ್ತು ಪ್ರವಾಸೋದ್ಯಮ ಸೇರಿದಂತೆ ಪ್ರಮುಖ ವಲಯಗಳ ಮೇಲೆ ವಿಶೇಷ ಗಮನ ಹರಿಸುವ ಮೂಲಕ, 2029 ರ ವೇಳೆಗೆ ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದಲ್ಲಿ 20 ಬಿಲಿಯನ್ ಯುರೋ ಗುರಿಯನ್ನು ತಲುಪಲು ಹಾಗೂ ಅದನ್ನು ಮೀರಿ ಸಾಧಿಸಲು ನಾವು ಬಯಸುತ್ತೇವೆ.

ಜಗತ್ತಿನಾದ್ಯಂತ ಮೇಡ್ ಇನ್ ಇಟಲಿ ಎಂಬುದು ಯಾವಾಗಲೂ ಅತ್ಯುತ್ತಮ ಗುಣಮಟ್ಟಕ್ಕೆ ಹೆಸರಾಗಿದೆ. ಇಂದು ಅದು ಭಾರತದ ಮೇಕ್ ಇನ್ ಇಟಲಿ ಯೋಜನೆಯ ಉನ್ನತ ಗುಣಮಟ್ಟದ ಗುರಿಗಳೊಂದಿಗೆ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ, ಭಾರತೀಯ ಮಾರುಕಟ್ಟೆಗಾಗಿ ಉತ್ಪಾದನೆ ಮಾಡಲು ಇಟಾಲಿಯನ್ ಉದ್ಯಮಗಳು ತೋರಿಸುತ್ತಿರುವ ಆಸಕ್ತಿ ಮತ್ತು ಇಟಲಿಯಲ್ಲಿ ಭಾರತೀಯ ಕೈಗಾರಿಕೆಗಳ ಪ್ರಸ್ತುತತೆ ಹೆಚ್ಚುತ್ತಿದ್ದು, ಇದು ಅತ್ಯಂತ ಸಕಾರಾತ್ಮಕ ಸಂಕೇತವಾಗಿದೆ. ಪ್ರಸ್ತುತ ಎರಡೂ ಕಡೆಯಿಂದ ಇಂತಹ ಉದ್ಯಮಗಳ ಒಟ್ಟು ಸಂಖ್ಯೆ1,000 ದಾಟಿದ್ದು, ಇದು ನಮ್ಮ ಪೂರೈಕೆ ಸರಪಳಿಗಳ ಜೋಡಣೆಯನ್ನು ಮತ್ತಷ್ಟು ಬಲಪಡಿಸಲಿದೆ.

ತಾಂತ್ರಿಕ ನಾವೀನ್ಯತೆಯು ನಮ್ಮ ಪಾಲುದಾರಿಕೆಯ ಪ್ರಮುಖ ಅಂತಃಸತ್ವವಾಗಿದೆ. ಮುಂಬರುವ ದಶಕಗಳು ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಸುಧಾರಿತ ಉತ್ಪಾದನೆ, ನಿರ್ಣಾಯಕ ಖನಿಜಗಳು ಮತ್ತು ಡಿಜಿಟಲ್ ಮೂಲ ಸೌಕರ್ಯಗಳಂತಹ ವಲಯಗಳಲ್ಲಿನ ಅಭೂತಪೂರ್ವ ಪ್ರಗತಿಯಿಂದ ಗುರುತಿಸಲ್ಪಟ್ಟ, ಅಳೆಯಲಾಗದ ವ್ಯಾಪ್ತಿಯ ತಾಂತ್ರಿಕ ಕ್ರಾಂತಿಗೆ ಸಾಕ್ಷಿಯಾಗಲಿವೆ. ಭಾರತದ ಕ್ರಿಯಾತ್ಮಕ ನಾವೀನ್ಯ ಪರಿಸರ ವ್ಯವಸ್ಥೆ ಮತ್ತು ಉನ್ನತ ನೈಪುಣ್ಯತೆಯ ವೃತ್ತಿಪರ ಪ್ರತಿಭಾವಂತರ ಸಮೂಹವು, ಇಟಲಿಯ ಸುಧಾರಿತ ಕೈಗಾರಿಕಾ ಸಾಮರ್ಥ್ಯಗಳೊಂದಿಗೆ ಸಮ್ಮಿಲನಗೊಂಡು ಮೇಲ್ಕಂಡ ವಲಯಗಳಲ್ಲಿನ ನಮ್ಮ ಸಹಕಾರವನ್ನು ಸ್ವಾಭಾವಿಕ ಹಾಗೂ ಕಾರ್ಯತಂತ್ರಬದ್ಧವಾಗಿಸಿದೆ. ಉಭಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ನಡುವೆ ವರ್ಧಿಸುತ್ತಿರುವ ಪಾಲುದಾರಿಕೆಯು ಈ ಪ್ರಯತ್ನಕ್ಕೆ ಪೂರಕ ಬಲವನ್ನು ನೀಡಲಿದೆ.

ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಈಗಾಗಲೇ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ, ವಿಶೇಷವಾಗಿ 'ಗ್ಲೋಬಲ್ ಸೌತ್' (ಅಭಿವೃದ್ಧಿಶೀಲ ದೇಶಗಳು) ನಲ್ಲಿ ವ್ಯಾಪಕವಾಗಿ ಪ್ರತಿಧ್ವನಿಸುತ್ತಿದೆ. ಕೃತಕ ಬುದ್ಧಿಮತ್ತೆಯು ಪ್ರಮುಖವಾಗಿ ನಮ್ಮ ಸಮಾಜ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಆಳವಾದ ಪರಿಣಾಮ ಬೀರುತ್ತಿದೆ. ಎಐ ತಂತ್ರಜ್ಞಾನದ ಅಭಿವೃದ್ಧಿಯು ಜವಾಬ್ದಾರಿಯುತ ಹಾಗೂ 'ಮಾನವ'-ಕೇಂದ್ರಿತವಾಗಿರಬೇಕು (ಮನುಷ್ಯನ ಒಳಿತಿಗಾಗಿ ಇರಬೇಕು) ಎಂಬುದನ್ನು ಖಚಿತ ಪಡಿಸಿಕೊಳ್ಳಲು ಭಾರತ ಮತ್ತು ಇಟಲಿ ದೀರ್ಘಕಾಲದಿಂದ ಜಂಟಿಯಾಗಿ ಶ್ರಮಿಸುತ್ತಿವೆ. ಈ ದೃಷ್ಟಿಕೋನದಿಂದ, ಎಐ ಎಲ್ಲರನ್ನೂ ಒಳಗೊಳ್ಳುವ ಸಮಗ್ರ ಅಭಿವೃದ್ಧಿಯ ಪ್ರಬಲ ಸಾಧನವಾಗಿ ಉಭಯ ರಾಷ್ಟ್ರಗಳು ಎದುರು ನೋಡುತ್ತವೆ. ಪ್ರಮುಖವಾಗಿ ಗ್ಲೋಬಲ್ ಸೌತ್ ವಲಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು



ಸುಲಭವಾಗಿ ಲಭ್ಯವಾಗುವ ಬಹು ಭಾಷಾ ತಂತ್ರಜ್ಞಾನಗಳು ಜನರ ನಡುವಿನ ಸಾಮಾಜಿಕ ಕಂದಕಗಳನ್ನು ಆಳಗೊಳಿಸುವ ಬದಲು ಅವುಗಳನ್ನು ಕಡಿಮೆ ಮಾಡಬಲ್ಲವು.

ತಂತ್ರಜ್ಞಾನದ ಕೇಂದ್ರಬಿಂದುವಾಗಿ ಮಾನವನನ್ನು ಇರಿಸಬೇಕು ಎಂಬ ಭಾರತದ 'ಮಾನವ' (MANAV) ದೃಷ್ಟಿಕೋನ ಮತ್ತು ತನ್ನ ಮಾನವತಾವಾದಿ ಸಂಪ್ರದಾಯದಲ್ಲಿ ಬೇರೂರಿರುವ ಮಾನವ ಕೇಂದ್ರಿತ ನೈತಿಕ ತಂತ್ರಜ್ಞಾನದ ನಿಯಮಾವಳಿಗಳನ್ನು (ಅಲ್ಗಾರ್-ಎಥಿಕ್ಸ್) ಉತ್ತೇಜಿಸುವ ಇಟಲಿಯ ನಾಯಕತ್ವವನ್ನು ಆಧರಿಸಿ, ನಮ್ಮ ಪಾಲುದಾರಿಕೆಯು ಎಐ ತಂತ್ರಜ್ಞಾನವನ್ನು ಸಾಮಾಜಿಕ ಸಬಲೀಕರಣದ ವೇಗವರ್ಧಕವನ್ನಾಗಿ ರೂಪಿಸಲು ಬದ್ಧವಾಗಿದೆ. ನಮ್ಮ ಈ ಕಾರ್ಯವಿಧಾನವು ಭಾರತದ ಡಿಜಿಟಲ್ ವ್ಯಾಪ್ತಿಯನ್ನು ಇಟಲಿಯ ನೈತಿಕ ಹಾಗೂ ಕೈಗಾರಿಕಾ ಪರಿಣತಿಯೊಂದಿಗೆ ಸಂಯೋಜಿಸುವ ಮೂಲಕ, ತಂತ್ರಜ್ಞಾನವು ಮಾನವ ಘನತೆಗೆ ಪೂರಕವಾಗಿ ಸೇವೆ ಸಲ್ಲಿಸುವುದನ್ನು ಖಚಿತಪಡಿಸುತ್ತದೆ.

ಸುರಕ್ಷಿತ ಡಿಜಿಟಲ್ ಸಹಕಾರ, ಸಾಮರ್ಥ್ಯ ವೃದ್ಧಿ ಹಾಗೂ ಬಲಿಷ್ಠ ಸೈಬರ್ ಮೂಲಸೌಕರ್ಯ ವಲಯಗಳಲ್ಲಿ ಅತ್ಯುತ್ತಮ ಕಾರ್ಯವಿಧಾನಗಳನ್ನು ಹಂಚಿಕೊಳ್ಳುವ ಮೂಲಕ, ಪ್ರತಿಯೊಂದು ರಾಷ್ಟ್ರವೂ ಎಐ ಅನ್ನು ರೂಪಿಸುವ ಮತ್ತು ಅದರ ಲಾಭವನ್ನು ಪಡೆಯುವಂತಹ ಮುಕ್ತ, ವಿಶ್ವಾಸಾರ್ಹ ಹಾಗೂ ಸಮಾನ ಡಿಜಿಟಲ್ ಜಗತ್ತನ್ನು ಸೃಷ್ಟಿಸುವ ಧ್ಯೇಯವನ್ನು ನಾವು ಹೊಂದಿದ್ದೇವೆ. ಈ ದೃಷ್ಟಿಕೋನವೇ ಇಟಲಿಯ ಜಿ-7 ಅಧ್ಯಕ್ಷತೆಯ ತಿರುಳಾಗಿದೆ ಮತ್ತು ನವ ದೆಹಲಿಯಲ್ಲಿ ಯಶಸ್ವಿಯಾಗಿ ಜರುಗಿದ 'ಎಐ ಇಂಪ್ಯಾಕ್ಟ್ ಶೃಂಗ ಸಭೆ 2026' ರ ಪ್ರಮುಖ ಫಲಿತಾಂಶವೂ ಆಗಿದೆ. ಎಐ ಅನ್ನು ಮಾನವ ಕುಲಕ್ಕಾಗಿ ಮಾನವನೇ ರೂಪಿಸಿದ ಸಾಧನ ಎಂದು ಕಲ್ಪಿಸಿಕೊಳ್ಳುವುದು ಎಂದರೆ-ತಂತ್ರಜ್ಞಾನವು ಎಂದಿಗೂ ವ್ಯಕ್ತಿಗಳ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ, ಜನರ ಮೂಲಭೂತ ಹಕ್ಕುಗಳನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಮತ್ತು ಸಾರ್ವಜನಿಕ ಚರ್ಚೆಗಳನ್ನು ಹಾದಿ ತಪ್ಪಿಸಲು ಅಥವಾ ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ಬದಲಾಯಿಸಲು ಇದನ್ನು ಬಳಸಲಾಗದು ಎಂದು ದೃಢವಾಗಿ ಪ್ರತಿಪಾದಿಸುವುದಾಗಿದೆ. ಹೆಚ್ಚು ಅಂತರ್ ಸಂಪರ್ಕಿತವಾಗುತ್ತಿರುವ ಇಂದಿನ ಜಗತ್ತಿನಲ್ಲಿ ಸ್ವಾತಂತ್ರ್ಯ ಮತ್ತು ಮಾನವ ಘನತೆಯನ್ನು ರಕ್ಷಿಸುವ ನಮ್ಮ ಬದ್ಧತೆಯು ಈ ಮೂಲಭೂತ ಸವಾಲಿನ ಮೇಲೆಯೇ ಆಧಾರಿತವಾಗಿದೆ.

ನಮ್ಮ ಸಹಕಾರವು ಬಾಹ್ಯಾಕಾಶ ಕ್ಷೇತ್ರಕ್ಕೂ ವಿಸ್ತರಿಸಿದೆ. ಬಾಹ್ಯಾಕಾಶ ಪರಿಶೋಧನೆ ಮತ್ತು ಉಪಗ್ರಹ ತಂತ್ರಜ್ಞಾನದಲ್ಲಿ ಭಾರತದ ಪ್ರಗತಿ, ಇಟಲಿಯ ಏರೋಸ್ಪೇಸ್ ಎಂಜಿನಿಯರಿಂಗ್ ಉತ್ಕೃಷ್ಟತೆಯ ಜೊತೆಗೆ ಸೇರಿ ಜಂಟಿ ಯೋಜನೆಗಳು ಮತ್ತು ಮುಂದಿನ ಪೀಳಿಗೆಯ ತಂತ್ರಜ್ಞಾನ ಅಭಿವೃದ್ಧಿಗೆ ದೊಡ್ಡ ಅವಕಾಶಗಳನ್ನು ಒದಗಿಸುತ್ತವೆ.

ರಾಷ್ಟ್ರಗಳ ಸಮೃದ್ಧಿಯನ್ನು ಖಚಿತ ಪಡಿಸಿಕೊಳ್ಳಲು ಭದ್ರತೆ ಮತ್ತು ಸ್ಥಿರತೆ ಅತ್ಯಗತ್ಯ. ರಕ್ಷಣೆ, ಭದ್ರತೆ ಮತ್ತು ಕಾರ್ಯತಂತ್ರದ ತಂತ್ರಜ್ಞಾನಗಳಂತಹ ವಲಯಗಳಲ್ಲಿ ತಮ್ಮ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಇಟಲಿ ಮತ್ತು ಭಾರತ ಉದ್ದೇಶಿಸಿವೆ. ನಮ್ಮ ಸಹಯೋಗವು ಪ್ರಮುಖ ಸಮುದ್ರ ವ್ಯಾಪಾರ ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಭಯೋತ್ಪಾದನೆ, ಅಂತಾರಾಷ್ಟ್ರೀಯ ಅಪರಾಧ ಜಾಲಗಳು, ಮಾದಕ ವಸ್ತು ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಮಾನವ ಕಳ್ಳಸಾಗಣೆಯಂತಹ ಬೆದರಿಕೆಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಬಲಪಡಿಸುತ್ತದೆ.

ಇಂಧನ ವಲಯವು ನಮ್ಮ ಪಾಲುದಾರಿಕೆಯ ಮತ್ತೊಂದು ಪ್ರಮುಖ ಆಧಾರಸ್ತಂಭವಾಗಿದೆ. ವೈವಿಧ್ಯಮಯ ಇಂಧನ ಮೂಲಗಳತ್ತ ಜಾಗತಿಕ ಸ್ಥಿತ್ಯಂತರವು ನಾವೀನ್ಯತೆ, ಹೂಡಿಕೆ ಮತ್ತು ವ್ಯಾಪಕ ಸಹಕಾರವನ್ನು ಅಪೇಕ್ಷಿಸುತ್ತದೆ. ಭಾರತ ಮತ್ತು ಇಟಲಿ ರಾಷ್ಟ್ರಗಳು ನವೀಕರಿಸಬಹುದಾದ ಇಂಧನದಿಂದ ಹಿಡಿದು ಹೈಡ್ರೋಜನ್ ತಂತ್ರಜ್ಞಾನಗಳವರೆಗೆ ಹಾಗೂ ಸ್ಮಾರ್ಟ್ ಗ್ರಿಡ್ ಗಳಿಂದ ಹಿಡಿದು ಸ್ಥಿತಿಸ್ಥಾಪಕ ಮೂಲ ಸೌಕರ್ಯಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕರಿಸುತ್ತಿವೆ.

ಗ್ರೀನ್ ಹೈಡ್ರೋಜನ್ ರಫ್ತಿನ ಜಾಗತಿಕ ಕೇಂದ್ರವಾಗಲು ಭಾರತವು ನೀಡುತ್ತಿರುವ ಉತ್ತೇಜನವು ಅಪಾರ ಸಾಮರ್ಥ್ಯವನ್ನು ಹೊಂದಿದ್ದು, ಇದು ನವೀಕರಿಸಬಹುದಾದ ಮೂಲಸೌಕರ್ಯ ವಲಯದಲ್ಲಿ ಇಟಲಿ ಹೊಂದಿರುವ ಸುಧಾರಿತ ತಂತ್ರಜ್ಞಾನಕ್ಕೆ ಮತ್ತು ಯುರೋಪಿಗೆ ಇಂಧನ ಪ್ರವೇಶ ದ್ವಾರವಾಗಿ ಆ ದೇಶ ಹೊಂದಿರುವ ಕಾರ್ಯತಂತ್ರದ ಪಾತ್ರಕ್ಕೆ ಸಂಪೂರ್ಣವಾಗಿ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ, ಭಾರತ ನೇತೃತ್ವದ ಪ್ರಮುಖ ಅಂತಾರಾಷ್ಟ್ರೀಯ ಉಪಕ್ರಮಗಳಾದ-ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ವಿಪತ್ತು ನಿರೋಧಕ ಮೂಲಸೌಕರ್ಯಒಕ್ಕೂಟ (ಸಿಡಿಆರ್‌ಐ) ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟ(ಜಿಬಿಎ)ಗಳಲ್ಲಿ ಇತರ ರಾಷ್ಟ್ರಗಳ ಜೊತೆಗೂಡಿ ನಾವು ನಡೆಸುತ್ತಿರುವ ಸಹಯೋಗವು ಅತ್ಯಂತ ಮಹತ್ವದ್ದಾಗಿದೆ.

ಭೌತಿಕ, ಡಿಜಿಟಲ್ ಹಾಗೂ ಮಾನವ ಸಂಪರ್ಕದ ಬೆಸುಗೆಯೇ ನಮ್ಮನ್ನು ಒಟ್ಟುಗೂಡಿಸುವ ಸೂತ್ರವಾಗಿದೆ. ಭಾರತ ಮತ್ತು ಇಟಲಿ ಉಭಯ ರಾಷ್ಟ್ರಗಳೂ ಜಾಗತಿಕ ಆರ್ಥಿಕತೆಯ ಎರಡು ನಿರ್ಣಾಯಕ ಕೇಂದ್ರಗಳಾದ ಇಂಡೋ-ಪೆಸಿಫಿಕ್ ಮತ್ತು ಮೆಡಿಟರೇನಿಯನ್ ದೇಶಗಳ ಹೃದಯ ಭಾಗದಲ್ಲಿ ನೆಲೆಗೊಂಡಿವೆ. ಇವುಗಳನ್ನು ಪರಸ್ಪರ ಪ್ರತ್ಯೇಕ ವಲಯಗಳಾಗಿ ನೋಡಲು ಸಾಧ್ಯವಿಲ್ಲ, ಬದಲಿಗೆ ಇವು ದಿನೇ ದಿನೇ ಹೆಚ್ಚುತ್ತಿರುವ ಅಂತರ್ ಸಂಪರ್ಕಿತ ಪ್ರದೇಶಗಳಾಗಿವೆ. ವಾಸ್ತವವಾಗಿ, ಹಿಂದೂ ಮಹಾಸಾಗರವನ್ನು ಯುರೋಪ್ ಖಂಡಕ್ಕೆ ಜೋಡಿಸುವುದರ ಮೂಲಕ ವ್ಯಾಪಾರ, ತಂತ್ರಜ್ಞಾನ, ಇಂಧನ, ದತ್ತಾಂಶ ಮತ್ತು ವೈಚಾರಿಕ ವಿನಿಮಯದ ಪ್ರಮುಖ ಕಾರಿಡಾರ್ ಆಗಿ ಹೊರಹೊಮ್ಮುತ್ತಿರುವ 'ಇಂಡೋ-ಮೆಡಿಟರೇನಿಯನ್' ಎಂಬ ಹೊಸ ಪರಿಕಲ್ಪನೆಯ ಉಗಮಕ್ಕೆ ನಾವು ಸಾಕ್ಷಿಯಾಗುತ್ತಿದ್ದೇವೆ. ನಿಖರವಾಗಿ ಈ ಅಂತರ್ ಸಂಪರ್ಕಿತ ಆಯಾಮದೊಳಗೆ ನಮ್ಮ ದ್ವಿಪಕ್ಷೀಯ ಬಾಂಧವ್ಯವು ಸ್ವಾಭಾವಿಕವಾಗಿ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ವಿಕಸನಗೊಳ್ಳುತ್ತಿದೆ. ಇದು ಎರಡು ಖಂಡಗಳನ್ನು ಬೆಸೆಯುವುದರ ಜೊತೆಗೆ ಹೊಸ ಜಾಗತಿಕ ಚಲನಶೀಲತೆಯನ್ನು ರೂಪಿಸಲಿದೆ. ಈ ಹಿನ್ನೆಲೆಯಲ್ಲಿ, 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್' (ಐಎಂಇಸಿ) ಯೋಜನೆಯು ಆಧುನಿಕ ಸಾರಿಗೆ, ಮೂಲ ಸೌಕರ್ಯ, ಡಿಜಿಟಲ್ ಜಾಲ, ಇಂಧನ ವ್ಯವಸ್ಥೆಗಳು ಮತ್ತು ಬಲಿಷ್ಠ ಪೂರೈಕೆ ಸರಪಳಿಗಳ ಮೂಲಕ ನಮ್ಮ ಪ್ರದೇಶಗಳನ್ನು ಸಂಪರ್ಕಿಸುವ ಒಂದು ದೊಡ್ಡ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಈ ದೃಷ್ಟಿಕೋನವನ್ನು ನನಸಾಗಿಸಲು ಇತರ ಪಾಲುದಾರರೊಂದಿಗೆ ಒಟ್ಟಾಗಿ ಕೆಲಸ ಮಾಡಲು ಭಾರತ ಮತ್ತು ಇಟಲಿ ಬದ್ಧವಾಗಿವೆ.

ನಮ್ಮ ರಾಷ್ಟ್ರಗಳ ನಡುವಿನ ಆಳವಾದ ಪಾಲುದಾರಿಕೆ ಹಾಗೂ ಶಾಶ್ವತ ಸಾಂಸ್ಕೃತಿಕ ಬಾಂಧವ್ಯದ ಶಕ್ತಿಯನ್ನು ಆಧರಿಸಿ, ನಾವು ನಮ್ಮ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ, 'ಧರ್ಮ' ಎಂಬ ಪರಿಕಲ್ಪನೆಯು ನಮ್ಮ ಕರ್ತವ್ಯಗಳಿಗೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಹಾಗೆಯೇ 'ವಸುಧೈವ ಕುಟುಂಬಕಂ' ಎಂಬ ಉದಾತ್ತ ತತ್ವವು ಈ ಅಂತರ್ ಸಂಪರ್ಕಿತ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಪ್ರತಿಧ್ವನಿಸುತ್ತದೆ. ಇಂತಹ ಉನ್ನತ ಮೌಲ್ಯಗಳು ನವೋದಯ ಕಾಲಘಟ್ಟದಲ್ಲಿ ಬೇರೂರಿರುವ ಇಟಲಿಯ ಮಾನವತಾವಾದಿ ಸಂಪ್ರದಾಯದಲ್ಲಿ ಸ್ವಾಭಾವಿಕವಾಗಿ ಪ್ರತಿಧ್ವನಿಸುತ್ತವೆ. ಇದು ಪ್ರತಿಯೊಬ್ಬ ವ್ಯಕ್ತಿಯ ಘನತೆ ಹಾಗೂ ಜನರನ್ನು ಮತ್ತು ಸಮಾಜಗಳನ್ನು ಒಂದುಗೂಡಿಸುವ ಸಂಸ್ಕೃತಿಯ ಅನನ್ಯ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ಆದುದರಿಂದ, ನಮ್ಮ ಈ ಹಂಚಿಕೆಯ ದೃಷ್ಟಿಕೋನವು ನಮ್ಮ ಜನಸಾಮಾನ್ಯರನ್ನು ಕೇಂದ್ರಬಿಂದುವಾಗಿರಿಸಿಕೊಂಡು, ಸದೃಢ ಹಾಗೂ ಭವಿಷ್ಯದತ್ತ ಮುಖಮಾಡಿದ ಒಂದು ನೂತನ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.

ಸೋಮನಾಥ ಮಂದಿರ: ಭಾರತದ ಅಪರಾಜಿತ ಅಸ್ಮಿತೆಯ ಪ್ರತೀಕ

ಸೋಮನಾಥವು ದೇಶದ ಪುನರುತ್ಥಾನದ ಸಂಕೇತ!
ದೇಶದ ಪರಂಪರೆಯ ನಾಡಿಮಿಡಿತ!

▸ **ಶೆಹಜಾದ್ ಪೂನಾವಾಲಾ**

ಗುಜರಾತ್‌ನಲ್ಲಿರುವ ಸೋಮನಾಥ ದೇವಾಲಯವು ಶಿವನ 12 ಪವಿತ್ರ ಆದಿ ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದು. ಇದು ಕೇವಲ ಪೂಜಾ ಸ್ಥಳವಲ್ಲ. ಇದು ಭಾರತದ ಪುರಾತನ ನಾಗರಿಕತೆಯ ಶಕ್ತಿಯ ಜೀವಂತ ಉದಾಹರಣೆ. ನಮ್ಮ ಸಾಂಸ್ಕೃತಿಕ ಹೃದಯಮಿಡಿತ. ದೇಶದ ಹೊಸ ಆರಂಭದ ಸಂಕೇತ. ಅತ್ಯಂತ ಪ್ರಭಾವಿ ರಾಜಕೀಯ ಭಾಷ್ಯವೊಂದರ ಪ್ರತೀಕ.

ನಾವೀಗ ಸೋಮನಾಥ ದೇವಾಲಯದ ಪುನರ್ನಿರ್ಮಾಣದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತ ಸ್ವತಂತ್ರಗೊಂಡ ಬಳಿಕ 1951ರಲ್ಲಿ ಈ ದೇವಾಲಯವನ್ನು ಮರುನಿರ್ಮಾಣ ಮಾಡಲಾಗಿತ್ತು. ಪದೇಪದೇ ಆಕ್ರಮಣಕಾರರಿಂದ ದಾಳಿಗೊಳಗಾಗಿದ್ದ ಸೋಮನಾಥ ದೇವಾಲಯವು ತನ್ನ ಪುನರ್‌ನಿರ್ಮಾಣದಿಂದ ಸಾರುವ ಸಂದೇಶವೆಂದರೆ, ಅಚಲ ನಂಬಿಕೆ ಮತ್ತು ಧೈರ್ಯಗಳು ಮಂದಿರವನ್ನು ನಾಶ ಮಾಡುವ ಪ್ರತಿಯೊಂದು ಪ್ರಯತ್ನವನ್ನೂ ಸೋಲಿಸುತ್ತದೆ ಎಂಬುದಾಗಿದೆ. ಸೋಮನಾಥದ ಇತಿಹಾಸ ಕೇವಲ ಪುರಾತನವಷ್ಟೇ ಅಲ್ಲ, ನಮ್ಮ ಅಸ್ಮಿತೆಯನ್ನು ಮರಳಿ ಪಡೆಯಲು ಅದು ನಮಗೆ ಈಗಲೂ ಬಲ ನೀಡುತ್ತಿರುತ್ತದೆ.

ಸೋಮನಾಥ ದೇವಾಲಯವನ್ನು ಹಲವಾರು ಬಾರಿ ನಾಶ ಮಾಡಿದರೂ ಅದು ಮತ್ತೆ ಮತ್ತೆ ಎದ್ದು ನಿಂತುದರಲ್ಲಿಯೇ ಅದರ ನಾಗರಿಕತೆಯ ಮಹತ್ವ ಅಡಗಿದೆ.11 ಮತ್ತು 18ನೇ ಶತಮಾನದ ಮಧ್ಯದಲ್ಲೇ ಈ ದೇವಾಲಯದ ಮೇಲೆ 6 ಬಾರಿ ದೊಡ್ಡ ಪ್ರಮಾಣದ ದಾಳಿಗಳು ನಡೆದಿದ್ದವು. ಇವು ಕೇವಲ ದೇವಸ್ಥಾನದ ಸಂಪತ್ತು ಕೊಳ್ಳೆ ಹೊಡೆಯಲಷ್ಟೇ ನಡೆದ ದಾಳಿಗಳಲ್ಲ. ನಮ್ಮ ನಂಬಿಕೆ ಮತ್ತು ಸಂಸ್ಕೃತಿಯನ್ನು ನಾಶ ಗೊಳಿಸುವುದೂ ಅದರ ಹಿಂದಿನ ಉದ್ದೇಶವಾಗಿತ್ತು. ಆದರೆ ಪ್ರತಿಬಾರಿಯೂ ರಾಜರು, ರಾಣಿಯರು ಮತ್ತು ಸಾಮಾನ್ಯ ಜನರು ಅದನ್ನು ಮತ್ತೆ ಎತ್ತಿ ಕಟ್ಟಲು ಶ್ರಮಿಸಿದರು. 18ನೇ ಶತಮಾನದಲ್ಲಿ ಮರಾಠ ರಾಣಿ ಅಹಲ್ಯಾಭಾಯಿ ಹೋಳ್ಕರ್ ಮತ್ತು ಸಿಕ್ಖ್ ರಾಜರು ಕೂಡಾ ಸೋಮನಾಥದ ಪುನರ್‌ನಿರ್ಮಾಣಕ್ಕೆ ಸಂಕಲ್ಪಿಸಿದರು. ಈ ಬಗೆಯ ನಾಶ ಮತ್ತು ಪುನರ್ ನಿರ್ಮಾಣ ನಮಗೊಂದು ದೊಡ್ಡ ಸತ್ಯವನ್ನು ಹೇಳಿಕೊಡುತ್ತದೆ. ಅದೆಂದರೆ, ಭಾರತದ ಅಸ್ಮಿತೆಯು ಆತಿಕ್ರಮಣಕಾರರ ಖಡ್ಗದಿಂದ ರೂಪಿಸಲ್ಪಟ್ಟುದ್ದಲ್ಲ. ಬದಲಿಗೆ ನಮ್ಮ ಜನರ ಧೈರ್ಯದಿಂದ ರೂಪಿಸಲ್ಪಟ್ಟದ್ದು ಎಂಬುದಾಗಿ. ಈಗಿನ ಬದಲಾಗುತ್ತಿರುವ ಜಗತ್ತಿನಲ್ಲಿ ಸೋಮನಾಥವು ನಮ್ಮ ಶಕ್ತಿ ಇರುವುದು ಪುರಾತನ ಬೇರುಗಳಲ್ಲಿ ಮತ್ತು ಪವಿತ್ರವಾದುದನ್ನು ರಕ್ಷಿಸಲು ತೋರುವ ಧೈರ್ಯದಲ್ಲಿ ಎಂಬ ಪಾಠವನ್ನು ಕಲಿಸುತ್ತದೆ.

ಸಾಂಸ್ಕೃತಿಕವಾಗಿ ಸೋಮನಾಥವು ದೇಶದ ಪರಂಪರೆಯ ನಾಡಿಮಿಡಿತ. ಅದೊಂದು ತೀರ್ಥಕ್ಷೇತ್ರ. ಪ್ರತಿವರ್ಷ ಲಕ್ಷಾಂತರ ಭಕ್ತರು ಅಲ್ಲಿಗೆ ಭೇಟಿ ನೀಡುತ್ತಾರೆ. ಸೋಮನಾಥ ದೇವರ ದರ್ಶನದಿಂದ ಮೋಕ್ಷ ಸಿಗುವುದೆಂದು ನಂಬುತ್ತಾರೆ. ದೇವಾಲಯದ ಶಿಲ್ಪಕಲೆಯು ಪುರಾತನ ಭಾರತದ ಶಿಲ್ಪ ಕಲಾ ವೈಭವಕ್ಕೆ ಸಾಕ್ಷಿಯಾಗಿದೆ. ಭಕ್ತಿ ಮತ್ತು ಸೌಂದರ್ಯ ಇಲ್ಲಿ ಜತೆಯಾಗಿ ಸಾಗುತ್ತದೆ. ಕಥೆಗಳಲ್ಲಿ, ಪುರಾಣ ಗ್ರಂಥಗಳಲ್ಲಿ ಮತ್ತು ಉತ್ಸವಗಳಲ್ಲಿ ಸೋಮನಾಥ ಯಾವಾಗಲೂ ಜೀವಂತವಾಗಿ ಉಳಿದಿದೆ ಇಲ್ಲಿನ ಐತಿಹ್ಯವು ಶಿವನನ್ನು ಪಾಲಕನಾಗಿಯೂ, ಲಯಕಾರಕನಾಗಿಯೂ ಪ್ರತಿಬಿಂಬಿಸುತ್ತದೆ.



ರಾಷ್ಟ್ರೀಯತೆಯ ದೃಷ್ಟಿಯಿಂದ ನೋಡುವುದಾದರೆ, ಸೋಮನಾಥವು 1947ರ ಬಳಿಕ ದೇಶದ ಪುನರುತ್ಥಾನದ ಸಂಕೇತ! ಜುನಾಗಢ್ ಭಾರತಕ್ಕೆ ಸೇರ್ಪಡೆಗೊಂಡ ಬಳಿಕ ಉಪಪ್ರಧಾನಿ ಸರ್ದಾರ್ ಪಟೇಲ್ ಅವರು 1947ರ ನವೆಂಬರ್ 12ರಂದು ಸೋಮನಾಥಕ್ಕೆ ಭೇಟಿ ನೀಡಿದರು. ಆಗ ಸೋಮನಾಥ ಪಾಳುಬಿದ್ದಂತಿತ್ತು. ದೇವಾಲಯವನ್ನು ಮರು ನಿರ್ಮಿಸುವುದು ರಾಷ್ಟ್ರೀಯ ಕರ್ತವ್ಯವೆಂದು ಪಟೇಲ್ ಅಲ್ಲೇ ಘೋಷಿಸಿದರು. ಸರಕಾರದ ಹಣದ ಬದಲಾಗಿ ಜನರ ದೇಣಿಗೆಯಿಂದಲೇ ಅದನ್ನು ಮತ್ತೆ ಕಟ್ಟುವ ಪಣ ತೊಟ್ಟರು. ಮಹಾತ್ಮ ಗಾಂಧಿ ಕೂಡಾ ದೇವಾಲಯ ನಿರ್ಮಾಣದ ಎಲ್ಲಾ ಖರ್ಚುಗಳನ್ನು ಜನರೇ ಭರಿಸಬೇಕೆಂದು ಶರತ್ತು ಹಾಕಿದರು. ಅದರಂತೆ ದೇವಾಲಯದ ಮರುನಿರ್ಮಾಣ ಕಾರ್ಯ ನಡೆದು, 1951ರ ಮೇ 11ರಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಹೊಸ ದೇವಾಲಯವನ್ನು ಉದ್ಘಾಟಿಸಿದರು.

ಅಂದಿನ ಮೇ 11ನೇ ದಿನಾಂಕವು ರಾಷ್ಟ್ರ ಚೇತನದ ಪುನರ್ ಜಾಗೃತಿ ಮತ್ತು ರಾಷ್ಟ್ರ ಸಂಕಲ್ಪದ ದಿನವಾಗಿ ದಾಖಲಾಯಿತು. ಸ್ವತಂತ್ರ ಭಾರತವು ತನ್ನ ಪುರಾತನ ಪರಂಪರೆಯನ್ನು ಎತ್ತಿ ಹಿಡಿಯಲಿದೆ ಎಂಬ ಸಂದೇಶವನ್ನು ಸೋಮನಾಥದ ಪುನರ್ ನಿರ್ಮಾಣ ಸಾರಿ ಹೇಳಿತು. ಮೇ 11 ಮತ್ತೊಂದು ಬಗೆಯಲ್ಲೂ ಭಾರತಕ್ಕೆ ಮಹತ್ವದ ದಿನ. 1998ರ ಮೇ 11ರಂದೇ ಭಾರತವು ಪೋಖ್ರಾಣ್-2 ಪರಮಾಣು ಪರೀಕ್ಷೆ ನಡೆಸಿತ್ತು. ಇದಕ್ಕಾಗಿ ಕೆಲವು ದೇಶಗಳು ಭಾರತದ ಮೇಲೆ ನಿರ್ಬಂಧ ಹೇರಿದರೂ ಭಾರತ ಬಗ್ಗಲಿಲ್ಲ. ಸೋಮನಾಥದ ಅಜೇಯಕ್ಷಾತ್ರ ತೇಜಸ್ಸು ಇಲ್ಲಿಯೂ ಪ್ರತಿಫಲನಗೊಂಡಿತು.

75 ವರ್ಷಗಳ ಹಿಂದೆ ಕಾಂಗ್ರೆಸ್‌ನಲ್ಲಿ ಕೂಡಾ ಸೋಮನಾಥ ಮರು ನಿರ್ಮಾಣದ ಬಗ್ಗೆ ವಿರೋಧವಿತ್ತು. ನೆಹರೂ ಈ ಪುನರ್‌ನಿರ್ಮಾಣ ಮತ್ತು ಉದ್ಘಾಟನೆಯನ್ನು ಕಟುವಾಗಿ ವಿರೋಧಿಸಿದ್ದರು. ಇದು ಹಿಂದು ಪುನರುತ್ಥಾನ ಎಂದು ಅವರು ಬಣ್ಣಿಸಿ, ರಾಷ್ಟ್ರಪತಿಯವರು ದೇವಾಲಯದ ಉದ್ಘಾಟನೆಗೆ ಹೋಗಬಾರದೆಂದು ಒತ್ತಡ ಹೇರಿದ್ದರು. ಸರಕಾರವು ಧಾರ್ಮಿಕ ಕಾರ್ಯಗಳಿಂದ ದೂರವುಳಿಯಬೇಕೆಂದು ಆಗ್ರಹಿಸಿ ನೆಹರೂ 17 ಕ್ಕೂ ಅಧಿಕ ಪತ್ರಗಳನ್ನು ಬರೆದಿದ್ದರು.ಆದರೆ ಸರ್ದಾರ್ ಪಟೇಲ್ ಮತ್ತು ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಚಲ ನಿರ್ಧಾರದೆದುರು ನೆಹರೂ ಬೇಳೆ ಬೇಯಲಿಲ್ಲ.

ಸ್ವಾತಂತ್ರ್ಯದ ಬಳಿಕ ಹಲವು ದಶಕಗಳ ಕಾಲ ಕಾಂಗ್ರೆಸ್ ಪಕ್ಷವು ಹಲವಾರು ಸನಾತನ ಮತ್ತು ಧಾರ್ಮಿಕ ಕೇಂದ್ರಗಳನ್ನು ನಿರ್ಲಕ್ಷಿಸುತ್ತಾ ಬಂದಿತು. ಅದಕ್ಕೆ ಕಾರಣ ಓಟ್ ಬ್ಯಾಂಕ್ ರಾಜಕಾರಣ. ಕೆಲವು ಸಮುದಾಯಗಳಿಗೆ ಅಪ್ರಿಯವಾಗಬಹುದೆಂಬ ಕಾರಣಕ್ಕಾಗಿ ಹಿಂದು ದೇವಾಲಯ ಮತ್ತು ಯಾತ್ರಾ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಗೋಜಿಗೇ ಹೋಗಲಿಲ್ಲ. ಆದರೆ ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಈ ಎಲ್ಲಾ ಪವಿತ್ರ ತಾಣಗಳು ಹೊಸಜೀವ ಪಡೆದುಕೊಂಡವು ಮತ್ತು ಘನತೆಯನ್ನು ಮರಳಿ ಪಡೆದವು. ಅಯೋಧ್ಯೆಯಲ್ಲಿನ ಭವ್ಯ ರಾಮಮಂದಿರದಿಂದ ಹಿಡಿದು ವೈಭವೋಪೇತ ಕಾಶಿ ವಿಶ್ವನಾಥ ಕಾರಿಡಾರ್ ತನಕ, ಸಿಕ್ಖರ ಕರ್ತಾರ್‌ಪುರ ಸಾಹಿಬ್ ಕಾರಿಡಾರ್‌ನಿಂದ ಹಿಡಿದು ಉಜ್ಜೈನಿಯ ಕೇದಾರನಾಥ ಮಹಾಕಾಲ ಮಂದಿರದ ತನಕ ಮೋದಿಯವರು ಹಲವಾರು ದೇವಾಲಯಗಳ ಮರುನಿರ್ಮಾಣವನ್ನು ಭಕ್ತಿಯಿಂದ ನೆರವೇರಿಸಿದರು. ಸೋಮನಾಥ ಕೂಡಾ ಅವರ ನಾಯಕತ್ವದಡಿಯಲ್ಲಿ ಮತ್ತಷ್ಟು ನವೀಕರಣಗೊಂಡಿದೆ.ಇದು ವಿಭಜನಕಾರಿ ರಾಜಕೀಯವಲ್ಲ. ಬದಲಾಗಿ ಸಾಂಸ್ಕೃತಿಕ ಗೌರವದ ಮತ್ತು ರಾಷ್ಟ್ರೀಯ ಘನತೆಯ ರಾಜಕೀಯ!

ರಾಜಕೀಯವಾಗಿ ಕೂಡಾ ಸೋಮನಾಥವು ಯಾವತ್ತಿಗೂ ಒಂದು ಮಹತ್ವದ ಸಂಕೇತವಾಗಿದೆ. 1951ರಲ್ಲಿ ದೇವಾಲಯ ಉದ್ಘಾಟಿಸುವ ಕುರಿತಂತೆ ಚರ್ಚೆ ನಡೆದಿತ್ತು. ಇದು ಸಾಂಸ್ಕೃತಿಕ ಜಾಗೃತಿ ಮತ್ತು ಜಾತ್ಯತೀತತೆಯ ನಡುವಿನ ಸಂಘರ್ಷ ಎಂದು ಕೆಲವರು ಬಣ್ಣಿಸಿದ್ದರು. ಆದರೆ ನಮ್ಮ ನಾಗರಿಕ ಕುರುಹನ್ನು ಗೌರವಿಸುವುದು ದೇಶವನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ ಎಂಬುದು ಸೋಮನಾಥದ ಪುನರ್ ನಿರ್ಮಾಣದ ಬಳಿಕ ಸಾಬೀತಾಯಿತು. ಈಗ ಸೋಮನಾಥವು ಸಾಂಸ್ಕೃತಿಕ ರಾಷ್ಟ್ರೀಯತೆಯ ಪ್ರತೀಕವಾಗಿ ನಿಂತಿದೆ. ಭಾರತದ ನೀತಿಗಳು ಮತ್ತು ಘನತೆಯು 5000 ವರ್ಷಗಳ ಹಿಂದಿನ ಪರಂಪರೆಯಿಂದ ಬರಬೇಕೇ ಹೊರತು ವಿದೇಶಿ ಸಿದ್ಧಾಂತಗಳಿಂದ ಅಲ್ಲ ಎಂಬುದನ್ನು ತೋರಿಸಿಕೊಟ್ಟಿದೆ.ಇತಿಹಾಸವನ್ನು ನೆನಪಿಟ್ಟುಕೊಳ್ಳುವುದು ನಮ್ಮ ಕರ್ತವ್ಯವೆಂಬುದನ್ನು ಬೋಧಿಸಿದೆ. ದೇವಾಲಯದ ಮೇಲೆ ಹಾರುತ್ತಿರುವ ಬಾವುಟವು ಭಾರತದ ಹೆಚ್ಚುತ್ತಿರುವ ಶಕ್ತಿಯನ್ನು ಜಗತ್ತಿಗೇ ತಿಳಿಸುತ್ತಿದೆ.

ಸೋಮನಾಥ ಮಂದಿರದ ಪುನರ್ ನಿರ್ಮಾಣವೇ ಒಂದು ದೊಡ್ಡ ಗೆಲುವು. ದೇವಾಲಯದ ಅಂದಿನ ಸ್ಥಿತಿ ನೋಡಿ ಸರ್ದಾರ್ ಪಟೇಲರ ಮನಸ್ಸು ಕಲಕಿತ್ತು. ದೇವಾಲಯ ಮರುನಿರ್ಮಿಸುವುದು ದೇಶದ 'ಸಾಂಸ್ಕೃತಿಕ ಸ್ವಾತಂತ್ರ್ಯ'ದ ಅವಿಭಾಜ್ಯ ಅಂಗ ಎಂಬುದಾಗಿ ಅವರು ಭಾವಿಸಿದರು. ಪಟೇಲರ ಕನಸು 1951ರಲ್ಲಿ ನನಸಾಯಿತು.

ಇದೀಗ ಮಂದಿರ ನಿರ್ಮಾಣದ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸುತ್ತಿರುವುದು ಪ್ರಧಾನಿ ಮೋದಿಯವರು. ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗಿನಿಂದ ಹಿಡಿದು ಈಗ ಪ್ರಧಾನಿಯಾಗಿರುವ ತನಕ ಅವರು 'ಸೋಮನಾಥ ಮಂದಿರ ಟ್ರಸ್ಟ್'ನ ಅಧ್ಯಕ್ಷರಾಗಿದ್ದಾರೆ. ಈ ಪುರಾತನ ದೇವಾಲಯವು ಆಧುನಿಕ ಭಾರತದ ದೇದೀಪ್ಯಮಾನ ಜ್ಯೋತಿಯಾಗಿ ಬೆಳಗುವಂತೆ ಮಾಡಿದ್ದಾರೆ.

ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರಾಗಿ ಮೋದಿಯವರು ಅಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು, ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲು ಆಗಾಗ ಸಭೆ ಕರೆಯುತ್ತಿರುತ್ತಾರೆ. ತಮ್ಮ ಭಾಷಣದಲ್ಲಿ ಅವರು ಸೋಮನಾಥವು ಭಾರತದ ಅಪರಾಜಿತ ಸ್ಫೂರ್ತಿಯ ಸಂಕೇತವಾಗಿದೆ ಎಂದು ಬಣ್ಣಿಸುತ್ತಿರುತ್ತಾರೆ. ಸೋಮನಾಥದ ಮೇಲೆ ದಾಳಿ ಮಾಡಿದ ಅತಿಕ್ರಮಣಕಾರರು ನಶಿಸಿ ಹೋಗಿದ್ದಾರೆ. ಆದರೆ ಸೋಮನಾಥವು ಶಾಶ್ವತವಾಗಿ ಉಳಿದಿದೆ ಎಂದು ಅವರು ಹೇಳುತ್ತಿರುತ್ತಾರೆ. ಮಂದಿರ ನಿರ್ಮಾಣದ ಸಾವಿರ ವರ್ಷಗಳ ಕುರುಹಾಗಿ ಈ ವರ್ಷದ ಜನವರಿಯಲ್ಲಿ 'ಸೋಮನಾಥ ಸ್ವಾಭಿಮಾನ ಪರ್ವ' ಆಚರಿಸಲಾಯಿತು. ಅಲ್ಲಿಂದ ಆರಂಭಗೊಂಡು ಮುಂದಿನ 1000 ದಿನಗಳ ಕಾಲ ವಿಶೇಷ ಪೂಜೆ ನಡೆಯಲಿದೆ. ದೇವಾಲಯ ಮರುನಿರ್ಮಾಣದ 75ನೇ ವರ್ಷಾಚರಣೆಯಾದ ಮೇ 11ರಂದು ಮೋದಿ ಸೋಮನಾಥ ದೇವಾಲಯಕ್ಕೆ ಮತ್ತೆ ಭೇಟಿ ನೀಡಿದರು.

ಸರ್ದಾರ್ ಪಟೇಲ್ ಮತ್ತು ಪ್ರಧಾನಿ ಮೋದಿ ಮುಂತಾದ ನಾಯಕರಿಂದಾಗಿ ಸೋಮನಾಥ ದೇವಾಲಯವು ಪುರಾತನ ವೈಭವ ಮತ್ತು ಆಧುನಿಕ ಭಾರತದ ಮಧ್ಯೆ ಸೇತುವೆಯಾಗಿ ನಿಂತಿದೆ. ಸೋಮನಾಥವನ್ನು ಗೌರವಿಸುವುದೆಂದರೆ ಭಾರತದ ಅಪರಾಜಿತ ಅಸ್ಮಿತೆಯನ್ನು ಗೌರವಿಸಿದಂತೆ.

ಗಡುವಿಗೆ ಮುನ್ನವೇ ಮೂಲೋತ್ಪಾಟನೆ

ನಕ್ಸಲ್ ಪಿಡುಗು ನಿರ್ಮೂಲನೆ

ಜಗ್ದಲ್‌ಪುರ: ಭದ್ರತಾ ಪಡೆಗಳ ಪರಮೋಚ್ಚ ಶೌರ್ಯ, ದಿಟ್ಟತನ ಮತ್ತು ತ್ಯಾಗ ಬಲಿದಾನಗಳಿಂದಾಗಿ ಅಂತಿಮಗಡುವಾದ ಮಾ.31ಕ್ಕೆ ಮುನ್ನವೇ, ನಕ್ಸಲ್ ಪಿಡುಗನ್ನು ದೇಶದಿಂದ ಯಶಸ್ವೀ ಮೂಲೋತ್ಪಾಟನೆ ಮಾಡಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ನಕ್ಸಲ್‌ಮುಕ್ತ ಭಾರತ ಅಭಿಯಾನದಲ್ಲಿ ಕೆಲವು ದಿನಾಂಕಗಳು ಚಾರಿತ್ರಿಕ ಮಹತ್ತ್ವ ಪಡೆದಿವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಸಚಿವ ಶಾ, ಛತ್ತೀಸ್‌ಗಢದ ಬಿಜೆಪಿ ಸರಕಾರ ನಕ್ಸಲ್ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಬಗ್ಗೆ 2023ರ ಡಿ.13ರಂದು ಶಪಥ ಮಾಡಿತ್ತು ಮತ್ತು ಅಂದಿನಿಂದಲೇ ಪ್ರಸ್ತುತ ಅಭಿಯಾನಕ್ಕೆ ನಾಂದಿ ಹಾಡಿತ್ತು ಎಂದು ನೆನಪಿಸಿದರು.



ದ್ವಿತೀಯ ಚಾರಿತ್ರಿಕ ದಿನಾಂಕ 2024 ಆ.24. ಆ ದಿನಾಂಕದಂದು ಸಭೆ ಸೇರಿದ ದೇಶದ ಎಲ್ಲಾ ರಾಜ್ಯಗಳ ಡಿಜಿಪಿಗಳು ದೇಶವನ್ನು 2026 ಮಾ.31ಕ್ಕೆ ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ಸಂಕಲ್ಪ ಮಾಡಿದ್ದರು.

ತೃತೀಯ ದಿನಾಂಕ 2026 ಮಾ. 31(ದೇಶದಲ್ಲಿನ ನಕ್ಸಲ್ ಪಿಡುಗನ್ನು ಆಮೂಲಾಗ್ರ ನಿರ್ಮೂಲನೆ ಮಾಡಲು ಕೇಂದ್ರ ಸರಕಾರ ವಿಧಿಸಿದ್ದ ಅಂತಿಮ ಗಡುವು)ಎಲ್ಲರಿಗೂ ಗೊತ್ತಿರುವ ದಿನಾಂಕ. ನಮ್ಮ ಭದ್ರತಾ ಪಡೆಗಳ ಧೈರ್ಯ, ದಿಟ್ಟತನ ಹಾಗೂ ಪರಮೋಚ್ಚ ಬಲಿದಾನಗಳ ಪರಿಣಾಮ ಅಂತಿಮ ಗಡುವಿಗೆ ಮುನ್ನವೇ ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡಲಾಗಿದೆ.

ಕಾಂಗ್ರೆಸ್ ಸರಕಾರ ಸಹಕರಿಸಲಿಲ್ಲ: ನಕ್ಸಲ್ ಪಿಡುಗನ್ನು ದೇಶದಿಂದ ನಿರ್ಮೂಲನೆ ಮಾಡುವ ಕೇಂದ್ರ ಸರಕಾರದ ಯೋಜನೆ-ಪ್ರಯತ್ನಗಳಿಗೆ ವಿವಿಧ ರಾಜ್ಯಗಳ ಬಿಜೆಪಿಯೇತರ ಸರಕಾರಗಳು ಕೈಜೋಡಿಸಿದ್ದವು. ಆದರೆ ಛತ್ತೀಸ್‌ಗಢದ ಕಾಂಗ್ರೆಸ್ ಸರಕಾರ ಮಾತ್ರ ಸಹಕರಿಸಿರಲಿಲ್ಲ. 2023 ಡಿಸೆಂಬರ್ ನಂತರ ಅಂದರೆ ಛತ್ತೀಸ್‌ಗಢದಲ್ಲಿ ಬಿಜೆಪಿ ಸರಕಾರ ರಚನೆಯಾದ ನಂತರ , ಬಸ್ತರ್‌ನಲ್ಲಿ ತೀವ್ರವಾಗಿದ್ದ ನಕ್ಸಲ್‌ಪಿಡುಗಿನ ನಾಶ ನಮಗೆ ಸಾಧ್ಯವಾಯಿತು. ಛತ್ತೀಸ್‌ಗಢದಂತಹ ಪ್ರದೇಶಗಳಿಗೆ ಅಭಿವೃದ್ಧಿ ಯೋಜನೆಗಳು ತಲುಪದ ಕಾರಣ ಅಲ್ಲಿ ನಕ್ಸಲರು ಹುಲುಸಾಗಿ ಬೆಳೆದರೆಂಬುದು ಸುದೀರ್ಘ ಕಾಲದಿಂದ ಕೆಲವು ಬುದ್ಧಿಜೀವಿಗಳ ವಾದವಾಗಿದೆ. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧ. ಬಸ್ತಾರ್‌ನಂತಹ ವಲಯಗಳಲ್ಲಿ ನಕ್ಸಲರ ಹಾವಳಿಯಿದ್ದ ಕಾರಣ ಅಲ್ಲಿ ಅಭಿವೃದ್ಧಿ ಚಟುವಟಿಕೆಗಳು ನಡೆಯಲಿಲ್ಲ ಎಂದು ಸಚಿವರು ಸುದ್ದಿಗಾರರಿಗೆ ವಿವರಿಸಿದರು.

ಸಿಕ್ಕಿರಲಿಲ್ಲ ರೇಶನ್ ಕಾರ್ಡ್, ಉಚಿತ ಅಕ್ಕಿ, ಆರೋಗ್ಯ ವಿಮೆ: ನಕ್ಸಲರ ಹಾವಳಿಯಿಂದಾಗಿ ಇಡೀ ಬಸ್ತರ್ ವಲಯವು ಅಭಿವೃದ್ಧಿಯಿಂದ ವಂಚಿತವಾಗಿತ್ತು ಎಂದು ಗೃಹ ಸಚಿವ ಶಾ ತಿಳಿಸಿದರು.

ನಕ್ಸಲ್ ಪಿಡುಗಿನಿಂದಾಗಿ ವಲಯದ ಜನರಿಗೆ ಪಡಿತರ ಚೀಟಿ ಸಿಕ್ಕಿರಲಿಲ್ಲ, ಉಚಿತ ಆಹಾರಧಾನ್ಯ ಸ್ಕೀಮ್‌ನಿಂದ ವಂಚಿತರಾಗಿದ್ದರು. 5ಲಕ್ಷ ರೂವರೆಗಿನ ಆರೋಗ್ಯ ವಿಮಾ ಯೋಜನೆಯ ಸವಲತ್ತುಗಳು ದೊರೆತಿರಲಿಲ್ಲ. ಉದ್ಯೋಗಾವಕಾಶವಂತು ಕನಸಿನ ಮಾತಾಗಿತ್ತು. ನಕ್ಸಲ್ ಹಾವಳಿ ಸಂತ್ರಸ್ತ ವಲಯಗಳಿಗಿಂತಲೂ ತೀರಾ ಹಿಂದುಳಿದ ಹಲವು ಪ್ರದೇಶಗಳು ದೇಶದಲ್ಲಿವೆ. ಆದರೆ ಈ ಪ್ರದೇಶಗಳಲ್ಲಿ ನಕ್ಸಲ್‌ಹಾವಳಿ ಇಲ್ಲ ಎಂದು ಸಚಿವ ಶಾ ಗಮನ ಸೆಳೆದರು.

ಕೇರಳ ಸಂಪುಟ: ಹಗ್ಗಜಗ್ಗಾಟ

ತಿರುವನಂತಪುರಂ: ಕೇರಳದಲ್ಲಿ ಯುಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡ ಬಳಿಕ ಇದೀಗ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಸಚಿವ ಸಂಪುಟ ಸದಸ್ಯರಿಗೆ ಖಾತೆ ಹಂಚಿಕೆ ದೊಡ್ಡ ತಲೆನೋವಾಗಿ ಕಾಡಿದೆ.ಮಿತ್ರಪಕ್ಷಗಳ ಲಾಬಿ ಒಂದೆಡೆ, ಮತೀಯ ಲಾಬಿಗಳ ಒತ್ತಡ ಇನ್ನೊಂದೆಡೆ , ಕಾಂಗ್ರೆಸ್‌ನೊಳಗಣ ಪೈಪೋಟಿ ಮಗದೊಂದೆಡೆ ತೀವ್ರಗೊಂಡಿದ್ದು, ಖಾತೆಗಳಿಗಾಗಿ ತೀವ್ರ ಹಗ್ಗಜಗ್ಗಾಟ ನಡೆದಿದೆ. ಒಂದೆಡೆ ಉನ್ನತ ಶಿಕ್ಷಣ ಖಾತೆ ತನಗೆ ನೀಡಬೇಕೆಂದು ಮುಸ್ಲಿಂಲೀಗ್ ಒತ್ತಡ ಹೇರುತ್ತಿದ್ದು, ಶಿಕ್ಷಣ ಖಾತೆಗಾಗಿ ಕ್ರೈಸ್ತ ಲಾಬಿ ಕೂಡ ತೀವ್ರ ಒತ್ತಡ ಹೇರುತ್ತಿದೆ.ಇದೇ ವೇಳೆ ಮೀನುಗಾರಿಕಾ ಖಾತೆಯನ್ನು ಮುಸ್ಲಿಂಲೀಗಿಗೆ ನೀಡುವುದನ್ನು ಚರ್ಚ್ ನಾಯಕತ್ವ ತೀವ್ರವಾಗಿ ವಿರೋಧಿಸಿದ್ದು,ಅದು ಕ್ರೈಸ್ತ ಸಚಿವರಿಗೆ ನೀಡಬೇಕೆಂದು ಪ್ರತಿಪಾದಿಸಿದೆ.ಸೆಕ್ಯುಲರ್ ಯುಡಿಎಫ್ ಸರಕಾರವೀಗ ಪ್ರಮುಖ ಖಾತೆಗಳಿಗೆ ಪಟ್ಟುಹಿಡಿದಿರುವ ಈ ಮತೀಯವಾದಿ ಲಾಬಿಗಳನ್ನು ಮನವೊಲಿಸಲು ಹರಸಾಹಸಪಡುತ್ತಿದೆ. ಸಂಧಾನ, ಮಾತುಕತೆಗಳು, ಆಳುವ ಕೂಟದ ಅತೃಪ್ತ ಗುಂಪುಗಳನ್ನು ಸಮಾಧಾನಪಡಿಸಲು ಯತ್ನಗಳು ನಡೆಯುತ್ತಿವೆ.

ಸಚಿವ ಖಾತೆಗಳನ್ನು, ಸಚಿವ ಪಟ್ಟಿಯನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರಿಗೆ ಸಲ್ಲಿಸಿ ಗಜೆಟಿನಲ್ಲಿ ಪ್ರಕಟಿಸಿದ ಬಳಿಕವೇ ಅಧಿಕೃತವಾಗಿ ಬಹಿರಂಗಪಡಿಸಲಾಗುವುದು ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ತಿಳಿಸಿದ್ದರು.

ನೂತನ ಸಂಪುಟದಲ್ಲಿ ತನ್ನ ಸಮುದಾಯಕ್ಕೆ ಕಡಿಮೆ ಪ್ರಾತಿನಿಧ್ಯ ನೀಡಲಾಗಿದೆ ಎಂದು ಲ್ಯಾಟಿನ್ ಕ್ಯಾಥೋಲಿಕ್ ಚರ್ಚ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.



ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನೂತನ ಪ್ರಯೋಗ

ಭಾರತದ ಮೊದಲ ಚಾಲಕರಹಿತ ಏರ್ ಟ್ರೈನ್

ದಿಲ್ಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಐಜಿಐಎ) ದೀರ್ಘಕಾಲದಿಂದ ನನೆಗುದಿಗೆ ಬಿದ್ದಿದ್ದ ಸ್ವಯಂಚಾಲಿತ ಏರ್ ಟ್ರೈನ್ ಯೋಜನೆಯನ್ನು ಕೊನೆಗೂ ಆರಂಭಿಸುತ್ತಿದೆ. ಈ ಹಿಂದೆ ಖಾಸಗಿ ಹೂಡಿಕೆದಾರರನ್ನು ಸೆಳೆಯಲು ವಿಫಲವಾದ ಕಾರಣ, ಈಗ ವಿಮಾನ ನಿಲ್ದಾಣದ ನಿರ್ವಾಹಕರೇ ಸ್ವಂತ ಹಣದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೆ.

ಕಾರ್ಯನಿರ್ವಹಣೆ



ಜಾಗತಿಕ ಮಟ್ಟದ ಪ್ರಮುಖ ವಿಮಾನ ನಿಲ್ದಾಣಗಳ ಮಾದರಿಯಲ್ಲಿಯೇ ಈ ಏರ್ ಟ್ರೈನ್ ಕೂಡ ಚಾಲಕನಿಲ್ಲದೆ ಪ್ರತ್ಯೇಕ ಹಳಿಗಳ ಮೇಲೆ ಓಡಾಡಲಿದೆ. ಇಲ್ಲಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ಇದ್ದು, ಪ್ರಯಾಣಿಕರು ಒಳಗೆ ಹೋಗುವ ಮುನ್ನ ತಮ್ಮ ಬೋರ್ಡಿಂಗ್ ಪಾಸ್ ಸ್ಕ್ಯಾನ್ ಮಾಡುವುದು ಕಡ್ಡಾಯವಾಗಿದೆ. ವಿಮಾನ ನಿಲ್ದಾಣಕ್ಕೆ ಪ್ರಯಾಣಿಕರನ್ನು ಬಿಡಲು ಬರುವ ಸಾರ್ವಜನಿಕರ ಸಂಖ್ಯೆ ಹೆಚ್ಚಿರುವುದರಿಂದ ಈ ನಿಯಂತ್ರಣ ಕ್ರಮ ಅನಿವಾರ್ಯವಾಗಿದೆ. ಒಂದು ವಿಮಾನದಿಂದ ಮತ್ತೊಂದು ವಿಮಾನಕ್ಕೆ ಕನೆಕ್ಟಿಂಗ್ ಫ್ಲೈಟ್ ಹಿಡಿಯುವ ಪ್ರಯಾಣಿಕರಿಗೆ ಈ ಸೇವೆ ಸಂಪೂರ್ಣ ಉಚಿತವಾಗಿರುತ್ತದೆ. ಆದರೆ ಸಾಮಾನ್ಯ ಸಾರ್ವಜನಿಕರು ಇದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆ.

ತಂತ್ರಜ್ಞಾನ ಮತ್ತು ನಿರ್ಮಾಣ

ಈ ಇಡೀ ಯೋಜನೆಯನ್ನು ಡಿಐಎಎಲ್ ಎರಡು ಭಾಗಗಳಾಗಿ ವಿಂಗಡಿಸಿದೆ. ಹಳಿಗಳು ಮತ್ತು ನಿಲ್ದಾಣಗಳಂತಹ ಸಿವಿಲ್ ಕಾಮಗಾರಿಗಳನ್ನು ಭಾರತೀಯ ನಿರ್ಮಾಣ ಕಂಪನಿಗಳಿಗೆ ನೀಡಲಾಗುತ್ತದೆ. ಆದರೆ ರೈಲು ಪೆಟ್ಟಿಗೆಗಳು (ರೋಲಿಂಗ್ ಸ್ಟಾಕ್) ಮತ್ತು ತಾಂತ್ರಿಕ ವ್ಯವಸ್ಥೆಯನ್ನು ವಿದೇಶಿ ಸಂಸ್ಥೆಗಳಿಂದ ಪಡೆಯಲು ಉದ್ದೇಶಿಸಲಾಗಿದೆ. ತಂತ್ರಜ್ಞಾನದ ಆಯ್ಕೆಗಾಗಿ ವಿಮಾನ ನಿಲ್ದಾಣದ ಅಧಿಕಾರಿಗಳು ಈಗಾಗಲೇ ದಕ್ಷಿಣ ಕೊರಿಯಾ, ಇಂಡೋನೇಷ್ಯಾ, ಇಟಲಿ ಮತ್ತು ಸ್ವಿಟ್ಜರ್ಲೆಂಡ್ ದೇಶಗಳ ಏರ್ ಟ್ರೈನ್ ವ್ಯವಸ್ಥೆಯನ್ನು ಅಧ್ಯಯನ ಮಾಡಿದ್ದಾರೆ. ಈ ತಂತ್ರಜ್ಞಾನ ಪಾಲುದಾರಿಕೆಗಾಗಿ ಶೀಘ್ರದಲ್ಲೇ ಜಾಗತಿಕ ಟೆಂಡರ್ ಕರೆಯಲಾಗುತ್ತದೆ.

ಮುಖ್ಯ ಅಂಶಗಳು

- ಭಾರತದ ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಲಿರುವ ಮೊದಲ ಬೃಹತ್ ಏರ್ ಟ್ರೈನ್ ಯೋಜನೆ
- ಒಟ್ಟು 7.7 ಕಿಲೋಮೀಟರ್ ಉದ್ದದ ಕಾರಿಡಾರ್‌ನಲ್ಲಿ ಎಲ್ಲಾ ಟರ್ಮಿನಲ್‌ಗಳನ್ನು ಸಂಪರ್ಕಿಸುತ್ತದೆ.
- ಒಟ್ಟು ವೆಚ್ಚ ಸುಮಾರು 3,000 ದಿಂದ 4,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ.
- ಮುಂದಿನ 30 ತಿಂಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಗುರಿ
- ವಿಮಾನ ಬದಲಾಯಿಸುವ ಪ್ರಯಾಣಿಕರಿಗೆ ಉಚಿತ, ಉಳಿದವರಿಗೆ ಶುಲ್ಕ ಇರಲಿದೆ.

ತಡೆರಹಿತ ಸೇವೆ

ಸುದ್ದಿ ಸಮಗ್ರ

ಹೆಚ್ಚಿನ ಜನದಟ್ಟಣೆ ಇರುವ ಸಮಯದಲ್ಲಿ ಈ ರೈಲುಗಳು ಮಧ್ಯದ ನಿಲ್ದಾಣಗಳಲ್ಲಿ ನಿಲ್ಲದೆ ನೇರವಾಗಿ ಚಲಿಸಲಿವೆ. ವಿಮಾನ ನಿಲ್ದಾಣದ 'ಹಬ್-ಅಂಡ್-ಸ್ಪೋಕ್' ಮಾದರಿಗೆ ತಕ್ಕಂತೆ, ಪೀಕ್ ಅವರ್‌ಗಳಲ್ಲಿ ಟರ್ಮಿನಲ್ 1 ಮತ್ತು ಟರ್ಮಿನಲ್ 3/2 ನಡುವೆ ಯಾವುದೇ ನಿಲುಗಡೆ ಇಲ್ಲದೆ ರೈಲುಗಳು ಓಡಲಿವೆ. ಇದರಿಂದಾಗಿ ಅಂತಾರಾಷ್ಟ್ರೀಯ ಮತ್ತು ದೇಶೀಯ ವಿಮಾನಗಳ ನಡುವೆ ತುರ್ತಾಗಿ ಸಂಚರಿಸಬೇಕಾದ ಪ್ರಯಾಣಿಕರಿಗೆ ಭಾರಿ ಅನುಕೂಲವಾಗಲಿದೆ.

ನಿಲ್ದಾಣಗಳ ವಿನ್ಯಾಸ

ರೈಲು ನಿಲ್ದಾಣಗಳನ್ನು ಟರ್ಮಿನಲ್‌ಗಳ ಪ್ರವೇಶ ದ್ವಾರಗಳಿಗೆ ತೀರಾ ಹತ್ತಿರದಲ್ಲಿ ನಿರ್ಮಿಸಲಾಗುತ್ತಿದೆ. ಮೆಟ್ರೋ ಅಥವಾ ಬಸ್ ನಿಲ್ದಾಣಗಳಿಂದ ಈ ಏರ್ ಟ್ರೈನ್ ನಿಲ್ದಾಣಗಳಿಗೆ ಕೇವಲ ಎರಡು ಅಥವಾ ಮೂರು ನಿಮಿಷಗಳ ನಡಿಗೆಯ ದೂರವಿರಲಿದೆ. ಇದು ಇಡೀ ವಿಮಾನ ನಿಲ್ದಾಣವನ್ನು ಒಂದು ಸಮಗ್ರ ಸಾರಿಗೆ ಕೇಂದ್ರವನ್ನಾಗಿ ಬದಲಾಯಿಸಲಿದೆ.

ಯೋಜನೆ ಹೇಗಿದೆ?

ಇದು ಸಂಪೂರ್ಣ ಸ್ವಯಂಚಾಲಿತವಾಗಿ ಚಲಿಸುವ ರೈಲು ವ್ಯವಸ್ಥೆಯಾಗಿದ್ದು (ಎಪಿಎಂ), ವಿಮಾನ ನಿಲ್ದಾಣದ ಒಳಗಿನ 7.7 ಕಿಲೋಮೀಟರ್ ಉದ್ದದ ಹಳಿಯ ಮೇಲೆ ಸಂಚರಿಸಲಿದೆ. ಇದು ಟರ್ಮಿನಲ್ 1, ಟರ್ಮಿನಲ್ 2, ಟರ್ಮಿನಲ್ 3 ಸೇರಿದಂತೆ ಏರೋಸಿಟಿ ಮತ್ತು ಸರಕು ಸಾಗಣೆ (ಕಾರ್ಗೋ) ವಲಯಗಳನ್ನು ಪರಸ್ಪರ ಜೋಡಿಸುತ್ತದೆ. ದಿಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಡಿಐಎಎಲ್) ಈ ಯೋಜನೆಗಾಗಿ 3,000 ಕೋಟಿಯಿಂದ 4,000 ಕೋಟಿ ರೂ. ವೆಚ್ಚವಾಗಬಹುದು ಎಂದು ಅಂದಾಜಿಸಿದೆ. ಮುಂದಿನ 30 ತಿಂಗಳಲ್ಲಿ ಕಾಮಗಾರಿ ಮುಗಿಸುವ ಗುರಿ ಹೊಂದಲಾಗಿದೆ. ಈ ಹೊಸ ವ್ಯವಸ್ಥೆಯಿಂದಾಗಿ ಒಂದು ಟರ್ಮಿನಲ್‌ನಿಂದ ಮತ್ತೊಂದಕ್ಕೆ ಹೋಗುವ ಪ್ರಯಾಣಿಕರ ಸಮಯ ಉಳಿಯಲಿದ್ದು, ಸಂಚಾರ ಸರಳವಾಗಲಿದೆ.

ನಿಧಿಯ ಬದಲಾವಣೆ

ಮೊದಲು ಈ ಯೋಜನೆಯನ್ನು ಖಾಸಗಿ ಸಹಭಾಗಿತ್ವದ (ಡಿಬಿಎಫ್‌ಒಟಿ) ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅಂದರೆ ಖಾಸಗಿ ಕಂಪನಿಯೇ ಹಣ ಹೂಡಿ, ನಿರ್ಮಿಸಿ, ಜಾಹೀರಾತುಗಳ ಮೂಲಕ ಆದಾಯ ಗಳಿಸಬೇಕಿತ್ತು. ಆದರೆ ಈ ಟೆಂಡರ್‌ಗೆ ಕೇವಲ ಒಂದೇ ಒಂದು ಬಿಡ್ ಬಂದಿದ್ದರಿಂದ ಯೋಜನೆ ಮುಂದುವರಿಯಲಿಲ್ಲ. ಹೀಗಾಗಿ ವಿಮಾನ ನಿಲ್ದಾಣದ ನಿರ್ವಾಹಕರು ತಮ್ಮ ಆಂತರಿಕ ಉಳಿತಾಯದ ಹಣವನ್ನೇ ಬಳಸಲು ಮುಂದಾಗಿದ್ದಾರೆ. ಈ ವೆಚ್ಚವನ್ನು ಮುಂದೆ ವಿಮಾನ ನಿಲ್ದಾಣದ ಸುಂಕ ಹಾಗೂ ಜಾಹೀರಾತು ಆದಾಯದ ಮೂಲಕ ಸರಿದೂಗಿಸಲಾಗುತ್ತದೆ. ಆದರೂ ಸಾಮಾನ್ಯ ಪ್ರಯಾಣಿಕರ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ನೋಡಿಕೊಳ್ಳಲಾಗುವುದು ಎಂದು ಸಂಸ್ಥೆ ಹೇಳಿದೆ.



ಹೆಚ್ಚುತ್ತಿರುವ ಬೇಡಿಕೆ ಮತ್ತು ಪ್ರಾಮುಖ್ಯತೆ

ದಿಲ್ಲಿ ವಿಮಾನ ನಿಲ್ದಾಣದಲ್ಲಿ ಕನೆಕ್ಟಿಂಗ್ ಫ್ಲೈಟ್ ಪಡೆಯುವ ಪ್ರಯಾಣಿಕರ ಸಂಖ್ಯೆ 2006 ರಲ್ಲಿ ಕೇವಲ ಶೇ.5 ರಷ್ಟಿತ್ತು, ಆದರೆ ಈಗ ಅದು ಶೇ.25 ಕ್ಕೆ ಏರಿಕೆಯಾಗಿದೆ. ದುಬೈ ಮತ್ತು ಸಿಂಗಾಪುರದಂತಹ ಜಾಗತಿಕ ವಿಮಾನ ನಿಲ್ದಾಣಗಳಿಗೆ ಪೈಪೋಟಿ ನೀಡಲು ಇಂತಹ ತಡೆರಹಿತ ಸಾರಿಗೆ ವ್ಯವಸ್ಥೆ ಅಗತ್ಯವಾಗಿದೆ. ಸದ್ಯ ಟರ್ಮಿನಲ್‌ಗಳ ನಡುವೆ ರಸ್ತೆ ಮೂಲಕ ಸಂಚರಿಸಲು ಟ್ರಾಫಿಕ್ ಹಾಗೂ ಭದ್ರತಾ ತಪಾಸಣೆಗಳಿಂದಾಗಿ ಸಾಕಷ್ಟು ಸಮಯ ವ್ಯರ್ಥವಾಗುತ್ತಿತ್ತು. ಭಾರತದ ವಿಮಾನಯಾನ ಕ್ಷೇತ್ರ ವೇಗವಾಗಿ ಬೆಳೆಯುತ್ತಿದ್ದು, ರಸ್ತೆ ಸಾರಿಗೆಯ ಮೇಲಿನ ಅವಲಂಬನೆ ಕಡಿಮೆ ಮಾಡಲು ಈ ಏರ್ ಟ್ರೈನ್ ದೊಡ್ಡ ಕೊಡುಗೆ ನೀಡಲಿದೆ. ಇದು ಪೂರ್ಣಗೊಂಡರೆ ಭಾರತದ ಮೊದಲ ಬೃಹತ್ ಸ್ವಯಂಚಾಲಿತ ವಿಮಾನ ನಿಲ್ದಾಣ ಸಾರಿಗೆ ಜಾಲ ಎನಿಸಿಕೊಳ್ಳಲಿದೆ.

ಕಿರುಸುದ್ದಿ

ಪೆಟ್ರೋಲ್, ಡೀಸೆಲ್ ಬೆಲೆ 90 ಪೈಸೆ ಏರಿಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಸಂಘರ್ಷ ಮತ್ತು ಜಾಗತಿಕ ಇಂಧನ ಪೂರೈಕೆ ಕೊರತೆ ಕಾರಣಗಳಿಂದಾಗಿ ಭಾರತೀಯ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 90 ಪೈಸೆ ಹೆಚ್ಚಿಸಿವೆ. ಮೇ 15ರಂದು ತೈಲ ಕಂಪನಿಗಳು ಲೀಟರ್‌ಗೆ 3 ರೂ. ಬೆಲೆ ಏರಿಕೆ ಮಾಡಿದ್ದು, ಮಂಗಳವಾರ ಇಂಧನ ಇನ್ನಷ್ಟು ದುಬಾರಿಯಾಗಿವೆ. ಹೊಸ ಬೆಲೆ ಏರಿಕೆ ನಂತರ ಬೆಂಗಳೂರಿನಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ)ನಲ್ಲಿ ಲೀಟರ್ ಪೆಟ್ರೋಲ್ ದರ 107.15 ರೂ. ಮತ್ತು ಡೀಸೆಲ್ ಬೆಲೆ 95.04 ರೂ. ತಲುಪಿದೆ. ಕಚ್ಚಾ ತೈಲ ಕಂಪನಿ ಬ್ರೆಂಟ್ ಕ್ರೂಡ್, ಬ್ಯಾರೆಲ್ ಕಚ್ಚಾ ತೈಲ ಬೆಲೆಯನ್ನು 111 ಡಾಲರ್‌ಗೆ ಹೆಚ್ಚಿಸಿದೆ. ಹಾರ್ಮುಜ್ ಜಲಸಂಧಿ ಮುಚ್ಚಿರುವ ಕಾರಣ ಮುಂದಿನ ದಿನಗಳಲ್ಲಿ ಇನ್ನಷ್ಟು ಬೆಲೆ ಏರಿಕೆ ಸಾಧ್ಯತೆಯಿದೆ.

ಭಾರತ-ಇಂಗ್ಲೆಂಡ್ ಮುಕ್ತ ವ್ಯಾಪಾರ ಒಪ್ಪಂದ ಶೀಘ್ರ

ಹೊಸದಿಲ್ಲಿ: ಮುಂಬರುವ ವರ್ಷಗಳಲ್ಲಿ ಭಾರತಕ್ಕೆ ಗಮನಾರ್ಹ ರಫ್ತುಗಳನ್ನು ಯೋಜಿಸಿರುವ ಇಂಗ್ಲೆಂಡ್ ಸ್ಕಾಚ್ ವಿಸ್ಕಿ ಅಸೋಸಿಯೇಷನ್, ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ತ್ವರಿತ ಅನುಷ್ಠಾನದ ಬಗ್ಗೆ ಭರವಸೆ ವ್ಯಕ್ತಪಡಿಸಿದೆ. ಕಳೆದ ಜುಲೈನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಯುಕೆ ಭೇಟಿ ವೇಳೆ ಭಾರತ-ಇಂಗ್ಲೆಂಡ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು ಮತ್ತು ಈ ವರ್ಷ ಯುಕೆ ಸಂಸತ್ತಿನ ಅನುಮೋದನೆ ಪ್ರಕ್ರಿಯೆಯ ಮೂಲಕ ಪ್ರಗತಿಯಾಗಿದೆ.

ಎರಡು ವಿದೇಶಿ ಮಿಲಿಟರಿ ಸರಕು ಮಾರಾಟಕ್ಕೆ ಅಸ್ತು

ಹೊಸದಿಲ್ಲಿ: ಭಾರತಕ್ಕೆ ಅಮೆರಿಕ ಒಟ್ಟು 428.2 ಮಿಲಿಯನ್ ಮೌಲ್ಯದ ಎರಡು ಸಂಭಾವ್ಯ ವಿದೇಶಿ ಮಿಲಿಟರಿ ಸರಕುಗಳ ಮಾರಾಟಕ್ಕೆ ಅನುಮೋದನೆ ನೀಡಿದೆ. ಇದರಲ್ಲಿ ಎಎಚ್-64ಇ ಅಪಾಚೆ ಹೆಲಿಕಾಪ್ಟರ್‌ಗಳಿಗೆ ಫಾಲೋ-ಆನ್ ಬೆಂಬಲ ಹಾಗೂ ಎಂ-777ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್ ಫಿರಂಗಿ ಸುಸ್ಥಿರ ಸಹಾಯ ಸೇರಿವೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ. ಅಂದಾಜು 230 ಮಿಲಿಯನ್ ಡಾಲರ್ ಮೌಲ್ಯದ ಎಂ-777 ಎ2 ಅಲ್ಟ್ರಾ-ಲೈಟ್ ಹೊವಿಟ್ಜರ್‌ಗಳ ದೀರ್ಘಾವಧಿಯ ಸುಸ್ಥಿರ ಬೆಂಬಲಕ್ಕಾಗಿ, ಪ್ಯಾಕೇಜ್‌ನಲ್ಲಿ ಪೂರಕ ವಸ್ತುಗಳು, ಬಿಡಿಭಾಗಗಳು, ದುರಸ್ತಿ ಮತ್ತು ಹಿಂತಿರುಗಿಸುವಿಕೆ, ತರಬೇತಿ, ತಾಂತ್ರಿಕ ನೆರವು, ಕ್ಷೇತ್ರ ಸೇವಾ ಪ್ರತಿನಿಧಿ, ಡಿಪೋ ಸಾಮರ್ಥ್ಯ ಮತ್ತು ಲಾಜಿಸ್ಟಿಕ್ಸ್ ಹಾಗೂ ಕಾರ್ಯಕ್ರಮ ಬೆಂಬಲದ ಇತರ ಸಂಬಂಧಿತ ಅಂಶಗಳು ಸೇರಿವೆ.

ಲಾಹೋರ್ ಗಲ್ಲಿಗಳಿಗೆ ರಾಮ, ಕೃಷ್ಣನ ನಾಮ!

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಸರ್ಕಾರ, ಲಾಹೋರ್‌ನ ರಸ್ತೆಗಳಿಗೆ ದಶಕಗಳ ಹಿಂದೆ ನೀಡಲಾಗಿದ್ದ ಇಸ್ಲಾಮೀಕೃತ ಹೆಸರುಗಳನ್ನು ಬದಲಾಯಿಸಿ, ಅವುಗಳ ಹಳೆಯ ಹಿಂದು, ಸಿಖ್, ಜೈನ್ ಮತ್ತು ವಸಾಹತುಶಾಹಿ ಕಾಲದ ಹೆಸರುಗಳನ್ನು ಮರುಸ್ಥಾಪಿಸಲು ಪ್ರಾರಂಭಿಸಿದೆ.

ಕಳೆದ ಎರಡು ತಿಂಗಳುಗಳಲ್ಲಿ ಕನಿಷ್ಠ ಒಂಬತ್ತು ಸ್ಥಳಗಳ ಹೆಸರುಗಳನ್ನು ಬದಲಾಯಿಸಲಾಗಿದೆ. ಇಸ್ಲಾಂಪುರವನ್ನು ಕೃಷ್ಣ ನಗರ ಎಂದು, ರೆಹಮಾನ್ ಗಲಿಯನ್ನು ರಾಮ್ ಗಲಿ ಎಂದು ಮತ್ತು ಬಾಬರಿ ಮಸೀದಿ ಚೌಕವನ್ನು ಜೈನ್ ಮಂದಿರ್ ರಸ್ತೆ ಎಂದು ಬದಲಾಯಿಸಲಾಗಿದೆ. ಸನತ್ ನಗರ, ಲಕ್ಷ್ಮಿ ಚೌಕ್ ಮತ್ತು ಧರಂಪುರ ಇತರ ಬದಲಾವಣೆಗಳಾಗಿವೆ. ಇದು, 50 ಬಿಲಿಯನ್ ಪಿಕೆಆರ್ ವೆಚ್ಚದ 'ಲಾಹೋರ್ ಹೆರಿಟೇಜ್ ಏರಿಯಾ ರಿವೈವಲ್' ಯೋಜನೆಯ ಭಾಗ ಎನ್ನಲಾಗಿದೆ. ದೇಶದ ಸಾಂಸ್ಕೃತಿಕ ರಾಜಧಾನಿಯ ವಿಭಜನೆ ಪೂರ್ವದ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸಲು ಮಾಜಿ ಪ್ರಧಾನಿ ನವಾಜ್ ಷರೀಫ್ ಮತ್ತು ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ 2025 ರಲ್ಲಿ ಈ ಯೋಜನೆ ಪ್ರಾರಂಭಿಸಿದ್ದರು.

ಭಯೋತ್ಪಾದನೆಗೆ ಧನಸಹಾಯದ ಕುರಿತಾದ ಅಂತಾರಾಷ್ಟ್ರೀಯ ಗ್ರಹಿಕೆಗಳನ್ನು ಬದಲಾಯಿಸುವುದು ಇದರ ಗುರಿಯಾಗಿದೆ. ಜತೆಗೆ ಸಹಿಷ್ಣುತೆ ಪ್ರದರ್ಶಿಸುವ ಮೂಲಕ ವಿದೇಶಿ ಹೂಡಿಕೆ, ರಾಜತಾಂತ್ರಿಕ ನೆರವು ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ಯಿಂದ ಅನುಮೋದನೆ ನಿರೀಕ್ಷಿಸುತ್ತಿದೆ.

ಐಎಎಫ್ ಸ್ಕ್ವಾಡ್ರನ್ ಲೀಡರ್ ಸಾನ್ಯಾ ಸಾಧನೆ

ಹೊಸದಿಲ್ಲಿ: ಭಾರತೀಯ ವಾಯುಪಡೆ(ಐಎಎಫ್) ಸ್ಕ್ವಾಡ್ರನ್ ಲೀಡರ್ ಸಾನ್ಯಾ ಅತ್ಯುನ್ನತ ಗೌರವಾನ್ವಿತ (ಕ್ಯಾಟ್-ಎ ಕ್ಯೂಎಫ್‌ಐ) ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಪಡೆದ ಮೊದಲ ಮಹಿಳಾ ಅಧಿಕಾರಿ ಎಂಬ ಇತಿಹಾಸ ನಿರ್ಮಿಸಿದ್ದಾರೆ.

ಭಾರತೀಯ ಸಶಸ್ತ್ರಪಡೆಗಳಲ್ಲಿ ಮಹಿಳೆಯರ ಸಾಧನೆಗೆ ಇದೊಂದು ದೊಡ್ಡ ಉದಾಹರಣೆಯಾಗಿದೆ. ಶ್ರೇಷ್ಠತೆಯು ಹಾರಾಟ ನಡೆಸುತ್ತದೆ ಎಂದು ಮೂರು ಪದಗಳಲ್ಲಿ ಸಾನ್ಯಾ ಸಾಧನೆಗೆ ವಾಯುಪಡೆ ಪ್ರಶಂಸೆ ವ್ಯಕ್ತಪಡಿಸಿದೆ. ಅಂದರೆ ಭಾರತೀಯ ಸೇನೆಯಲ್ಲಿ ಯಾವುದೇ ಲಿಂಗ ಭೇದವಿಲ್ಲ, ಇಲ್ಲಿ ಶ್ರೇಷ್ಠತೆಯನ್ನಷ್ಟೇ ಪರಿಗಣಿಸಲಾಗುತ್ತದೆ ಎಂಬರ್ಥ ನೀಡುತ್ತದೆ.

ಆಕೆಯ ಸಾಧನೆ ಸಮರ್ಪಣೆ ಮತ್ತು ಶ್ರೇಷ್ಠತೆಯ ನಿರಂತರ ಹಂಬಲದ ಪ್ರತೀಕ. ಇದು ಭಾರತೀಯ ವಾಯುಪಡೆಗೆ ಹೆಮ್ಮೆಯ ಮೈಲಿಗಲ್ಲಾಗಿದ್ದು, ದೇಶಾದ್ಯಂತ ವಿಮಾನಯಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಕನಸು ಕಾಣುತ್ತಿರುವ ಯುವ ಜನಾಂಗಕ್ಕೆ ಸಾನ್ಯಾ ಪ್ರೇರಣಾದಾಯಿ ಆಗಿದ್ದಾರೆ ಎಂದು ಐಎಎಫ್ ಎಕ್ಸ್‌ನಲ್ಲಿ ಬರೆದುಕೊಂಡಿದೆ.

ಹುದ್ದೆಗೆ ಬೇಕಾದ ಅರ್ಹತೆಗಳು: ಅತ್ಯುನ್ನತ ಕ್ಯಾಟ್-ಎ ಕ್ಯೂಎಫ್‌ಐ ದರ್ಜೆಯ ವಿಮಾನ ಹಾರಾಟ ತರಬೇತುದಾರ ಹುದ್ದೆಗೆ ಅರ್ಹತೆ ಸಂಪಾದಿಸಲು ತಾಳ್ಮೆ, ಸ್ಪಷ್ಟತೆ, ಶಾಂತತೆ, ಆಳವಾದ ತಾಂತ್ರಿಕ ಜ್ಞಾನ ಇತ್ಯಾದಿ ಕೌಶಲಗಳ ಅಪರೂಪದ ಸಂಯೋಜನೆ ಅಗತ್ಯವಿದೆ. 2017ರಲ್ಲಿ ಫ್ಲೈಟ್ ಲೆಫ್ಟಿನೆಂಟ್ ಮತ್ತು 2021ರಲ್ಲಿ ಸ್ಕ್ವಾಡ್ರನ್ ಲೀಡರ್ ಹುದ್ದೆಗಳಿಗೆ ಸಾನ್ಯಾ ಭಡ್ತಿ ಪಡೆದಿದ್ದರು.

ನೀಟ್: ಕೋಚಿಂಗ್ ಕೇಂದ್ರ ಸ್ಥಾಪಕ ಬಂಧನ

ಪುಣೆ: ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ಭಾರೀ ತಿರುವು ಪಡೆದಿದ್ದು, ಮಹಾರಾಷ್ಟ್ರದ ಖ್ಯಾತ ಕೋಚಿಂಗ್ ಕೇಂದ್ರ ಆರ್‌ಸಿಸಿ ಸ್ಥಾಪಕ ಶಿವರಾಜ್ ರಘುನಾಥ್ ಮೋಟೆಗಾಂವಕರ್ ಅವರನ್ನು ಸಿಬಿಐ ಬಂಧಿಸಿದೆ. ಆರ್‌ಸಿಸಿ ಕೋಚಿಂಗ್ ಸಂಸ್ಥೆಯ ವಿವಿಧ ಘಟಕಗಳಲ್ಲಿ ಮಾಕ್ ಟೆಸ್ಟ್ ಹೆಸರಿನಲ್ಲಿ ಪರೀಕ್ಷೆಗಳನ್ನು ನಡೆಸುವ ನೆಪದಲ್ಲಿ ನೀಟ್-ಯುಜಿ 2026ರ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದಾರೆ ಎಂಬ ಆರೋಪದ ಆಧಾರದಲ್ಲಿ ಶಿವರಾಜ್‌ರನ್ನು ಸಿಬಿಐ ಸಿಬ್ಬಂದಿ ಭಾನುವಾರ ರಾತ್ರಿ ಬಂಧಿಸಿದ್ದಾರೆ. ಭಾನುವಾರ ರಾತ್ರಿ ಬಂಧಿಸಿದ ಬಳಿಕ ಪುಣೆ ಸಿಬಿಐ ಕಚೇರಿಯಲ್ಲಿ ವಿಚಾರಣೆಯನ್ನು ನಡೆಸಲಾಗಿದೆ. ಇದಾದ ಬಳಿಕ ಸೋಮವಾರ ಶಿವರಾಜ್ ಅವರನ್ನು ಹೊಸದಿಲ್ಲಿಗೆ ಕರೆತಂದು ಅಧಿಕೃತವಾಗಿ ಬಂಧಿಸಲಾಗಿದೆ.



ಶಿವರಾಜ್‌ಗಿತ್ತು ಕುಲಕರ್ಣಿ ಸಂಪರ್ಕ: ಈಗಾಗಲೇ ಸಿಬಿಐ ಬಂಧನದಲ್ಲಿರುವ ಪುಣೆ ಮೂಲದ ರಸಾಯನಶಾಸ್ತ್ರ ಉಪನ್ಯಾಸಕ ಪ್ರಹ್ಲಾದ್ ವಿಠಲ್‌ರಾವ್ ಕುಲಕರ್ಣಿ ಮತ್ತು ಶಿವರಾಜ್ ಇಬ್ಬರೂ ಸಂಪರ್ಕದಲ್ಲಿದ್ದರು. ಪಿ.ವಿ. ಕುಲಕರ್ಣಿ ಪ್ರಕರಣದ ಪ್ರಮುಖ ಆರೋಪಿಯೆಂದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ಕುಲಕರ್ಣಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ)ಗಾಗಿ ಮರಾಠಿ ಅನುವಾದಕನ ಕೆಲಸ ಮಾಡಿದ್ದರು. ಸಿಬಿಐ ಸಿಬ್ಬಂದಿ ಕುಲಕರ್ಣಿ ಅವರನ್ನು ಮೇ 15ರಂದೇ ಬಂಧಿಸಿದ್ದರು. ಕಳೆದ ವರ್ಷವೂ ನಡೆದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಪಿ.ವಿ. ಕುಲಕರ್ಣಿ ಪಾತ್ರವಿದೆಯೇ ಎಂಬ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ.

ಕಣದಿಂದ ಹಿಂದೆ ಸರಿದ ಟಿಎಂಸಿ ಪುಷ್ಪಾ


ಕೋಲ್ಕತ್ತಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಮರು ಮತದಾನಕ್ಕೆ ಎರಡು ದಿನಗಳ ಮುನ್ನ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಾಂಗೀರ್ ಖಾನ್ ಅವರು ಚುನಾವಣೆಕಣದಲ್ಲಿರುವುದಿಲ್ಲ ಎಂದು ಘೋಷಿಸಿದ್ದಾರೆ. ಈ ಸ್ಥಳವು ಅಭಿವೃದ್ಧಿ ಹೊಂದುವುದನ್ನು ನೋಡುವುದು ನನ್ನ ಕನಸಾಗಿತ್ತು. ಹೊಸ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಫಾಲ್ಟಾಗಾಗಿ ಹೊಸ ಪ್ಯಾಕೇಜ್‌ಗಳನ್ನು ಹೊರತರುತ್ತಾರೆ. ಇದನ್ನು ನೋಡಿ, ನಾನು ಮರುಮತದಾನದಿಂದ ಹಿಂದೆಸರಿಯುತ್ತೇನೆ ಎಂದು ಹೇಳಿದ್ದಾರೆ. ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ಉತ್ತರ ಪ್ರದೇಶದಿಂದ ಚುನಾವಣಾ ವೀಕ್ಷಕರಾಗಿ ನಿಯೋಜನೆಗೊಂಡಿದ್ದ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಅವರಿಗೆ ಈ ಹಿಂದೆ ಖಾನ್ ನೀವು ಸಿಂಗಂ ಆದರೇ ನಾನು ಪುಷ್ಪಾ.. ಎಂದು ಸವಾಲು ಹಾಕಿದ್ದರು. ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂಬ ಖ್ಯಾತಿಯು ಶರ್ಮಾ ಅವರಿಗೆ ಸಿಂಗಂ ಎಂಬ ಉಪನಾಮವನ್ನು ತಂದುಕೊಟ್ಟಿತು.

ಅಗ್ರ 100ರಲ್ಲಿ ಭಾರತದ 95ರಿಂದ 99 ನಗರಗಳಿಗೆ ಸ್ಥಾನ

ವಿಶ್ವದ ಅತ್ಯಂತ ಬಿಸಿ ರಾಷ್ಟ್ರ ಭಾರತ!

ಹೊಸದಿಲ್ಲಿ: ವಿಶ್ವದ 100 ಅತ್ಯಂತ ಬಿಸಿ ನಗರಗಳಲ್ಲಿ ದಿಲ್ಲಿ ಸಹಿತ ಭಾರತದ 95-99 ನಗರಗಳು ಸ್ಥಾನ ಪಡೆದುಕೊಂಡಿದೆ. ಸದ್ಯ 46 ಡಿಗ್ರಿ ಉಷ್ಣಾಂಶದ ಮಧ್ಯ ಆಫ್ರಿಕಾ ನಗರ ಫಾಯಾ ಅಗ್ರಸ್ಥಾನದಲ್ಲಿ, 45 ಡಿಗ್ರಿ ಉಷ್ಣಾಂಶದ ಸೌದಿ ಅರೇಬಿಯಾ ನಗರ ಅಲ್ ಜುಬೈಲ್ ದ್ವಿತೀಯ ಸ್ಥಾನದಲ್ಲಿವೆ.

ವಾಯು ಗುಣಮಟ್ಟ ಇಂಡೆಕ್ಸ್ (ಎಕ್ಯೂಐ) ನೈಜ ಸಮಯದ ಉಷ್ಣಾಂಶ ರ್‍ಯಾಂಕಿಂಗ್ ಬಿಡುಗಡೆಗೊಳಿಸುತ್ತದೆ. ಇದು ನೈಜ ಸಮಯದ ರ್‍ಯಾಂಕಿಂಗ್ ಆಗಿದ್ದು, ಕ್ಷಣಕ್ಕೊಮ್ಮೆ ರ್‍ಯಾಂಕಿಂಗ್‌ನಲ್ಲಿ ಬದಲಾವಣೆ ಆಗುತ್ತಲೇ ಇರುತ್ತವೆ. ಹಾಗಿದ್ದೂ ಭಾರತದ 95ರಿಂದ 99 ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.



ಈ ನಗರಳು ದೇಶದೆಲ್ಲೆಡೆ ಬಿಸಿ ಗಾಳಿ ಹಾಗೂ ಉಷ್ಣಾಂಶದ ತೀವ್ರತೆಯನ್ನು ಹೆಚ್ಚಿಸುತ್ತಿವೆ. ಅಗ್ರ 100 ಅತ್ಯಂತ ಬಿಸಿ ನಗರಗಳಲ್ಲಿ ಕೊನೆಯ ಸ್ಥಾನ ಪಡೆದಿರುವ ನಗರಗಳೂ 44 ಡಿಗ್ರಿ ಉಷ್ಣಾಂಶವನ್ನು ಹೊಂದಿವೆ. ಅಗ್ರ 7 ನಗರಗಳು 48 ಡಿಗ್ರಿ ಸೆಲ್ಶಿಯಸ್ ಉಷ್ಣಾಂಶವನ್ನು ಹೊಂದಿವೆ.ದಿಲ್ಲಿ, ಫರೀದಾಬಾದ್, ಚಂಡೀಗಢ, ಜಮ್ಮು, ಆಗ್ರಾ, ಅಯೋಧ್ಯಾ, ಗ್ವಾಲಿಯರ್, ಕೋಟ ಮತ್ತು ರಾಯ್ಪುರ ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಪ್ರಮುಖ ನಗರಗಳಾಗಿವೆ. ಚಂಡೀಗಢ, ಜಮ್ಮು, ಬಟಿಂಡಾ, ಪಠಾನ್‌ಕೋಟ್, ಬರೇಲಿ, ಝಾನ್ಸಿ, ಕೈಥಾಲ್ ಮತ್ತು ಹರಿದ್ವಾರ್ ನಗರಗಳು 46 ಡಿಗ್ರಿ ಉಷ್ಣಾಂಶ ವಿಭಾಗದಲ್ಲಿ ಸ್ಥಾನ ಪಡೆದಿವೆ. ಆಗಾಗ ಹವಾಮಾನದಲ್ಲಿ ಬದಲಾವಣೆ ಆಗುತ್ತಲೇ ರ್‍ಯಾಂಕಿಂಗ್‌ನಲ್ಲಿ ನೈಜ ಸಮಯದ ಬದಲಾವಣೆ ಆಗುತ್ತದೆ.

ಉತ್ತರಪ್ರದೇಶದ್ದೇ ಮೇಲುಗೈ!: ಅಗ್ರ 100 ಅತ್ಯಂತ ಬಿಸಿ ನಗರಗಳ ಜಾಗತಿಕ ಪಟ್ಟಿಯಲ್ಲಿ ಉತ್ತರಪ್ರದೇಶದ ನಗರಗಳೇ ತುಂಬಿಕೊಂಡಿವೆ. ಉಳಿದಂತೆ ಮಧ್ಯಪ್ರದೇಶ, ಪಂಜಾಬ್, ಚತ್ತೀಸಗಢ, ಹರ್ಯಾಣ, ದಿಲ್ಲಿ, ರಾಜಸ್ಥಾನ, ಜಮ್ಮು ಕಾಶ್ಮೀರ ಮತ್ತು ಬಿಹಾರ ನಗರಗಳು ಸ್ಥಾನ ಪಡೆದಿವೆ.

ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ

ಎಕ್ಯೂಐ ನೈಜ ಸಮಯದ ಅತ್ಯಂತ ಶೀತ ನಗರಗಳ ಪಟ್ಟಿಯಲ್ಲಿ ಬಹಳಷ್ಟು ಅಮೆರಿಕ ನಗರಗಳೇ ಸ್ಥಾನ ಪಡೆದುಕೊಂಡಿದ್ದು, ಅಮೆರಿಕ ಅತ್ಯಂತ ತಂಪಾದ ರಾಷ್ಟ್ರ ಎನಿಸಿದೆ. ಉಳಿದಂತೆ ನ್ಯೂಜಿಲೆಂಡ್, ಕೆನಡಾ, ರಷ್ಯಾ, ಜಪಾನ್, ಚಿಲಿ ಮತ್ತು ಚೀನಾ ನಗರಗಳು ಅಗ್ರ 100ರಲ್ಲಿ ಸ್ಥಾನ ಪಡೆದಿವೆ.

ಬ್ರಿಕ್ಸ್ ಸಚಿವರ ಸಭೆಯಲ್ಲಿ ಲಾವ್ರೊವ್-ಜೈಶಂಕರ್ ಚರ್ಚೆ

ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಪುಟಿನ್

ಹೊಸದಿಲ್ಲಿ: ಸೆಪ್ಟೆಂಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಸೆ.12 ಮತ್ತು 13ರಂದು ದಿಲ್ಲಿಯಲ್ಲಿ ಬ್ರಿಕ್ಸ್ ಶೃಂಗಸಭೆ ನಡೆಯಲಿದೆ. ಅಂತೆಯೇ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸಹ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ.

ರಷ್ಯಾ ಅಧ್ಯಕ್ಷರ ಭಾರತ ಭೇಟಿಯನ್ನು ಕ್ರೆಮ್ಲಿನ್ ವಕ್ತಾರ ಯೂರಿ ಉಶಕೋವ್ ದೃಢೀಕರಿಸಿದ್ದಾರೆ ಎಂದು ದಕ್ಷಿಣ ಆಫ್ರಿಕಾದಲ್ಲಿನ ರಷ್ಯಾ ರಾಯಭಾರ ಕಚೇರಿ ಎಕ್ಸ್ ಪೋಸ್ಟ್ ಮಾಡಿದೆ. 2025ರ ಡಿಸೆಂಬರ್‌ನಲ್ಲಿ ನಡೆದಿದ್ದ ಭಾರತ-ರಷ್ಯಾ ನಡುವಿನ 23ನೇ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಕಡೆಯದಾಗಿ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಪ್ರಧಾನಿ ಮೋದಿ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಅಜಿತ್ ದೋವಲ್‌ರೊಂದಿಗೆ ವಿವಿಧ ಕ್ಷೇತ್ರಗಳ ಕುರಿತು ಚರ್ಚೆ ನಡೆಸಿದ್ದರು. ಟ್ರಂಪ್ ಸುಂಕ ಸಮರ, ರಷ್ಯಾ ತೈಲ ಖರೀದಿ ಮತ್ತು ಉಕ್ರೇನ್ ಯುದ್ಧ ಪ್ರಮುಖ ಚರ್ಚಾ ವಿಷಯವಾಗಿದ್ದವು. ಇತ್ತೀಚೆಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಗಾಗಿ ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಅವರ 2 ದಿನಗಳ ಭಾರತ ಭೇಟಿ ಬಳಿಕ ಪುಟಿನ್ ಭಾರತ ಪ್ರವಾಸದ ಸುದ್ದಿ ಬಂದಿದೆ. ಮೇ 14 ಮತ್ತು 15ರಂದು ಜೈಶಂಕರ್ ಅವರೊಂದಿಗೆ ಲಾವ್ರೊವ್ ಮಾತುಕತೆ ನಡೆಸಿದ್ದರು.

ಭಾರತ ಆತಿಥ್ಯದಲ್ಲಿ 18ನೇ ಬ್ರಿಕ್ಸ್ ಶೃಂಗ

ಬ್ರಿಕ್ಸ್ ನಾಯಕರ 18ನೇ ಶೃಂಗಸಭೆ ಸೆ.12 ಮತ್ತು 13ರಂದು ಭಾರತದ ಆತಿಥ್ಯದಲ್ಲಿ ನಡೆಯಲಿದೆ. ಜಾಗತಿಕ ಭದ್ರತಾ ಸವಾಲುಗಳು, ಆರ್ಥಿಕ ಸಹಯೋಗ, ವ್ಯಾಪಾರ ವಹಿವಾಟು ಪಾಲುದಾರಿಕೆ ಮತ್ತು ಬಹುಧ್ರುವೀಯ ಜಾಗತಿಕ ವ್ಯವಸ್ಥೆಯನ್ನು ಬಲಗೊಳಿಸುವುದು ಇತ್ಯಾದಿ ವಿಚಾರಗಳ ಬಗ್ಗೆ ದಿಲ್ಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆ-2026ರಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ. ಶೃಂಗದಲ್ಲಿ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುಎಇ, ಸೌದಿ ಅರೇಬಿಯಾ ಮತ್ತು ಇಂಡೋನೇಷ್ಯಾ ನಾಯಕರು ಭಾಗವಹಿಸಲಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

19-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	430 - 465
ಚೋಲ್ ಅಡಿಕೆ	:	515 - 540
ಡಬಲ್ ಚೋಲ್	:	515 - 540
ಹೊಸ ಪಟೋರ	:	345 - 395
ಹಳೆ ಪಟೋರ	:	365 - 395
ಹೊಸ ಉಳ್ಳಿ	:	140 - 295
ಹಳೆ ಉಳ್ಳಿ	:	130 - 295
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	260 - 290
ಹಳೆ ಕರಿಗೋಟು	:	260 - 290
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	256.00
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	151.00
ಸ್ಕ್ರಾಪ್ 2	-	140.00

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಬಂಟ್ವಾಳ
ಕ್ರಿಮಿಸಿ : 231/2025
ಇವರೊಳಗೆ;
ಲೀಲಾವತಿ ಮತ್ತು ಇತರರು ...ಅರ್ಜಿದಾರರು
ಮತ್ತು
ತಹಶೀಲ್ದಾರರು, ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಸಜಿಪಮೂಡ ಗ್ರಾಮದ ಕುಕ್ಕುದಕಟ್ಟೆ ಎಂಬಲ್ಲಿ ವಾಸವಾಗಿರುವ ದಿ। ಸುಬ್ಬು ಮೂಲ್ಯ ರವರ ಮಗ **ಕೋಟಿ ಮೂಲ್ಯ** ಇವರು ದಿನಾಂಕ 04-11-1949 ರಂದು ಮೃತಪಟ್ಟಿದ್ದು, ಅವರ ಮರಣವನ್ನು ಮರಣ ನೋಂದವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ **ದಿನಾಂಕ: 23.06.2026 ರಂದು ಬೆಳಿಗ್ಗೆ 11 ಗಂಟೆಗೆ** ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 25ನೇ ಏಪ್ರಿಲ್ 2026 ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಜೆ.ಎಮ್.ಎಫ್.ಸಿ. ಬಂಟ್ವಾಳ
ಸಹಿ/- ದೀಪಕ್ ಪೆರಾಜೆ
ವಕೀಲರು , ಬಂಟ್ವಾಳ

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಬಂಟ್ವಾಳ
ಕ್ರಿಮಿಸಿ : 234/2025
ಇವರೊಳಗೆ;
ಲೀಲಾವತಿ ಮತ್ತು ಇತರರು ...ಅರ್ಜಿದಾರರು
ಮತ್ತು
ತಹಶೀಲ್ದಾರರು, ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಸಜಿಪಮೂಡ ಗ್ರಾಮದ ಕುಕ್ಕುದಕಟ್ಟೆ ಎಂಬಲ್ಲಿ ವಾಸವಾಗಿರುವ ದಿ। ತಿಮ್ಮಪ್ಪ ಮೂಲ್ಯ ರವರ ಮಗ **ಸೇಸು ಮೂಲ್ಯ** ಇವರು ದಿನಾಂಕ 03-05-1937ರಂದು ಮೃತಪಟ್ಟಿದ್ದು, ಅವರ ಮರಣವನ್ನು ಮರಣ ನೋಂದವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ **ದಿನಾಂಕ: 23.06.2026 ರಂದು ಬೆಳಿಗ್ಗೆ 11 ಗಂಟೆಗೆ** ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 25ನೇ ಏಪ್ರಿಲ್ 2026 ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಜೆ.ಎಮ್.ಎಫ್.ಸಿ. ಬಂಟ್ವಾಳ
ಸಹಿ/- ದೀಪಕ್ ಪೆರಾಜೆ
ವಕೀಲರು , ಬಂಟ್ವಾಳ

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಬಂಟ್ವಾಳ
ಕ್ರಿಮಿಸಿ : 230/2025
ಇವರೊಳಗೆ;
ಲೀಲಾವತಿ ಮತ್ತು ಇತರರು ...ಅರ್ಜಿದಾರರು
ಮತ್ತು
ತಹಶೀಲ್ದಾರರು, ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಸಜಿಪಮೂಡ ಗ್ರಾಮದ ಕುಕ್ಕುದಕಟ್ಟೆ ಎಂಬಲ್ಲಿ ವಾಸವಾಗಿರುವ ದಿ। ಸೇಸು ಮೂಲ್ಯ ರವರ ಪತ್ನಿ **ದಾರಮ್ಮ** ಇವರು ದಿನಾಂಕ 08-01-1942 ರಂದು ಮೃತಪಟ್ಟಿದ್ದು, ಅವರ ಮರಣವನ್ನು ಮರಣ ನೋಂದವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ **ದಿನಾಂಕ: 23.06.2026 ರಂದು ಬೆಳಿಗ್ಗೆ 11 ಗಂಟೆಗೆ** ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 25ನೇ ಏಪ್ರಿಲ್ 2026 ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಜೆ.ಎಮ್.ಎಫ್.ಸಿ. ಬಂಟ್ವಾಳ
ಸಹಿ/- ದೀಪಕ್ ಪೆರಾಜೆ
ವಕೀಲರು , ಬಂಟ್ವಾಳ

ಕೋಟೆಕಾರು ಪಟ್ಟಣ ಪಂಚಾಯತ್

ಅಂಚೆ: ಕೋಟೆಕಾರು–575022, ಉಳ್ಳಾಲ ತಾಲೂಕು, (ದ.ಕ)
ದೂರವಾಣಿ: 0824–2466693 Email: co.kotekar@gmail.com
ನಂ/ಕೊಪಪಂ/1/ಸಿಆರ್/54/2026–27 ದಿನಾಂಕ: 18.05.2026

ಕೋಟೇಷನ್ ಪ್ರಕಟಣೆ

ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಂಗ್ರಹಿಸಿದ ಹಾಗೂ ಇತರ ಕಸದ ರಾಶಿಗಳಲ್ಲಿನ ಕಸವನ್ನು ತೆಗೆದು ವಿಂಗಡಿಸಲಾಗದ ತ್ಯಾಜ್ಯ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರೆ ಕಡೆ ಸ್ವಂತ: ಜಮೀನಿಗೆ ಸಾಗಿಸಿ ಸದ್ರಿ ಸ್ಥಳವನ್ನು ಸ್ವಚ್ಛಗೊಳಿಸುವ ಬಗ್ಗೆ ಅವಶ್ಯವಿರುವ ಸ್ವಚ್ಛತಾ ಗುತ್ತಿಗೆದಾರರಿಂದ ಕೋಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಕೋಟೇಷನ್ ಫಾರ್ಮು ಬೆಲೆ ರೂ. 500/– ಕೋಟೇಷನ್ ಫಾರ್ಮುಗಳಿಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಲು ಕೊನೆ ದಿನಾಂಕ: 25.06.2026 ರಂದು ಅಪರಾಹ್ನ ಗಂಟೆ 1.30 ರೊಳಗೆ ಭರ್ತಿ ಮಾಡಿದ ಕೋಟೇಷನ್ ಫಾರ್ಮುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 26.05.2026 ಅಪರಾಹ್ನ ಗಂಟೆ 4.00ಕ್ಕೆ ಮುಖ್ಯಾಧಿಕಾರಿ, ಕೋಟೆಕಾರು ಪಟ್ಟಣ ಪಂಚಾಯತ್ ಇವರಿಗೆ ಸಲ್ಲಿಸಬಹುದು. ಸ್ವೀಕೃತವಾದ ಕೋಟೇಷನ್‌ಗಳನ್ನು ಅದೇ ದಿನ ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು. ಆಸಕ್ತರು ತಮ್ಮ ಕೋಟೇಷನ್‌ಗಳನ್ನು ದಾಖಲೆಗಳೊಂದಿಗೆ ನಿಗಧಿತ ಸಮಯದೊಳಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಶರ್ತಗಳನ್ನು ಮತ್ತು ಇತರ ಮಾಹಿತಿಯನ್ನು ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು.

ಸಹಿ/– ಮುಖ್ಯಾಧಿಕಾರಿ,
ಕೋಟೆಕಾರು ಪಟ್ಟಣ ಪಂಚಾಯತ್

DIPR/DK/KSMCA/235/26-27 dt: 19.05.2026

ಸಾರ್ವಜನಿಕರ ಅವಗಾಹನೆಗೆ

ಮಂಗಳೂರು ತಾಲೂಕು ಕಾಟಿಪಳ್ಳ ಗ್ರಾಮದ ಸ.ನಂ.61/1 ವಿಸ್ತೀರ್ಣ 0.56 ಎಕ್ರೆ ನನ್ನ ಮಾಲೀಕತ್ವಕ್ಕೆ ಒಳಪಟ್ಟ ಹಾಗೂ ನನ್ನ ಸಂಪೂರ್ಣ ಸ್ವಾಧೀನಾನುಭವದಲ್ಲಿರುವ ಜಮೀನಾಗಿದ್ದು, ಸದ್ರಿ ಜಮೀನಿಗೆ ಅಕ್ರಮ ಪ್ರವೇಶ ಮಾಡದಂತೆ ಹಾಗೂ ನನ್ನ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆಯುಂಟು ಮಾಡದಂತೆ ಕೆ.ಜೆ.ಗ್ಲಾಡ್‌ಸನ್ ಬಿನ್. ಜಾನ್‌ಸನ್ ಕೆ.ಎಲ್. ಎಂಬವವರ ವಿರುದ್ಧ ಮಂಗಳೂರಿನ ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಓ.ಎಸ್.ನಂ.1053/2022 ರಂತೆ ನಾನು ದಾವೆ ಹೂಡಿದ್ದು ಸದ್ರಿ ದಾವೆಯಲ್ಲಿ ಪ್ರತಿವಾದಿ ಕೆ.ಜೆ.ಗ್ಲಾಡ್‌ಸನ್ ಬಿನ್. ಜಾನ್‌ಸನ್ ಕೆ.ಎಲ್.ರವರು ಮೇಲ್ಕಾಣಿಸಿದ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ನನ್ನ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆಯುಂಟು ಮಾಡದಂತೆ ಮಾನ್ಯ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆ ವಿಧಿಸಿದ್ದು, ಸದ್ರಿ ಆದೇಶ ಇನ್ನೂ ಊರ್ಜಿತ ಇರುತ್ತದೆ. ಹೀಗಿರುವಲ್ಲಿ ಸದ್ರಿ ದಾವೆಯ ಪ್ರತಿವಾದಿ ಕೆ.ಜೆ.ಗ್ಲಾಡ್‌ಸನ್ ಬಿನ್. ಜಾನ್‌ಸನ್ ಕೆ.ಎಲ್.ರವರು ದಾವಾ ಜಮೀನನ್ನು ತನ್ನ ಜಮೀನೆಂದು ಸುಳ್ಳು ಪ್ರಚಾರ ಮಾಡಿಕೊಂಡು ಹಾಗೂ ಮಾನ್ಯ ನ್ಯಾಯಾಲಯದಲ್ಲಿರುವ ದಾವೆಯ ವಿಷಯವನ್ನು ಮುಚ್ಚಿಟ್ಟು ದಾವಾ ಜಮೀನನ್ನು ಮಾರಾಟ ಮಾಡುವ ಹುನ್ನಾರದಲ್ಲಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ನಾನು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿ ಕೆ.ಜೆ.ಗ್ಲಾಡ್‌ಸನ್ ಬಿನ್. ಜಾನ್‌ಸನ್ ಕೆ.ಎಲ್. ಎಂಬವರೊಂದಿಗೆ ದಾವಾ ಜಮೀನಿನ ಬಗ್ಗೆ ಯಾರಾದರೂ ವ್ಯವಹರಿಸಿದ್ದೇ ಆದಲ್ಲಿ ಆದರಿಂದ ಮುಂದಾಗುವ ಕಷ್ಟನಷ್ಟಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ಮಂಗಳೂರು, ದ.ಕ. ಸಹಿ/-
15-05-2026 (ಶ್ರೀಮತಿ ವಾಯ್ಲೆಟ್ ಡ'ಸೋಜ)

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ

ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560 001. ದೂರವಾಣಿ: 080–22220227
(www.kpwd.gov.in)
ಸಂಖ್ಯೆ: 02/2026–27 ದಿನಾಂಕ:18.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೊಸಸಿಂಗ್ ಶುಲ್ಕ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. (1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ:18.05.2026 ರಿಂದ 25.05.2026 ಸಂಜೆ 5.30 ಗಂಟೆವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:25.05.2026 ಸಂಜೆ 5.30 ಗಂಟೆವರೆಗೆ.** (3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ **ದಿನಾಂಕ: 27.05.2026 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್

ವಾಸಾಸಂಇ/ಉನಿ–ಸಿ.ಪಿ/727/ಕೆಎಸ್‌ಎಂಸಿಎ/2026–27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ನಿಡಗುಂದಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ–ವಿ/ಉಗ್ರಾಣ ಶಾಖೆ/2026–27/181
ದಿನಾಂಕ:16.05.2026

ಇನ್‌ಫಾರ್ಮೇಶನ್ ಕೊಟೇಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ. ವಿಭಾಗ ಆಲಮಟ್ಟಿ ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ನೊಂದಾಯಿತ ಫರ್ಮ್ / ಅಥರಾಯಿಸ್ಡ್ ಏಜೆನ್ಸಿರವರಿಂದ **"quotations** for competitive rates from Reputed Firm/Authorized Agencies for **"Replacement of Drive End Bearing and Non Drive Bearing of Crompton Greaves Make of 1800 KW and Supplying, Installation and Commissioning of Soft Starter Display of Jayshree Make at Almatti Left Bank Canal Headwork and Servicing and Overhauling of Non-Return Valve of 1400 mm Dia size of KBL make at Chimmalagi Lift Irrigation Scheme Headwork and Supplying and Fixing of 12 Tonne Capacity of size 5.00 meter height Hydraulic Jack with house pipe, adopter and link pin operated by hydraulic pressure, etc at CLIS".** ಕಾಮಗಾರಿಗಾಗಿ ಸ್ಪರ್ಧಾತ್ಮಕ ದರಗಳಿಗಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳಿಗಾಗಿ ಹಾಗೂ ವಿವರವಾದ ಐಟಂಗಳಿಗಾಗಿ ಈ ಕಛೇರಿಯ ಸಮಯದಲ್ಲಿ ಭೇಟಿ ನೀಡಿ ಅಥವಾ ಈ ಕಛೇರಿಯ ಇ–ಮೇಲ್‌ಗೆ ee09albc@gmail.com ಮತ್ತು ದೂರವಾಣಿ ಸಂಖ್ಯೆ: 9035782142 ರ ಮೂಲಕ ತಮ್ಮ ಬೇಡಿಕೆಯನ್ನು **ದಿನಾಂಕ: 22.05.2026** ರೊಳಗಾಗಿ ಸಲ್ಲಿಸಿ ವಿವರಗಳನ್ನು ಪಡೆದುಕೊಳ್ಳಬಹುದು ಹಾಗು ಭರ್ತಿಗೊಳಿಸಿದ ಕೊಟೇಶನ್‌ಗಳನ್ನು **ದಿನಾಂಕ: 25.05.2026 ರಂದು ಸಾಯಂಕಾಲ 5.00 ಘಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸುವದು ಹಾಗು **ದಿನಾಂಕ: 26.05.2026 ರಂದು ಬೆಳಿಗ್ಗೆ 11.00 ಘಂಟೆಗೆ** ಭರ್ತಿಗೊಳಿಸಿದ ಕೊಟೇಶನ್‌ಗಳನ್ನು ವಿಭಾಗ ಕಛೇರಿಯಲ್ಲಿ ತೆರೆಯಲಾಗುವದು. ಸದರಿ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/106/ಕೆಎಸ್‌ಎಂಸಿಎ/2026–27

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಬಂಟ್ವಾಳ
ಕ್ರಿಮಿಸಿ : 233/2025
ಇವರೊಳಗೆ;
ಲೀಲಾವತಿ ಮತ್ತು ಇತರರು ...ಅರ್ಜಿದಾರರು
ಮತ್ತು
ತಹಶೀಲ್ದಾರರು, ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಸಜಿಪಮೂಡ ಗ್ರಾಮದ ಕುಕ್ಕುದಕಟ್ಟೆ ಎಂಬಲ್ಲಿ ವಾಸವಾಗಿರುವ ದಿ। ಕೋಟಿ ಮೂಲ್ಯ ರವರ ಮಗಳು **ಕೂಸ** ಇವರು ದಿನಾಂಕ 14-11-2006ರಂದು ಮೃತಪಟ್ಟಿದ್ದು, ಅವರಮರಣವನ್ನುಮರಣ ನೋಂದವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ **ದಿನಾಂಕ: 23.06.2026 ರಂದು ಬೆಳಿಗ್ಗೆ 11 ಗಂಟೆಗೆ** ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 25ನೇ ಏಪ್ರಿಲ್ 2026 ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಜೆ.ಎಮ್.ಎಫ್.ಸಿ. ಬಂಟ್ವಾಳ
ಸಹಿ/- ದೀಪಕ್ ಪೆರಾಜೆ
ವಕೀಲರು , ಬಂಟ್ವಾಳ

ಕರ್ನಾಟಕ ಸರ್ಕಾರ–ಧಾರ್ಮಿಕ ದತ್ತಿ ಇಲಾಖೆ

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು, ದ.ಕ.

ದೂರವಾಣಿ: 7411534591, 8904905361 ಇ–ಮೇಲ್:kateelkateel@gmail.com
ಕ್ರಮಾಂಕ: ಕದುಪದೇ:ಟೆಂಡರು:ಸಿಆರ್: /2026–2027, ದಿನಾಂಕ: 19.05.2026

ಅಲ್ಪಾವಧಿ ಟೆಂಡರು ಪ್ರಕಟಣೆ (ಕೆಟಿಪಿಪಿ ಮೂಲಕ)

ಶ್ರೀದೇವಳದ ಶೌಚಾಲಯದ ಗುಂಡಿಗಳ ಸ್ಲಜ್ ತೆಗೆದು ತ್ಯಾಜ್ಯ ನೀರನ್ನು ದಿನಾಂಕ 01.06.2026 ರಿಂದ 31.03.2027 ರವರೆಗಿನ ಅವಧಿಯವರೆಗೆ ಸಾಗಿಸುವರೇ ಜಿಎಸ್‌ಟಿ ನೊಂದಾಯಿತ ಟೆಂಡರುದಾರರಿಂದ ಅಲ್ಪಾವಧಿ ಟೆಂಡರು ಕರೆಯಲಾಗಿದೆ. ಟೆಂಡರುಗಳನ್ನು ದಿನಾಂಕ 28.05.2026ರಂದು ಸಂಜೆ 4.00 ಗಂಟೆಯ ಒಳಗಾಗಿ ಸಲ್ಲಿಸತಕ್ಕದ್ದು.

ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಟಿಪಿಪಿ ವೆಬ್ ಸೈಟ್ : www.kppp.karnataka.gov.in ಮೂಲಕ ಪಡೆಯುವುದು.

ಸಹಿ/– ಆಸ್ರಣ್ಣ ಅನುವಂಶಿಕ ಮೊಕ್ತೇಸರ
ಸಹಿ/– ಕೊಡೆತ್ತೂರುಗುತ್ತು ಅನುವಂಶಿಕ ಮೊಕ್ತೇಸರ

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222

ನಂ: ಭಕಾಶಿ/ಇಂ.ವಿಭಾಗ/ಶಾಂ.ಶಾಖೆ/ಮರು ಟೆಂಡರ್/2026–27/93
ದಿನಾಂಕ: 18.05.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ CALL-4 (IFT - 04/2026-27)

Head of Account :- 2705-115

ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ 2026–27 (ದಿನಾಂಕ: 01.04.2026 ರಿಂದ 31.03.2027 ರವರೆಗೆ) ನೇ ಸಾಲಿಗೆ ಆಡಳಿತಾಧಿಕಾರಿಗಳು, ಭದ್ರಾ ಕಾಡಾ, ಶಿವಮೊಗ್ಗ, ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರ್ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ /ಸಿದ್ದಾಪುರ ಮತ್ತು ಕೃಷಿ ಮತ್ತು ಸಹಕಾರ ಉಪ ವಿಭಾಗ, ಭದ್ರಾ ಕಾಡಾ, ಶಿವಮೊಗ್ಗ ಮತ್ತು ಅಧ್ಯಕ್ಷರ ಆಪ್ತ ಶಾಖೆ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಕೆಲವೊಂದು ಹುದ್ದೆಗಳಿಗೆ ಕೊರತೆಯಿರುವ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಮಾನವ ಶಕ್ತಿ ಸಂಸ್ಥೆಯಿಂದ ನೇಮಿಸಿಕೊಳ್ಳುವಲ್ಲಿ ವಿವರವಾದ ಸ್ಪರ್ಧಾತ್ಮಕ ಅಲ್ಪಾವಧಿ ಮರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆಪಿಪಿ–ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 18.05.2026 ರಿಂದ ದಿ: 25.05.2026 ರವರೆಗೆ. 2. ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 25.05.2026 ಸಂಜೆ 5.00 ಗಂಟೆವರೆಗೆ 3. ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 26.05.2026 ಸಂಜೆ 5.30 ಗಂಟೆಗೆ 4. ಆರ್ಥಿಕ ಬಿಡ್ ತೆರೆಯುವ ದಿ: 29.05.2026 ಬೆಳಿಗ್ಗೆ 11.30 ಗಂಟೆಯ ನಂತರ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/84/05/251

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ(ಪರಿಸರ), ಹುಬ್ಬಳ್ಳಿ – 580029.
ನಂ:ಎಚ್.ಡಿ.ಎಂ.ಸಿ/74/2026–27/ ದಿನಾಂಕ: 19–05–2026.

ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ನಿಧಿ ಅನುದಾನದಡಿ ಟ್ರ್ಯಾಕ್ಟರ್ ಕಮ್ ಟ್ರೇಲರ್ ವಾಹನಗಳನ್ನು ಭಾಡಿಗೆ ಆಧಾರದ ಮೇಲೆ ಪೂರೈಸಿಕೊಳ್ಳಲು ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ	ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/SE7009/CALL-3	6553575.00	1,31,071.00	28.05.2026 ಸಮಯ ಸಂಜೆ 4.00 ಗಂಟೆ	30.05.2026 ಸಮಯ ಸಂಜೆ 4.30 ಗಂಟೆ
2	DMA/2025-26/SE7013/CALL-3	5825400.00	1,16,508.00		
3	DMA/2025-26/SE7014/CALL-3	5097225.00	1,01,944.00		
4	DMA/2025-26/SE7015/CALL-3	3640875.00	91,022.00		
5	DMA/2025-26/SE7016/CALL-3	6553575.00	1,31,071.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ದಿನಾಂಕ: 20.05.2026 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು(ಪರಿಸರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಸಂ.ಇ/ಧಾರವಾಡ/209/ದೇಶಪಾಂಡೆಪಬ್ಲಿಸಿಟಿ/2026–27

ಸೋಮೇಶ್ವರ ಪುರಸಭೆ ದ.ಕ

ನಂಬ್ರ:ಸೋ.ಪು.ಸ/ಆ.ಶಾ/ಸಿಆರ್01/20/2026–27 ದಿನಾಂಕ : 19–05–2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಸೋಮೇಶ್ವರ ಪುರಸಭೆಯ 2026–27ನೇ ಸಾಲಿನ ಸ್ವಚ್ಛಭಾರತ್ ಮಿಷನ್ 2.0ರ ಯೋಜನೆಯಡಿಯಲ್ಲಿ ಈ ಕೆಳಗಿನ ಕಾಮಗಾರಿಗೆ ಟೆಂಡರ್‌ನ್ನು ಮುಖ್ಯಾಧಿಕಾರಿ, ಸೋಮೇಶ್ವರ ಪುರಸಭೆ, ಇವರಿಂದ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999 ಮತ್ತು 2000ರ ಅನ್ವಯ ದರಗಳನ್ನು ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್ KW1 ಪ್ರಕಾರ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರಿನ ಸಂಪೂರ್ಣ ವಿವರಗಳನ್ನು ಪುರಸಭೆಯ ವೆಬ್‌ಸೈಟ್ www.someshwaratown.mrc.Gov.in ನಲ್ಲಿ www.kppp.karnataka.gov.in ಹಾಗೂ ಸೋಮೇಶ್ವರ ಪುರಸಭೆ ಕಚೇರಿ ನಾಮಫಲಕದಲ್ಲಿ ನೋಡಬಹುದು. ಇನ್ನು ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಪುರಸಭಾ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು. **ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–05–2026 ಅಪರಾಹ್ನ 4.00 ಗಂಟೆಗೆ. ಟೆಂಡರುಗಳನ್ನು ತೆರೆಯುವ ದಿನಾಂಕ : 01–06–2026 ಪೂರ್ವಾಹ್ನ 10.00 ಗಂಟೆಗೆ**

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇಎಂಡಿ ಮೊತ್ತ	ಗುತ್ತಿಗೆದಾರರ ದರ್ಜೆ	ಕಾಲಾವಧಿ
1	ಸೋಮೇಶ್ವರ ಪುರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವ ಕಾಮಗಾರಿ. DMA/2026-27/BD/WORK_INDENT57830	10.00	25000/–	4ನೇ ದರ್ಜೆ ಮೇಲ್ಪಟ್ಟು	3 ತಿಂಗಳು

ಸಹಿ/– ಅಧ್ಯಕ್ಷರು, ಸೋಮೇಶ್ವರ ಪುರಸಭೆ, ದ.ಕ.
ಸಹಿ/– ಮುಖ್ಯಾಧಿಕಾರಿ, ಸೋಮೇಶ್ವರ ಪುರಸಭೆ, ದ.ಕ.

ಪುರಸಭೆ ಕಾರ್ಯಾಲಯ ಚಿಂಚೋಳಿ, ಜಿ–ಕಲಬುರಗಿ

E mail Id:- itstaff_ulb_chincholi@yahoo.in Phone no:08475-273058
ಸಂ:ಪುಸಚಿರ/ತಾ.ಶಾಖೆ/ 02/ 2026–27 ದಿನಾಂಕ: 19.05.2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿಯವರಿಂದ 2025–26ನೇ ಸಾಲಿನ ಮತ್ತು 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ, 15ನೇ ಹಣಕಾಸು, ಕುಡಿಯುವ ನೀರು ಹಾಗೂ ಪುರಸಭೆ ನಿಧಿಯ ಹಣಕಾಸು ಅನುದಾನದ ಯೋಜನೆ ಅಡಿಯಲ್ಲಿ 1999–2000ರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಟಿ.ಪಿ) ಆಕ್ಟರಂತೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು ಅರ್ಹ ಆಸಕ್ತಿಯುಳ್ಳ ನವೀಕರಿಸಿ/ ನೊಂದಾಯಿತ ಗುತ್ತಿಗೆದಾರರಿಗೆ ಕೆ.ಡಬ್ಲ್ಯೂ–1ರನ್ವಯ ಹಾಗೂ ಕೆ.ಎಸ್–2ರ ಅನ್ವಯ https://kppp.karnataka.gov.in/ ನಲ್ಲಿ ಆನ್–ಲೈನ್ ಮುಖಾಂತರ ಭಾಗವಹಿಸಲು ತಿಳಿಸಿದೆ.

1) ಕಾಮಗಾರಿ /ಸರಕು ಸೇವೆಯ ವಿವರ : 1. DMA/2025-26/SE5869/CALL-2, 2. DMA/2026-27/OW/WORK_INDENT57987 (CAT-1 Reserved), 3.DMA/2026-27/OW/WORK_INDENT57988, 4. DMA/2026-27/OW/WORK_INDENT57636(CAT-2A Reserved), 5. DMA/2025-26/ OW/WORK_INDENT 57623(CAT-2A Reserved), 6. DMA/2026-27/OW/WORK_INDENT57614, 7. DMA/2026-27/OW/WORK_INDENT57613 (SC Reserved), 8. DMA/2025-26/OW/WORK_INDENT55803, 9. DMA/2025-26/OW/WORK_INDENT49208/CALL-2, 10.DMA/2025-26/OW/WORK_INDENT49204/CALL-2, 11. DMA/2025-26/OW/WORK_INDENT49201/CALL-2 (CAT-2A Reserved), 12. DMA/2025-26/OW/WORK_INDENT49098/CALL-2, 13. DMA/2025-26/OW/WORK_INDENT49103/CALL-2(CAT-2A Reserved), 14.DMA/2025-26/OW/WORK_INDENT49205/CALL-2(CAT-2A Reserved), 15. DMA/2026-27/OW/WORK_INDENT 58581, 2) ಕಾಮಗಾರಿ / ಸರಕು ಸೇವೆಯ ಟೆಂಡರ್ ಮೊತ್ತ: **0.40 ಲಕ್ಷಗಳಿಂದ 52.00 ಲಕ್ಷಗಳವರೆಗೆ,** 3) ಗುತ್ತಿಗೆದಾರರ ಅರ್ಹತೆ : ನೋಂದಾಯಿತ ಅರ್ಹವುಳ್ಳ ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರು, ವಿದ್ಯುತ್ ಗುತ್ತಿಗೆದಾರರು ಹಾಗೂ ಮ್ಯಾನಪವರ್ ಏಜೆನ್ಸಿ ಗುತ್ತಿಗೆದಾರರು, 4) ಕಾಮಗಾರಿಗಳ ಟೆಂಡರ್ ಮೊತ್ತ : **0.40 ಲಕ್ಷಗಳಿಂದ 52.00 ಲಕ್ಷಗಳವರೆಗೆ,** 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಮ್.ಡಿ ಮೊತ್ತ : ಟೆಂಡರ ಅರ್ಜಿಯ ಶುಲ್ಕ ಇ.ಪ್ರೋಕ್ಯೂರ್‌ಮೆಂಟನಂತೆ ಹಾಗೂ ಕಾಮಗಾರಿಗಳ ಇ.ಎಮ್.ಡಿ ರೂ. 1.00ಲಕ್ಷ ದಿಂದ 20ಲಕ್ಷಗಳವರೆಗೆ 2.5% ರಂತೆ 20.00ಲಕ್ಷ ದಿಂದ 50.00ಲಕ್ಷಗಳವರೆಗೆ ಇ.ಎಮ್.ಡಿ 2% ರಂತೆ, 50.00 ಲಕ್ಷಗಳಿಂದ 100.00 ಲಕ್ಷಗಳ ವರೆಗೆ 1.50% ರಂತೆ ಹಾಗೂ ಪ.ಜಾ ಮತ್ತು ಪ.ಪ ರವರಿಗೆ ರೂ. 1.00 ಲಕ್ಷಗೀಂದ ರೂ. 20.00 ಲಕ್ಷಗಳ ವರೆಗೆ 1.25% ರಂತೆ ಹಣ ಭರಿಸುವುದು. 6) ಟೆಂಡರ್ ಆನ್–ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಕೊನೆ ದಿನಾಂಕ: **27.05.2026ರಂದು ಸಾಯಂಕಾಲ 17.30ಕ್ಕೆ,** 8) ತಾಂತ್ರೀಕ ಮತ್ತು ಆರ್ಥೀಕ ಬಿಡ್ ತೆರೆಯುವ ದಿನಾಂಕ : **29.05.2026ರಂದು ಮುಂಜಾನೆ 11.30ಕ್ಕೆ,** 9) ಆರ್ಥೀಕ ಬಿಡ್ ತೆರೆಯುವ ದಿನಾಂಕ : **08.06.2026ರಂದು ಮುಂಜಾನೆ 11:30ಕ್ಕೆ,** 10) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ ಹಾಗೂ ದೂರವಾಣಿ ಸಂಖ್ಯೆ : ಬೀದರ ರಸ್ತೆ ಹತ್ತಿರ, ಪುರಸಭೆ ಕಾರ್ಯಾಲಯ ಚಿಂಚೋಳಿ 08475–273058, 11) ಅಂತರ್ಜಾಲ ತಾಣದ ವಿಳಾಸ: www.chincholitown.mrc.gov.in

ಸಹಿ/– ಆಡಳಿತಾಧಿಕಾರಿ, ಪುರಸಭೆ ಚಿಂಚೋಳಿ
ಸಹಿ/– ಮುಖ್ಯಾಧಿಕಾರಿ, ಪುರಸಭೆ ಚಿಂಚೋಳಿ

ವಾ.ಸಾ.ಸಂ.ಇ/ಕಲಬುರಗಿ/140/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778
THESE WORKS ARE CATAGEORY WISE CONTRACTORS
ಲೋಇ/ರಾವಿ/ತಾಂಶಾ–4/ಟೆಂಪ್ರ/2026–27/688 ದಿ: 13–05–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)

1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ–4/ಟೆಂಪ್ರ/2026–27/688 ದಿನಾಂಕ: 13–05–2026 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 31 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 327346.40 ಗರಿಷ್ಠ ರೂ. 83193198.49 4) **ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 8200.00 ಗರಿಷ್ಠ ರೂ. 1248000.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 1 (ಒಂದು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 27/05/2026 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:** 29/05/2026 ಸಂಜೆ 4.30 ಗಂಟೆಯವರೆಗೆ

ಕಾರಣಾಂತರಗಳಿಂದ ತಿಳಿಯಪಡಿಸಿದ ಟೆಂಡರ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ ಆಹ್ವಾನಿಸಿದಲ್ಲಿ ಗುತ್ತೆದಾರರು ಕೆ.ಪಿ.ಪಿ ಪೋರ್ಟನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಯಿರಾತು ಹೊರಡಿಸಲಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

DIP/RCR/72/KSMCA/74/2026-27

ಕರ್ನಾಟಕ ಸರ್ಕಾರ
(Govt. of Karnataka)

ಕಾವೇರಿ ನೀರಾವರಿ ನಿಗಮ ನಿಯಮಿತ, ಜಲಸಂಪನ್ಮೂಲ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ, ಹಾಸನ ಜಿಲ್ಲೆ–573211
Office of the Executive Engineer, Hemavathy Right Bank Canal, Division, Holenarasipura, Hassan District-573211
ದೂ.: 08175-273238 e-mail: eehrbchnp@gmail.com
Phone: 08175-273238

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27 ದಿನಾಂಕ: 18.05.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಅರ್ಹ ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ '3' ಮತ್ತು ಮೇಲ್ಪಟ್ಟ ದರ್ಜೆಯಲ್ಲಿ ನೊಂದಣಿ ಹೊಂದಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯಿದೆ KW-3 ಅನ್ವಯ ಐಟಂವಾರು ಟೆಂಡರ್‌ಗಳನ್ನು https://kppp.karnataka.gov.in Plat form ನಲ್ಲಿ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು 2.Karnataka Public Procurement portal (https://kppp.karnataka.gov.in) ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ ದಿನಾಂಕ:18.05.2026 ರಿಂದ 25.05.2026 ಸಂಜೆ 4.00 ಘಂಟೆಯವರೆಗೆ 3.ಮೊದಲನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ:27.05.2026 ರ 11.00 ರ ನಂತರ 4.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ:29.05.2026 ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ. 5.ಕಾಮಗಾರಿಗಳ ಸಂಖ್ಯೆ: 02 ಕಾಮಗಾರಿ 6.ಕೆಲಸದ ರೀತಿ: ಕಟ್ಟಡ ಕಾಮಗಾರಿ 7.ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ: ತಲಾ ರೂ. 90.00 ಲಕ್ಷಗಳು 8.ಇ. ಎಂ. ಡಿ.: The prescribed format EMD declaration, as per Govt., order fd675exp-12/2020 Bangalore dated: 22.12.2020 9.ಗುತ್ತಿಗೆದಾರರ ವರ್ಗ : III ಮತ್ತು ಮೇಲ್ಪಟ್ಟು ಸೂಚನೆ: 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು Karnataka Public Procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಹೇ.ಬ.ನಾಲಾ ವಿಭಾಗ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/147/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ಗದಗ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
Phone No: 08372-238782 Fax No. 08372-237268 E.Mail-eepwdgad@gmail.com
ನಂ:ಕಾನಿಇಂಗ:ಲೋಇ:ಪಿಬಿ–1 2 :ವಿವಿಧ: 2026–27/592 ದಿನಾಂಕ: 19/05/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **420.00 ಲಕ್ಷ** ಮೊತ್ತದಲ್ಲಿ ಒಟ್ಟು 04 ಕಾಮಗಾರಿಗೆ (ಕನಿಷ್ಟ ಮೊತ್ತ **ರೂ: 10.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 300.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.Karnataka.gov.in/** ದಲ್ಲಿ ನೋಡಿಕೊಳ್ಳಬಹುದು.

"Work Indent No:- Part-1" 32781-Cat-I/Call-2
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:–25–05–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:–26–05–2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:–27–05–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:–29–05–2026.**

"Work Indent No:- Part-2" 36008.
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:–02–06–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:–03–06–2026 ಮಧ್ಯಾಹ್ನ 4.00 ಗಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:–04–06–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:–05–06–2026**

"Work Indent No:- Part-3" 23872-SC, 35774,
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:–06–06–2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:–08–06–2026 ಮಧ್ಯಾಹ್ನ 4.00 ಘಂಟೆಯ** ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:–09–06–2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:–10–06–2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ

ವಾ.ಸಾ.ಸಂ.ಇ/ಗದಗ/74/ದೇಶಪಾಂಡೆಪಬ್ಲಿಸಿಟಿ/2026–27

ಕಿರುಸುದ್ದಿ

ಮಂಗಳೂರು ವಿವಿಯಲ್ಲಿ ನಾಳೆ ಪ್ರೊ.ಬಿ.ಎ. ವಿವೇಕ ರೈ ಎಂಬತ್ತರ ಸಂಭ್ರಮ

• **ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಇವರ ವತಿಯಿಂದ ಪಂಪ ಪ್ರಶಸ್ತಿ ಪುರಸ್ಕೃತ ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಬಿ. ಎ. ವಿವೇಕ ರೈ ಅವರಿಗೆ ಎಂಬತ್ತು ವರ್ಷ ತುಂಬಿದ ಸಂಭ್ರಮದ ಪ್ರಯುಕ್ತ ಅವರ ವಿದ್ಯಾರ್ಥಿಗಳಾದ ಕಲಾವಿದರಿಂದ ಕಲಾಭಿವಂದನೆ ಮತ್ತು ತಾಳಮದ್ದಲೆ ಕಾರ್ಯಕ್ರಮವು 21 ರಂದು ಅಪರಾಹ್ನ 2.30 ರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಯು.ಆರ್.ರಾವ್ ಸಭಾಂಗಣದಲ್ಲಿ ನಡೆಯಲಿದೆ. ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದು, ಯಕ್ಷಗಾನ ಅರ್ಥಧಾರಿ ರಾಧಾಕೃಷ್ಣ ಕಲ್ಚಾರ್ ಅವರು ಅಭಿವಂದನಾ ನುಡಿಗಳನ್ನಾಡಲಿದ್ದಾರೆ. ಬಳಿಕ ನಡೆಯುವ ಭೀಷ್ಮಾರ್ಜುನ ಕಾಳಗ ತಾಳಮದ್ದಳೆಯಲ್ಲಿ ಭಾಗವತರಾಗಿ ಸುಬ್ರಾಯ ಸಂಪಾಜೆ, ಚೆಂಡೆ / ಮದ್ದಲೆಯಲ್ಲಿ ಪದ್ಯಾಣ ಶಂಕರನಾರಾಯಣ ಭಟ್, ಮುರಳೀಧರ ಕಲ್ಲೂರಾಯ, ಅರ್ಥಧಾರಿಗಳಾಗಿ ಗಣರಾಜ ಕುಂಬಳೆ, ರಾಧಾಕೃಷ್ಣ ಕಲ್ಚಾರ್, ನಾಗವೇಣಿ ಮಂಚಿ ಭಾಗವಹಿಸಲಿದ್ದಾರೆ ಎಂದು ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಧನಂಜಯ ಕುಂಬ್ಳೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾದಕ ವಸ್ತು ಸೇವನೆ: ಐವರ ಬಂಧನ

• **ಮಂಗಳೂರು:** ಮಾದಕ ವಸ್ತು ಸೇವನೆಯ ಮೂರು ಪ್ರತ್ಯೇಕ ಪ್ರಕರಣದಲ್ಲಿ ಐವರನ್ನು ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಉರ್ವಸ್ಟೋರ್ ನ ಹೇಮಂತ್ (25), ಮಲ್ಲೂರು ನಿವಾಸಿ ಮುಹಮ್ಮದ್ ಅವುಫ್ (18), ನೆಂಗಾನ ನೆತ್ತಿಲಪದವಿನ ಮೊಹಮ್ಮದ್ ಅನ್ವಾರ್ (36), ಸಜಿಪ ನಡು ನಿವಾಸಿ ಮುನೀರ್ ಅಬ್ದುಲ್ ರಹಿಮಾನ್ (43) ಹಾಗೂ ಉಳ್ಳಾಲ ಮಿಲ್ಲತ್ ನಗರ ನಿವಾಸಿ ಮೊಹ್ಸಿನ್ ಬಾವಾ (58) ಬಂಧಿತ ಆರೋಪಿಗಳು. ಉರ್ವ ಠಾಣೆ ಪೊಲೀಸರು ಗಸ್ತಿನಲ್ಲಿರುವಾಗ ದಂಬೆಲ್ ನದಿ ಕಿನಾರೆ ಬಳಿ ಯುವಕನೊಬ್ಬ ಪೊಲೀಸರನ್ನು ನೋಡಿ ಕೈಯಲ್ಲಿದ್ದ ಸಿಗರೆಟ್ ಚರಂಡಿಗೆ ಬಿಸಾಡಿದ್ದಾನೆ. ಆತನನ್ನು ವಿಚಾರಿಸಿದಾಗ ತನ್ನ ಹೆಸರು ಹೇಮಂತ್ ಎಂದು ತಿಳಿಸಿದ್ದು, ಮಾತು ತೊದಲುತ್ತಿದ್ದು ಬಾಯಿಯಿಂದ ಮಾದಕ ವಸ್ತು ಸೇವನೆ ಮಾಡಿದ ಘಾಟು ವಾಸನೆ ಬಂದಿದೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವನೆ ದೃಢಪಟ್ಟಿದೆ. ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಮಾಂತರ ಠಾಣೆ ಸಿಬ್ಬಂದಿ ಗಸ್ತಿನಲ್ಲಿರುವಾಗ ಮಲ್ಲೂರು ಬಸ್ ತಂಗುದಾಣದ ಬಳಿ ಮಾದಕ ವಸ್ತು ಸೇವನೆ ಮಾಡಿದಂತೆ ಕಂಡು ಬಂದ ಮುಹಮ್ಮದ್ ಅವುಫ್‌ನನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಬಳಿಕ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತು ಸೇವನೆ ದೃಢಪಟ್ಟಿದೆ. ಆರೋಪಿ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುರತ್ಕಲ್ ಪೊಲೀಸರು ಗಸ್ತಿನಲ್ಲಿರುವಾಗ ಮಲ್ಲಮಾರ್ ಬೀಚ್‌ನಲ್ಲಿ 3 ಮಂದಿ ಸಿಗರೇಟ್ ಸೇದುತ್ತಾ ಅನುಮಾನಾಸ್ಪದ ರೀತಿಯಲ್ಲಿ ವರ್ತಿಸುತ್ತಿರುವುದು ಕಂಡು ಬಂದಿದೆ. ವಿಚಾರಿಸಿದಾಗ ಮೊಹಮ್ಮದ್ ಅನ್ವಾರ್, ಮುನೀರ್ ಅಬ್ದುಲ್ ರಹಿಮಾನ್, ಮೊಹ್ಸಿನ್ ಬಾವಾ ಎಂದು ಹೆಸರು ತಿಳಿಸಿ, ಸಿಗರೇಟಿಗೆ ಗಾಂಜಾ ಬೆರೆಸಿ ಸೇದಿರುವುದಾಗಿ ಒಪ್ಪಿಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ಇದು ದೃಢಪಟ್ಟಿದ್ದು, ಸುರತ್ಕಲ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಆನೆ ಶಿಬಿರದ ದುರಂತಕ್ಕೆ ಅರಣ್ಯಾಧಿಕಾರಿಗಳು, ಸಿಬ್ಬಂದಿಗಳೇ ಹೊಣೆ: ಕರ್ನಾಟಕ ಕಾವಲುಪಡೆ

• **ಕುಶಾಲನಗರ:** ದುಬಾರೆ ಆನೆ ಶಿಬಿರದಲ್ಲಿ ಸೋಮವಾರ ನಡೆದ ಘಟನೆಗೆ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿಗಳೇ ಹೊಣೆಗಾರರಾಗಿದ್ದು ಅವರ ಮೇಲೆ ಸೂಕ್ತ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಕಾವಲು ಪಡೆ ಜಿಲ್ಲಾಧ್ಯಕ್ಷ ಎಂ. ಕೃಷ್ಣ ಒತ್ತಾಯಿಸಿದ್ದಾರೆ.

ಕುಶಾಲನಗರದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಘಟನೆ ತುಂಬಾ ದುಃಖಕರ ವಿಚಾರ. ಪ್ರವಾಸಿಗರಿಗೆ ಸೂಕ್ತ ರಕ್ಷಣಾ ವ್ಯವಸ್ಥೆ ಕಲ್ಪಿಸುವಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ನಿರ್ಲಕ್ಷ್ಯ ತಾಳಿದ್ದಾರೆ ಎಂದು ಆರೋಪಿಸಿ ದರಲ್ಲದೆ, ಪ್ರವಾಸಿಗರಿಂದ ಆನೆಗೆ ಸ್ನಾನ ಮಾಡಿಸುವುದು, ಆನೆಗೆ ಆಹಾರ ತಿನ್ನಿಸುವ ಮೂಲಕ ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಘಟನೆಗೆ ನೇರ ಕಾರಣಕರ್ತರಾಗಿದ್ದಾರೆ ಎಂದು ದೂರಿದರು.

ಪ್ರವಾಸಿ ತಾಣಗಳಿಗೆ ಆಗಮಿಸುವ ಪ್ರವಾಸಿಗರಿಗೆ ಸೂಕ್ತ ಭದ್ರತೆ ಒದಗಿಸ ಬೇಕಾಗಿದೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಕನಿಷ್ಠ ವಾರಕ್ಕೊಮ್ಮೆ ಯಾದರೂ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಬಗ್ಗೆ ಅವಲೋಕನ ಮಾಡಬೇಕು. ಇದರೊಂದಿಗೆ ಪ್ರವಾಸಿಗರು ಕೂಡಾ ದುಸ್ಸಾಹಸಕ್ಕೆ ಕೈ ಹಾಕಿ ತಮ್ಮ ಪ್ರಾಣ ಕಳೆದುಕೊಳ್ಳುವಂತಾಗಬಾರದು ಎಂದು ಕೃಷ್ಣ ಕಿವಿಮಾತು ಹೇಳಿದರು.

ಕುಶಾಲನಗರದ ದುಬಾರೆ, ಕಾವೇರಿ ನಿಸರ್ಗಧಾಮ ಪ್ರವಾಸಿ ತಾಣಗಳ ಹಲವೆಡೆ, ನದಿ ತಟದಲ್ಲಿ ನಿಯಮ ಬಾಹಿರವಾಗಿ ಅಂಗಡಿ ಮಳಿಗೆಗಳನ್ನು ನಿರ್ಮಿಸಿರುವುದು ಕಂಡು ಬಂದಿದೆ.ಈ ಬಗ್ಗೆ ತಕ್ಷಣ ಜಿಲ್ಲಾಡಳಿತ ಕ್ರಮ ಕೈಗೊಳ್ಳ ಬೇಕು. ಪ್ರವಾಸಿ ಕೇಂದ್ರಗಳಲ್ಲಿ ಮುಂದಿನ ದಿನಗಳಲ್ಲಿ ಇಂತಹ ದುರ್ಘಟನೆ ಮರುಕಳಿಸದಂತೆ ಎಚ್ಚರ ವಹಿಸಬೇಕು ಎಂದು ಅವರು ನುಡಿದರು.

ಇದೇ ಸಂದರ್ಭ ಮಾತನಾಡಿದ ಕಾವಲು ಪಡೆ ತಾಲೂಕು ಅಧ್ಯಕ್ಷ ಸಮೀರ್, ಕುಶಾಲನಗರ ತಾಲೂಕು ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಕಂಡುಬರುತ್ತಿದೆ. ಆಸ್ಪತ್ರೆಗೆ ಬರುವ ರೋಗಿಗಳನ್ನು ಅಲ್ಲಿನ ವೈದ್ಯರು ಮಡಿಕೇರಿ ಅಥವಾ ಮೈಸೂರಿಗೆ ತೆರಳಲು ಸೂಚಿಸುತ್ತಿದ್ದು, ಇದರಿಂದ ಬಡ ರೋಗಿಗಳಿಗೆ ಸಮಸ್ಯೆ ಉಂಟಾಗಿದೆ ಎಂದು ಹೇಳಿದರಲ್ಲದೆ, ಜಿಲ್ಲಾ ವೈದ್ಯಾಧಿಕಾರಿಗಳು ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾವಲು ಪಡೆಯ ಯುವ ಘಟಕದ ಅಧ್ಯಕ್ಷ ಸ್ವಾಮಿ, ಕಾರ್ಯದರ್ಶಿ ಮಧು ಸದಸ್ಯ ಜಾಫರ್ ಇದ್ದರು.

ಪೊಲೀಸರ ಕರ್ತವ್ಯಕ್ಕೆ ಅಡ್ಡಿ, ಹಲ್ಲೆ: ಮೂವರ ವಿರುದ್ಧ ಕೇಸು

• **ಮಂಗಳೂರು:** ಕಾವೂರು ಠಾಣೆಯ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯಕ್ಕೆ ಅಡ್ಡಿಪಡಿಸಿ ಹಲ್ಲೆ ನಡೆಸಿದ ಆರೋಪದಡಿ ಮೂವರ ವಿರುದ್ಧ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಸಾದ್, ಉದಯ ಮತ್ತು ಪ್ರಶಾಂತ್ ಹಲ್ಲೆ ನಡೆಸಿದ ಆರೋಪಿಗಳು. ದೇರೆಬೈಲ್ ಕೊಂಚಾಡಿ ಬಳಿಯ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಭಾನುವಾರ ರಾತ್ರಿ ಗಲಾಟೆ ಆಗುತ್ತಿರುವ ಬಗ್ಗೆ ಬಂದ ದೂರಿನಂತೆ ಪೊಲೀಸ್ ಸಿಬ್ಬಂದಿಗಳಾದ ಅಪ್ಪಣ್ಣ ಹಾಗೂ ಭೀಮಾಶಂಕರ ಸ್ಥಳಕ್ಕೆ ತೆರಳಿದ್ದಾರೆ. ಅಲ್ಲಿನ ಸೆಕ್ಯುರಿಟಿ ಸಿಬ್ಬಂದಿ ಗಲಾಟೆ ಮಾಡಿದ ಆರೋಪಿಗಳನ್ನು ತೋರಿಸಿದ್ದು, ಆರೋಪಿಗಳು ಪೊಲೀಸರ ಜತೆ ಉಡಾಫೆಯಿಂದ ವರ್ತಿಸಿದ್ದಾರೆ. ಅವರನ್ನು ಸ್ಥಳದಿಂದ ತೆರಳುವಂತೆ ಸೂಚಿಸಿದರೂ, ಹೋಗುವುದಿಲ್ಲ, ನೀವೇನು ಮಾಡುತ್ತೀರಿ ಎಂದು ಕೇಳಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಇದೇ ವೇಳೆ ಅಪ್ಪಣ್ಣ ಅವರನ್ನು ದೂಡಿ ನೆಲಕ್ಕೆ ಬೀಳಿಸಿದ್ದು ಇದರಿಂದ ಮಣಿಗಂಟು ಮುರಿತವಾಗಿ ತೀವ್ರವಾದ ಗಾಯವಾಗಿದೆ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾರೆ. ಈ ಬಗ್ಗೆ ಅಪ್ಪಣ್ಣ ಅವರು ನೀಡಿದ ದೂರಿನಂತೆ ಕಾವೂರು ಠಾಣೆಯಲ್ಲಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ಈಜಲು ಹೋದ ವಿದ್ಯಾರ್ಥಿ ನೀರಿನಲ್ಲಿ ಕಣ್ಮರೆ



• **ಬೆಳ್ತಂಗಡಿ:** ಕಲ್ಮಂಜ ಗ್ರಾಮದ ಪಜಿರಡ್ಕ ಕೆಳಭಾಗದಲ್ಲಿ ನೇತ್ರಾವತಿ ನದಿಗೆ ಇಳಿದಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ನಾಪತ್ತೆಯಾದ ಘಟನೆ ಮಂಗಳವಾರ ಸಂಜೆ ನಡೆದಿದೆ.



ಉಜಿರೆಯ ಇಂಜಿನಿಯರಿಂಗ್ ಕಾಲೇಜೊಂದರ ಎಂಟು ಮಂದಿ ವಿದ್ಯಾರ್ಥಿಗಳು ನೇತ್ರಾವತಿ ನದಿಯ ಕಲ್ಲಗುಂಡಿ ಎಂಬ ಸ್ಥಳದಲ್ಲಿ ನದಿ ನೀರಿಗೆ ಸ್ನಾನಕ್ಕೆ ಇಳಿದಿದ್ದರು. ಇವರ ಪೈಕಿ ಗೋಕಾಕ ಮೂಲದ ಇಂಜಿನಿಯರಿಂಗ್ ಕೊನೆಯ ವರ್ಷದ ವಿದ್ಯಾರ್ಥಿ ಶ್ರೀಪೂರ್ಣ (22) ಎಂಬಾತ ನದಿಯ ಹೊಂಡದಲ್ಲಿ ಮುಳುಗಿ ನಾಪತ್ತೆಯಾಗಿದ್ದಾನೆ.

ಇವರಲ್ಲಿ ಯಾರಿಗೂ ಈಜು ಬರದಿದ್ದು ಘಟನೆ ನಡೆಯುತ್ತಿದ್ದಂತೆ ಉಳಿದ ವಿದ್ಯಾರ್ಥಿಗಳು ಬೊಬ್ಬೆ ಹಾಕಿದ್ದು ಕೂಡಲೇ ಸ್ಥಳೀಯರು ಆಗಮಿಸಿ ಹುಡುಕಾಟ ನಡೆಸಿದ್ದಾರೆ.

ಬಳಿಕ ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ತಂಡದ ಸದಸ್ಯರು ಆಗಮಿಸಿ ಹುಡುಕಾಟ ನಡೆಸಿದರೂ ಯುವಕನ ಪತ್ತೆಯಾಗಿಲ್ಲ. ಘಟನಾ ಸ್ಥಳದಲ್ಲಿ ಭಾರಿ ಸಂಖ್ಯೆಯ ಜನರು ಜಮಾಯಿಸಿದ್ದರು. ಘಟನೆ ಸಂಜೆ ನಡೆದಿದ್ದು ಬಳಿಕ ಹುಡುಕಾಟಕ್ಕೆ ಬೆಳಕಿನ ಅಭಾವವು ಕಂಡುಬಂತು. ಅಗ್ನಿಶಾಮಕ ದಳವೂ ಕಾರ್ಯಾಚರಣೆ ನಡೆಸುತ್ತಿದೆ.

ಮೇ 23ರಂದು ಕೇಂದ್ರ ಸಚಿವ ಸೋಮಣ್ಣ ಮಂಗಳೂರಿಗೆ

• **ಮಂಗಳೂರು:** ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮೇ 23 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಮೇ 23 ರಂದು ಬೆಳಗ್ಗೆ 8.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 10 ಗಂಟೆಗೆ ನಗರದ ಪಾಲೆಮಾರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಕಾರ್ಯಕ್ರಮ, ಮಧ್ಯಾಹ್ನ 12.30ಕ್ಕೆ ಗುರುಪುರ ಜಂಗಮ ಸಂಸ್ಥಾನ ಮಠ ಭೇಟಿ, 2 ಗಂಟೆಗೆ ಮಂಗಳೂರು ಜಂಕ್ಷನ್ ರೈಲು ನಿಲ್ದಾಣ ಪರಿಶೀಲನೆ, ಸಂಜೆ 4.05 ಗಂಟೆಗೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.



ಭೂಮಿ ವಿವಾದ: ಅಧಿಕಾರಿಗಳ ಮೇಲೆ ತಂಡದಿಂದ ಹಲ್ಲೆ

• **ಕುಂಬಳೆ:** ಸಂಬಂಧಿಕರ ನಡುವಣ ಭೂಮಿ ವಿವಾದದ ಹಿನ್ನೆಲೆಯಲ್ಲಿ ನ್ಯಾಯಾಲಯ ನೇಮಿಸಿದ ಆಯೋಗ ಹಾಗೂ ಸರ್ವೆ ಅಧಿಕಾರಿಗಳು ಆಗಮಿಸಿ ಸ್ಥಳ ಅಳತೆ ಮಾಡುತ್ತಿದ್ದಂತೆ ತಂಡವೊಂದು ನಡೆಸಿದ ಹಲ್ಲೆಯಲ್ಲಿ ಮೂವರು ಗಾಯಗೊಂಡ ಬಗ್ಗೆ ದೂರಲಾಗಿದೆ. ಮಂಜೇಶ್ವರ ಚೌಕಿ ಬಳಿಯ ಪುಚ್ಚತ್ತಬೈಲು ನಿವಾಸಿಗಳಾದ ಅಬೂಬಕ್ಕರ್ ಸಿದ್ದೀಕ್ (51), ಅವರ ಸಹೋದರನ ಮಕ್ಕಳಾದ ನಫೀಸಾ (23) ಹಾಗೂ ಹದಿನಾಲ್ಕರ ಹರೆಯದ ಬಾಲಕನಿಗೆ ಹಲ್ಲೆಗೈಯ್ಯಲಾಗಿದ್ದು, ಇದರಿಂದ ಗಾಯಗೊಂಡ ಅವರು ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಸೋಮವಾರ ಘಟನೆ ನಡೆದಿದ್ದು, ಅಬೂಬಕ್ಕರ್ ಸಿದ್ದೀಕ್ ಹಾಗೂ ಸಮೀಪದ ಸ್ಥಳದ ಮಾಲಕನ ಮಧ್ಯೆ ಸ್ಥಳ ತರ್ಕ ಇತ್ತೆನ್ನಲಾಗಿದೆ. ಈ ಪ್ರಕರಣ ನ್ಯಾಯಾಲಯದ ಪರಿಗಣನೆಯಲ್ಲಿದ್ದು, ಈ ಹಿನ್ನೆಲೆಯಲ್ಲಿ ನ್ಯಾಯಾಲಯ ನೇಮಿಸಿದ ಆಯೋಗ ಹಾಗೂ ಸರ್ವೆ ಅಧಿಕಾರಿಗಳು ಸೋಮವಾರ ಸ್ಥಳಕ್ಕೆ ತಲುಪಿ ಅಳತೆ ಮಾಡುತ್ತಿದ್ದಂತೆ ಅಲ್ಲಿಗೆ ಸ್ಥಳೀಯರಾದ ಝುಕರಿಯ, ಅಬ್ದುಲ್ ರಹ್ಮಾನ್ ಹಾಗೂ ರಜಾಕ್ ಎಂಬವರು ತಲುಪಿ ದ್ದರು. ಈ ಪೈಕಿ ಝುಕರಿಯ ಮತ್ತು ಅಬ್ದುಲ್ ರಹ್ಮಾನ್ ತಮ್ಮ ಮೇಲೆ ಹಲ್ಲೆ ನಡೆಸಿರುವುದಾಗಿ ಗಾಯಾಳುಗಳು ತಿಳಿಸಿದ್ದಾರೆ.

ಪ್ರಯೋಗಾಲಯ ತಂತ್ರಜ್ಞರ ನೇಮಕಾತಿ

• **ಮಂಜೇಶ್ವರ:** ಮಂಗಲ್ಪಾಡಿ ತಾಲೂಕು ಪ್ರಧಾನ ಆಸ್ಪತ್ರೆಯಲ್ಲಿ ಲ್ಯಾಬ್ ತಂತ್ರಜ್ಞರ ನೇಮಕಾತಿಗಾಗಿ ಆಸ್ಪತ್ರೆ ನಿರ್ವಹಣಾ ಸಮಿತಿ ವತಿಯಿಂದ ಸಂದರ್ಶನವು ಮೇ 28 ರಂದು ಬೆಳಗ್ಗೆ 11 ಗಂಟೆಗೆ ಅಧೀಕ್ಷಕರ ಕೊಠಡಿಯಲ್ಲಿ ನಡೆಯಲಿದೆ. ಕೇರಳ ಪ್ಯಾರಾಮೆಡಿಕಲ್ ಕೌನ್ಸಿಲ್ ನೋಂದಣಿ ಅಥವಾ ವಿಜ್ಞಾನ ವಿಷಯದಲ್ಲಿ ಶೇಕಡಾ 50ರಷ್ಟು ಅಂಕಗಳೊಂದಿಗೆ ಪ್ಲಸ್ ಟು ಅಥವಾ ತತ್ಸಮಾನ, ರಾಜ್ಯ ಸರಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಡಿಎಂಎಲ್‌ಟಿ, ಎಂಎಲ್‌ಟಿ ಕೋರ್ಸ್, ಕೇರಳ ಪ್ಯಾರಾಮೆಡಿಕಲ್ ಕೌನ್ಸಿಲ್ ನೋಂದಣಿ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ 04998 242098 ಸಂಪರ್ಕಿಸಬಹುದು.

ನೇಮಕಾತಿ

• **ಮಂಜೇಶ್ವರ:** ಮಂಗಲ್ಪಾಡಿ ತಾಲೂಕು ಪ್ರಧಾನ ಕಚೇರಿ ಆಸ್ಪತ್ರೆಯಲ್ಲಿ ಮಂಜೇಶ್ವರ ಬ್ಲಾಕ್ ಪಂಚಾಯತ್ ನೇತೃತ್ವದಲ್ಲಿ ಡಯಾಲಿಸಿಸ್ ತಂತ್ರಜ್ಞರ ನೇಮಕಾತಿಗಾಗಿ ಸಂದರ್ಶನವು ಮೇ 28 ರಂದು ಬೆಳಗ್ಗೆ 11 ಗಂಟೆಗೆ ಸೂಪರಿಂಟೆಂಡೆಂಟ್ ಚೇಂಬರ್‌ನಲ್ಲಿ ನಡೆಯಲಿದೆ.

ಹೆಚ್ಚಿನ ವಿವರಗಳಿಗೆ 04998 242098 ಕರೆ ಮಾಡಬಹುದು.

ಪಡುಕರೆ ಕಾಲೇಜಿಗೆ ಕರ್ನಾಟಕ ಬ್ಯಾಂಕ್ ಗಣಕ ಯಂತ್ರ ಕೊಡುಗೆ

• **ಕೋಟ:** ಲಕ್ಷ್ಮೀ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟ-ಪಡುಕರೆ ಇಲ್ಲಿಗೆ ಕರ್ನಾಟಕ ಬ್ಯಾಂಕ್‌ನ ಸಿ.ಎಸ್.ಆರ್ ಯೋಜನೆಯಡಿ ಕಾಲೇಜಿಗೆ ಸುಮಾರು 8.50 ಲಕ್ಷ ರೂಪಾಯಿ ಮೌಲ್ಯದ ಗಣಕಯಂತ್ರಗಳನ್ನು ಗಣಕಯಂತ್ರವನ್ನು ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿ ಉಡುಪಿಯ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರಮೇಶ್ ವೈದ್ಯ ಅವರು ಗಣಕಯಂತ್ರಗಳನ್ನು ಕಾಲೇಜಿಗೆ ಹಸ್ತಾಂತರಿಸಿ ಅದನ್ನು ಲೋಕಾರ್ಪಣೆಗೊಳಿಸಲಾಯಿತು.

ಗಣಕಯಂತ್ರಯನ್ನು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ ಕುಂದರ್ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ರಾಜೇಂದ್ರ ಎಸ್ ನಾಯಕ,ಉಪನ್ಯಾಸಕ ಶಂಕರ್ ನಾಯ್ಕ್, ತೆಂಕನಿಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಮಾಜಕಾರ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಮತಾ, ವಿದ್ಯಾರ್ಥಿ ಕ್ಷೇಮಪಾಲನಾಽ ಕಾರಿ ಪ್ರೊ. ರಮೇಶ್ ಆಚಾರ್, ಐಕ್ಯೂಎಸಿ ಸಂಚಾಲಕರಾದ ಪ್ರೊ. ಸುಬ್ರಹ್ಮಣ್ಯ, ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷ ಸುರೇಶ್ ಪೂಜಾರಿ ಹಾಗೂ ಹಳೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪ್ರಸಾದ್ ಬಿಲ್ಲವ, ಕರ್ನಾಟಕ ಬ್ಯಾಂಕ್ ಕೋಟ ಶಾಖಾ ಪ್ರಬಂಧಕ ಗುರುರಾಜ್ ಸರಳಾಯ, ಕ್ಲಸ್ಟರ್ ಹೆಡ್ ಪ್ರಕಾಶ್ಚಂದ್ರ ಶೆಟ್ಟಿ ಇದ್ದರು.



ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-520th) ಡ್ರಾ, ಮೇ 19ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SJ 587861 (KANNUR)
Cons Prize-Rs: 5000/-
SA 587861 SB 587861 SC 587861 SD 587861 SE 587861 SF 587861 SG 587861 SH 587861 SK 587861 SL 587861 SM 587861
2nd Prize Rs: 30,00,000/- [30 Lakhs]
SF 336866 (NEYYATTINKARA)
3d Prize Rs: 5,00,000/- [5 Lakhs]
SA 650784 (PUNALUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0300 0569 0616 0830 1395 1885 2605 3203 3439 4090 6397 6398 6577 7495 7654 8193 8255 8976 9790
5th Prize Rs.2,000/-
0058 0917 1060 6061 7591 7696
6th Prize Rs.1,000/-
0868 1172 1209 1800 1820 1841 4429 4650 5323 5540 5626 6245 6264 6300 6393 6495 6757 6761 7022 7303 7476 8124 8392 8950 9663
7th Prize Rs.500/-
0042 0155 0283 0501 0646 0655 0922 1070 1267 1321 1354 1470 1604 1923 1980 2112 2328 2445 2704 2921 2971 3077 3250 3257 3382 3436 3455 3646 4016 4085 4319 4337 4360 4375 4806 4912 5150 5158 5160 5202 5368 5394 5455 5534 5608 5652 5727 5791 5943 6135 6174 6184 6514 6877 7028 7095 7139 7191 7358 7391 7539 7903 8054 8521 8978 9009 9065 9103 9366 9653 9660 9769 9879 9928 9932 9955
8th Prize Rs.200/-
0158 0179 0199 0453 0554 0667 0897 0949 1017 1117 1353 1472 1511 1642 1647 1682 1691 1692 1711 1736 2015 2140 2143 2216 2272 2376 2386 2387 2547 2824 2918 2963 2975 3029 3207 3404 3515 3517 3674 3793 3944 3972 3975 4348 4379 4556 5013 5044 5201 5305 5460 5477 5519 5648 5677 5755 5790 5870 6037 6068 6171 6306 6420 6538 6615 6760 6778 7023 7190 7521 7536 7593 7710 7773 7829 8089 8488 8546 8809 8824 8928 9020 9206 9216 9247 9406 9413 9576 9716 9927
9th Prize Rs.100/-
0002 0035 0039 0053 0057 0074 0101 0176 0186 0331 0346 0410 0433 0445 0449 0571 0585 0685 0719 0792 0797 0866 0902 0911 0913 1025 1118 1183 1297 1314 1392 1439 1627 1644 1698 1705 1963 2042 2060 2227 2336 2370 2603 2755 2939 3078 3138 3148 3185 3201 3222 3324 3329 3388 3396 3408 3413 3473 3555 3669 3806 3827 3867 4006 4061 4128 4132 4149 4248 4271 4347 4359 4402 4413 4941 5012 5022 5176 5219 5248 5358 5420 5421 5469 5560 5577 5600 5601 5622 5664 5715 5839 5853 5874 6064 6078 6120 6169 6380 6389 6441 6639 6680 7031 7042 7058 7134 7182 7236 7278 7309 7405 7416 7526 7554 7585 7612 7739 7779 7896 7924 7943 7995 8001 8034 8047 8068 8113 8148 8334 8457 8480 8496 8556 8571 8580 8623 8736 9098 9219 9229 9276 9432 9500 9537 9555 9573 9755 9767 9880

ಉಳ್ಳಾಲ, ಕೊಣಾಜೆ ಪರಿಸರದಲ್ಲಿಂದು ವಿದ್ಯುತ್ ವ್ಯತ್ಯಯ

• **ಮಂಗಳೂರು:** ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದಮೇ 20ರಂದು ಉಳ್ಳಾಲ, ಕೊಣಾಜೆ ಪರಿಸರದಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ಈ ನಿಟ್ಟಿನಲ್ಲಿ ಕೆರೆಬೈಲು, ತೊಕ್ಕೊಟ್ಟು ಜಂಕ್ಷನ್, ಕಲ್ಲಾಪು, ಆಡಂಕುದ್ರು, ಕಲ್ಲಾಪು ಪಟ್ಲ, ನಾಗನಕಟ್ಟೆ, ಹಿದಾಯತ್ ನಗರ, ಅಡ್ಕ, ಕೋಟೆಕಾರ್, ಬೀರಿ, ಮಾಡೂರು, ಕೊಂಡಾಣ, ನಡಾರ್, ಮಡ್ಯಾರ್, ಕಾಯರ್ ಮಜಲ್, ಸಂಕೋಳಿಗೆ, ಉಚ್ಚಿಲ, ನಯಪಟ್ನ, ಬೋವಿ ಶಾಲೆ, ಪಿಲಾರ್, ಪಿಲಾರ್ ಶಾಲೆ, ಪಿಲಾರ್ ಶಾಲೆ, ಅಂಬಿಕಾ ರೋಡ್, ಸರಸ್ವತಿ ಕಾಲನಿ, ದ್ವಾರಕಾನಗರ, ಅಬ್ಬಂಜರ, ಅನಿಲ್ ಕಂಪೌಂಡ್, 9ಕೆರೆ ಐಟಿಐ, 9ಕೆರೆ ಬನ, ಯು.ಟಿ ಕಂಪೌಂಡ್, ಕೆ.ಹೆಚ್.ಬಿ ಕಾಲೋನಿ, ಮೂಡ ಸೋಮನಾಥ ಲೇಔಟ್, ನೆಹರೂನಗರ, ಓವರ್ ಬ್ರಿಡ್ಜ್, ಬಾಕಿಮಾರ್, ಬಂಗೇರ ಲೇನ್, ಬಂಗೇರ ಕಾಲನಿ, ತೊಕ್ಕೊಟ್ಟು ಒಳಪೇಟೆ, ಕೃಷ್ಣನಗರ, ತೊಕ್ಕೊಟ್ಟು ಸಿಟಿ ರಸ್ತೆ, ಅಕ್ಕರೆ ಕೆರೆ, ಹಳೆಕೋಟೆ, ಮಂಚಿಲ, ಅಲೇಕಳ, ಮೇಲಂಗಡಿ, ದರ್ಗಾ, ಮಿಲ್ಲತ್ ನಗರ, ಬಸ್ತಿಪಡ್ಪು, ಉಳಿಯ, ಗೋಳಿಯಡಿ, ಸೇನೆರಬೈಲು, ಉಳಿಯ ದೇವಸ್ಥಾನ, ಸಂಕೇಶ, ಬೆಳರಿಂಗೆ, ನಡುಕುಮೇರ್, ಉಕ್ಕುಡ, ಅಲಂಕಾರಗುಡೆ, ತಲಪಾಡಿ, ನಾರ್ಲ, ತಲಪಾಡಿ, ಟೋಲ್ ಗೇಟ್, ಮೇಲಿನ ತಲಪಾಡಿ, ನಾರ್ಲ, ತಚ್ಚಾಣಿ, ವಿವೇಕನಂದ ನಗರ, ಸಾಂತ್ಯ, ನೆತ್ತಿಲಪದವು, ಜಲ್ಲಿ ಕ್ರಷರ್, ರಬ್ಬರ್ ಫ್ಯಾಕ್ಟರಿ, ಲಕ್ಷ್ಮಿಗುಡ್ಡೆ, ಮೂರುಕಟ್ಟೆ, ಕುಂಪಲ, ಕನೀರ್ ತೋಟ, ಸರಳಾಯ ಕಾಲನಿ, ಹನುಮಾನ್ ನಗರ, ಆಶ್ರಯ ಕಾಲನಿ, ಕುಂಪಲ ಶಾಲೆ, ಕೊಣಾಜೆ, ಕೋಡಿಜಾಲ್, ಪರಂಡೆ, ಅಡ್ಕರೆಪಡ್ಪು, ಕಲ್ಲಿಮಾರ್, ಪುಲ್ಲಿಂಚಾಡಿ, ಬಬ್ಬುಕಟ್ಟೆ, ಹಿರಾನಗರ, ನಿತ್ಯಾಧರ ನಗರ, ಪ್ರಕಾಶ್ ನಗರ, ಪಂಡಿತ್ ಹೌಸ್, ಶಿವಾಜಿನಗರ, ಮುಂಡೋಳಿ, ಸೇವಂತಿಗುಡ್ಡೆ, ಸೇವಂತಿಗುತ್ತು, ಗಂಡಿ, ವಿಜೇತನಗರ, ತಾರಿಪಡ್ಪು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮೆಸ್ಕಾ ಪ್ರಕಟಣೆ ತಿಳಿಸಿದೆ.

ಕಿರುಸುದ್ದಿ

ವೃದ್ಧೆ ನೇಣಿಗೆ ಶರಣು

ಬಂಟ್ವಾಳ: ತಾಲೂಕಿನ ಆರಳ ಗ್ರಾಮದ ಗುಡ್ಡೆಯಂಗಡಿ ನಮ್ಮ ಹಿರಿಯರ ಮನೆ ಆಶ್ರಮದಲ್ಲಿ ವಾಸವಿದ್ದ ವೃದ್ಧೆಯೊಬ್ಬರು ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ಸಂಭವಿಸಿದೆ. ಉಡುಪಿ ಜಿಲ್ಲೆಯ ಪಡು ಗ್ರಾಮದ ಲಕ್ಷ್ಮೀ (67) ಆತ್ಮಹತ್ಯೆಗೈದ ಮಹಿಳೆಯಾಗಿದ್ದಾರೆ. ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಅನಾಥಾಶ್ರಮದ ಮೇಲ್ವಿಚಾರಕರು ನೀಡಿದ ದೂರಿನಂತೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರು ಮೂಲತ: ಪಡು ಗ್ರಾಮದವರಾಗಿದ್ದರೂ, ಅವರ ವಾರಸುದಾರರು ಪತ್ತೆಯಾಗದಿರುವ ಕಾರಣಕ್ಕಾಗಿ ಮೃತದೇಹವನ್ನು ಬಂಟ್ವಾಳ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಶೈತ್ಯಾಗಾರದಲ್ಲಿ ಇರಿಸಲಾಗಿದ್ದು, ವಾರಸುದಾರರು ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯ ಉಪನಿರೀಕ್ಷರರನ್ನು ಸಂಪರ್ಕಿಸುವಂತೆ ಪ್ರಕಟನೆಯಲ್ಲಿ ಕೋರಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ - ಸವಾರ ಗಂಭೀರ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಕೊಲ್ನಾಡು ಜಂಕ್ಷನ್ ಬಳಿ ಬೈಕ್‌ಗೆ ಕಾರು ಡಿಕ್ಕಿಯಾಗಿ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳುವನ್ನು ಪುಂಡರಿಕಾಕ್ಷ ಎಂದು ಗುರುತಿಸಲಾಗಿದೆ. ಗಾಯಾಳು ಪುಂಡರಿಕಾಕ್ಷ ಆರ್ಟಿಸ್ ಕಂಪನಿಯಲ್ಲಿ ಸೆಕ್ಯೂರಿಟಿ ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಹೋಗುತ್ತಿರುವಾಗ ಉಡುಪಿ ಕಡೆಯಿಂದ ಚಾಲಕ ಪ್ರಕಾಶ್ ಹೊಳ್ಳ ಎಂಬವರ ಕಾರು ಡಿಕ್ಕಿ ಹೊಡೆದಿದೆ.

ಜೂ. 7ರಿಂದ 13ರ ವರೆಗೆ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಾಮುದಾಯಿಕ ಪಾರಾಯಣ

ಮಂಗಳೂರು: ಪಂಡರಪುರದ ಚೈತನ್ಯ ಸದ್ಗುರು ಹರಿಪ್ರಸಾದ ಶರದಸ್ವಾಮಿ ಶಿವೂರಕರ ನೇತೃತ್ವ ಮತ್ತು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಸ್ವಾಮೀಜಿ ಸಾನಿಧ್ಯದಲ್ಲಿ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಾಮುದಾಯಿಕ ಪಾರಾಯಣ ಹಾಗೂ ಅಖಂಡ ಹರಿನಾಮ ಸಪ್ತಾಹ ಜೂ. 7ರಿಂದ 13ರವರೆಗೆ ಧರ್ಮಸ್ಥಳದ ನಿತ್ಯಾನಂದ ನಗರ ಕನ್ಯಾಡಿಯ ಶ್ರೀರಾಮ ಕ್ಷೇತ್ರದಲ್ಲಿ ನಡೆಯಲಿದೆ.

ಜೂ. 7ರಂದು ಬೆಳಗ್ಗೆ 7 ಗಂಟೆಗೆ ಗ್ರಂಥರಾಜ ಜ್ಞಾನೇಶ್ವರೀ ಬಿಡುಗಡೆ ನಡೆಯಲಿದೆ. ಬೆಳಗ್ಗೆ 11ರಿಂದ 1 ಗಂಟೆಯವರೆಗೆ ಸಾಮುದಾಯಿಕ ಪಾರಾಯಣ, ಸಂಜೆ 4.30ರಿಂದ 6 ಗಂಟೆಯವರೆಗೆ ಪ್ರವಚನ ಮತ್ತು ನಾಮಜಪ, ರಾತ್ರಿ 7ರಿಂದ 9 ಗಂಟೆಯವರೆಗೆ ಕೀರ್ತನೆ, ರಾತ್ರಿ 11ರಿಂದ 1 ಗಂಟೆಯವರೆಗೆ ಜಾಗರಣೆ ನಡೆಯಲಿದೆ ಎಂದು ಪಾರಾಯಣ ಸೇವಾ ಸಮಿತಿಯ ಅಧ್ಯಕ್ಷ ಆರ್.ಟಿ. ಪಾಟೀಲ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚೈತನ್ಯ ಸದ್ಗುರು ಹರಿಪ್ರಸಾದ ಮಹಾರಾಜ, ಆರ್.ಟಿ. ಪಾಟೀಲ್, ನಾರಾಯಣ ಬಿ.ಸಿ., ಕೆಂಜರಡ್ಡಿ, ವಿನೋದ್ ಕುಮಾರ್, ರಮೇಶ್ ಉಪಸ್ಥಿತರಿದ್ದರು.

ನಿಧನ ಸುದ್ದಿ

ವಾಸು ಕುಲಾಲ್



ಮಂಜೇಶ್ವರ: ಸುಂಕದಕಟ್ಟೆ ಮಜೀರ್‌ಪಳ್ಳ ಬಳಿಯ ವಾಸು ಕುಲಾಲ್ ಕೋಳ್ಯೂರುಪದವು (64) ಅವರು ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ಬೆಳಗ್ಗೆ ನಿಧನ ಹೊಂದಿದರು. ಮೃತರು ಪತ್ನಿ ದೇವಕಿ, ಮಕ್ಕಳಾದ ಬಾಲಕೃಷ್ಣ, ಲೋಕೇಶ, ಯತೀಶ, ಪವಿತ್ರ ಅವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೇ 20ರಂದು ಬೆಳಗ್ಗೆ 8 ಗಂಟೆಗೆ ನಡೆಯಲಿದೆ. ಸ್ಪಂದನ ಟ್ರಸ್ಟ್ ಕೋಳ್ಯೂರು, ಶ್ರೀ ಸತ್ಯನಾರಾಯಣ ಸೇವಾಸಮಿತಿ ಕೋಳ್ಯೂರುಪದವು, ಓಂಕಾರ್ ಫ್ರೆಂಡ್ಸ್ ಕೋಳ್ಯೂರು ಮತ್ತು ಸಂಘ ಪರಿವಾರ ತೀವ್ರ ಸಂತಾಪ ಸೂಚಿಸಿತು.

ಮುತ್ತು



ಮಂಜೇಶ್ವರ: ಪೈವಳಿಕೆ ಕುರುಡಪದವು ಮೈರುಗ ನಿವಾಸಿ ದಿ.ಕೊರಗಪ್ಪ ಮೂಲ್ಯರ ಪತ್ನಿ ಮುತ್ತು (84) ನಿಧನ ಹೊಂದಿದರು. ಮೃತರು ಮಕ್ಕಳಾದ ಗಣೇಶ, ಮೋಹನ, ವಾರಿಜಾ, ಸುಮತಿ, ಲೀಲಾ ಅವರನ್ನು ಅಗಲಿದ್ದಾರೆ.

ಕಿಶೋರ್ ಕುಮಾರ್ ಸಸಿಹಿತ್ಲು



ಮೂಲ್ಕಿ : ಕೊಲ್ನಾಡು ನಿವಾಸಿ ಕಿಶೋರ್ ಕುಮಾರ್ ಸಸಿಹಿತ್ಲು (71) ಅವರು ಮೇ 18 ರಂದು ರಾತ್ರಿ ಮುಕ್ಕ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಪತ್ನಿ ಮತ್ತು ಪುತ್ರನನ್ನು ಅಗಲಿದ್ದಾರೆ. ಸಸಿಹಿತ್ಲು ಯುವಕ ಮಂಡಲ ಸ್ಥಾಪಕ ಸದಸ್ಯರಲ್ಲೋರ್ವರಾದ ಕಿಶೋರ್ ಕುಮಾರ್ ಅವರು ಈ ಹಿಂದೆ ಯುವಜನ ಸಂಘಟನೆಗಳಲ್ಲಿ ಸಕ್ರಿಯವಾಗಿದ್ದವರು. ಮುಕ್ಕ ವೆಲ್ಫೇರ್ ಸೊಸೈಟಿ ಮೂಲಕ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿದ್ದ ಸಂದರ್ಭದಲ್ಲಿ ದಕ್ಷಿಣ ಕನ್ನಡವನ್ನು ಪ್ರತಿನಿಧಿಸಿ ಇಟಲಿಯಲ್ಲಿ ಪೋಪ್ ಜಾನ್ ಪಾಲ್ (ದ್ವಿತೀಯ) ಅವರನ್ನು ಭೇಟಿಯಾಗಿದ್ದರು.



ಅಭಿನಯ ನೃತ್ಯ ಕೇಂದ್ರದ ವಿದ್ಯಾರ್ಥಿಗಳ ಗೆಜ್ಜೆ ಪೂಜೆ ಕಾರ್ಯಕ್ರಮ ಐಗೂರು ಸೊಸೈಟಿ ಹಾಲ್‌ನಲ್ಲಿ ನಡೆಯಿತು. ನಾಟ್ಯ ದೇವತೆ ನಟರಾಜನ ಪೂಜೆ ಮಾಡಿದ ನಂತರ ನೃತ್ಯ ಗುರುಗಳಾದ ಭವ್ಯಾ ಸುಕನ್ ಅವರಿಂದ ವಿದ್ಯಾರ್ಥಿಗಳು ಗೆಜ್ಜೆಯನ್ನು ಪಡೆದು ನೃತ್ಯ ಪ್ರಯಾಣದ ಅಧಿಕೃತ ಆರಂಭವನ್ನು ಪಡೆದರು. ಗೆಜ್ಜೆಪೂಜೆ ಬಳಿಕ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ನೆರವೇರಿತು. ಮಕ್ಕಳ ಪೋಷಕರು, ಸ್ಥಳೀಯರು ಹಾಗೂ ಹಿರಿಯ ನೃತ್ಯ ಕಲಾವಿದರು ಈ ಸಂದರ್ಭದಲ್ಲಿ ಹಾಜರಿದ್ದರು.

ಶ್ರೀಕ್ಷೇತ್ರ ಕದ್ರಿಯಲ್ಲಿ ಮೇ 25 ರಿಂದ ಜೂ.1ರವರೆಗೆ
26ನೇ ವರ್ಷದ ಸರಯೂ ಸಪ್ತಾಹ

ಮಂಗಳೂರು: ಸರಯೂ ಬಾಲ ಯಕ್ಷವೃಂದ ಕೋಡಿಕಲ್ ವತಿಯಿಂದ ಶ್ರೀ ಕ್ಷೇತ್ರ ಕದ್ರಿ ದೇವಸ್ಥಾನ ಸಹಕಾರದೊಂದಿಗೆ 26ನೇ ವರ್ಷದ ಸರಯೂ ಸಪ್ತಾಹ, ಸಾಧಕ ಸನ್ಮಾನ, ಬಯಲಾಟ, ಮಹಿಳಾ ತಾಳಮದ್ದಳೆ ಕಾರ್ಯಕ್ರಮ ಮೇ 25 ರಿಂದ ಜೂ.1ರವರೆಗೆ ಕದ್ರಿ ಶ್ರೀ ಮಂಜುನಾಥ ಕ್ಷೇತ್ರದ ರಾಜಾಂಗಣದಲ್ಲಿ ನಡೆಯಲಿದೆ.



ಮೇ 25 ರಂದು ಮಧ್ಯಾಹ್ನ 3 ರಿಂದ 5ರವರೆಗೆ ದಕ್ಷಾಧ್ವರ ತಾಳಮದ್ದಳೆ ಜರುಗಲಿದೆ. ಸಂಜೆ 5 ರಿಂದ ಶ್ರೀ ಏಕಾದಶಿ ದೇವಿ ಮಹಾತ್ಮೆ ಯಕ್ಷಗಾನ ಬಯಲಾಟ, ಮೇ 26 ರಂದು ಮೀನಾಕ್ಷಿ ಕಲ್ಯಾಣ, ಮೇ 27 ರಂದು ಕಚ-ದೇವಯಾನಿ, ಮೇ 28 ರಂದು ಕೃಷ್ಣಾರ್ಜುನ, ಮೇ 29ರಂದು ಬಬ್ರುವಾಹನ, ಮೇ 30 ರಂದು ಮಧ್ಯಾಹ್ನ 2.30 ರಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಜರುಗಲಿದೆ ಎಂದು ಸಂಸ್ಥೆಯ ನಿರ್ದೇಶಕ ವರ್ಕಾಡಿ ರವಿ ಅಲೆವೂರಾಯ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇ 31ರಂದು ಮಹಿಳಾ ತಾಳಮದ್ದಳೆ ಸಂಭ್ರಮ ನಡೆಯಲಿದ್ದು, ಬೆಳಗ್ಗೆ 9 ರಿಂದ 11ರವರೆಗೆ ನಾಸಾಚ್ಛೇದನ, 11 ರಿಂದ 1ರವರೆಗೆ ಗಿರಿಜಾ ಕಲ್ಯಾಣ, 1 ರಿಂದ 3ರವರೆಗೆ ರಾವಣ ವಧೆ, 3 ರಿಂದ 5.30ರವರೆಗೆ ಮಂಡೋದರಿ ಪರಿಣಯ, ಸಂಜೆ 5.30 ರಿಂದ ಶ್ರೀಕೃಷ್ಣ ಲೀಲೆ, ಚಂದ್ರಾವಳಿ ವಿಲಾಸ ಬಯಲಾಟ ನಡೆಯಲಿದೆ. ಜೂ.1ರಂದು ಸಂಜೆ 5.30 ರಿಂದ ಜಾಬಾಲಿ ನಂದಿನಿ ಸಂವಾದ ನಡೆಯಲಿದೆ ಎಂದು ವಿವರಿಸಿದರು.

ಮಹೇಶ್ ಮಣಿಯಾಣಿ ದೊಡ್ಡತೋಟ, ಯೋಗೀಶ್ ದೇವಾಡಿಗ ಕೊಂಬಾಡಿ, ರವಿ ಮುಂಡಾಜೆ, ವಿನಯ ಆಚಾರ್ಯ ಹೊಸಬೆಟ್ಟು, ಮುರಳೀಧರ ಭಟ್ ಕಟೀಲು, ದೇವದಾಸ್ ಕೂಳೂರು, ವಿಕ್ಟರ್ ಆಂಡ್ರಾದೆ, ಕಲಾವತಿ ಟೀಚರ್ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸಂಸ್ಥೆಯ ಗೌರವ ಸಂಚಾಲಕ ಡಾ.ಹರಿಕೃಷ್ಣ ಪುನರೂರು, ಸುಧಾಕರ ರಾವ್ ಪೇಜಾವರ, ವರ್ಕಾಡಿ ಮಾಧವ ನಾವಡ, ಸರಯೂ ಮಹಿಳಾ ತಂಡದ ಅಧ್ಯಕ್ಷೆ ವಿಜಯಲಕ್ಷ್ಮಿ ಎಲ್. ಎನ್., ಗೌತಮ್ ಭಂಡಾರಿ, ಸೈಶಾ ಭಂಡಾರಿ ಉಪಸ್ಥಿತರಿದ್ದರು.

ಗೋಹತ್ಯೆ ನಡೆದ ಸ್ಥಳ, ಸಾಗಾಟ ವಾಹನಗಳ ಮುಟ್ಟುಗೋಲು | ವಿಹಿಂಪ, ಬಜರಂಗ ದಳ ಆಗ್ರಹ
ಪೊಲೀಸ್ ಇಲಾಖೆ ಗೋಹತ್ಯೆ ತಡೆಯಲಿ

ಮಂಗಳೂರು: ರಾಜ್ಯದಲ್ಲಿ ಗೋವಂಶದ ಹತ್ಯೆ ನಿಷೇಧಿಸಿದ್ದು, ಗೋಹತ್ಯೆ ಶಿಕ್ಷಾರ್ಹ ಅಪರಾಧವಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಗೋಹತ್ಯೆ ತಡೆಯಬೇಕು, ಗೋವಂಶದ ಹತ್ಯೆ, ಹಿಂಸೆ ಹಾಗೂ ಬಲಿ (ಕುರ್ಬಾನಿ) ನೀಡಿದಲ್ಲಿ ಅಂತಹ ಸ್ಥಳವನ್ನು ಸರಕಾರ ಮುಟ್ಟುಗೋಲು ಹಾಕಬೇಕು. ಕೇವಲ ಒಂದು ಜಾನುವಾರನ್ನು ಕುರ್ಬಾನಿ ನೀಡಿದರೂ, ವಧೆ ಮಾಡಿದರೂ ಅಂತಹ ಕಟ್ಟಡ, ಖಾಲಿ ಸ್ಥಳ, ಮನೆ ಅಥವಾ ಇನ್ನಾವುದೇ ಸ್ಥಳವನ್ನು ಸರಕಾರ ಮುಟ್ಟುಗೋಲು ಹಾಕಬೇಕಾಗಿದ್ದು, ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ವಿಶ್ವಹಿಂದೂ ಪರಿಷತ್ ಆಗ್ರಹಿಸಿದೆ.

ಪೊಲೀಸರು ತಮ್ಮ ಪೂರ್ಣ ಅಧಿಕಾರ ಉಪಯೋಗಿಸಿ ಸಂಪೂರ್ಣವಾಗಿ ಗೋವಂಶದ ಹತ್ಯೆ ಹಿಂಸೆ ಹಾಗೂ ಬಲಿ (ಕುರ್ಬಾನಿ) ತಡೆಯಬೇಕು. ಗೋರಕ್ಷಣೆಯ ಪುತಿ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಒಂದೇ ಒಂದು ಗೋ ವಂಶದ ಹತ್ಯೆ, ಹಿಂಸೆ ಆಗದಂತೆ ಪೊಲೀಸರೇ ಬೀಟ್ ಪೊಲೀಸ್ ಅಥವಾ ವಿಚಕ್ಷಣ ವ್ಯವಸ್ಥೆ ಮೂಲಕ ಮಾಹಿತಿಯನ್ನು ಪಡೆದುಕೊಂಡು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಬೀಟ್ ಪೊಲೀಸ್ ಸರಿಯಾದ ಮಾಹಿತಿಯನ್ನು ಕ್ಲಪ್ತ ಸಮಯಕ್ಕೆ ತೆಗೆದುಕೊಳ್ಳದೆ ಗೋವಂಶದ ಹತ್ಯೆ, ಕುರ್ಬಾನಿ ನಡೆದಲ್ಲಿ ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ ಅವರ ಮೇಲೆ ಇಲಾಖಾ ಕ್ರಮ ಕೈಗೊಳ್ಳಬೇಕು ಎಂದು ವಿಹಿಂಪ ಪ್ರಾಂತ ಕಾರ್ಯಕಾರಿಣಿ ಸದಸ್ಯ ಕಟೀಲು ದಿನೇಶ್ ಪೈ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಗೋವಿನ ಹಿಂಸಾತ್ಮಕ ಸಾಗಾಟ ತಡೆಯಲು ಪೊಲೀಸರಿಗೆ ಸಂಪೂರ್ಣ ಅಧಿಕಾರವಿದ್ದು ಯಾವುದೇ ವಾಹನದಲ್ಲಿ ಅಕ್ರಮ ಗೋಸಾಗಾಟ ಆಗದಂತೆ ವಿಶೇಷವಾಗಿ ಮೇ 28ರ ವರೆಗೆ ಸಂಪೂರ್ಣ ಬಂದೋಬಸ್ತ್, ಗಡಿಭಾಗದಲ್ಲಿ ಚೆಕ್ ಪೋಸ್ಟ್ ಹಾಕಿ ತಡೆಯಬೇಕು. ಎಲ್ಲ ವಾಹನಗಳನ್ನು ಸರಿಯಾಗಿ ತಪಾಸಣೆ ಮಾಡಬೇಕು. ಅಗತ್ಯ ಇರುವ ಸ್ಥಳಗಳಲ್ಲಿ ಮೇ 28ರವರೆಗೆ ಹೆಚ್ಚುವರಿ ಸಿಬ್ಬಂದಿ ಅಥವಾ ಪೊಲೀಸ್ ಮೀಸಲು ಪಡೆ ನಿಯುಕ್ತಿಗೊಳಿಸಬೇಕು ಎಂದು ಒತ್ತಾಯಿಸಿದರು.

ಗೋಕಳ್ಳತನ ಆದ ಸ್ಥಳಕ್ಕೆ ತಕ್ಷಣ ಪೊಲೀಸ್ ಶ್ವಾನ ಕರೆಸಿ ಗೋವಿನ ವಧೆ ಆಗುವ ಮೊದಲೇ ಮಾಲು ಸಹಿತ ಕಳ್ಳನನ್ನು ಬಂಧಿಸಬೇಕು. ವಾಹನದೊಳಗೆ ಜಾನುವಾರುಗಳಿವೆಯೋ ಎಂದು ಪರೀಕ್ಷಿಸಲು ಟೋಲ್ ಪ್ಲಾಝಾದಂತಹ ಕಡೆಗಳಲ್ಲಿ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಇಲೆಕ್ಟಾನಿಕ್ ಸ್ಕ್ಯಾನರ್ ಬಳಸಬೇಕು. ಗೋವಂಶ ವಧೆ ಆಗುತ್ತಿದೆಯೋ ಮಾಹಿತಿ ತಿಳಿದುಕೊಳ್ಳಲು ಸೈಲೆಂಟ್ ಡ್ರೋನ್ ಬಳಸಬೇಕು. ಪುನರಾವರ್ತಿತ ಅಪರಾಧಿಗಳನ್ನು ತಂತ್ರಜ್ಞಾನದ ಮೂಲಕ ತಕ್ಷಣ ಗುರುತಿಸಿ ಅವರಿಗೆ ಮತ್ತೆ ಜಾಮೀನು ಸಿಗದ ಹಾಗೆ ಕೋರ್ಟ್‌ಗೆ ಮಾಹಿತಿ ನೀಡಬೇಕು ಎಂದರು.

ಅಕ್ರಮ ಗೋಸಾಗಾಟ, ಗೋವಧೆ ಮಾಂಸ ಮಾರಾಟ ಮಾಡುವ ದೊಡ್ಡ ಜಾಲ ಇದ್ದು ಅವರನ್ನು ಗುರುತಿಸಿ ಕೋಕಾ ಕಾಯಿದಯಂತೆ ಪ್ರಕರಣ ದಾಖಲಿಸಬೇಕು. ಪ್ರತಿಯೊಂದು ಪ್ರಕರಣ ಗಂಭೀರವಾಗಿ ತೆಗೆದುಕೊಂಡು ಗೋವುಗಳು ಎಲ್ಲಿಂದ ತಂದದ್ದು ಎಂಬುದನ್ನು ತನಿಖೆ ಮಾಡಬೇಕು. ಎಲ್ಲಿಗೆ ಹೋಗುತ್ತಿತ್ತು, ಯಾರು ಮಾಂಸ ಖರೀದಿಸುತ್ತಿದ್ದರು ಎಲ್ಲವೂ ತನಿಖೆ ಮಾಡಬೇಕು. ಅಕ್ರಮ ಗೋಸಾಗಾಟದ ವಾಹನ ಮಾಲಕರನ್ನು ಬಂಧಿಸಬೇಕು. ಜಾಮೀನು ಮೇಲೆ ಹೊರಗಿರುವ ಬಹುತೇಕ ವಾಹನ ಮತ್ತೆ ಅದೇ ಅಪರಾಧ ಮಾಡುವ ಸಾಧ್ಯತೆ ಇದ್ದು, ಇಂತಹ ವಾಹನಗಳನ್ನು ಮೇ 28ರವರೆಗೆ ಪೊಲೀಸ್ ಠಾಣೆಯಲ್ಲಿ ಇರಿಸಬೇಕು. ಗೋರಕ್ಷಣೆಗೆ ಪೊಲೀಸರು ಸಾರ್ವಜನಿಕರ ಸಹಕಾರ ತೆಗೆದುಕೊಂಡು ಗೋವಧೆ ತಡೆಯಬೇಕು ಎಂದು ಅವರು ಹೇಳಿದರು.

ಸೆಕ್ಷನ್ 40ರ ಪ್ರಕಾರ, ಯಾವುದೇ ಸಾಮಾನ್ಯ ಪ್ರಜೆಯು ತನ್ನ ಕಣ್ಣೆದುರೇ ಗಂಭೀರ ಅಪರಾಧವನ್ನು (ಜಾಮೀನು ರಹಿತ ಮತ್ತು ಸಂಜ್ಞೆಯ ಅಪರಾಧ) ಎಸಗುವ ವ್ಯಕ್ತಿಯನ್ನು ಬಂಧಿಸಲು ಅಥವಾ ಇತರರ ಸಹಾಯದಿಂದ ಬಂಧಿಸಲು ಅಧಿಕಾರ ಹೊಂದಿರುತ್ತಾನೆ. ಬಂಧಿಸಿದವರನ್ನು ವಿಳಂಬ ಮಾಡದೆ ಗರಿಷ್ಠ ಆರು ಘಂಟೆಯೊಳಗೆ ಪೊಲೀಸರಿಗೆ ಹಸ್ತಾಂತರಿಸಬೇಕು. ಗ್ರಾಮದಲ್ಲಿ ಗೋ ಕಳ್ಳತನ ತಡೆಯಲು ಗೋಪಾಲಕರ ಮೂಲಕ ಗ್ರಾಮ ಗೋರಕ್ಷ ದಳ ರಚಿಸಲು ಬಜರಂಗದಳ ಸಹಕರಿಸುತ್ತದೆ ಎಂದರು.

ಬಜರಂಗದಳ ಪ್ರಾಂತ ಸಹಸಂಯೋಜಕ ಭುಜಂಗ ಕುಲಾಲ್, ಜಿಲ್ಲಾ ಗೋರಕ್ಷಾ ಪ್ರಮುಖ್ ಹರೀಶ್ ಶೇಟ್, ರವಿ ಅಸೈಗೋಳಿ ಉಪಸ್ಥಿತರಿದ್ದರು.



> **ಗೋಹತ್ಯೆ ತಡೆಗೆ ವಿಶೇಷ ಪೊಲೀಸ್ ತಂಡ ರಚಿಸಿ**
>
> ಕರಾವಳಿ ಪ್ರದೇಶ ಪ್ರಸ್ತುತ ಶಾಂತಿಯುತವಾಗಿದ್ದು, ಗೋವುಗಳ ಹತ್ಯೆ, ಅಕ್ರಮ ಸಾಗಾಟ ನಡೆದರೆ ಮತ್ತು ಶಾಂತಿ- ಸುವ್ಯವಸ್ಥೆಗೆ ಭಂಗ ಉಂಟಾಗಬಹುದು. ರಾಜ್ಯದಲ್ಲಿ ಬೆಂಗಳೂರಿನಲ್ಲಿ ಮಾತ್ರ ಅಧಿಕೃತ ಕಸಾಯಿಖಾನೆ ಇದ್ದು, ಮಂಗಳೂರು ಸಹಿತ ರಾಜ್ಯದ ವಿವಿಧೆಡೆ ಅಕ್ರಮ ಕಸಾಯಿಖಾನೆಗಳಿಂದ ಗೋಮಾಂಸ ಪೂರೈಕೆಯಾಗುತ್ತಿದೆ. ಮೇ ತಿಂಗಳಿನಲ್ಲಿ 20ಕ್ಕೂ ಹೆಚ್ಚು ಗೋಹತ್ಯೆ, ಅಕ್ರಮ ಸಾಗಾಟ ಪ್ರಕರಣಗಳು ನಡೆದಿವೆ. ಡ್ರಗ್ಸ್ ಹಾಗೂ ಇತರ ದಂಧೆಗಳಿಗೆ ಪೊಲೀಸರು ಕಡಿವಾಣ ಹಾಕಿದ್ದು, ಗೋವಿನ ವಿಚಾರದಲ್ಲೂ ಇಂತಹ ನಿರ್ಧಾರ ಕೈಗೊಳ್ಳಬೇಕು. ಅದಕ್ಕಾಗಿ ವಿಶೇಷ ಪೊಲೀಸ್ ತಂಡ ರಚಿಸಬೇಕು.
>
> ■ ಶರಣ್ ಪಂಪ್‌ವೆಲ್, ವಿಹಿಂಪ ಪ್ರಾಂತ ಸಹಕಾರ್ಯದರ್ಶಿ

ಗೋಹತ್ಯೆ ಮುಕ್ತ ಬಕ್ರೀದ್ ನಡೆಯಲಿ

ಗೋಮಾಂಸ ಸೇವನೆ ವಿಚಾರದಲ್ಲಿ ಬಂಟ್ವಾಳದ ಗೂಡಿನಬಳಿ ಎಂಬಲ್ಲಿ ಎಸ್‌ಡಿಪಿಐ ಮುಖಂಡ ಪ್ರಚೋದನಾತ್ಮಕ ಹೇಳಿಕೆ ನೀಡಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಗೋಹತ್ಯೆ ತಡೆಯುವುದು ನಮ್ಮ ಹಕ್ಕು. ಈ ಬಾರಿಯ ಬಕ್ರೀದ್‌ನಲ್ಲಿ ಗೋಹತ್ಯೆ ಮಾಡಬೇಡಿ, ಗೋವುಗಳನ್ನು ಕುರ್ಬಾನಿ ನೀಡಬೇಡಿ ಎಂದು ಮುಸ್ಲಿಂ ಧರ್ಮಗುರುಗಳು, ಮುಸ್ಲಿಂ ಸಮಾಜ ಹಾಗೂ ರಾಜಕೀಯ ಮುಖಂಡರು ಕರೆ ನೀಡಲಿ. ಆ ಮೂಲಕ ನಿಜವಾದ ಸಾಮರಸ್ಯ, ಸೌಹಾರ್ದತೆ ಪ್ರಕಟಿಸಲಿ ಎಂದು ಶರಣ್ ಪಂಪ್‌ವೆಲ್ ಹೇಳಿದರು.

ಮಾಹಿತಿ ನೀಡಿ

ಗೋಸಂಬಂಧಿ ಅಪರಾಧ ಕಂಡು ಬಂದರೆ ಸಾರ್ವಜನಿಕರು ತಕ್ಷಣ 112 ಮೂಲಕ ಪೊಲೀಸರಿಗೆ ಮಾಹಿತಿ ಕೊಡಬೇಕು. ಮತ್ತು ಸಹಕಾರಕ್ಕಾಗಿ ಸ್ಥಳೀಯ ವಿಶ್ವ ಹಿಂದು ಪರಿಷತ್ ಮತ್ತು ಬಜರಂಗದಳ ಕಾರ್ಯಕರ್ತರನ್ನು ಸಂಪರ್ಕಿಸಬೇಕು. ಸಾರ್ವಜನಿಕರಿಂದ ಮಾಹಿತಿ ದೊರೆತ ಕೂಡಲೇ ಪೊಲೀಸರು ಗೋವಂಶವನ್ನು ರಕ್ಷಿಸಲೇಬೇಕು. ದೂರನ್ನು ದಾಖಲಿಸಿದಾಗ ಗೋವುಗಳನ್ನು ರಕ್ಷಿಸಲು ಪೊಲೀಸರಿಗೆ ಆಗದಿದ್ದರೆ ಪೊಲೀಸ್ ವಿಫಲತೆಗೆ ಯಾರು ಕಾರಣರೋ ಅವರಿಗೆ ಶಿಕ್ಷೆಯಾಗುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಲಾಗುವುದು ಮತ್ತು ವಿಫಲವಾದರೆ ಪೊಲೀಸ್ ವೈಫಲ್ಯದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗು ವಂತೆ ನ್ಯಾಯಾಲಯದಲ್ಲಿ ಸೂಕ್ತ ದಾವೆ ಹಾಕ ಲಾಗುವುದು ಎಂದು ಕಟೀಲು ದಿನೇಶ್ ಪೈ ಹೇಳಿದರು.

ಮಂಗಳೂರು ವಿವಿ-ಬಾಂಗೋರ್ ವಿವಿ ನಡುವೆ ಶೈಕ್ಷಣಿಕ ಸಹಕಾರ



ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಯುಕೆ ಯ ಬಾಂಗೋರ್ ವಿಶ್ವವಿದ್ಯಾನಿಲಯ ನಡುವೆ ನಡೆಯುವ 'ಅಂತಾರಾಷ್ಟ್ರೀಯ ಶಿಕ್ಷಣ ನಾವೀನ್ಯತೆ ಮತ್ತು ಪ್ರಜಾಪ್ರಭುತ್ವ ಪಾಲುದಾರಿಕೆ-ನಿರ್ಮಾಣ' ಎಂಬ ಸಂಶೋಧನಾ ಕಾರ್ಯಯೋಜನೆ, ಶೈಕ್ಷಣಿಕ ಸಹಕಾರ ಸಂಬಂಧಿಸಿದಂತೆ ಸಭೆಯು ಇತ್ತೀಚೆಗೆ ಮಂಗಳೂರು ವಿವಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಗಳೂರು ವಿವಿ ಹಾಗೂ ಬಾಂಗೋರ್ ವಿವಿಗಳ ನಡುವಿನ ಶೈಕ್ಷಣಿಕ ಸಹಕಾರಗಳ ಕುರಿತು ಚರ್ಚಿಸಲಾಯಿತು.

ಈ ಯೋಜನೆಯ ಮೂಲಕ ಉಭಯ ವಿಶ್ವವಿದ್ಯಾಲಯಗಳ ಪಠ್ಯಕ್ರಮ, ಕ್ರೆಡಿಟ್ ವ್ಯವಸ್ಥೆ, ಮೌಲ್ಯಮಾಪನ ವಿಧಾನಗಳು ಮತ್ತು ಬೋಧನಾ ವಿಧಾನಗಳ ಹೊಂದಾಣಿಕೆ, ಸಂಶೋಧನಾ ತರಬೇತಿ ಮತ್ತು ಡಿಜಿಟಲ್ ಕಲಿಕೆ, ಸಾಂಸ್ಕೃತಿಕ ಹೊಂದಾಣಿಕೆ, ಉಪನ್ಯಾಸಕರ ವಿನಿಮಯ, ಸಂಯುಕ್ತ ಕಾರ್ಯಾಗಾರಗಳು, ಸಂಶೋಧನಾ ಸಹಕಾರ, ಅತಿಥಿ ಉಪನ್ಯಾಸಗಳು ಮತ್ತು ಪ್ರಕಟಣಾ ಯೋಜನೆಗಳಂತಹ ದೀರ್ಘಕಾಲೀನ ಶೈಕ್ಷಣಿಕ ಚಟುವಟಿಕೆಗಳ ಮುನ್ನಡೆಯ ಬಗ್ಗೆ ಚರ್ಚಿಸಲಾಯಿತು.

ಬಾಂಗೋರ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಜೋಶುವಾ ಆಂಡ್ರೀವ್ಸ್ , ಸಮಾಜ ವಿಜ್ಞಾನಿ ಲಿಸಾ ಸ್ಪಾರ್ಕ್ಸ್ ಅವರು ಶೈಕ್ಷಣಿಕ ಯೋಜನೆ ಹಾಗೂ ಮಹತ್ವದ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಂಗಳೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ, ಹಣಕಾಸು ಅಧಿಕಾರಿ ಪಂಚಲಿಂಗ ಸ್ವಾಮಿ ಹಾಗೂ ಪ್ರಾಧ್ಯಾಪಕರು ಭಾಗವಹಿಸಿದ್ದರು.

ಕ್ರೀಡಾಂಕಣಕಾರ ಜಗದೀಶ್ಚಂದ್ರ ಅಂಚನ್‌ಗೆ 'ಜಾನಪದ ರತ್ನ - 2026' ಪ್ರಶಸ್ತಿ ಪ್ರದಾನ

ಮಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಜಾನಪದ ಪರಿಷತ್ತು ಹಾಗೂ ಕೇರಳ ಗಡಿನಾಡ ಘಟಕ ಸಂಯುಕ್ತ ಆಶ್ರಯದಲ್ಲಿ ನಾಟ್ಯರತ್ನಂ ಕಣ್ಣನ್ ಪಾಟಾಳಿ ಸ್ಮಾರಕ ಕಥಕಳಿ ಟ್ರಸ್ಟ್ ಸಂಯೋಜನೆಯಲ್ಲಿ ನಡೆದ 'ಸಮನ್ವಯ' ಜಾನಪದ ಉತ್ಸವದ ಸಂದರ್ಭದಲ್ಲಿ ಘೋಷಿಸಲಾದ 'ಜಾನಪದ ರತ್ನ - 2026' ಪ್ರಶಸ್ತಿಯನ್ನು ಕ್ರೀಡಾ ಅಂಕಣಕಾರ ಎಸ್. ಜಗದೀಶ್ಚಂದ್ರ ಅಂಚನ್ ಸೂಟರ್‌ಪೇಟೆ ಅವರಿಗೆ ಮೇ 16ರಂದು ಪ್ರದಾನ ಮಾಡಲಾಯಿತು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಪ್ರದಾನ ಮಾಡಿದರು. ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ , ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಕಾಸರಗೋಡು ತಾಲೂಕಿನ ಕುಡಾಲ್ ಮೇರ್ಕಳ ಅನುದಾನಿತ ಕಿರಿಯ ಪ್ರಾಥಮಿಕ ಶಾಲಾ ವಠಾರದಲ್ಲಿ ಶನಿವಾರ ನಡೆದ ಕೆಯುಡಬ್ಲ್ಯುಜೆ ದತ್ತಿನಿಧಿ ಪ್ರಶಸ್ತಿ ಹಾಗೂ ಕನ್ನಡ ಸಂಸ್ಕೃತಿ ಉತ್ಸವ ಕಾರ್ಯಕ್ರಮದಲ್ಲಿ ಜಾನಪದ ರತ್ನ ಪ್ರಶಸ್ತಿಯನ್ನು ಎಸ್. ಜಗದೀಶ್ಚಂದ್ರ ಅಂಚನ್ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ , ಕೆಯುಡಬ್ಲ್ಯುಜೆ ದತ್ತಿನಿಧಿ ಪ್ರಶಸ್ತಿ ಹಾಗೂ ಕನ್ನಡ ಸಂಸ್ಕೃತಿ ಉತ್ಸವದ ಸ್ವಾಗತ ಸಮಿತಿ ಅಧ್ಯಕ್ಷ ಸೋಮಶೇಖರ್ ಜೆ.ಎಸ್., ಕಲ್ಲೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ್ ಕುಮಾರ ಕಲ್ಲೂರ, ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಕೆಯುಡಬ್ಲ್ಯುಜೆ ರಾಜ್ಯ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ಕರ್ನಾಟಕ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟ್ಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ , ಕಾಸರಗೋಡು ಜಿಲ್ಲಾ ಕನ್ನಡ ಮಾಧ್ಯಮ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಮೊದಲಾದವರು ಉಪಸ್ಥಿತರಿದ್ದರು.

ಜಗದೀಶ್ಚಂದ್ರ ಅಂಚನ್ ರಾಜ್ಯ, ಅಂತಾರಾಜ್ಯ ಹಾಗೂ ಜಿಲ್ಲಾ ಮಟ್ಟದ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಸುಮಾರು 32 ವರ್ಷ ಮಾಧ್ಯಮ ಕ್ಷೇತ್ರದಲ್ಲಿ ಕ್ರೀಡಾ ಅಂಕಣಕಾರರಾಗಿ ಗುರುತಿಸಿಕೊಂಡಿದ್ದಾರೆ.

ದ.ಕ. ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಮಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಮೇ 22 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 8.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 10 ಗಮಟೆಗೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ನೇತ್ರಾವತಿ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಯೋಜನಾ ಸಮಿತಿ ಸಭೆ,

10.45ಕ್ಕೆ ಕದ್ರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಾಸ್ಟೆಲ್ ಉದ್ಘಾಟನೆ, 11.15ಕ್ಕೆ ಪುರಭವನದಲ್ಲಿ 15ನೇ ಹಣಕಾಸು ಯೋಜನೆಯಡಿ ರೂ.44.00 ಕೋಟಿಗಳ ಅನುದಾನದಲ್ಲಿ 68 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಕಾಮಗಾರಿಗೆ ಶಿಲಾನ್ಯಾಸ, ಕಋಅಏಐಋ ಯೋಜನೆಯಡಿ ರೂ.21.00 ಕೋಟಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಕಾಮಗಾರಿಗೆ ಶಿಲಾನ್ಯಾಸ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಎಂಆರ್‌ಪಿಎಲ್‌ನ ಸಿಎಸ್‌ಆರ್ ಅನುದಾನದಲ್ಲಿ ಮೆಡಿಸಿನ್ ಬ್ಲಾಕ್‌ನ 4ನೇ ಮತ್ತು 5ನೇ ಮಹಡಿ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ, ರೂ.35 ಕೋಟಿಗಳಲ್ಲಿ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಮೊದಲನೇ ಹಂತದ ಹೊಸ ಒಪಿಡಿ ಬ್ಲಾಕ್ ಕಾಮಗಾರಿಗೆ ಶಿಲಾನ್ಯಾಸ, ರೂ.2 ಕೋಟಿಗಳ ವೆಚ್ಚದಲ್ಲಿ 500 ಕೆಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಘಟಕ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ, ತೆಂಕ ಕಜೆಕಾರು ಮತ್ತು ಮಾಂಟ್ರಾಡಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಉದ್ಘಾಟನೆ, ಮಧ್ಯಾಹ್ನ 2.50 ಕ್ಕೆ ಜೋಕಟ್ಟೆಯಲ್ಲಿ ಕೆ.ಬಿ.ಎಸ್. ರೈಲ್ವೆ ಗೇಟ್ ಬಳಿಯಿಂದ -ಎಂ.ಎಸ್.ಇ.ಝೆಡ್. ಎಲ್- ಹೆಚ್.ಪಿ.ಸಿ.ಎಲ್ ಮುಖಾಂತರ ಹಳೇ ಮಸೀದಿ ಬಳಿಯ ರೈಲ್ವೆ ಗೇಟ್ ವರೆಗಿನ ರಸ್ತೆ ಕಾಂಕ್ರೀಟೀಕರಣ ಉದ್ಘಾಟನೆ, ಸಂಜೆ 630 ಗಂಟೆಗೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಕರ್ಣಾಟಕ ಬ್ಯಾಂಕ್: 2025-26ನೇ ಸಾಲಿಗೆ 1,310 ಕೋ. ರೂ. ಲಾಭ

ಮಂಗಳೂರು: ದೇಶದ ಖಾಸಗಿ ರಂಗದ ಪ್ರಮುಖ ಬ್ಯಾಂಕ್‌ಗಳಲ್ಲೊಂದಾದ ಕರ್ಣಾಟಕ ಬ್ಯಾಂಕ್ 2025-26ನೇ ಸಾಲಿಗಾಗಿ ದಾಖಲೆಯ 1,310.50ಕೋ.ರೂ.ಗಳ ನಿವ್ವಳ ಲಾಭಗಳಿಸಿ ಸಾರ್ವಕಾಲಿಕ ಸಾಧನೆಗೈದಿದೆ.ಈ ಅವಧಿಯಲ್ಲಿ 1,92,118.67ಕೋ.ರೂ.ಗಳ ವ್ಯವಹಾರ ನಡೆಸಿ ಹೊಸ ಸಾಧನೆಯ ಹೊಸ ಎತ್ತರವನ್ನು ದಾಖಲಿಸಿದೆ ಎಂದು ಬ್ಯಾಂಕಿನ ಆಡಳಿತ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಎಸ್.ಭಟ್ ಅವರು ಬ್ಯಾಂಕಿನ ಮಂಗಳೂರಿನ ಕೇಂದ್ರ ಕಚೇರಿಯಲ್ಲಿ ಘೋಷಿಸಿದರು.

ಬ್ಯಾಂಕಿನ ಆಡಳಿತ ನಿರ್ದೇಶಕರು ಮಂಗಳವಾರ ಮಂಗಳೂರಿನಲ್ಲಿ ನಡೆದ ಸಭೆಯಲ್ಲಿ 2026ರ ಮಾ.31ಕ್ಕೆ ಅಂತ್ಯಗೊಳ್ಳುವ ಬ್ಯಾಂಕಿನ ತ್ರೈಮಾಸಿಕ ಮತ್ತು ವಾರ್ಷಿಕ ಹಣಕಾಸು ಫಲಿತಾಂಶಗಳ ಪರಿಶೋಧನೆಯನ್ನು ಅಂಗೀಕರಿಸಿದ್ದು, ಶೇರುದಾರರಿಗೆ ಶೇ.50ರ ಲಾಭಾಂಶವನ್ನು ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಅನುಮೋದಿಸುವ ಬಗ್ಗೆ ಪ್ರಸ್ತಾವಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಬ್ಯಾಂಕಿನ ಠೇವಣಿ 1,08,778.75ಕೋ.ರೂ.ಗಳಿಗೆ ತಲುಪಿದ್ದು, ತ್ರೈಮಾಸಿಕ ಬೆಳವಣಿಗೆ ಯನ್ನು ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ (ಕ್ಯೂಒಕ್ಯೂ) ಶೇ.4ರ ಬೆಳವಣಿಗೆಯನ್ನು ದಾಖಲಿಸಿದೆ.2025ರ ಡಿ.31ಕ್ಕೆ ಇದು 1,04,111.52ಕೋ.ರೂ.ಗಳಾಗಿತ್ತು. ಬ್ಯಾಂಕಿನ ಚಾಲ್ತಿಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಗಳಲ್ಲಿನ ಠೇವಣಿಯು 36,559.66ಕೋ.ರೂ.ಗಳಿಗೆ ತಲುಪಿ ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ (ಕ್ಯೂಒಕ್ಯೂ) ಶೇ.11ರ ಬೆಳವಣಿಗೆಯನ್ನು ದಾಖಲಿಸಿದೆ. ಇದು ಹಿಂದಿನ ಅವಧಿಯಲ್ಲಿ 32,828.70ಕೋ.ರೂ.ಗಳಾಗಿದ್ದು, ಶೇ.33.61ರ ಕಾಸಾ ಅನುಪಾತ (ಹಿಂದಿನ ಅವಧಿಯಲ್ಲಿದ್ದು ಶೇ.31.53 ಆಗಿತ್ತು) ದಾಖಲಿಸಿದೆ.




ಒಟ್ಟು ಮುಂಗಡ 83,339.92ಕೋ.ರೂ.(ಹಿಂದಿನ ವರ್ಷ 77,282.85ಕೋ.ರೂ.)ಗಳಾಗಿದ್ದು, ಇದು ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ ಶೇ.8ರ ಬೆಳವಣಿಗೆ ತೋರಿಸಿದೆ.ಬ್ಯಾಂಕಿನ ನಿವ್ವಳ ಬಡ್ಡಿ ಗಳಿಕೆ ಕೂಡ 2025ರ ಡಿ.31ರಲ್ಲಿದ್ದ ಶೇ.2.92ರಿಂದ 2026ರ ಮಾ.31ಕ್ಕೆ ಶೇ.3.07ಕ್ಕೆ ಏರಿಕೆಯಾಗಿದ್ದು, ಇದರಿಂದಾಗಿ ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ 15ಬಿಪಿಎಸ್ ಹೆಚ್ಚಳವನ್ನು ದಾಖಲಿಸಿದೆ.

2026ರ ಮಾ.31ಕ್ಕೆ ಅಂತ್ಯಗೊಳ್ಳುವ ತ್ರೈಮಾಸಿಕಕ್ಕೆ ಬ್ಯಾಂಕಿನ ನಿವ್ವಳ ಲಾಭ 408.19ಕೋ.ರೂ.ಗಳಾಗಿದ್ದು, ಇದು 2025ರ ಡಿ.31ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ 290.79ಕೋ.ರೂ.ಗಳಾಗಿದ್ದು, ಇದು ಶೇ.40ರ ಕ್ಯೂಒಕ್ಯೂ ಸುಧಾರಣೆಯನ್ನು ತೋರಿಸಿದೆ. ವಾರ್ಷಿಕ ನಿವ್ವಳ ಲಾಭದಲ್ಲೂ 1,272.37 ಕೋ.ರೂ.ಗಳಿದ್ದುದು ಈ ವರ್ಷ 1,310.50 ಕೋ.ರೂ.ಗಳಿಗೆ ಏರಿಕೆಯಾಗುವ ಮೂಲಕ ಶೇ.3ರ ವೈಒವೈ ಸುಧಾರಣೆಯನ್ನು ದಾಖಲಿಸಿದೆ.ಇದರ ಪರಿಣಾಮ ಬ್ಯಾಂಕಿನ ಆರ್‌ಒಎ ಮತ್ತು ಆರ್‌ಒಇಗಳು ಶೇ.0.92 ಮತ್ತು ಶೇ.9.06ರಿಂದ 2026ರ ಮಾ.31ಕ್ಕೆ ಕೊನೆಗೊಂಡ ತ್ರೈಮಾಸಿಕಕ್ಕೆ ಶೇ.1.27 ಮತ್ತು 12.69ಕ್ಕೆ ಸುಧಾರಿಸಿದೆ. 2025ರ ಡಿಸೆಂಬರ್‌ಗೆ ಹೋಲಿಸಿದರೆ 2026ನೇ ವರ್ಷಕ್ಕೆ ಬ್ಯಾಂಕಿನ ಆಸ್ತಿ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ. ಜಿಎನ್‌ಪಿಎ ಪ್ರಮಾಣ ಶೇ.54ಬಿಪಿಎಸ್‌ಗಳಷ್ಟು ಕಡಿಮೆಯಾಗಿ ಶೇ.3.32ರಿಂದ ಶೇ.2.78ಕ್ಕೆ ಇಳಿಕೆಯಾಗಿದೆ.ಇದೇ ರೀತಿ ಎನ್‌ಎನ್‌ಪಿಎ ಪ್ರಮಾಣ ಕೂಡ 33ಬಿಪಿಎಸ್ ಕಡಿಮೆಯಾಗಿ ಶೇ.1.31ರಿಂದ ಶೇ.0.98ಕ್ಕೆ ಇಳಿಕೆಯಾಗಿದೆ. ಪಿಸಿಆರ್ ಶೇ.61.23ರಿಂದ ಶೇ.65.39ಕ್ಕೆ ಸುಧಾರಿಸಿದೆ.

> ▸▸ ವಾರ್ಷಿಕ ನಿವ್ವಳ ಲಾಭದಲ್ಲೂ 1,272.37 ಕೋ. ರೂ.ಗಳಿದ್ದುದು ಈ ವರ್ಷ 1,310.50 ಕೋ. ರೂ.ಗಳಿಗೆ ಏರಿಕೆಯಾಗುವ ಮೂಲಕ ಶೇ.3ರ ವೈಒವೈ ಸುಧಾರಣೆಯನ್ನು ದಾಖಲಿಸಿದೆ.

ಬ್ಯಾಂಕ್ ಸಾರ್ವಕಾಲಿಕ ನಿವ್ವಳ ಲಾಭಗಳಿಸುವ ಮೂಲಕ ತನ್ನ ಸ್ಥಿತಿಸ್ಥಾಪಕ ವ್ಯವಹಾರ ಮಾದರಿಯನ್ನು ಪ್ರತಿಫಲಿಸಿದ್ದು, ಬೆಳವಣಿಗೆಯ ಕಾರ್ಯತಂತ್ರವನ್ನು ಎತ್ತಿತೋರಿದೆಯಲ್ಲದೆ, ಕಾರ್ಯಾಚರಣೆಯ ದಕ್ಷತೆಯನ್ನು ಸಾರಿ ಹೇಳಿದೆ.ಬ್ಯಾಂಕ್ ಗಳಿಸಿದ ಲಾಭ, ಠೇವಣಿ, ಮುಂಗಡಗಳು , ಹಾಗೆಯೇ ಸಾಲ ನೀಡಿಕೆ ಮತ್ತು ಸಾಲವಸೂಲಾತಿ ವ್ಯವಸ್ಥೆ, ಸಾಲಪೋರ್ಟ್‌ಫೋಲಿಯೋ ಮೇಲೆ ಸ್ಥಿರ ನಿಗಾ... ಇವೆಲ್ಲ ಬ್ಯಾಂಕಿನ ಗ್ರಾಹಕರು ಮತ್ತು ಸಂಬಂಧಪಟ್ಟ ಸ್ಟೇಕ್‌ಹೋಲ್ಡರ್‌ಗಳು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸ, ನಂಬಿಕೆಯ ದ್ಯೋತಕವಾಗಿದೆ ಎಂದು ರಾಘವೇಂದ್ರ ಭಟ್ ಅವರು ತಿಳಿಸಿರುವುದಾಗಿ ಬ್ಯಾಂಕಿನ ಚೀಫ್ ಮ್ಯಾನೇಜರ್ ಹಾಗೂ ಪಿಆರ್‌ಒ ಪಲ್ಲವಿ ಟಿ.ಎಸ್. ಅವರ ಪ್ರಕಟನೆ ತಿಳಿಸಿದೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ಪಂಜಾಬ್	13	6	6	1	13	+0.227
ರಾಜಸ್ಥಾನ	12	6	6	0	12	+0.082
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಕಿರುಸುದ್ದಿ

ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಭಾರತದ ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಐದನೇ ಸುತ್ತಿನ ಪಂದ್ಯದಲ್ಲಿ ಡ್ರಾ ಮಾಡಿಕೊಂಡರು. ಮೊದಲ ಸುತ್ತಿನ ಪಂದ್ಯದಿಂದಲೂ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರಜ್ಞಾನಂದ ಅಮೆರಿಕದ ವೇಸ್ಲಿ ಸೋ ವಿರುದ್ಧ ಆಡಿದರು. ರೂಯಿ ಲೋಪೆಜ್‌ನಿಂದ ಶುರುವಾದ ಪಂದ್ಯದಲ್ಲಿ ಸ್ಪರ್ಧೆ ಸಮವಾಗಿತ್ತು. ಎರಡೂ ಕಡೆಯಿಂದಲೂ ಚಾಣಾಕ್ಷ ಪ್ರದರ್ಶನ ಕಂಡು ಬಂತು. ಎದುರಾಳಿ ಹೇರಿದ ಎಲ್ಲಾ ಒತ್ತಡಗಳನ್ನೂ ನೀಗಿಸಿದ ಪ್ರಜ್ಞಾನಂದ ಪಂದ್ಯವನ್ನು ಡ್ರಾಗೆ ಮುಗಿಸಿದರು. ಪಂದ್ಯಾವಳಿಯಲ್ಲಿ ಅವರು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಇಲ್ಲಿವರೆಗಿನ ಪಂದ್ಯಗಳಲ್ಲಿ ಅವರು, ನಾಲ್ಕು ಡ್ರಾ ಮತ್ತು ಒಂದು ಗೆಲುವಿನೊಂದಿಗೆ 3 ಅಂಕಗಳನ್ನು ಗಳಿಸಿದ್ದು, ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ವ್ಯಾನ್ ಫಾರೆಸ್ಟ್, ಅನೀಶ್ ಗಿರಿ ಮತ್ತು ವಿನ್ಸೆಂಟ್ ಕೀಮರ್ 3.5 ಅಂಕಗಳೊಂದಿಗೆ ಮೊದಲನೇ ಸ್ಥಾನದಲ್ಲಿದ್ದಾರೆ.

ಮೇ 29ರಿಂದ ಸರ್ಫಿಂಗ್ ಓಪನ್

ಬೆಂಗಳೂರು: ಪ್ರತಿಷ್ಠಿತ ಏಳನೇ ಇಂಡಿಯನ್ ಓಪನ್ ಸರ್ಫಿಂಗ್ ಕೂಟ ಮೇ 29ರಿಂದ 31ರವರೆಗೆ ಮಂಗಳೂರಿನ ಬ್ಲ್ಯೂ ಬೇ ತಣ್ಣೀರಭಾವಿಯಲ್ಲಿ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಸರ್ಫಿಂಗ್ ಸ್ಪರ್ಧೆ ನಡೆಯಲಿದೆ. ಹೀಗಿರುವಾಗ ಭಾರತ ಸರ್ಫಿಂಗ್ ಸಂಸ್ಥೆಯು ಭಾರತದ ಬದ್ಧತೆ ಮತ್ತು ಆಸ್ಥೆಯ ಭಾಗವಾಗಿ ಈ ಕೂಟವನ್ನು ಆಯೋಜಿಸಲಿದೆ. ಸರ್ಫಿಂಗ್ ಸ್ವಾಮಿ ಫೌಂಡೇಶನ್, ಮಂತ್ರಾ ಸರ್ಫ್ ಕ್ಲಬ್ ಜತೆಗೆ ಕರ್ನಾಟಕ ಸರ್ಫಿಂಗ್ ಸಂಸ್ಥೆ ಕೂಡ ಇದರ ಆಯೋಜಕತ್ವ ಪಡೆದಿದೆ. ಈ ಬಗ್ಗೆ ಮಂಗಳವಾರದಂದು ಘೋಷಿಸಿ ಮಾತನಾಡಿರುವ ಸಂಸ್ಥೆಯ ಸಂಸ್ಥೆಯ ಉಪಾಧ್ಯಕ್ಷ ರಾಮ್ ಮೋಹನ್, ಸರ್ಫಿಂಗ್ ಓಪನ್ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪ್ರದರ್ಶನವನ್ನು ಗಟ್ಟಿಗೊಳಿಸಲಿದೆ. ನಮ್ಮ ಸ್ಪರ್ಧಿಗಳ ಪ್ರದರ್ಶನದ ಮೇಲೆ ಸಕಾರಾತ್ಮಕ ಪರಿಣಾಮ ನೀಡಲಿದೆ, ಇದು ಅಷ್ಟೇ ಅಲ್ಲದೆ, ಅಭ್ಯಾಸ ಕೂಟವಾಗಿಯೂ ಪಾತ್ರ ವಹಿಸಲಿದೆ ಎಂದರು.

ಟೆನಿಸ್ ಓಪನ್: ಭಾರತೀಯರ ಉತ್ತಮ ಪ್ರದರ್ಶನ



ಬೆಂಗಳೂರು: ಮೂರು ದಿನಗಳ ಹಿಂದಷ್ಟೇ ಇಲ್ಲೇ ನಡೆದಿದ್ದ ಬೆಂಗಳೂರು ಓಪನ್ ಪಂದ್ಯಾವಳಿಯಲ್ಲಿ ಗೆದ್ದಿದ್ದ ಅಮೆರಿಕದ ಕೀಗನ್ ಸ್ಮಿತ್ ಅವರನ್ನು ಸೋಲಿಸಿರುವ ಭಾರತದ ಮನೀಶ್ ಸುರೇಶ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್. ಎಮ್. ಕೃಷ್ಣಸ್ಮರಣಾರ್ಥ ಓಪನ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದರು. ಮಂಗಳವಾರದ ಪಂದ್ಯದಲ್ಲಿ ಅವರು, 6-4, 2-6, 6-2ರಿಂದ ಗೆದ್ದರು. ಇನ್ನುಳಿದ ಪಂದ್ಯಗಳಲ್ಲೂ ಭಾರತದ ಟೆನಿಸ್ ಆಟಗಾರರು ಉತ್ತಮ ಪ್ರದರ್ಶನ ನೀಡಿದರು. ಸಿದ್ಧಾರ್ಥ್ ರಾವತ್ ಓಮರ್ ಜಸಿಕಾ ವಿರುದ್ಧ 7-6(4), 6-3ರಿಂದ ಗೆದ್ದುಕೊಂಡರು. ಮುಕುಂದ್ ಶಶಿಕುಮಾರ್ ಕೂಡ ಥೈಲ್ಯಾಂಡ್‌ನ ಮ್ಯಾಕ್ಸಿಮಸ್ ಜೋನಸ್ ವಿರುದ್ಧ 7-6(5), 7-6(5) ರಿಂದ ಗೆದ್ದು ಮಿಂಚಿದರು. ಇದಲ್ಲದೆ, ಕ್ರಿಶ್ ತ್ಯಾಗಿ ಕೂಡ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದರು. ತೈವಾನ್‌ನ ಕೌನ್ ಯಿಲೀ ವಿರುದ್ಧ ಗೆದ್ದ ಅವರು, 7-6(8), 7-6(4) ರಿಂದ ಪ್ರಾಬಲ್ಯ ಸಾಧಿಸಿದರು.

ಲಖನೌದಿಂದ ರಾಜಸ್ಥಾನ ರಾಯಲ್ಸ್‌ಗೆ 221 ರನ್ ಗುರಿ

ಮಾರ್ಷ್-ಇಂಗ್ಲಿಸ್ ಅಬ್ಬರ



ಜೈಪುರ: ಜೋಶ್ ಇಂಗ್ಲಿಸ್(60) ಮತ್ತು ಮಿಚೆಲ್ ಮಾರ್ಷ್(96) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನೊಂದಿಗೆ ಮತ್ತೆ ಅಬ್ಬರಿಸಿರುವ ಲಖನೌ ಸೂಪರ್ ಜೇಂಟ್ಸ್ ರಾಜಸ್ಥಾನ ತಂಡಕ್ಕೆ ದೊಡ್ಡ ಗುರಿ ನೀಡಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹೊರಬಿದ್ದಿರುವ ಪಂತ್ ಪಡೆ ರಾಜಸ್ಥಾನಕ್ಕೂ ದೊಡ್ಡ ಸವಾಲು ಹಾಕಿದೆ.

ಮಂಗಳವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಜೇಂಟ್ಸ್ 20 ಓವರ್‌ಗಳಲ್ಲಿ 220 ರನ್ ಗಳಿಸಿತು. ಮಾರ್ಷ್-ಇಂಗ್ಲಿಸ್ ಉತ್ತಮ ಆರಂಭ ಕೊಟ್ಟ ನಂತರ ಮಧ್ಯಮ ಕ್ರಮಾಂಕದಲ್ಲಿ ಪಂತ್ ಕೂಡ ಒಂದಿಷ್ಟು ರನ್ ಜೋಡಿಸಿದರು. ಅಂತಿಮ ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ಮಾರ್ಷ್ 3 ರನ್‌ಗಳಿಂದ ಮಾತ್ರವೇ ಶತಕ ವಂಚಿತರಾದರು. ಇತ್ತ ರಾಜಸ್ಥಾನ ಪರ ಯಶ್ ರಾಜ್ ಪೂಂಜಾ 2, ಆರ್ಚರ್ 1 ವಿಕೆಟ್ ಪಡೆದರು.

ಇಂಗ್ಲಿಸ್ ಅರ್ಭಟ: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಲಖನೌಗೆ ಅಬ್ಬರದ ಆರಂಭ ಸಿಕ್ಕಿತು. ಮೊದಲಿನ ಓವರ್‌ಗಳಲ್ಲೇ ಬಿರುಸಿನ ಬ್ಯಾಟಿಂಗ್‌ಗೆ ಮುಂದಾದ ಜೋಶ್ ಇಂಗ್ಲಿಸ್ ಮಿಂಚಿದರು. ರಾಜಸ್ಥಾನದ ಅನುಭವ ಇಲ್ಲದ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದರು. ಅತ್ತ ಮಾರ್ಷ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರು ಓವರ್‌ವರೆಗೂ ದಂಡಿಸಿದ ಈ ಜೋಡಿ ಪವರ್‌ಪ್ಲೇನಲ್ಲಿ 83 ರನ್ ಚಚ್ಚಿತು. 23 ಬಾಲ್‌ಗಳಲ್ಲಿ ಸ್ಫೋಟಕ ಅರ್ಧ ಶತಕ ಬಾರಿಸಿದ ಇಂಗ್ಲಿಸ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ ಮಾರ್ಷ್ ಕೂಡ ಲಯಕ್ಕೆ ಮರಳಿದರು. ಆರಂಭಿಕ ಜೋಡಿಯೇ ನೂರರ ಗಡಿ ದಾಟಿಸಿತು. 109 ರನ್‌ಗಳಿಸಿದಾಗ 29 ಬಾಲ್‌ಗಳಲ್ಲಿ 60 ರನ್ ಗಳಿಸಿದ್ದ ಇಂಗ್ಲಿಸ್ ವಿಕೆಟ್ ಒಪ್ಪಿಸಿದರು.

ಮಾರ್ಷ್ ಮಿಂಚಿನಾಟ: ಮಧ್ಯಮ ಓವರ್‌ಗಳಲ್ಲಿ ಮಾರ್ಷ್ ಸ್ಫೋಟಕ ಬ್ಯಾಟಿಂಗ್ ಮಾಡಲಾರಂಭಿಸಿದರು. 25 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಕಾಣಿಸಿಕೊಂಡರು. ಪೂರಣ್ ಕೂಡ ಒಂದೆರಡು ಸಿಕ್ಸರ್‌ಗಳ ಮೂಲಕ ಮಿಂಚಿದರು. ಆದರೆ 16 ರನ್‌ಗಳಿಗೆ ಅವರು ವಿಕೆಟ್ ಕೊಟ್ಟರು. ಬಳಿಕ ಬಂದ ರಿಷಭ್ ಪಂತ್ ಸೆಟ್ ಆಗುವ ಔಪಚಾರಿಕತೆಗೆ ಬಂದರು. ಆದಾಗ್ಯೂ 14ರ ಸನಿಹವಿದ್ದ ಲಖನೌ ಸೂಪರ್ ಜೇಂಟ್ಸ್ ರನ್‌ರೇಟ್ ಕುಗ್ಗಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಲಖನೌ 99 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಪಂತ್ ಕೂಡ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. 2 ಸಿಕ್ಸರ್, 2 ಬೌಂಡರಿ ಬಾರಿಸಿದ ಅವರು, 35 ರನ್ ಗಳಿಸಿ ರನ್‌ಔಟ್‌ಗೆ ಬಲಿಯಾದರು. ಶತಕದ ಅಂಚಿನಲ್ಲಿದ್ದ ಮಾರ್ಷ್ ಕೊನೆಯ ಓವರ್‌ನಲ್ಲಿ ಸ್ಫೋಟಕ ಬೌಂಡರಿ ಬಾರಿಸಿದ ಮಾರ್ಷ್ 57 ಬಾಲ್‌ಗಳಲ್ಲಿ 96 ರನ್ ಬಾರಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 11 ಬೌಂಡರಿ, 5 ಸಿಕ್ಸರ್‌ಗಳು ಸೇರಿವೆ. ಕೊನೆಯಲ್ಲಿ ಲಖನೌ 220 ರನ್ ಗಳಿಸಿತು.

ರಿಯಾನ್‌ಗೆ ಗಾಯ: ಜೈಸ್ವಾಲ್‌ಗೆ ನಾಯಕತ್ವ

ರಾಜಸ್ಥಾನ ಹಾಗೂ ಲಖನೌ ನಡುವೆ ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುನ್ನಡೆಸಿದರು. ಕಾಲಿಗೆ ಆದ ಗಾಯದ ಕಾರಣದಿಂದಾಗಿ ನಾಯಕ ರಿಯಾನ್ ಪರಾಗ್ ಲಭ್ಯವಿರಲಿಲ್ಲ. ಇದರೊಂದಿಗೆ ರಾಜಸ್ಥಾನ ತಂಡವನ್ನು ಮುನ್ನಡೆಸಿದ 8ನೇ ನಾಯಕ ಅನಿಸಿಕೊಂಡರು. ಇದು ಜೈಸ್ವಾಲ್ ಅವರಿಗೆ ಮೊದಲ ಜವಾಬ್ದಾರಿಯೂ ಹೌದು.

ಇಂದು ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸು

ಕೆಕೆಆರ್‌ಗೆ ಅಳಿವು-ಉಳಿವಿನ ಸವಾಲು

ಕೋಲ್ಕತಾ: ಪ್ಲೇಆಫ್ ರೇಸ್‌ನಲ್ಲಿರುವ ಕೆಕೆಆರ್ ಮತ್ತು ಹೊರಬಿದ್ದ ಮುಂಬೈ ಇಂಡಿಯನ್ಸ್ ತಂಡವು ಬುಧವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕೊನೆಯ ಅವಕಾಶಕ್ಕಾಗಿ ಕೆಕೆಆರ್ ಸಿದ್ಧವಾಗುತ್ತಿದೆ. ಮುಂಬೈ ಗೆಲುವಿನ ವಿದಾಯಕ್ಕೆ ಅಣಿಯಾಗುತ್ತಿದೆ.

ಐಪಿಎಲ್‌ನಲ್ಲಿ 3 ತಂಡಗಳು ಈಗಾಗಲೇ ಪ್ಲೇಆಫ್‌ಗೆ ಲಗ್ಗೆ ಹಾಕಿವೆ. ಮಿಕ್ಕಿರುವ ಒಂದು ಜಾಗಕ್ಕಾಗಿ ಐದು ತಂಡಗಳು ಪೈಪೋಟಿ ನಡೆಸುತ್ತಿವೆ. ಸದ್ಯ ಪಂಜಾಬ್ ನಾಲ್ಕನೇ ಸ್ಥಾನದಲ್ಲಿದೆ. ಆರ್‌ಆರ್ ಕೂಡ ಅವಕಾಶ ಹೊಂದಿದೆ. ಕೆಕೆಆರ್ 15 ಅಂಕ ಗಳಿಸಬಹುದಾದ ಅವಕಾಶ ಹೊಂದಿದ್ದು, ಇದ್ದಿರುವ ತಂಡಗಳಲ್ಲಿ ಹೆಚ್ಚು ಸಾಧ್ಯತೆ ಹೊಂದಿದೆ. ಮುಂಬೈ ವಿರುದ್ಧ ಗೆದ್ದರೆ ಕೆಕೆಆರ್ ಅವಕಾಶಗಳು ಹೆಚ್ಚಾಗಲಿವೆ. ಅತ್ತ ಮುಂಬೈ ಕಳೆದ ಪಂದ್ಯದಲ್ಲಿ ಪಂಜಾಬ ತಂಡವನ್ನು ಸೋಲಿಸಿದ್ದು, ಗೆಲುವಿನ ಅಂತ್ಯಕ್ಕಾಗಿ ಫೈಟ್ ಮಾಡುತ್ತಿದೆ. ಕೋಲ್ಕತಾದ ಈಡನ್ ಗಾರ್ಡನ್‌ನಲ್ಲಿ ಪಂದ್ಯ ನಡೆಯಲಿದೆ.

ಕೆಕೆಆರ್‌ಗೆ ಗೆಲುವಿನ ತವಕ: ಫಿನ್ ಅಲೆನ್ ಹಾಗೂ ರಘುವಂಶಿ ಅವರ ಭರ್ಜರಿ ಪ್ರದರ್ಶನದೊಂದಿಗೆ ಕೋಲ್ಕತಾ ನೈಟ್ ರೈಡರ್ಸ್ ಭರ್ಜರಿ ಪ್ರದರ್ಶನ ನೀಡುತ್ತಿದೆ. ಗುಜರಾತ್ ವಿರುದ್ಧದ ಪಂದ್ಯದಲ್ಲಿ ಅದೇ ಪ್ರದರ್ಶನದೊಂದಿಗೆ ಗೆದ್ದರೂ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಮುಖ್ಯವಾಗಿ ಫಿನ್ ಅಲೆನ್ ಹಾಗೂ ರಘುವಂಶಿ ಭರ್ಜರಿ ಲಯದಲ್ಲಿದ್ದಾರೆ. ಆದಾಗ್ಯೂ ಅವರಿಬ್ಬರನ್ನು ಹೊರತುಪಡಿಸಿದರೆ, ಇನ್ನುಳಿದ ಆಟಗಾರರು ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಅಜಿಂಕ್ಯಾ ರಹಾನೆ ಲಯಕ್ಕಾಗಿ ಪರದಾಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್, ಮನೀಶ್ ಪಾಂಡೆ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ, ಸುನಿಲ್ ನರೈನ್, ವರುಣ್ ಮಿಂಚಿದ್ದರೆ, ವೇಗಿ ಕಾರ್ತಿಕ್ ತ್ಯಾಗಿ ಲಯದಲ್ಲಿದ್ದಾರೆ.

ಮುಂಬೈಗೆ ಗೆಲುವಿನ ವಿಶ್ವಾಸ

ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಬೆನ್ನಲ್ಲೇ ಮುಂಬೈ ಇಂಡಿಯನ್ಸ್ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಇತ್ತ ಬೂಮ್ರಾ ನಾಯಕತ್ವದಲ್ಲಿ ಮುಂಬೈ ಮಿಂಚಿತ್ತು. ರಯಾನ್ ಸ್ಫೋಟಕ ಬ್ಯಾಟಿಂಗ್ ನೊಂದಿಗೆ ಅಬ್ಬರಿಸಿದ್ದಾರೆ. ರೋಹಿತ್ ಶರ್ಮ ಕೂಡ ಉತ್ತಮ ಟಚ್‌ನಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್ ಮಾಡಿರುವುದು ಮುಂಬೈ ತಂಡಕ್ಕೆ ದೊಡ್ಡ ಬಲ ತಂದಿದೆ. ಸೂರ್ಯ ಕಳೆದ ಪಂದ್ಯದಲ್ಲಿ ಆಡಿರಲಿಲ್ಲ. ನಮನ್, ರುದರ್‌ಫೋರ್ಡ್ ಮಿಂಚಬೇಕಿದೆ. ಬೌಲಿಂಗ್ ವಿಚಾರದಲ್ಲಿ ಶರ್ದೂಲ್ ಠಾಕೂರ್, ದೀಪಕ್ ಚಾಹರ್ ಲಯಕ್ಕೆ ಮರಳಿದ್ದಾರೆ. ಇತ್ತ ಬೂಮ್ರಾಗೆ ವಿಕೆಟ್ ಬೀಳುತ್ತಿಲ್ಲವಾದರೂ ದುಬಾರಿ ಯಾಗುತ್ತಿಲ್ಲ. ಸ್ಪಿನ್ ವಿಭಾಗ ದಲ್ಲಿ ರಘು ಮತ್ತು ಜ್ಯಾಕ್ಸ್ ಸೇರಿದಂತೆ ಘಜನ್‌ಫರ್ ಕೂಡ ವಿಕೆಟ್ ಕಿತ್ತಬೇಕಿದೆ.

ಪಿಚ್: ಕೋಲ್ಕತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರಿಗೆ ಅಬ್ಬರಿಸುವ ಅವಕಾಶ. ಬೌಂಡರಿಗಳು ಹತ್ತಿರ ಇರುವುದರಿಂದ ಫೀಲ್ಡಿಂಗ್ ಮತ್ತು ಬೌಲಿಂಗ್‌ಗೆ ಕಷ್ಟವಾಗಬಹುದು. ಮೊದಲು ಬೌಲಿಂಗ್ ಮಾಡಿದವರಿಗೆ ಅಲ್ಪ ಲಾಭ ಸಿಗಲಿದೆ.

ಪಂದ್ಯದ ವಿವರ

ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತಾ
ಸಮಯ: ಸಂಜೆ 7:30

ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲು

ಪ್ಲೇಆಫ್‌ಗೆ ಹೈದರಾಬಾದ್



ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 5 ವಿಕೆಟ್‌ಗಳಿಂದ ಸೋಲಿಸಿರುವ ಹೈದರಾಬಾದ್ ತಂಡವು ಪ್ಲೇಆಫ್ ಗೇರಿದ್ದಲ್ಲದೆ, ಗುಜರಾತ್‌ಗೂ ಹಾದಿ ಮಾಡಿಕೊಟ್ಟಿತು. ಗೆಲ್ಲಲೇಬೇಕಾದ ಪಂದ್ಯದಲ್ಲಿ ಭಾರೀ ಸೋಲನುಭವಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಂತಿದೆ.

ಸೋಮವಾರದ ಪಂದ್ಯದಲ್ಲಿ ಟಾಸ್ ಗೆದ್ದ ಚೆನ್ನೈ ಅಚ್ಚರಿಯ ನಿರ್ಧಾರದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಸಂಜು(27), ಕಾರ್ತಿಕ್(32) ಮತ್ತು ಬ್ರೇವಿಸ್(44) ರನ್‌ಗಳ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 180 ರನ್ ಗಳಿಸಿತು. ಹೈದರಾಬಾದ್ ಪರ ಪ್ಯಾಟ್ ಕಮ್ಮಿನ್ಸ್ 3, ಸಾಕಿಬ್ ಹುಸೈನ್ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಹೈದರಾಬಾದ್ ಇಶಾನ್ ಕಿಶನ್(70), ಕ್ಲಾಸೆನ್ (47) ಅವರ ನೆರವಿನಿಂದ ಪಂದ್ಯ ಗೆದ್ದುಕೊಂಡಿತು. ಚೆನ್ನೈ ಪರ ಮುಖೇಶ್ ಚೌದರಿ 36/2 ಹೋರಾಡಿದರು.

ಇಶಾನ್ ಕಿಶನ್ ಪಂದ್ಯದ ಬೆಸ್ಟ್ ಬ್ಯಾಟರ್ ಆನಿಸಿಕೊಂಡಿದ್ದಲ್ಲದೆ, ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾದರು. ಪ್ಯಾಟ್ ಕಮ್ಮಿನ್ಸ್ ಗೆಲುವಿನಲ್ಲಿ ಮಿಂಚಿದರು. ಚೆನ್ನೈ ಪರ ಸಂಜು ಸ್ಯಾಮ್ಸನ್ ಸ್ಫೋಟಕ ಆರಂಭ ಕೊಟ್ಟರೆ, ಮಧ್ಯಮ ಕ್ರಮಾಂಕದಲ್ಲಿ ಡೇವಾಲ್ಡ್ ಬ್ರೇವಿಸ್ ಅಬ್ಬರಿಸಿದರು. ಈ ಗೆಲುವಿನೊಂದಿಗೆ ಪ್ಲೇಆಫ್‌ಗೆ ಮೂರು ತಂಡಗಳು ಹೋಗುವುದು ಖಚಿತವಾಗಿದೆ. ಉಳಿದ 7 ಪಂದ್ಯಗಳಲ್ಲಿ ಇನ್ನೊಂದು ತಂಡದ ಭವಿಷ್ಯ ನಿರ್ಧಾರವಾಗಲಿದೆ.

ಪ್ಲೇಆಫ್‌ನಿಂದ ಚೆನ್ನೈ ಔಟ್?: ಪಂದ್ಯಾವಳಿಯ ಆರಂಭದಿಂದಲೂ ಸೋಲುಗಳಲ್ಲಿ ಮುಳಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸತತ 3 ಪಂದ್ಯಗಳಲ್ಲಿ ಗೆದ್ದು ಪ್ಲೇಆಫ್‌ಗೆ ಹತ್ತಿರವಾಗಿತ್ತು. ಆದರೂ ಗೆಲ್ಲಬೇಕಿದ್ದ ಲಖನೌ, ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಸೋತಿದೆ. ಇದರೊಂದಿಗೆ ರಾಜಸ್ಥಾನ, ಕೆಕೆಆರ್, ದಿಲ್ಲಿ ಮತ್ತು ಪಂಜಾಬ್ ಪ್ಲೇಆಫ್ ಅವಕಾಶಗಳು ಹೆಚ್ಚಳಗೊಂಡಿವೆ. ಆದಾಗ್ಯೂ ಚೆನ್ನೈ ಅಧಿಕೃತವಾಗಿ ಹೊರಬಿದ್ದಿಲ್ಲ. 14 ಅಂಕಗಳನ್ನು ಗಳಿಸುವ ಅವಕಾಶ ಹೊಂದಿರುವ ಚೆನ್ನೈ ಸೂಪರ್ ಕಿಂಗ್ಸ್ ಉಳಿದ ಪಂದ್ಯದಲ್ಲಿ ದೊಡ್ಡ ರನ್‌ರೇಟ್‌ನಿಂದ ಗೆಲ್ಲಬೇಕಿದೆ. ಹೀಗಾದರೂ, ಪಂಜಾಬ್, ಕೆಕೆಆರ್, ದಿಲ್ಲಿ ಹಾಗೂ ಆರ್‌ಆರ್ ತಮ್ಮ ಪಂದ್ಯಗಳಲ್ಲಿ ಸೋಲಬೇಕು. ಇದರಲ್ಲಿ ಟ್ವಿಸ್ಟ್‌ಗಳಿವೆ. ಒಂದು ಹಂತದಲ್ಲಿ ಚೆನ್ನೈ ಪ್ಲೇಆಫ್ ಗೇರಬೇಕಾದರೆ ಮಿರ್ಯಾಕಲ್ ನಡೆಯಬೇಕೆಂದರೆ ತಪ್ಪಿಲ್ಲ.

ಸಂಕ್ಷಿಪ್ತ ಸ್ಕೋರ್:

ಚೆನ್ನೈ 20 ಓವರ್‌ಗಳಲ್ಲಿ 180/7: ಬ್ರೇವಿಸ್ 44, ಕಾರ್ತಿಕ್ 32; ಕಮ್ಮಿನ್ಸ್ 28/3
ಹೈದರಾಬಾದ್ 19 ಓವರ್‌ಗಳಲ್ಲಿ 181/5: ಕಿಶನ್ 70, ಕ್ಲಾಸೆನ್ 47; ಮುಖೇಶ್ 36/2

ಅಫ್ಘಾನ್ ಟೆಸ್ಟ್-ಏಕದಿನ ಸರಣಿಗೆ ಭಾರತ ತಂಡ ಪ್ರಕಟ

ಟೆಸ್ಟ್‌ಗೆ ರಾಹುಲ್ ಉಪನಾಯಕ

- ಬೂಮ್ರಾಗೆ ವಿರಾಮ, ಏಕದಿನಕ್ಕೆ ರೋ-ಕೊ
- ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಆಯ್ಕೆ
- ಪ್ರಿನ್ಸ್ ಯಾದವ್, ಹರ್ಷ ದುಬೆಗೂ ಅವಕಾಶ
- ಪಂತ್‌ಗೆ ಹಿನ್ನಡೆ, ಏಕದಿನಕ್ಕೆ ಕಿಶನ್ ವಾಪಸ್



ಮುಂಬೈ: ವೇಗಿ ಜಸ್‌ಪ್ರೀತ್ ಬೂಮ್ರಾಗೆ ವಿರಾಮ ನೀಡಲಾಗಿದ್ದರೆ, ಕೆ.ಎಲ್. ರಾಹುಲ್ ಅವರಿಗೆ ಟೆಸ್ಟ್ ತಂಡದ ಉಪನಾಯಕತ್ವ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಅಫ್ಘಾನಿಸ್ತಾನ-ಭಾರತ ನಡುವಿನ ಒಂದು ಟೆಸ್ಟ್ ಹಾಗೂ ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಟೆಸ್ಟ್ ಪಂದ್ಯಕ್ಕಾಗಿ ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಗುರ್ನೂರ್ ಬ್ರಾರ್, ಮಾನವ್ ಸುಥಾರ್ ಮತ್ತು ಹರ್ಷ ದುಬೆ ಅವರನ್ನು ಇದೇ ಮೊದಲ ಬಾರಿಗೆ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರಿಗೆ ಭಾರೀ ಶಾಕ್ ಕೊಟ್ಟಿರುವ ಬಿಸಿಸಿಐ ಏಕದಿನ ತಂಡದಿಂದ ಹೊರಹಾಕಿದ್ದಲ್ಲದೆ, ಟೆಸ್ಟ್ ತಂಡದ ಉಪನಾಯಕತ್ವವನ್ನು ಕಸಿದುಕೊಂಡಿದೆ.

ನವೆಂಬರ್‌ನಲ್ಲಿ ನಡೆದಿದ್ದ ದ.ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯಗಳ ನಂತರ ಮೊದಲ ಬಾರಿಗೆ ಬಿಳಿ ಜೆರ್ಸಿಯೊಂದಿಗೆ ಭಾರತ ಕಣಕ್ಕಿಳಿಯಲಿದೆ. ಬೂಮ್ರಾ ಅಲ್ಲದೆ, ರವೀಂದ್ರ ಜಡೇಜಾ, ಆಕಾಶ್‌ದೀಪ್, ಅಕ್ಷರ್ ಪಟೇಲ್‌ಗೂ ಕೊಕ್ ನೀಡಲಾಗಿದೆ. ಹೊಸ ಆಯ್ಕೆಗಳಲ್ಲಿ ಟೆಸ್ಟ್ ಹಾಗೂ ಏಕದಿನ ಎರಡೂ ತಂಡಗಳಿಗೂ ಗುರ್ನೂರ್ ಬ್ರಾರ್‌ರನ್ನು ಆಯ್ಕೆ ಮಾಡಲಾಗಿದೆ.

ರಿಷಭ್ ಪಂತ್‌ಗೆ ಕೊಕ್: ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಸರು ಮಾಡಿರುವ ರಿಷಭ್ ಪಂತ್‌ಗೆ ದೊಡ್ಡ ಹಿನ್ನಡೆಯಾಗಿದೆ. ಐಪಿಎಲ್‌ನಲ್ಲಿ ಲಯಕ್ಕಾಗಿ ಪರದಾಟ ನಡೆಸಿರುವ ಅವರು, ಭಾರತ ಏಕದಿನ ತಂಡದಿಂದ ಹೊರಬಿದ್ದಿದ್ದಾರೆ. ಹಿಂದಿನ ಸರಣಿಗಳಲ್ಲಿ ಅವರನ್ನು ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿತ್ತು. ಆದರೆ ಕೆ.ಎಲ್. ರಾಹುಲ್ ಉತ್ತಮ ಪ್ರದರ್ಶನ ನೀಡಿರುವ ಬೆನ್ನಲ್ಲೇ ಯಾವುದೇ ಅವಕಾಶ ಪಡೆದಿರಲಿಲ್ಲ. ಆದಾಗ್ಯೂ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಆಯ್ಕೆಯಾಗಿ ಪರಿಗಣಿಸಿತ್ತು. ಗಿಲ್‌ಗೆ ನಾಯಕತ್ವ ನೀಡುವಾಗ ಪಂತ್ ಅವರನ್ನು ಉಪನಾಯಕರನ್ನಾಗಿ ಮಾಡಿತ್ತು. ಐಪಿಎಲ್‌ನಲ್ಲಿ ಹೇಳಿಕೊಳ್ಳುವ ಪ್ರದರ್ಶನ ನೀಡದಿರುವ ಪಂತ್ ಉಪನಾಯಕತ್ವ ಕಳೆದುಕೊಂಡಿದ್ದಾರೆ. ಅವರ ಬದಲಿಗೆ ಕನ್ನಡಿಗ ಕೆ.ಎಲ್. ರಾಹುಲ್‌ಗೆ ಅವಕಾಶ ನೀಡಲಾಗಿದೆ. ಏಕದಿನದ ಹೆಚ್ಚುವರಿ ವಿಕೆಟ್ ಕೀಪರ್ ಆಗಿ ಇಶಾನ್ ಕಿಶನ್ ಅವರನ್ನು ಆಯ್ಕೆ ಮಾಡಲಾಗಿದೆ.

ತಂಡಗಳು

ಏಕದಿನಕ್ಕೆ: ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಕೆ.ಎಲ್. ರಾಹುಲ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ ಪ್ರಿನ್ಸ್ ಯಾದವ್, ಗುರ್ನೂರ್ ಬ್ರಾರ್, ಹರ್ಷ ದುಬೆ.

ಟೆಸ್ಟ್: ಶುಭಮನ್ ಗಿಲ್(ನಾಯಕ), ಕೆ.ಎಲ್. ರಾಹುಲ್(ಉಪನಾಯಕ), ರಿಷಭ್ ಪಂತ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ನಿತಿಶ್‌ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲ್ದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ ಮಾನವ್ ಸುಥಾರ್, ಗುರ್ನೂರ್ ಬ್ರಾರ್, ಹರ್ಷ ದುಬೆ, ಧ್ರುವ್ ಜುರೇಲ್.

ದೇಶಿ ಕ್ರಿಕೆಟಿಗರಿಗೆ ಅವಕಾಶ: ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಹರ್ಷ ದುಬೆ, ಮಾನವ್ ಸುಥಾರ್, ಗುರ್ನೂರ್ ಬ್ರಾರ್ ಅವರನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವ್ ಸುಥಾರ್ ಸ್ಪಿನ್ ಮೂಲಕ ಮಿಂಚಿದದ್ದರು. ರಣಜಿ ಹೀರೋ ಆಕಿಬ್ ನಬಿ ಅವರನ್ನು ತಂಡಕ್ಕೆ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ ಅಚ್ಚರಿಯಲ್ಲಿ ಅವರನ್ನು ಆಯ್ಕೆ ಮಾಡಲಾಗಿಲ್ಲ. ಇನ್ನು ಏಕದಿನ ತಂಡಕ್ಕೆ ಪ್ರಿನ್ಸ್ ಯಾದವ್ ಅವರನ್ನು ಇದೇ ಮೊದಲ ಬಾರಿಗೆ ಆಯ್ಕೆ ಮಾಡಲಾಗಿದೆ. ಲಖನೌ ತಂಡದ ಪರ ಮಿಂಚಿರುವ ಅವರು, ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಟೆಸ್ಟ್ ತಂಡದಲ್ಲಿರುವ ಗುರ್ನೂರ್ ಬ್ರಾರ್ ಕೂಡ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮಲೇಷ್ಯಾ ಮಾಸ್ಟರ್ಸ್: ಮುಖ್ಯ ಡ್ರಾಗೆ ಅಶ್ಮಿತಾ

ಅರ್ಹತಾ ಸುತ್ತಲ್ಲಿ ತೈವಾನ್‌ನ ಪೈ ಯು ವಿರುದ್ಧ ಜಯ

ಕೌಲಲಂಪೂರ: ತೈವಾನ್‌ನ ಪೈ ಯು-ಪೊ ವಿರುದ್ಧದ ಪಂದ್ಯದಲ್ಲಿ ಗೆದ್ದಿರುವ ಭಾರತದ ಶಟ್ಲರ್ ಅಶ್ಮಿತಾ ಚಲಿಹಾ ಪ್ರತಿಷ್ಠಿತ ಮಲೇಷ್ಯಾ ಮಾಸ್ಟರ್ಸ್ ಪಂದ್ಯಾವಳಿಯ ಮುಖ್ಯ ಸುತ್ತಿನ ಪಂದ್ಯಗಳಿಗೆ ಅರ್ಹತೆ ಪಡೆದುಕೊಂಡಿದ್ದಾರೆ. ಕೌಲಲಂಪೂರದಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಭಾರತದ ಉದಯೋನ್ಮುಖ ಆಟಗಾರರು ಸ್ಪರ್ಧಿಸಿಲಿದ್ದಾರೆ. ಅಶ್ಮಿತಾ ಅರ್ಹತಾ ಸುತ್ತಿನ ಪಂದ್ಯದಲ್ಲಿ ತೈವಾನ್‌ನ ಪೈ ಅವರನ್ನು ಎದುರಿಸಿದ್ದರು. 56 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿ 21-23, 21-16, 21-16ರಿಂದ ಗೆಲುವು ಸಾಧಿಸಿದರು. ಮುಖ್ಯ ಡ್ರಾದಲ್ಲಿ ಅವರು, ವಿಶ್ವದ 56ನೇ ಶ್ರೇಯಾಂಕದ ಥಾಲಿತಾ ರಮಂಧನಿ ಅವರೊಂದಿಗೆ ಆಡಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಇನ್ನೋರ್ವ ಭಾರತದ ಆಟಗಾರ್ತಿ ಆಕರ್ಷಿ ಕಶ್ಯಪ್ ಪಾರ್ಕ್‌ಗಾ ಅವರೊಂದಿಗೆ 21-15, 20-22, 7-21ರಿಂದ ಸೋತರು.

ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿ | ಸಿದ್ಧಾರ್ಥ ನಾಯರ್‌ಗೆ ಗೆಲುವು

ಬೆಂಗಳೂರು ಶಟ್ಲರ್‌ಗಳ ಮಿಂಚಿನಾಟ



ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿವಿಧ ನಗರಗಳ ಬಾಲಕ-ಬಾಲಕಿಯರು ಮಿಂಚಿದರು. 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ವೈಭವ ಸಾವಿಗೌಡ ವಿರುದ್ಧ 21-9, 21-10 ಅಂತರದಿಂದ ಗೆದ್ದರು. ಬೆಂಗಳೂರಿನ ಪ್ರಥಮ್ ಹರ್ಷ ಅವರು ಮಂಡ್ಯದ ದೇವಿನ್ ಚಂದ್ರ ಜೆಸಿ ವಿರುದ್ಧ 14-21, 21-16, 21-04, ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಎಸ್. ಅವರು ಬೆಳಗಾವಿಯ ಸಮನ್ಯು ವಿರುದ್ಧ 21-13, 21-8, ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ಅವರು ಮೈಸೂರಿನ ಮಯೂರ ಜಿ. ವಿರುದ್ಧ 21-17, 21-16 ಅಂತರದಿಂದ ಜಯಿಸಿದರು.

ಬಾಲಕಿಯರ ವಿಭಾಗದಲ್ಲಿ: 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರಿನ ಮಹಿತಾ ನಾಯ್ಡು ಸುರಿ ಶೆಟ್ಟಿ ಅವರು ಸೆಜಲ್ ವಿ. ದಾವಣ್ಕರ್ ವಿರುದ್ಧ 21-8, 21-10 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರಿನ ದಕ್ಷಿತಾ ಮುಂಡ್ಲಾ ಅವರು ಆರನಾ ಸಾಗರ ಆರ್. ವಾಕ್ ಓವರ್ ಮೂಲಕ ಜಯಗಳಿಸಿದರು. 15 ವರ್ಷದೊಳಗಿನ ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ದಕ್ಷಿಣ ಕನ್ನಡದ ಅನ್ನವಿಕಾ ರಾಜ್ ಮತ್ತು ದಿಯಾ ಸುನೀಲ್ ಶೆಣೈ ಅವರು ದಾವಣಗೆರೆಯ ಶ್ರಾವಣಿ ಗೌಡಪ್ಪಳವರ ಮತ್ತು ಬೆಂಗಳೂರಿನ ಛಾಯಾ ಎನ್. ಶೆಟ್ಟಿ ವಿರುದ್ಧ 21-19, 21-10 ಅಂತರದಲ್ಲಿ ಜಯಗಳಿಸಿದ್ದಾರೆ.


ಬೆಂಗಳೂರು ಗ್ರಾಮಾಂತರದ ನಿಧಿ ಗೌರಿಶಂಕರ ಮತ್ತು ನಿತ್ಯಾಶ್ರೀ ಅವರು ಬೆಂಗಳೂರಿನ ಅನ್ಯಾ ವಶಿಷ್ಠ ಅರ್ಜುನ ಮತ್ತು ಪೂರ್ವಿ ಸಾಗರ ವಿರುದ್ಧ 21-15, 20-22, 21-13 ಅಂತರದಿಂದ ಜಯಗಳಿಸಿದ್ದಾರೆ.

ಡಬಲ್ಸ್: 15 ವರ್ಷದೊಳಗಿನ ಮಿಶ್ರಡಬಲ್ಸ್ ವಿಭಾಗದಲ್ಲಿ ರಾಯಚೂರಿನ ಯುವನ್ ಕೃಷ್ಣ ರವೆಲ್ಲಾ ಮತ್ತು ನಿಹಾರಿಕಾ ಎ.ಪಿ. ಅವರು ಬೆಂಗಳೂರಿನ ಅಚ್ಯುತ್ ತನ್ಮಯಿ ಯಲೂರು, ದೇವಾಂಶಿ ಮಿತ್ತಲ್ ವಿರುದ್ಧ 21-14, 21-16 ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ಬೆಂಗಳೂರಿನ ಮಿನಾದ್ ಜಿ.ಕೆ. ಮತ್ತು ರುಶಿತಾ ಗೋಪಿನಾಥ್ ಅವರು ಬೆಂಗಳೂರು ಗ್ರಾಮಾಂತರದ ಶೈಲೈಶ್ ಶ್ರವಣ ಮತ್ತು ಕವಿನಯಶ್ರೀ ಎಸ್. ವಿರುದ್ಧ 21-14, 12-21, 26-24 ಅಂತರದಿಂದ ಜಯಗಳಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5989

ಎಡದಿಂದ ಬಲಕ್ಕೆ
1.ಟೆಲಿವಿಷನ್ ಕನ್ನಡದಲ್ಲಿ (7)
3.ಹರಕೆ ಹೊತ್ತದ್ದು ಈ ಶಿವನಿಗೆ (2)
4.ಗಾಯಕ್ಕೆ ಕಟ್ಟುವ ಬಟ್ಟೆಯಿದು (2)
5.ದರವನ್ನು ಕೇಳಿದ್ದು ಈ ಚಪ್ಪರದ ಕೆಳಗೆ (3)
7.ವಾಣಿ ನಡುವೆ ತಿರುಗಿ ಅಂತಃಪುರವಾಯ್ತು (4)
9.ಬಿಳಿಯ ಬಣ್ಣದ ಸಾಂಬಾರಕಾಳು (4)
11.ಒಂದರ ಮೇಲೊಂದು ಪೇರಿಸಿಡುವುದು (4)
13.ತಪ್ಪನ್ನು ಹೊರಿಸಲ್ಪಟ್ಟವನು (4)
15.ನದಿ ಒಳಗೊಂಡ ದಾಖಲೆ ಮಾಡು (4)
16.ಜೋಡಿಸು-ಬಾರಿಸು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
1.ಧ್ವನಿ ಕೇಳಿಸುವ-ಸ್ವೀಕರಿಸುವ ಸಂವಹನಾ ಸಾಧನ (4)
2.ಅಚ್ಚು ಮಾಡಿ ಹಂಚುವ ಚಿಕ್ಕ ಪ್ರಕಟಣೆ ತಲೆಕೆಳಗಾಗಿದೆ (4)
5.ನೀರು-ಹಾಲು ಬೇರ್ಪಡಿಸುತ್ತದೆಯೆನ್ನುವ ಹಕ್ಕಿ (2)
6.ಕೈಯಿಂದ ಕಟ್ಟದ ತೆರಿಗೆ ತಲೆಕೆಳಗಾಗಿದೆ (2)
8.ಚಲಿಸಲು ಸಹಾಯ ಮಾಡುವಂಥಾದ್ದು (3)
10.ಸಿಹಿಖಾದ್ಯವಿಲ್ಲಿ ತಲೆಕೆಳಗಾಗಿದೆ (3)
11.ಇರುವ ಮಾನವನ್ನೇಕೆ ಒತ್ತೆ ಇಟ್ಟಿದ್ದಾರೆ? (4)
12.ಕೊಳ್ಳೆಹೊಡೆ-ಲೂಟಿ ಮಾಡು ಎಂಬರ್ಥದ ಶಬ್ದ (4)
13.ಆಲದ ನಡುವೆ ಕಷ್ಟದ ವೇಳೆಯಿದೆ (4)
14.ಮನಸ್ಸಿನಲ್ಲಿ ತೀವ್ರವಾಗಿ ಬಯಸುವುದು (4)

5988 ಉತ್ತರ

ಎಡದಿಂದ ಬಲಕ್ಕೆ:
:2.ಅನಂಗ 5.ಮಂಜುಗಿರಿ 6.ದಳವಾಯಿ 7.ಸತತ 9.ನಾಣ್ಣುಡಿ 10.ಅಪಾದಿಸು 12.ಕೌಟನೀತಿ 14.ದಿವಿಜ 15.ಶತಮಾನ 16.ನಗೆಗೇಡಿ

ಮೇಲಿನಿಂದ ಕೆಳಕ್ಕೆ:
:1.ಸಮಂಜಸ 2.ಅರಿವು 3.ಗದರು 4.ತಾಯಿನುಡಿ 8.ತಳಹದಿ 9.ನಾಗಾಲೋಟ 10.ಆಕ್ರೋಶ 11.ಸುದಿನ 12.ಕೂಜನ 13.ತಿಕಡಿ

ಮುಂಗಾರು ಮಳೆ ಆರಂಭ ಹಿನ್ನೆಲೆ | ಅಧಿಕಾರಿಗಳ ಸಭೆಯಲ್ಲಿ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ

ಪ್ರಾಕೃತಿಕ ವಿಕೋಪ ಎದುರಿಸಲು ಸಜ್ಜಾಗಿ



• **ಉಡುಪಿ:** ಮೇ 26ರಿಂದ ಮುಂಗಾರು ಮಳೆಯಾಗುವ ಮುನ್ಸೂಚನೆ ಇದ್ದು, ಜಿಲ್ಲೆಯಲ್ಲಿ ಮಳೆಯಿಂದಾಗುವ ಪ್ರವಾಹ ಸೇರಿದಂತೆ ಮತ್ತಿತರ ಅವಘಡಗಳ ಪರಿಸ್ಥಿತಿಗಳನ್ನು ಎದುರಿಸಲು ಎಲ್ಲಾ ಇಲಾಖಾ ಅಧಿಕಾರಿಗಳು ರಕ್ಷಣಾ ಸಾಮಾಗ್ರಿಗಳೊಂದಿಗೆ ಸನ್ನದ್ಧರಾಗಿ, ಅಗತ್ಯವಿರುವ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ಪ್ರಕೃತಿವಿಕೋಪಗಳನ್ನು ನಿರಾಯಾಸವಾಗಿ ನಿಭಾಯಿಸಲು ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ಅವರು ಮಂಗಳವಾರ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಳೆ (ಮಾನ್ಸೂನ್) ಪ್ರಾರಂಭವಾಗಲಿರುವ ಹಿನ್ನೆಲೆ, ಚರ್ಚಿಸುವ ಸಲುವಾಗಿ ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂಗಾರು ಮಳೆ ಪ್ರಾರಂಭಕ್ಕೂ ಮುನ್ನ ಚರಂಡಿ, ತೋಡುಗಳನ್ನು ಸ್ವಚ್ಛಗೊಳಿಸಿ, ಮಳೆಯ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮಗಳನ್ನು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕೈಗೊಳ್ಳುವಂತೆ ನೋಡಿಕೊಳ್ಳಬೇಕು ಇದರಿಂದ ರೋಗ ರುಜಿನಗಳು ಹರಡದಂತೆ ತಡೆಯಲು ಸಾಧ್ಯ ಎಂದ ಅವರು, ಅತಿವೃಷ್ಟಿ ಸಂಭವಿಸಿದಾಗ ತುರ್ತು ವಿಪತ್ತು ನಿರ್ವಹಣೆಗಾಗಿ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸೂಚನೆ ನೀಡಿದರು.

ನಗರ ವ್ಯಾಪ್ತಿಯ ಪ್ರತಿಯೊಂದು ಪುರಸಭೆ, ನಗರಸಭೆ, ಪಟ್ಟಣಪಂಚಾಯತ್‌ಗಳಲ್ಲಿ ಕಂಟ್ರೋಲ್ ರೂಂಗಳನ್ನು ದಿನದ 24 ತೆರೆಯುವುದರ ಜೊತೆಗೆ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳನ್ನು ನೇಮಕ ಮಾಡಿ, ತಾಲೂಕು ಕಚೇರಿಯೊಂದಿಗೆ ನಿರಂತರ ಸಂಪರ್ಕ ಹೊಂದಿರಬೇಕು. ನೀರಿನ ಗುಣಮಟ್ಟದ ಪರೀಕ್ಷೆಯನ್ನು ನಿರಂತರವಾಗಿ ಮಾಡಬೇಕು. ಒಂದೊಮ್ಮೆ ಕಲುಷಿತ ನೀರು ಕಂಡುಬಂದಲ್ಲಿ ಮನಶ್ಚೇತನಗೊಳಿಸುವ ಕಾರ್ಯಗಳನ್ನು ಕೈಗೊಳ್ಳಬೇಕು ಎಂದರು.

ಜಿಲ್ಲೆಯ ಗ್ರಾಮೀಣ ಭಾಗದ 155 ಗ್ರಾಮ ಪಂಚಾಯತ್‌ಗಳು ಸಹ ನೀರಿನ ಗುಣಮಟ್ಟ ಪರೀಕ್ಷೆಯನ್ನು ಕೈಗೊಳ್ಳಬೇಕು. ಈ ಬಗ್ಗೆ ಸರಿಯಾದ ವರದಿಗಳನ್ನು ಸಭೆಯಲ್ಲಿ ಕೇಳಿದಾಗ ನೀಡುತ್ತಿಲ್ಲ. ಎಷ್ಟು ಗ್ರಾಮ ಪಂಚಾಯತ್‌ಗಳಲ್ಲಿ ಪರೀಕ್ಷೆ ಮಾಡಿದಾಗ ಕಲುಷಿತ ನೀರು ಕಂಡುಬಂದಿರುವ ಬಗ್ಗೆ ಹಾಗೂ ಅವುಗಳ ಪುನಶ್ಚೇತನ ಕೈಗೊಂಡ ಬಗ್ಗೆ ಕೂಡಲೇ ವರದಿ ನೀಡುವಂತೆ ಸೂಚನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಳೆಗಾಲದಲ್ಲಿ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಮಾನ್ಸೂನ್ ಟಾಸ್ಕ್‌ಫೋರ್ಸ್ ತಂಡಗಳನ್ನು ರಚಿಸಿ, ಸಮಸ್ಯೆಗಳುಂಟಾದಲ್ಲಿ ಕೂಡಲೇ ಸ್ಪಂದಿಸಬೇಕು. ಕುಂದು ಕೊರತೆಗಳನ್ನು ಮಾಹಿತಿ ನೀಡಲು ತುರ್ತು ಸಂಪರ್ಕ ದೂರವಾಣಿಯನ್ನು ಸ್ಥಾಪಿಸಿ, ಈ ಬಗ್ಗೆ ಪ್ರಚಾರ ಪಡಿಸಬೇಕು. ಹೆದ್ದಾರಿಗಳಿಗೆ ಅಡ್ಡಲಾಗಿ ಬಿದ್ದಂತಹ ಮರಗಳನ್ನು ತುರ್ತು ಕಾರ್ಯಾಚರಣೆ ಕೈಗೊಂಡು ತೆರವುಗೊಳಿಸುವ ಕಾರ್ಯವನ್ನು ಮಾಡಬೇಕೆಂದು ಸೂಚನೆ ನೀಡಿದರು.

ಮರವಂತೆ ಬೀಚಿನ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ನಿಲುಗಡೆಯಿಂದ ಅಪಘಾತಗಳು ಉಂಟಾಗುತ್ತಿವೆ. ಈ ಬಗ್ಗೆ ವಾಹನಗಳ ನಿಲುಗಡೆ ಇಲ್ಲವೆಂಬ ಫಲಕಗಳನ್ನು ಅಳವಡಿಸಬೇಕು ಹಾಗೂ ರಸ್ತೆ ಬದಿಯಲ್ಲಿರುವ ಗೂಡಂಗಡಿಗಳ ತೆರವಿಗೆ ಕ್ರಮವಹಿಸಬೇಕು ಎಂದರು.

> **ರೋಗ ಹರಡದಿರಲಿ**
> **ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯವಿರುವ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಕಾಯಿಲೆಗಳಿಗೆ ಬೇಕಾಗುವ ಔಷಧ, ಚುಚ್ಚುಮದ್ದುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕು. ಆರೋಗ್ಯ ಇಲಾಖೆಯ ಕಂಟ್ರೋಲ್ ರೂಂಗಳು ದಿನ ಪೂರ್ತಿ ಸಕ್ರಿಯವಾಗಿರಬೇಕು. ಡೆಂಗ್ಯೂ, ಮಲೇರಿಯಾ ಸೇರಿದಂತೆ ಮತ್ತಿತರ ಸಾಂಕ್ರಾಮಿಕ ರೋಗಗಳು ಹರಡದಂತೆ ಕ್ರಮವಹಿಸಬೇಕು**
> ■ **ಸ್ವರೂಪಾ ಟಿ.ಕೆ., ಜಿಲ್ಲಾಧಿಕಾರಿ, ಉಡುಪಿ**

ನಗರ ಹಾಗೂ ಗ್ರಾಮೀಣ ವ್ಯಾಪ್ತಿಯಲ್ಲಿ ಅಪಾಯಕಾರಿ ಮರಗಳನ್ನು ತೆರವುಗೊಳಿಸಲು ಸ್ಥಳೀಯ ಸಂಸ್ಥೆಗಳು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ರಸ್ತೆ ಮೇಲೆ ಬೀಳುವ ಮರಗಳನ್ನು ತಕ್ಷಣಕ್ಕೆ ಸ್ಪಂದಿಸಿ, ತೆರವುಗೊಳಿಸಲು ಸನ್ನದ್ಧರಾಗಿರಬೇಕು ಎಂದ ಅವರು, ಗಾಳಿ-ಮಳೆಯಿಂದ ಮರಗಳು ಬಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಲ್ಲಿ ತಕ್ಷಣವೇ ಪುನರ್ ಸಂಪರ್ಕ ಕಲ್ಪಿಸುವ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂದು ಮೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ರಸ್ತೆ ಬದಿಯಲ್ಲಿ ಅನುಮತಿ ಪಡೆಯದೇ ಹಾಕಿರುವ ಬ್ಯಾನರ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ಆದ್ಯತೆಯ ಮೇಲೆ ಮಾಡಬೇಕು. ಪಿ.ಡಿ.ಓಗಳು ತಮ್ಮ ಗ್ರಾಮಗಳಲ್ಲಿ ಇರುವ ತೆರೆದ ಕೆರೆಗಳ ಮತ್ತು ನೀರಿನ ಗುಂಡಿಗಳ ಸುತ್ತ ತಡೆಬೇಲಿಗಳನ್ನು ಹಾಕುವುದರೊಂದಿಗೆ ಎಚ್ಚರಿಕೆಯ ಫಲಕಗಳನ್ನು ಅಳವಡಿಸಲು ಕ್ರಮ ವಹಿಸಬೇಕು ಎಂದರು.

ಜಿಲ್ಲೆಯಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳ ದುರಸ್ಥಿಯ ಕೆಲಸಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು. ಮಳೆಗಾಲದ ತುರ್ತು ಸಂದರ್ಭಗಳಲ್ಲಿ ಅಗತ್ಯವಿದ್ದಾಗ ಕಾಳಜಿ ಕೇಂದ್ರಗಳನ್ನು ತೆರೆಯಲು ಸೂಕ್ತ ಶಾಲಾ ಕಟ್ಟಡವನ್ನು ಸಿದ್ಧವಾಗಿಟ್ಟುಕೊಂಡಿರಬೇಕು ಎಂದರು.

ಮಳೆಗಾಲದಲ್ಲಿ ಪ್ರಾಣಿಗಳ ಅಸಹಜ ಸಾವು ಸಂಭವಿಸಿದ್ದಲ್ಲಿ ಅವುಗಳ ಮರಣೋತ್ತರ ವರದಿಯನ್ನು ಶೀಘ್ರವಾಗಿ ಒದಗಿಸಬೇಕು. ಸಾಕುಪ್ರಾಣಿಗಳಿಗೆ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸುವುದರೊಂದಿಗೆ, ಚುಚ್ಚುಮದ್ದುಗಳನ್ನು ನೀಡಬೇಕು ಎಂದರು.

ಜಿಲ್ಲೆಯಲ್ಲಿ ಈ ಹಿಂದೆ ಹೆಚ್ಚಿನ ಪ್ರವಾಹವಾಗಿರುವ ಸ್ಥಳಗಳನ್ನು ಗುರುತಿಸಿ, ಈಗಿನಿಂದಲೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ತಾಲೂಕುಗಳಲ್ಲಿ ಲಭ್ಯವಿರುವ ಬೋಟುಗಳು ಮತ್ತು ಈಜುಗಾರರ ಸಂಪೂರ್ಣ ಮಾಹಿತಿಯನ್ನು ಪಡೆಯುವುದರೊಂದಿಗೆ ತುರ್ತು ಸಂದರ್ಭಗಳಲ್ಲಿ ಇವರುಗಳನ್ನು ಬಳಸಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಗಣಿಗಾರಿಕೆ ನಡೆದ ಪ್ರದೇಶದಲ್ಲಿ ಆಗಿರುವ ಗುಂಡಿಗಳಲ್ಲಿ ನಿಂತ ನೀರಿನಲ್ಲಿ ಈಜಾಡಲು ಹೋಗುವುದರಿಂದ ಜೀವಹಾನಿ ಸಂಭವಿಸುವ ಸಾಧ್ಯತೆ ಇರುವ ಹಿನ್ನೆಲೆ, ಈಜಾಟ ನಿಷೇಧಿಸಿದೆ ಎಂಬ ಎಚ್ಚರಿಕೆಯ ಫಲಕವನ್ನು ಹಾಕಬೇಕು. ಜಿಲ್ಲೆಯಲ್ಲಿ ಪ್ರಸ್ತುತ ಇರುವ ಕಾಲುಸಂಕಗಳ ಸ್ಥಿತಿ-ಗತಿಗಳ ಪರಿಶೀಲನೆ ನಡೆಸಿ, ಶಿಥಿಲಾವಸ್ಥೆಯಲ್ಲಿರುವ ಕಾಲುಸಂಕಗಳ ದುರಸ್ಥಿ ಕಾರ್ಯಗಳನ್ನು ಮಾಡಬೇಕು ಎಂದ ಅವರು ಅಪಾಯಕಾರಿ ಕಾಲುಸಂಕಗಳಿದ್ದಲ್ಲಿ ಮಾಹಿತಿ ನೀಡುವಂತೆ ತಿಳಿಸಿದರು.

ಜಿಲ್ಲೆಯ ಕರಾವಳಿ ತೀರದಲ್ಲಿ ಮಳೆಗಾಲದಲ್ಲಿ ಉಂಟಾಗಬಹುದಾದ ಸಮುದ್ರ ಕೊರೆತಕ್ಕೆ ಸಂಬಂಧಿಸಿದಂತೆ, ಸಮುದ್ರ ಕೊರೆತ ತಡೆಗಟ್ಟುವಿಕೆ ನಿರ್ವಹಣಾ ಸಮಿತಿಯನ್ನು ರಚಿಸುವುದರೊಂದಿಗೆ ಸದ್ರಿ ಸಮಿತಿಯ ಅಧಿಕಾರಿಗಳು ಸಮುದ್ರ ಕೊರೆತ ಸಂಭವಿಸುವ ಪ್ರದೇಶಗಳ ಸ್ಥಳ ಪರಿಶೀಲನೆ ನಡೆಸಿ, ವರದಿ ನೀಡುವಂತೆ ತಿಳಿಸಿದರು.

ಮಳೆಗಾಲದಲ್ಲಿ ಗುಡುಗು-ಸಿಡಿಲು ಸಂದರ್ಭದಲ್ಲಿ ಹವಾಮಾನ ಇಲಾಖೆ ನೀಡುವ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವುದರೊಂದಿಗೆ ಯಾವುದೇ ಮಾನವ ಹಾಗೂ ಪ್ರಾಣಿಗಳ ಜೀವ ಹಾನಿ ಆಗದಂತೆ ನೋಡಿಕೊಳ್ಳಬೇಕು. ಜಿಲ್ಲೆಯಲ್ಲಿ ಹೊರರಾಜ್ಯದ ಕಾರ್ಮಿಕರುಗಳು ಹೆಚ್ಚಾಗಿ ದುಡಿಯುತ್ತಿರುವುದರಿಂದ ಅವರುಗಳ ಭಾಷೆಯಲ್ಲಿ ಗುಡುಗು-ಸಿಡಿಲಿನ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಎಎಸ್‌ಪಿ ಸುಧಾಕರ್ ನಾಯಕ್, ಸಹಾಯಕ ಕಮೀಷನರ್ ರಶ್ಮಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ತಹಶೀಲ್ದಾರರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಅಸಲಿ ಚಿನ್ನ ಪಡೆದು ನಕಲಿ ನೀಡಿ ವಂಚನೆ: ಮಹಿಳೆ ಬಂಧನ

• **ಮಡಿಕೇರಿ:** ಅಸಲಿ ಚಿನ್ನವನ್ನು ಪಡೆದು ನಕಲಿ ಚಿನ್ನವನ್ನು ನೀಡಿ ಮಹಿಳೆಗೆ ವಂಚನೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಮಹಿಳೆಯನ್ನು ಬಂಧಿಸುವಲ್ಲಿ ಸಿದ್ದಾಪುರ ಪೊಲೀಸರು ಯಶಸ್ವಿಯಾಗಿದ್ದಾರೆ. ಸಿದ್ದಾಪುರ ಸಮೀಪದ ನೆಲ್ಲಿ ಹುದಿಕೇರಿ ಗ್ರಾಮದ ಎಂ ಜಿ. ಕಾಲೋನಿಯ ನಿವಾಸಿ ಕುಮುದಾ ಎಂಬ ಮಹಿಳೆ ಸಿದ್ದಾಪುರ ಸಂತೆಗೆ ಆಗಮಿಸಿದ ಸಂದರ್ಭ ತಮಿಳುನಾಡಿನ ಸೇಲಂ ನಿವಾಸಿ ಭಾಗ್ಯವತಿ (30) ಎಂಬ ಮಹಿಳೆ ಪರಿಚಯಿಸಿಕೊಂಡು ಪುಸಲಾಯಿಸಿ ನಕಲಿ ಚಿನ್ನವನ್ನು ನೀಡಿ ಕುಮುದಾ ಅವರಿಂದ ಅಸಲಿ ಚಿನ್ನವನ್ನು ಪಡೆದು ವಂಚನೆ ಮಾಡಿ ಪರಾರಿಯಾಗಿದ್ದಳು. ಈ ಬಗ್ಗೆ ಕುಮುದಾ ಅವರು ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸಿದ್ದಾಪುರ ಪೊಲೀಸರು ತನಿಖೆ ನಡೆಸಿ ಆರೋಪಿ ಭಾಗ್ಯವತಿಯನ್ನು ಚೆನ್ನೈನ ಸೇಲಂ ನಲ್ಲಿ ಪತ್ತೆ ಹಚ್ಚಿ ಅಸಲಿ ಚಿನ್ನವನ್ನು ಆರೋಪಿ ಭಾಗ್ಯವತಿಯಿಂದ ವಶಪಡಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಮಡಿಕೇರಿ ವಿಭಾಗದ ಡಿವೈಎಸ್ಪಿ ಸೂರಜ್ ಮಾರ್ಗದರ್ಶನದಲ್ಲಿ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ಅಪರಾಧ ಪತ್ತೆ ದಳದ ಸಿಬ್ಬಂದಿ ಮಣಿಕಂಠ ಹಾಗೂ ಇತರ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸ್ಕೂಟರ್ - ಬೈಕ್ ಡಿಕ್ಕಿ: ಪ್ಲಸ್ ಟು ವಿದ್ಯಾರ್ಥಿ ಮೃತ್ಯು, ಮೂವರಿಗೆ ಗಾಯ

• **ಕಾಸರಗೋಡು:** ಉಳಿಯತ್ತಡ್ಕ - ಚೌಕಿ ರಸ್ತೆಯ ಅಜಾದ್‌ನಗರದಲ್ಲಿ ಸ್ಕೂಟರ್ ಮತ್ತು ಬೈಕ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಪ್ಲಸ್ ಟು ವಿದ್ಯಾರ್ಥಿ ಮೃತಪಟ್ಟ ಘಟನೆ ಸೋಮವಾರ ರಾತ್ರಿ 10.45ರ ವೇಳೆ ಅಪಘಾತ ಸಂಭವಿಸಿದೆ. ನೆಕ್ರಾಜೆ ನಿವಾಸಿ, ಚೌಕಿ ಅಜಾದ್‌ನಗರದಲ್ಲಿ ವಾಸಿಸುವ ಗಲ್ಫ್ ಉದ್ಯೋಗಿ ರಫೀಕ್ ಎಂಬವರ ಪುತ್ರ ಶಹಬಾಸ್ ಅಸರ್ (17) ಮೃತಪಟ್ಟ ದುರ್ದೈವಿಯಾಗಿದ್ದಾನೆ. ಆತನ ಜೊತೆಗಿದ್ದ ಇನ್ನೋರ್ವ ಹಾಗೂ ಬೈಕ್‌ನಲ್ಲಿದ್ದ ಇಬ್ಬರು ಗಾಯಗೊಂಡಿದ್ದು, ಅವರನ್ನು ಮಂಗಳೂರು ಹಾಗೂ ಇಂದಿರಾನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಬಾಲಕಿಯ ಅತ್ಯಾಚಾರ: ಆರೋಪಿಯ ಬಂಧನ

• **ಬೆಳ್ತಂಗಡಿ :** ಬಾಲಕಿಯ ಅತ್ಯಾಚಾರ ಮಾಡಿ ಗರ್ಭಿಣಿ ಮಾಡಿದ ಪ್ರಕರಣ ಸಂಬಂಧ ಬೆಳ್ತಂಗಡಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಬೆಳ್ತಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯ 14 ವರ್ಷದ ಬಾಲಕಿಯನ್ನು ಪುಸಲಾಯಿಸಿ ಲಾಯಿಲದ ರಿಜ್ವಾನ್ (38) ಎಂಬಾತ ನವಂಬರ್ 2025 ರ ಸಮಯದಲ್ಲಿ ಅತ್ಯಾಚಾರ ಮಾಡಿ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದ. ಇದರಿಂದ ಬಾಲಕಿ ಭಯಗೊಂಡು ಯಾರಿಗೂ ವಿಚಾರವನ್ನು ತಿಳಿಸಿರಲಿಲ್ಲ. ಇತ್ತೀಚೆಗೆ ಬಾಲಕಿಗೆ ಹೊಟ್ಟೆ ನೋವು ಕಾಣಿಸಿಕೊಂಡಾಗ ಮನೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷಿಸಿದಾಗ ಬಾಲಕಿ ಗರ್ಭಿಣಿಯಾಗಿರುವುದು ಬೆಳಕಿಗೆ ಬಂದಿರುವುದಾಗಿ ನೊಂದ ಬಾಲಕಿಯ ತಾಯಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ಮೇ 17 ರಂದು ದೂರು ನೀಡಿದ್ದಾರೆ. ದೂರಿನ ಬಗ್ಗೆ ತನಿಖೆ ನಡೆಸಿದ ಬೆಳ್ತಂಗಡಿ ಪೊಲೀಸರು ಆರೋಪಿ ಲಾಯಿಲದ ರಿಜ್ವಾನ್ (38) ಎಂಬಾತನನ್ನು ಮೇ 18 ರಂದು ಸಂಜೆ ಉಜಿರೆಯ ನೀರಚಿಲುಮೆ ಬಳಿ ಬಂಧಿಸಿ ವಿಚಾರಣೆ ನಡೆಸಿ ಮಂಗಳೂರು ಪೋಕ್ಸೋ ನ್ಯಾಯಾಲಯಕ್ಕೆ ಮೇ 19 ರಂದು ಹಾಜರುಪಡಿಸಿದ್ದು ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನವನ್ನು ವಿಧಿಸಿದೆ.

ತಂದೆಯ ಮಧುಮೇಹದ ಮಾತ್ರೆಗಳನ್ನು ಸೇವಿಸಿದ ಪುತ್ರ ಮೃತ್ಯು

• **ಕಾಸರಗೋಡು:** ತಂದೆ ಮಧುಮೇಹಕ್ಕೆ ಸೇವಿಸುತ್ತಿದ್ದ ಮಾತ್ರೆಗಳನ್ನು ಅಪರಿಮಿತವಾಗಿ ಸೇವಿಸಿದ ಪುತ್ರ ಮೃತಪಟ್ಟ ಘಟನೆ ವೆಳ್ಳರಿಕುಂಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ನಡೆದಿದೆ. ವೆಸ್ಟ್‌ಎಳೇರಿ, ಪುಂಜಚ್ಚಾಲ್ ಕಾಣಿರುತ್ತುಂಗಾಲ್ ನಿವಾಸಿ ರಾಜು ಕುರ್ಯನ್‌ರ ಪುತ್ರ ಜಿನ್ಸ್‌ರಾಜ್ (28) ಮೃತಪಟ್ಟವರು. ಸೋಮವಾರ ಜಿನ್ಸ್‌ರಾಜ್‌ನನ್ನು ಮನೆಯೊಳಗೆ ಕುಸಿದು ಬಿದ್ದ ಸ್ಥಿತಿಯಲ್ಲಿ ಪತ್ತೆಹಚ್ಚಲಾಗಿದ್ದು, ಮಾಹಿತಿ ತಿಳಿದು ತಲುಪಿದ ಸಂಬಂಧಿಕರು ವೆಳ್ಳರಿಕುಂಡ್‌ನ ಆಸ್ಪತ್ರೆಗೆ ತಲುಪಿಸಿ ಸ್ಥಿತಿ ಗಂಭೀರವಾದ ಕಾರಣ ಕೂಡಲೇ ಪರಿಯಾರಂ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಅಲ್ಲಿ ನಡೆಸಿದ ತಪಾಸಣೆಯಲ್ಲಿ ಸಕ್ಕರೆ ಖಾಯಿಲೆಗಿರುವ ಮಾತ್ರೆಗಳನ್ನು ಅಮಿತವಾಗಿ ಸೇವಿಸಿರುವುದಾಗಿ ಪತ್ತೆಯಾಯಿತು. ಬಳಿಕ ಸಂಬಂಧಿಕರು ಮನೆಗೆ ತೆರಳಿ ನೋಡಿದಾಗ ಸಕ್ಕರೆ ಕಾಯಿಲೆಗಿರುವ ಮಾತ್ರೆಯ ಖಾಲಿ ಕವರ್‌ಗಳು ಪತ್ತೆಯಾಗಿವೆ. ಜಿನ್ಸ್‌ರಾಜ್ ಅಪರಿಮಿತ ಮದ್ಯಪಾನಿಯಾಗಿದ್ದನೆಂದು ತಂದೆ ರಾಜು ಕುರ್ಯನ್ ವೆಳ್ಳರಿಕುಂಡು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಅಪರಿಮಿತವಾಗಿ ಮದ್ಯಪಾನಗೈದು ಸಮಸ್ಯೆ ಸೃಷ್ಟಿಸುತ್ತಿದ್ದ ಕಾರಣ ರಾಜು ಕುರ್ಯನ್ ಹಾಗೂ ಪತ್ನಿ ಕರ್ನಾಟಕದಲ್ಲಿ ವಾಸಮಾಡಿ ಟ್ಯಾಪಿಂಗ್ ಕೆಲಸ ನಡೆಸುತ್ತಿದ್ದರು. ಪುತ್ರ ಜಿನ್ಸಿರಾಜ್ ತಳಿಪರಂಬದಲ್ಲಿ ಕೆಲಸದಲ್ಲಿದ್ದನು. ವೆಳ್ಳರಿಕುಂಡು ಪೊಲೀಸರು ಅಸಹಜ ಸಾವಿಗೆ ಕೇಸು ದಾಖಲಿಸಿದ್ದಾರೆ.

ಕುಖ್ಯಾತ ಆರೋಪಿ ಸೆರೆ

• **ಉಡುಪಿ :** ಉಡುಪಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡಣ್ಣಗುಡ್ಡೆ ನಿವಾಸಿ ಅಬ್ದುಲ್ ರೌಫ್ (26) ಎಂಬಾತನನ್ನು ಮೇ 19ರಂದು ಪಿ.ಐ.ಟಿ. ಎನ್.ಡಿ.ಪಿ.ಎಸ್. ಕಾಯ್ದೆಯಡಿ ಪೊಲೀಸರು ಬಂಧಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಅವರ ವರದಿ ಮೇರೆಗೆ ಮಂಗಳೂರು ಪಶ್ಚಿಮ ವಲಯದ ಪೊಲೀಸ್ ಮಹಾನಿರೀಕ್ಷಕರು ಈ ಬಂಧನ ಆದೇಶ ಹೊರಡಿಸಿದ್ದಾರೆ.



ಈತನ ವಿರುದ್ಧ ಉಡುಪಿ ಜಿಲ್ಲೆಯ ಮಣಿಪಾಲ, ಉಡುಪಿ ನಗರ ಹಾಗೂ ಬೆಂಗಳೂರಿನ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಮಾದಕ ದ್ರವ್ಯ ಸಾಗಾಟ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ತಲಾ 1 ಪ್ರಕರಣ ಹಾಗೂ ಮಾದಕ ದ್ರವ್ಯ ಸೇವನೆಗೆ ಸಂಬಂಧಿಸಿದಂತೆ ಮಣಿಪಾಲ ಠಾಣೆಯಲ್ಲಿ 2 ಪ್ರಕರಣಗಳು ದಾಖಲಾಗಿವೆ. ಸಾಗಾಟ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲಾದ 3 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿದ್ದು, ದಾಖಲಾದ 2 ಸೇವನೆ ಪ್ರಕರಣಗಳಲ್ಲಿ ಶಿಕ್ಷೆ ಆಗಿದೆ. ಬಂಧಿತ ಆರೋಪಿಯನ್ನು ವಿಜಯಪುರ ಕೇಂದ್ರ ಕಾರಾಗೃಹದಲ್ಲಿಡಲಾಗಿದೆ.

ಕಟೀಲಲ್ಲೇ ಇಂದು ಆರು ಮೇಳಗಳ ಆಟ!



• **ಕಟೀಲು:** ಏಳು ಯಕ್ಷಗಾನ ಮೇಳಗಳನ್ನು ಹೊಂದಿರುವ ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಯಕ್ಷಗಾನ ಮಂಡಳಿಯ ಏಳು ಮೇಳಗಳಲ್ಲಿ ಆರು ಮೇಳಗಳ ಸೇವೆಯಾಟಗಳು ಇಂದು (ಮೇ 20 ರಂದು) ಕಟೀಲಿನಲ್ಲಿಯೇ ನಡೆಯಲಿರುವುದು ವಿಶೇಷವಾಗಿದೆ.

ಮಳೆಯ ಕಾರಣದಿಂದಾಗಿ ಸೇವಾಕರ್ತರು ಯಕ್ಷಗಾನ ಸೇವೆಯಾಟ ಮಾಡಲು ಕಷ್ಟ ಪಡಬೇಕಾಗುತ್ತದೆ. ಹಾಗಾಗಿ ಅವರು ಕಟೀಲು ಕ್ಷೇತ್ರದಲ್ಲೇ ಸೇವೆಯಾಟ ಆಡಿಸಿ ಹರಕೆ ತೀರಿಸುತ್ತಾರೆ. ಕಟೀಲು ದೇಗುಲ ರಥಬೀದಿಯ ಸರಸ್ವತೀ ಸದನ, ಮಹಾಲಕ್ಷ್ಮೀ ಸದನದಲ್ಲಿ ಸೇವೆಯಾಟಕ್ಕೆ ಅವಕಾಶ ನೀಡುತ್ತಿದ್ದು, ಇದೀಗ ರಜೆ ಇರುವ ಕಾರಣದಿಂದ ಕಟೀಲು ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲೂ ಅವಕಾಶ ನೀಡಿದೆ. ಇಲ್ಲಿ ಅಲ್ಲದೆ ದೇಗುಲಕ್ಕೆ ತಾಗಿಕೊಂಡೇ ಇರುವ ಗೋಪಾಲಕೃಷ್ಣ ಆಸ್ರಣ್ಣ ಸಭಾಭವನ, ಸಾನಿಧ್ಯ ಸಭಾಭವನ ಹಾಗೂ ಅಜಾರು ಧೂಮಾವತಿ ದೇವಸ್ಥಾನದ ಬಳಿ ಹೀಗೆ ಆರು ಮೇಳಗಳ ಆಟ ಕಟೀಲಿನಲ್ಲೇ ನಡೆಯಲಿದ್ದು, ಇಲ್ಲಿ ದೇವೀ ಮಾಹಾತ್ಮ್ಯೆ, ಕಟೀಲು ಕ್ಷೇತ್ರ ಮಾಹಾತ್ಮ್ಯೆ, ಲಲಿತೋಪಾಖ್ಯಾನ ಪ್ರಸಂಗಗಳ ಹೊರತಾದ ಪೌರಾಣಿಕ ಪ್ರಸಂಗಗಳು ಪ್ರದರ್ಶನಗೊಳ್ಳಲಿವೆ.

ಮೇ 26 ಪತ್ತನಾಜೆ ಆಟದೊಂದಿಗೆ ಈ ಬಾರಿಯ ಯಕ್ಷಗಾನ ತಿರುಗಾಟ ಕೊನೆಗೊಳ್ಳಲಿದೆ.

> **ಏಳು ಮೇಳಗಳಲ್ಲಿ ಆರು ಮೇಳಗಳ ಸೇವೆಯಾಟಗಳು ಇಂದು ಕಟೀಲಿನಲ್ಲಿಯೇ ನಡೆಯಲಿರುವುದು ವಿಶೇಷ**

ಪಡುಬಿದ್ರಿ ಠಾಣೆ ಪೊಲೀಸರ ಯಶಸ್ವೀ ಕಾರ್ಯಾಚರಣೆ

ದನ ಸಾಗಾಟ ಪತ್ತೆ: ಇಬ್ಬರ ಬಂಧನ



• **ಪಡುಬಿದ್ರಿ :** ಹಿಂಸಾತ್ಮಕ ರೀತಿಯಲ್ಲಿ ದನ ಸಾಗಾಟ ನಡೆಸುತ್ತಿದ್ದ ಇಬ್ಬರನ್ನು ಬಂಧಿಸಿ ವಾಹನವನ್ನು ವಶಪಡಿಸಿಕೊಂಡ ಘಟನೆಯು ಪಡುಬಿದ್ರಿ ಪೊಲೀಸ್ ಠಾಣಾ ವ್ಯಾಪ್ತಿಯ ಇನ್ನಾದ ಕಜನಡ್ಕ ಎಂಬಲ್ಲಿ ನಡೆದಿದೆ.

ಪಡುಬಿದ್ರಿ ಅಬ್ಬಾಸ್ ಗುಡ್ಡೆಯ ಇಸ್ಮಾಯಿಲ್ (42) ಹಾಗೂ ಕರ್ನಿರೆ ಮಸೀದಿ ಬಳಿಯ ಮಹಮ್ಮದ್ (62) ಬಂಧಿತರು.

ಮೇ 18 ರಂದು ಬೆಳಿಗ್ಗೆ ಪಡುಬಿದ್ರಿ ಪೊಲೀಸ್ ಠಾಣಾ ಸರಹದ್ದಿನ ಇನ್ನಾ ಗ್ರಾಮದ ಕಜನಡ್ಕ ಎಂಬಲ್ಲಿ ಅನಿಲ್ ಕುಮಾರ್ ಟಿ. ನಾಯ್ಕ್ ಪಿಎಸ್‌ಐ (ತನಿಖೆ) ಅವರಿಗೆ ಬಂದ ಮಾಹಿತಿಯಂತೆ ಕಾರ್ಕಳ ಕಡೆಯಿಂದ ಪಡುಬಿದ್ರಿ ಕಡೆಗೆ ಬರುತ್ತಿದ್ದ 407 ಟೆಬ್ಬೋ ವಾಹನವನ್ನು ನಿಲ್ಲಿಸಿ ಪರಿಶೀಲಿಸಿದಾಗ 3 ದನಗಳನ್ನು ಹಿಂಸಾತ್ಮಕ ರೀತಿಯಲ್ಲಿ ಕಟ್ಟಿ ಸಾಗಿಸುತ್ತಿರುವುದು ಕಂಡು ಬಂದಿತ್ತು.

ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಆರೋಪಿ ಇಸ್ಮಾಯಿಲ್ ವಿರುದ್ಧ ಮಂಗಳೂರಿನ ಬರ್ಕೆ ಪೊಲೀಸ್ ಠಾಣೆಯಲ್ಲಿ 1, ಮುಲ್ಕಿ ಠಾಣೆಯಲ್ಲಿ 3, ಬಂಟ್ವಾಳ ನಗರ ಠಾಣೆಯಲ್ಲಿ 1, ಸುರತ್ಕಲ್ ಪೊಲೀಸ್ ಠಾಣೆಯಲ್ಲಿ 1, ಕಾರ್ಕಳ ನಗರ ಠಾಣೆಯಲ್ಲಿ 1, ಹೆಬ್ರಿ ಪೊಲೀಸ್ ಠಾಣೆಯಲ್ಲಿ 2 ಪ್ರಕರಣಗಳು ಅಕ್ರಮ ಗೋ ಸಾಗಾಟ ಮತ್ತು ಗೋಹತ್ಯೆ ನಿಷೇಧ ಕಾಯಿದೆಯಂತೆ ಪ್ರಕರಣ ದಾಖಲಾಗಿದೆ.

ವಶಪಡಿಸಿಕೊಂಡ ವಾಹನದ ಹಾಗೂ ಕಳವು ಮಾಡಿದ ದನಗಳ ಒಟ್ಟು ಅಂದಾಜು ಮೌಲ್ಯ 4,25,000 ಆಗಿದೆ. ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದ ಕಾರ್ಯಾಚರಣೆಯಲ್ಲಿ ಪಿಎಸ್‌ಐ ತನಿಖೆ ಅನಿಲ್ ಕುಮಾರ್‌ರವರೊಂದಿಗೆ ಠಾಣಾ ಸಿಬ್ಬಂದಿಯವರಾದ ಎಎಸ್‌ಐ ದಿನಕರ, ಹೆಚ್‌ಸಿ ನವೀನ್ ಕುಮಾರ್, ಹೆಚ್‌ಸಿ ಅಶ್ವಿನ್ ಕುಮಾರ್, ಹೆಚ್‌ಸಿ ಕೃಷ್ಣ ಪ್ರಸಾದ್, ಪಿಸಿ ಸಂದೇಶ್, ಪಿಸಿ ಪ್ರಭು ಅಥಣಿ, ಪಿಸಿ ರಾಘವೇಂದ್ರ, ಪಿಸಿ ಅಣ್ಣಪ್ಪ , ಪಿಸಿ ಶ್ರೀಧರ್ ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಂದು ಮೆಡಿಕಲ್ ಬಂದ್: ಗ್ರಾಹಕರಿಗೆ ಪರ್ಯಾಯ ವ್ಯವಸ್ಥೆ

• **ಮಂಗಳೂರು:** ಆನ್‌ಲೈನ್ ಮೂಲಕ ಔಷಧಿಗಳ ಮಾರಾಟವನ್ನು ವಿರೋಧಿಸಿ ಬುಧವಾರ ಕರೆ ನೀಡಿರುವ ಮೆಡಿಕಲ್ ಶಾಪ್ ಬಂದ್ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ಅಗತ್ಯ ಔಷಧಿಗಳ ಪೂರೈಕೆಗೆ ಕೆಲವು ಮೆಡಿಕಲ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಲಿದೆ.



File Photo

ಅಪೋಲೋ ಫಾರ್ಮಸಿ 38 ಸಂಸ್ಥೆಗಳು, ಮೆಡ್ ಪ್ಲಸ್ 48 ಸಂಸ್ಥೆಗಳು ಮತ್ತು ಪ್ರಧಾನಮಂತ್ರಿ ಜನೌಷಧಿ ಕೇಂದ್ರ 130 ಮೆಡಿಕಲ್ ಅಂಗಡಿಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿರುವ ಎಲ್ಲಾ ಮೆಡಿಕಲ್ ಅಂಗಡಿಗಳು ತೆರೆದಿರಲಿದ್ದು, ಸಾರ್ವಜನಿಕರು ಔಷಧಿಗಳ ಅಗತ್ಯತೆಗೆ ಇಲ್ಲಿಗೆ ತೆರಳಿ ಖರೀದಿಸಬಹುದು.

> **ಸಾರ್ವಜನಿಕರ ಮಾಹಿತಿಗಾಗಿ**
> ಸಾರ್ವಜನಿಕರು ಯಾವುದೇ ಮಾಹಿತಿಗಾಗಿ ಮೆಡ್‌ಪ್ಲಸ್ ಮತ್ತು ಅಪೋಲೋ ಮೆಡಿಕಲ್‌ಗಳನ್ನು ಈ ಕೆಳಗಿನ ಸಂಖ್ಯೆಗಳೊಂದಿಗೆ ಸಂಪರ್ಕಿಸಬಹುದು. ಮಂಗಳೂರು ನಗರ- **9108466827**, ಮುಲ್ಕಿ, ಕಿನ್ನಿಗೋಳಿ, ಮೂಡಬಿದ್ರಿ- **6364 908 172, 76250 81353**, ಬಂಟ್ವಾಳ, ಬಿ.ಸಿ. ರೋಡ್, ವಿಟ್ಲ- **91872 34432**. ಮಂಗಳೂರಿನ ಸಹಾಯಕ ಡ್ರಗ್ಸ್ ನಿಯಂತ್ರಕರು ನೋಡಲ್ ಅಧಿಕಾರಿಗಳಾಗಿದ್ದು, ಅವರನ್ನು (**9448205177** ಮತ್ತು **0824 221 8451**) ಸಂಪರ್ಕಿಸಬಹುದು ಎಂದು ಸಹಾಯಕ ಔಷಧ ನಿಯಂತ್ರಕರ ಪ್ರಕಟಣೆ ತಿಳಿಸಿದೆ.

ನಾಯಿಗಳ ಮಾರಣಹೋಮ!



• **ಬಂಟ್ವಾಳ:** ಬೀದಿ ನಾಯಿ ಹಾಗೂ ಸಾಕು ನಾಯಿಗಳಿಗೆ ವಿಷ ಹಾಕಿ ಕೊಂದ ಹೇಯ ಘಟನೆ ಬಂಟ್ವಾಳ ತಾಲೂಕಿನ ಅರಳ ಗ್ರಾಮದ ಕುಟ್ಟಿಕಳ ಎಂಬಲ್ಲಿ ಸಂಭವಿಸಿದ್ದು, ಪ್ರಾಣಿ ಪ್ರಿಯರ ಆಕ್ರೋಶಕ್ಕೆ ಕಾರಣವಾಗಿದೆ.

ಕುಟ್ಟಿಕಳ ಜಂಕ್ಷನ್ ನಲ್ಲಿ ಹಲವಾರು ಬೀದಿ ನಾಯಿಗಳಿದ್ದು, ಇವುಗಳ ಸಹಿತ ಸ್ಥಳೀಯರೋರ್ವರ ಸಾಕು ನಾಯಿಗೆ ದುಷ್ಕರ್ಮಿಗಳ್ಯಾರೋ ಆಹಾರದಲ್ಲಿ ವಿಷಬೆರಸಿ ನಾಯಿಗೆ ಹಾಕಿರುವ ಪರಿಣಾಮ ಸುಮಾರು ಹತ್ತಕ್ಕೂ ಹೆಚ್ಚು ನಾಯಿಗಳು ಸಾವನ್ನಪ್ಪಿರುವುದಾಗಿ ತಿಳಿದು ಬಂದಿದೆ.

ಸ್ಥಳೀಯರೋರ್ವರು ತನ್ನ ಸಾಕು ನಾಯಿ ಸಹಿತ ಬೀದಿ ನಾಯಿಗಳಿಗೆ ಪ್ರತಿನಿತ್ಯ ಅನ್ನಹಾರ ನೀಡುತ್ತಿದ್ದರು. ಆದರೆ ಆಹಾರದಲ್ಲಿ ವಿಷ ಬೆರೆಸಿದ್ದು, ಇದನ್ನು ತಿಂದ ನಾಯಿಗಳು ಗೋಳಿಡುತ್ತಾ ನರಳಿ, ನರಳಿ ಸಾವನ್ನಪ್ಪಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಈ ಘಟನೆ ನಡೆಯುತ್ತಿದೆಯೆನ್ನಲಾಗಿದ್ದು, ಕಳೆದೊಂದು ತಿಂಗಳಿನಿಂದ ಸುಮಾರು 10 ಬೀದಿ ನಾಯಿಗಳು ಸಾವನ್ನಪಿದ್ದರೆ. ಸೋಮವಾರ ಸ್ಥಳೀಯರೋರ್ವರ ಸಾಕುನಾಯಿ ಪ್ರಾಣಬಿಟ್ಟಿದೆ.

ವಿಚಿತ್ರವೆಂದರೆ ಕಟುಕರು ನಾಯಿ ನರಳಿ ಗೋಳಿಡುವ ದೃಶ್ಯದ ವಿಡೀಯೋವನ್ನು ಸಾಮಾಜಿಕ ಜಾಲತಾಣದಲ್ಲು ಹರಿಯಬಿಡಲಾಗಿದೆ. ಈ ಕೃತ್ಯ ಇದೀಗ ಪ್ರಾಣಿ ಪ್ರಿಯರ ಆಕ್ರೋಶಕ್ಕೆ ಕಾರಣವಾಗಿದ್ದು ಈ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯತ್ ಹಾಗೂ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಾಣಿಗಳಿಗೆ ವಿಷ ನೀಡುವುದು ಅಥವಾ ಹಿಂಸೆ ನೀಡುವುದು ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು, ವಿಷ ಹಾಕಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಎಂಡಿಎಂಎ ಸಾಗಾಟ ಪ್ರಕರಣ | ಕಾರು ಚೇಸ್ ಮಾಡಿದ ಪೊಲೀಸರು

ಪ್ರಮುಖ ಆರೋಪಿಯ ಬಂಧನ

• **ಕುಂಬಳೆ:** ಉಪ್ಪಳ ಸೋಂಕಾಲ್ ನಲ್ಲಿ ಕಾರಿನಲ್ಲಿ ಸಾಗಿಸುತ್ತಿದ್ದ 53.580 ಗ್ರಾಂ ಎಂಡಿಎಂಎ ವಶಪಡಿಸಿಕೊಂಡ ಪ್ರಕರಣದಲ್ಲಿ ಮುಖ್ಯ ಆರೋಪಿಗಳಲ್ಲಿ ಓರ್ವನಾದ ಯುವಕನನ್ನು ಪೊಲೀಸರು ಸಾಹಸಿಕವಾಗಿ ಬಂಧಿಸಿದ್ದಾರೆ. ಕಲ್ಲಿಕೋಟೆ ನಿವಾಸಿ ಗೋಡ್ರಿನ್ ಚಾಕೊ (33) ಎಂಬಾತ ಬಂಧಿತ ಆರೋಪಿಯಾಗಿದ್ದಾನೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ವಿ.ವಿಜಯ್ ಭರತ್ ರೆಡ್ಡಿಯವರ ನಿರ್ದೇಶ ಪ್ರಕಾರ ಕುಂಬಳೆ ಪೊಲೀಸ್ ಇನ್‌ಸ್ಪೆಕ್ಟರ್ ಬೈಜು ಕೆಜೋಸ್, ಎಸ್‌ಐ ಅನಂತಕೃಷ್ಣನ್ ಆರ್. ಮೆನೋನ್ ಎಂಬವರ ನೇತೃತ್ವದಲ್ಲಿ ಸೆರೆಹಿಡಿಯಲಾಗಿದೆ.

ಕಲ್ಲಿಕೋಟೆ ತಿರುವಂಬಾಡಿ ಪೊನ್ನಮಂಗಲ ನಿವಾಸಿಯಾದ ಗೋಡ್ರಿನ್ ಚಾಕೊ ಈಗ ಕರ್ನಾಟಕದ ಮಂಡ್ಯದಲ್ಲಿ ವಾಸಿಸುತ್ತಿದ್ದನು. ಫೆಬ್ರವರಿ 1ರಂದು ಮುಂಜಾನೆ ಸೋಂಕಾಲಿನಲ್ಲಿ ಕಾರಿನಲ್ಲಿ ಸಾಗಿಸುತ್ತಿದ್ದ 53 ಗ್ರಾಂ ಎಂಡಿಎಂಎ ಸಹಿತ ಮಂಗಲ್ಪಾಡಿ ಅಂಬಾರುಪಳ್ಳ ಮಾಸಿದ ಮಹಲ್‌ನ ಇದ್ದಿನ್ ಕುಂಞಿ ಇರ್ಷಾದ್ (34) ಎಂಬಾತನನ್ನು ಬಂಧಿಸಲಾಗಿತ್ತು. ಆತನಿಗೆ ಎಂಡಿಎಂಎ ನೀಡಿರುವುದು ಗೋಡ್ರಿನ್ ಗೋಗ್ವಿನ್ ಚಾಕೊ ಆಗಿದ್ದಾನೆಂದು ಪೊಲೀಸರಿಗೆ ಮಾಹಿತಿ ಲಭಿಸಿತ್ತು. ನಂತರ ಆತನ ಮೇಲೆ ಪೊಲೀಸರು ನಿಗಾ ಇರಿಸಿದ್ದರು.

ಆತ ಮೈಸೂರಿಗೆ ತಲುಪಿರುವುದಾಗಿ ರಹಸ್ಯ ಮಾಹಿತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಲಭಿಸಿತ್ತು. ಅದರಂತೆ ಪೊಲೀಸ್ ತಂಡ ಮೊನ್ನೆ ರಾತ್ರಿ ಮೈಸೂರಿಗೆ ತೆರಳಿ ಆರೋಪಿಯನ್ನು ಪತ್ತೆಹಚ್ಚಿದೆ. ಆತನನ್ನು ಪೊಲೀಸರು ಕಸ್ಟಡಿಗೆ ತೆಗೆಯಲು ಮುಂದಾಗುತ್ತಿದ್ದಂತೆ ಓಡಿದ ಗೋಡ್ರಿನ್ ಚಾಕೊ ರಸ್ತೆ ಬದಿ ನಿಲ್ಲಿಸಿದ್ದ ಕಾರಿನಲ್ಲಿ ಪರಾರಿಯಾಗಿದ್ದ. ಕೂಡಲೇ ಆ ಕಾರನ್ನು ಪೊಲೀಸರು ಹಿಂಬಾಲಿಸಿದರು. ಗಂಟೆಗಳ ಕಾಲ ಸಂಚರಿಸಿದ ಬಳಿಕ ಮಡಿಕೇರಿಯಲ್ಲಿ ಪೊಲೀಸ್ ತಂಡ ಸಂಚರಿಸಿದ ವಾಹನವನ್ನು ರಸ್ತೆಗೆ ಅಡ್ಡ ನಿಲ್ಲಿಸಿ ಕಾರನ್ನು ತಡೆಹಿಡಿಯಲಾಗಿದೆ. ಅಲ್ಲಿಂದಲೂ ಗೋಡ್ರಿನ್ ಚಾಕೊ ಕಾರಿನಿಂದ ಇಳಿದು ಓಡಲು ಪ್ರಯತ್ನಿಸಿದ್ದು ಅಷ್ಟರಲ್ಲಿ ಆತನನ್ನು ಪೊಲೀಸರು ಸೆರೆಹಿಡಿದಿದ್ದಾರೆ.

ಆರೋಪಿ ಸಂಚರಿಸಿದ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಯನ್ನು ಕುಂಬಳೆ ಪೊಲೀಸ್ ಠಾಣೆಗೆ ತಲುಪಿಸಿ ತನಿಖೆಗೊಳಪಡಿಸಿದ ಬಳಿಕ ಕಾಸರಗೋಡು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

> **ಪೊಲೀಸ್ ತಂಡ ಮೊನ್ನೆ ರಾತ್ರಿ ಮೈಸೂರಿಗೆ ತೆರಳಿ ಆರೋಪಿಯನ್ನು ಪತ್ತೆಹಚ್ಚಿದೆ.**

ಸ್ಕೂಟಿಗೆ ಟ್ಯಾಂಕರ್ ಡಿಕ್ಕಿ: ಸವಾರ ಸಾವು







• **ಪಡುಬಿದ್ರಿ:** ನೀರು ಸಾಗಾಟದ ಟ್ಯಾಂಕರ್ ರೊಂದು ಸ್ಕೂಟಿಗೆ ಡಿಕ್ಕಿ ಹೊಡೆದು ಸ್ಕೂಟಿ ಸವಾರ ಮೃತಪಟ್ಟ ದಾರುಣ ಘಟನೆ ಮಂಗಳವಾರ ಬೆಳಿಗ್ಗೆ ಪಣಿಯೂರು ಕಂಚುಗರ ಕೇರಿ ತಿರು ವಿನಲ್ಲಿ ಘಟಿಸಿದೆ. ಪಣಿಯೂರು ಬಳಿಯ ಪೆಜತ್ತಕಟ್ಟೆ ಬಳಿಯ ಕೃಷ್ಣ ಕೃಪಾ ಮನೆಯ ಕೃಷ್ಣ ಮೂಲ್ಯ (22) ಮೃತ ಸ್ಕೂಟಿ ಸವಾರ. ಕೃಷ್ಣ ಪಣಿಯೂರಿಗೆ ಹಾಲು ಖರೀದಿಗೆ ಬಂದಿದ್ದು, ಮರಳಿ ಸ್ಕೂಟಿಯಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ಎದುರಿನಿಂದ ಸಾಗುತ್ತಿದ್ದ ನೀರಿನ ಟ್ಯಾಂಕರ್, ಏಕಾಏಕಿ ಕಂಚುಗರ ರಸ್ತೆಗೆ ತೆರಳಲು ಬಲಬದಿಗೆ ತಿರುಗಿದ ಸಂದರ್ಭ ಡಿಕ್ಕಿ ಹೊಡೆದಿದೆ. ಸ್ಕೂಟಿ ಸವಾರರ ತಲೆಗೆ ತೀವ್ರ ಗಾಯವಾಗಿದ್ದು, ಉಚ್ಚಿಲದ ಆಂಬುಲೆನ್ಸ್‌ನಲ್ಲಿ ಸ್ಥಳೀಯರ ಸಹಕಾರದೊಂದಿಗೆ ಉಡುಪಿ ಜಿಲ್ಲಾಸ್ಪತ್ರೆಗೆ ಕರೆದೊಯ್ದಿದ್ದು, ವೈದ್ಯರು ಗಾಯಾಳುವನ್ನು ಪರೀಕ್ಷಿಸಿ, ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ. ಪಡುಬಿದ್ರಿ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ನವಮಂಗಳೂರು ಬಂದರಿಗೆ ಎಂ.ಎಸ್. ಸೆವೆನ್ ಸೀಸ್ ನ್ಯಾವಿಗೇಟರ್‌ನಲ್ಲಿ ಬಂದರು ವಿದೇಶಿ ಅತಿಥಿಗಳು



ನವಮಂಗಳೂರು ಬಂದರಿಗೆ ಈ ಋತುವಿನ ಐದನೇ ಮತ್ತು ಅಂತಿಮ ಕ್ರೂಸ್ ಹಡಗು ಎಂ.ಎಸ್. ಸೆವೆನ್ ಸೀಸ್ ನ್ಯಾವಿಗೇಟರ್ ಆಗಮಿಸಿದೆ. ಬಹಮಾಸ್ ಧ್ವಜವನ್ನು ಹೊಂದಿರುವ ಈ ಐಷಾರಾಮಿ ಕ್ರೂಸ್ ಹಡಗು ಮಾಲೆ, ಕೊಚ್ಚಿನ್, ಮಂಗಳೂರು, ಗೋವಾ ಮತ್ತು ಮುಂಬೈ ಸಂಪರ್ಕಿಸುವ ಪ್ರಯಾಣದ ಭಾಗವಾಗಿ 427 ಪ್ರಯಾಣಿಕರು ಮತ್ತು 372 ಸಿಬ್ಬಂದಿಯೊಂದಿಗೆ ಇಲ್ಲಿಗೆ ಆಗಮಿಸಿತು.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
31° 26°	31° 27°

ರೂ. 350 ರಿಂದ 500ಕ್ಕೆ ಜಿಗಿದಿದೆ ಬೆಲೆ
ಕೃಷಿಗೆ ಮೈಲುತುತ್ತು!
ಅಲ್ಲಿನ ಯುದ್ಧಕ್ಕೆ ಇಲ್ಲಿನ ಬೆಳೆ ಬಲಿದಾನ

■ ಮಿಥುನ್ ಕರ್ಲಪ್ಪಾಡಿ

ಸುಳ್ಯ: ಕೊಲ್ಲಿ ರಾಷ್ಟ್ರಗಳ ಯುದ್ಧ ಈಗ ಕರಾವಳಿ ಕೃಷಿಯ ಮೇಲೂ ಪ್ರಭಾವ ಬೀರುತ್ತಿದ್ದು, ರೋಗ ನಿಯಂತ್ರಣಕ್ಕಾಗಿ ಬಳಸುವ ಮೈಲುತುತ್ತು ಬೆಲೆ ಏರಿಕೆ ಈಗ ಕೃಷಿಕನಿಗೆ ನುಂಗಲಾರದ ತುತ್ತಾಗುತ್ತಿದೆ.

ರೂ. 500ರ ಗಡಿಯತ್ತ ದಾಪುಗಾಲು

ರೂ. 250ರಿಂದ ರೂ. 350ರ ಗಡಿಯಲ್ಲಿ ಇದ್ದ ಮೈಲುತುತ್ತು ಬೆಲೆ ಈ ಬಾರಿ ರೂ. 500ರ ಗಡಿಯತ್ತ ದಾಪುಗಾಲಿಡುತ್ತಿದ್ದು, ಕೃಷಿಕನ ಜೇಬಿಗೆ ಈಗ ಸಖತ್ತಾಗಿಯೇ ಬಿಸಿ ಮುಟ್ಟಿಸಿದೆ. ಜೊತೆಗೆ ಪೂರೈಕೆ ಕಡಿಮೆಯಾಗಿದ್ದು, ಹೆಚ್ಚು ದುಡ್ಡು ತೆತ್ತರೂ ಸಿಗದ ಸ್ಥಿತಿ ನಿರ್ಮಾಣವಾಗುತ್ತಿದೆ.

ಹೀಗಾದರೆ ಈ ಬಾರಿ ಹೇಗೆ?

ದಕ್ಷಿಣ ಕನ್ನಡ ಸಹಿತ ಕರಾವಳಿಯ ಕೃಷಿಕರು ಮಳೆಗಾಲದಲ್ಲಿ ಅಡಿಕೆ ಸಹಿತ ಇತರೆ ಬೆಳೆಗಳಿಗೆ ರೋಗಗಳು ಬರದಂತೆ ತಡೆಗಟ್ಟಲು ಸಾಮಾನ್ಯವಾಗಿ ಜೂನ್, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಮೂರು ಬಾರಿ ಮೈಲುತುತ್ತು ಬಳಸಿ ಬೋರ್ಡೋ ದ್ರಾವಣ ಸಿಂಪಡಿಸುತ್ತಾರೆ, ಈ ಬಾರಿ ಈ ಪಾಟಿ ಬೆಲೆಯೇರಿಕೆಯಿಂದ ಕೃಷಿ ಮುಂದುವರಿಸುವುದು ಹೇಗೆ ಎಂಬ ಚಿಂತೆ ಅವರನ್ನು ಕಾಡುತ್ತಿದೆ. »ಪುಟ 6



ಪಂಪ್‌ಗೆ ಬಳಸಲು ಸಿಗದ ಪೆಟ್ರೋಲ್...

ತೋಟದಲ್ಲಿ ಮದ್ದು ಸಿಂಪಡಣೆಗೆ ಪೆಟ್ರೋಲ್ ಚಾಲಿತ ಸ್ಪ್ರೇಯರ್ ಬಳಸುತ್ತಿದ್ದು ಅವುಗಳಿಗೂ ಪೆಟ್ರೋಲ್ ಬಂಕ್‌ಗಳಲ್ಲಿ ಬಾಟಲಿಗಳಲ್ಲಿ ಸಿಗದೇ ಆತ ಮತ್ತಷ್ಟು ಹೈರಾಣಾಗುತ್ತಿದ್ದಾನೆ.

ಖರೀದಿಗಾಗಿ ಕಾದು ಕುಳಿತುಕೊಳ್ಳುವ ಸ್ಥಿತಿ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ, ಉಡುಪಿ ಜಿಲ್ಲೆಯ ಜೊತೆಗೆ ನೆರೆಯ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ ಕೃಷಿಕ ಮೈಲುತುತ್ತು ಖರೀದಿಗಾಗಿ ಕಾದು ಕುಳಿತುಕೊಳ್ಳುವಂತಾಗಿದೆ. ಸುಣ್ಣ, ಮೈಲುತುತ್ತು ಬೆಲೆ ಏರಿಕೆ ಕಾಣುತ್ತಿದ್ದಂತೆ ಅಡಿಕೆ ಬೆಲೆಯು ಇಳಿಮುಖವಾಗುತ್ತಿದ್ದು, ಅತ್ತ ಮೈಲುತುತ್ತು ಖರೀದಿ ಇದೀಗ ಸಾಹಸಮಯವಾಗುತ್ತಿದೆ.

ಕೃಷಿಕನ ಮಡಿಲಿಗೆ ಸಂಕಷ್ಟಗಳ ಸರಮಾಲೆ

ಮೈಲುತುತ್ತು ಬೆಲೆ ಏರಿಕೆ ಒಂದೆಡೆಯಾದರೆ ಇನ್ನೊಂದೆಡೆ ಮದ್ದು ಸಿಂಪಡಣೆ ಮಾಡುವ ಕಾರ್ಮಿಕರ ಕೊರತೆಯೂ ಕಾಡುತ್ತಿದೆ. ಅವರ ವೇತನ ಕೂಡಾ ಹೆಚ್ಚಳವಾಗಿದ್ದು, ಈಗ ಒಂದು ಬ್ಯಾರಲ್‌ಗೆ ರೂ. 1000ದಿಂದ ರೂ. 1500 ನೀಡಬೇಕಾಗಿದೆ. ಒಂದೆಡೆ ಮೈಲುತುತ್ತು ಬೆಲೆ ಏರಿಕೆ, ಇನ್ನೊಂದೆಡೆ ಕಾರ್ಮಿಕರ ವೇತನ ಹೆಚ್ಚಳದ ಜೊತೆಗೆ ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಕೂಡಾ ಇಳಿಮುಖವಾಗಿ ಸಾಗುತ್ತಿದೆ. ಇದರ ಮಧ್ಯೆ ಹಳದಿರೋಗ, ಎಲೆಚುಕ್ಕೆ ರೋಗ ಹಾಗೂ ಮಳೆಗಾಲದಲ್ಲಿ ಬರುವಂತ ಕೊಳೆರೋಗ ಕೃಷಿಕನ ಹೈರಾಣಾಗಿಸಿದೆ.

ಸಂಭ್ರಮ ಹಂಚಿಕೊಂಡ ರಿಯಾನ್ಷ್
ಎಂಡೋ ಸಂತ್ರಸ್ತೆಗೆ 'ಬರ್ತ್ ಡೇ ಗಿಫ್ಟ್'!
ಬೆಳ್ತಂಗಡಿಯಲ್ಲಿ ಮಾದರಿ ಕಾರ್ಯ

ಬೆಳ್ತಂಗಡಿ: ಎಂಡೋಸಲ್ಫಾನ್ ಪೀಡಿತಳಾಗಿ ಹುಟ್ಟಿನಿಂದಲೇ ಕಷ್ಟ ಎದುರಿಸುತ್ತಿರುವ ಇಲ್ಲಿ ತೆಂಕಕಾರಂದೂರು ಗ್ರಾಮ ಪೆರೋಡಿತ್ತಾಯ ಕಟ್ಟೆನಿವಾಸಿ ಒಂಭತ್ತರ ಬಾಲೆ ಮಾನ್ಯಾಗೆ ದಿನಸಿ ಸಾಮಾಗ್ರಿ, ಆರ್ಥಿಕ ನೆರವು ಹಸ್ತಾಂತರಿಸಿ ಮುಂಡಾಜೆಯ ಪುಟ್ಟ ಬಾಲಕ ರಿಯಾನ್ಷ್ ತನ್ನ 7ನೇ ವರ್ಷದ ಹುಟ್ಟುಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿದ್ದಾನೆ.

ನಿವಾಸಕ್ಕೇ ಭೇಟಿ ನೀಡಿ ಹಸ್ತಾಂತರ

ರಿಯಾನ್ಷ್, ಮುಂಡಾಜೆಯ ಖುಷಿ ಸ್ಟುಡಿಯೋ ಮತ್ತು ಈಶ ಮಲ್ಟಿ ಬ್ರ್ಯಾಂಡ್ ಕಾರ್ ಕೇರ್ ಸೆಂಟರ್‌ಮಾಲಿಕ ರಾಕೇಶ್ ನಾಯ್ಕ್ ಅವರ ಪುತ್ರ. ಇವರು ಹಿರಿಯ ಪತ್ರಕರ್ತ ಅಶ್ರಫ್ ಆಲಿಕುಂಞಿ ಮುಂಡಾಜೆ ಅವರ ಮೂಲಕ ಈ ಅರ್ಹ ಕುಟುಂಬವನ್ನು ಅವರ ಬಾಡಿಗೆ ನಿವಾಸದಲ್ಲಿ ಖುದ್ದಾಗಿ ಭೇಟಿ ಮಾಡಿ ನೆರವು ಹಸ್ತಾಂತರಿಸಿದರು.

ನಿತ್ಯವೂ ಫಿಸಿಯೋಥೆರಪಿ ಚಿಕಿತ್ಸೆ

ಎಂಡೋಸಲ್ಫಾನ್ ಸಂತ್ರಸ್ತಳಾದ ಈ ಬಾಲೆ ಮಾನ್ಯಾ, ವಿಮುಕ್ತಿ ಸಂಸ್ಥೆ ನಡೆಸುವ ದಯಾ ವಿಶೇಷಶಾಲೆಯಲ್ಲಿ ಪ್ರತಿದಿನ ಫಿಸಿಯೋಥೆರಪಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ.



ಯಾರೀಕೆ ಮಾನ್ಯಾ ?

ಕೂಲಿ ಕಾರ್ಮಿಕ ಪ್ರಶಾಂತ್ ಮತ್ತು ಗೃಹಿಣಿ ಲಾವಣ್ಯ ದಂಪತಿ ಪುತ್ರಿ ಮಾನ್ಯ ಎಂಡೋಸಲ್ಫಾನ್ ಪೀಡಿತೆಯಾಗಿದ್ದು ವಿಶೇಷ ಚೇತನೆಯಾಗಿದ್ದಾರೆ.

ಸುತ್ತಮುತ್ತ

ಉಡುಪಿ ಜಿಲ್ಲೆಯಲಿ ನಿರಂತರ ತುಂತುರು ಮಳೆ: ತಂಪು ತಂಪು ಕೂಲ್!

ಉಡುಪಿ: ಜಿಲ್ಲೆಯ ಉಡುಪಿ ನಗರ, ಕಾಪು ಮತ್ತು ಬ್ರಹ್ಮಾವರ ಭಾಗದಲ್ಲಿ ಮಂಗಳವಾರ ಮುಂಜಾನೆಯಿಂದಲೇ ನಿರಂತರವಾಗಿ ತುಂತುರು ಮಳೆಯಾಗುತ್ತಿದೆ. ಕಳೆದೆರಡು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ಜಿಟಿಜಿಟಿ ಮಳೆ ಎಲ್ಲೆಡೆ ತಂಪಾದ ಅನುಭವ ನೀಡಿದೆ. ಮಂಗಳವಾರ ಬೆಳಗ್ಗೆ 8ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳಲ್ಲಿ ಕಾರ್ಕಳ ತಾಲೂಕಿನಲ್ಲಿ 7.6 ಮಿ.ಮೀ., ಕುಂದಾಪುರ–5.2 ಮಿ.ಮೀ., ಉಡುಪಿ–12.9 ಮಿ.ಮೀ., ಬೈಂದೂರು–19.3 ಮಿ.ಮೀ., ಬ್ರಹ್ಮಾವರ–13.5 ಮಿ.ಮೀ., ಕಾಪು–9.0 ಮಿ.ಮೀ., ಹೆಬ್ರಿ –11.0 ಮಿ.ಮೀ. ಮಳೆಯಾಗಿದ್ದು, ಜಿಲ್ಲೆಯಲ್ಲಿ ಸರಾಸರಿ 10.5 ಮಿ.ಮೀ. ಮಳೆಬಿದ್ದಿದೆ. ಕಾಪು ತಾಲೂಕಿನ ಏಣಗುಡ್ಡೆ ಗ್ರಾಮದ ಪ್ರಭಾಕರ್ ಪಾಲನ್ ಎಂಬವರ ಮನೆಯ ಮೇಲೆ ಮರ ಉರುಳಿಬಿದ್ದು ಭಾಗಶಃ ಹಾನಿಯಾಗಿ ಸಾವಿರಾರು ರೂ. ನಷ್ಟ ಸಂಭವಿಸಿದೆ.

ಜೀವನದಿ ನೇತ್ರಾವತಿ ಒಡಲಿಗೆ ಪಂಚಾಯತ್ ಆಡಳಿತ ಸಂಗ್ರಹಿಸಿದ್ದ ತ್ಯಾಜ್ಯರಾಶಿ?
ಈಗ ಎಲ್ಲೆಡೆ ಸಖತ್ ವೈರಲ್ ಆಗ್ತಿದೆ ವಿಡಿಯೋ!

ಉಪ್ಪಿನಂಗಡಿ: ಇಲ್ಲಿನ ಪಂಚಾಯತ್ ಆಡಳಿತ ಸಂಗ್ರಹಿಸಿದ್ದ ತ್ಯಾಜ್ಯ ನದಿಗೆ ಎಸೆಯಲಾಗುತ್ತಿದೆ ಎಂಬ ಮಾಹಿತಿಯ ವಿಡಿಯೋ ದೃಶ್ಯಾವಳಿ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿದ್ದು, ಇದು ಈಗ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಡ್ರಮ್‌ನಲ್ಲಿ ತಂದು ಎಸೆದರೇ?

ಉಪ್ಪಿನಂಗಡಿ ಪೇಟೆ ಬಳಿಯ ನೇತ್ರಾವತಿ ನದಿ ದಡದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕದ ಸಿಬ್ಬಂದಿ ಡ್ರಮ್‌ನಲ್ಲಿದ್ದ ತ್ಯಾಜ್ಯ ತಂದು ನದಿ ಭಾಗಕ್ಕೆ ಎಸೆಯುತ್ತಿರುವ ವಿಡಿಯೋ ಇದೀಗ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿದ್ದು, ಈ ಬೆಳವಣಿಗೆಯು ಪಂಚಾಯತ್ ಆಡಳಿತಕ್ಕೆ ತೀವ್ರ ಮುಜುಗರವನ್ನು ತಂದಿಟ್ಟಿದೆ. ಈ ನಡುವೆ ಕರ್ನಾಟಕ ರಕ್ಷಣಾ ವೇದಿಕೆಯ ಉಪಾಧ್ಯಕ್ಷ ಖಲಂದರ್ ಎಂಬವರು ಉಪ್ಪಿನಂಗಡಿ ಪಂಚಾಯತ್ ಆಡಳಿತ ನಾಡಿನ ಜೀವನದಿ ನೇತ್ರಾ ವತಿಯ ಪಾವಿತ್ರ್ಯತೆಯನ್ನು ತ್ಯಾಜ್ಯ ಎಸೆದು ಹಾಳುಗೆಡವುತ್ತಿದೆ ಎಂದು ಆರೋಪಿಸಿ ಪುತ್ತೂರು ಶಾಸಕರಿಗೆ ದೂರು ನೀಡಿದ್ದಾರೆ.



ಕರ್ತವ್ಯಕ್ಕೆ ತಡೆ ಕಾನೂನುಬಾಹಿರ

"ಖಲಂದರ್ ಎಂಬ ವ್ಯಕ್ತಿ ಅಲ್ಲಿನ ದೃಶ್ಯಾವಳಿ ವಿಡಿಯೋ ಮಾಡಿರುವುದು ಫೋಟೋ ತೆಗೆದಿರುವುದಕ್ಕೆ ನಮ್ಮ ಯಾವುದೇ ಆಕ್ಷೇಪವಿಲ್ಲ, ಆದರೆ ಅಲ್ಲಿನ ವಾಹನಕ್ಕೆ ಅಡ್ಡನಿಂತು ತಡೆಯೊಡ್ಡುವುದು, ಸಿಬ್ಬಂದಿಗಳ ಕರ್ತವ್ಯಕ್ಕೆ ತಡೆಯೊಡ್ಡಿರುವುದು ಮಾತ್ರ ಕಾನೂನು ಬಾಹಿರಕೃತ್ಯ.

● ವಿಲ್ಫ್ರೆಡ್ ಲಾರೆನ್ಸ್ ರೋಡ್ರಿಗಸ್, ಪಿಡಿಒ

ಸಮಸ್ಯೆ ಇರುವುದು ನಿಜ: ಪಿಡಿಒ

ಈ ಬಗ್ಗೆ ಉಪ್ಪಿನಂಗಡಿ ಗ್ರಾಮ ಪಂಚಾಯತ್ ಪಿಡಿಒ ವಿಲ್ಫ್ರೆಡ್ ಲಾರೆನ್ಸ್ ರೋಡ್ರಿಗಸ್ ಪ್ರತಿಕ್ರಿಯಿಸಿ, ಸರಕಾರದ ನಿಯಮದಂತೆ ತ್ಯಾಜ್ಯ ವಿಲೇವಾರಿಯ ಹೊಣೆ ಸಂಜೀವಿನಿ ಎಂಬ ಮಹಿಳಾ ಸಂಘಕ್ಕೆ ವಹಿಸಿಕೊಡಲಾಗಿದೆ. ತ್ಯಾಜ್ಯ ವಿಲೇವಾರಿ ಸಿಬ್ಬಂದಿ ಹೊರ ರಾಜ್ಯದವರಾಗಿದ್ದು, ಅವರು ರಜೆಯಲ್ಲಿ ಹೋದ ಕಾರಣ ವ್ಯವಸ್ಥೆಯಲ್ಲಿ ಸಮಸ್ಯೆ ಮೂಡಿದೆ. ತ್ಯಾಜ್ಯ ವಿಲೇವಾರಿಗೆಂದು ಗೊತ್ತು ಪಡಿಸಿದ ಸ್ಥಳದ ಬಗ್ಗೆ ಸ್ಥಳೀಯರು ದಾವೆ ಹೂಡಿದ್ದರಿಂದ ಪೇಟೆಯ ಮಧ್ಯದ ನದಿ ಬದಿ ಸ್ಥಳದಲ್ಲೇ ತ್ಯಾಜ್ಯ ವಿಲೇವಾರಿ ಅನಿವಾರ್ಯವಾಗಿದೆ. »ಪುಟ 6

ತುಂಬೆ ವೆಂಟೆಡ್ ಡ್ಯಾಮ್: 5.50 ಮೀ. ನೀರು ಸಂಗ್ರಹ
ಸದ್ಯ ಆತಂಕ ದೂರವಾಗಿಸಿದ ಬೇಸಿಗೆ ಮಳೆ

ಬಂಟ್ವಾಳ: ಜೀವನದಿ ನೇತ್ರಾವತಿ ನದಿಯಲ್ಲಿ ನೀರಿನ ಮಟ್ಟ ಇನ್ನಷ್ಟು ಸುಧಾರಣೆ ಕಂಡಿದ್ದು ಸೋಮವಾರ ಸಂಜೆಯ ವೇಳೆಗೆ ತುಂಬೆ ವೆಂಟೆಡ್ ಡ್ಯಾಂನಲ್ಲಿ 5.50 ಮೀಟರ್ ನಷ್ಟು ನೀರು ಸಂಗ್ರಹವಾಗಿದೆ.

'ಅಭಾವ' ಆತಂಕ ತುಸು ದೂರ

ಈ ಮೂಲಕ ಎಲ್ಲರನ್ನೂ ಕಾಡಿದ್ದ ಕುಡಿಯುವ ನೀರಿನ ಆತಂಕ ದೂರವಾಗಿದೆ. ಕೆಲ ದಿನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದಷ್ಟು ಮಳೆಯಾಗುತ್ತಿದೆ. ಜೊತೆಗೆ ನದಿಯಲ್ಲಿ ನೀರಿನ ಒಳ ಹರಿವಿನಲ್ಲೂ ಒಂದಿಷ್ಟು ಹೆಚ್ಚಳವಾಗಿದೆ.

ಇಲ್ಲಿಗೆ ಹೆಚ್ಚುವರಿ ನೀರು ಕೂಡಾ ಹರಿಸಲಾಗಿತ್ತು



ಕಳೆದ ವಾರ ತುಂಬೆ ಡ್ಯಾಂನಲ್ಲಿ 4 ಮೀ.ನಷ್ಟು ಮಾತ್ರ ನೀರಿತ್ತು . ಹೀಗಾಗಿ ಎಎಂಆರ್ ಡ್ಯಾಂನಿಂದ ಹೆಚ್ಚುವರಿ ನೀರನ್ನು ತುಂಬೆ ಡ್ಯಾಂನತ್ತ ಹರಿಯ ಬಿಡಲಾಗಿತ್ತು . ಈ ನಡುವೆ ಕೆಲವೆಡೆ ಮಳೆ ಸಹಿತ ಒಳ ಹರಿವಿನಲ್ಲಿ ಹೆಚ್ಚಳವಾದ ಪರಿಣಾಮ ತುಂಬೆ ಡ್ಯಾಂನಲ್ಲಿ ಇದೀಗ ನೀರಿನ ಸಂಗ್ರಹದಲ್ಲೂ ಹೆಚ್ಚಳವಾಗಿದೆ.

ಸುಡು ಬಿಸಿಲಿಗೆ ಕಾದು ಕೆಂಡವಾಗಿದ್ದ ಕೊಡಗು ಜಿಲ್ಲೆಯಲ್ಲೀಗ ಮೋಡ ಕವಿದ ವಾತಾವರಣ | ಕನಿಷ್ಠ ತಾಪಮಾನ ಈಗ 23 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತ
ಮಾನ್ಸೂನ್ ಮಳೆಯಲ್ಲಿ ಮಿಂದೇಳುವ ಸಿದ್ಧತೆಯಲ್ಲಿದೆ ಕರ್ನಾಟಕದ ಸ್ಕಾಟ್‌ಲ್ಯಾಂಡ್!

ಮಡಿಕೇರಿ: ಕಳೆದ ಎರಡು ದಿನಗಳಿಂದ ಕೊಡಗು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣವಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುತ್ತಿದೆ. ಇದರ ಪರಿಣಾಮ ಕಳೆದ ಎರಡು ತಿಂಗಳಿಂದ ಜಿಲ್ಲೆಯನ್ನು ಕಾಡಿದ್ದ ಗರಿಷ್ಠ ತಾಪಮಾನ ಈಗ ನಿಧಾನವಾಗಿ ಇಳಿಕೆಯಾಗುತ್ತಿದೆ. ಭಾನುವಾರ ರಾತ್ರಿ ಜಿಲ್ಲೆಯ ಹಲವೆಡೆ ಹಗುರದಿಂದ ಸಾಧಾರಣ ಮಳೆಯಾಗಿದ್ದು, ಇದುವರೆಗೆ ಸುಡು ಬಿಸಿಲಿನಿಂದ ಕಾದು ಕೆಂಡವಾಗಿದ್ದ ಇಳೆ ಈಗ ಸ್ವಲ್ಪ ಮಟ್ಟಿಗೆ ತಣಿದಿದೆ.

ನೆಲಕಚ್ಚಿವೆ ಕಾಫಿ, ಕರಿಮೆಣಸು ಬೆಳೆಗಳು

ಈ ಬಾರಿಯ ಏಪ್ರಿಲ್– ಮೇ ತಿಂಗಳಿನಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣದಿಂದ ಕೊಡಗು ಜಿಲ್ಲೆಯಲ್ಲಿ ಕಾಫಿ, ಕರಿಮೆಣಸು ಬೆಳೆ ನೆಲಕಚ್ಚಿದ್ದು, ಮುಂದಿನ ಸಾಲಿನ ಉತ್ಪಾದನೆ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಯಿದೆ. ಸಾಮಾನ್ಯವಾಗಿ ಕೊಡಗು ಜಿಲ್ಲೆಯಲ್ಲಿ ಕಾಫಿ ಕೊಯ್ಲು ಮುಗಿಯುವ ಏಪ್ರಿಲ್ ಮಧ್ಯ ಭಾಗದಿಂದ ಮೇ ಎರಡನೇ ವಾರದ ವರೆಗೂ ಕಾಫಿ ಗಿಡಗಳಿಗೆ ನೀರಿನ ಅಗತ್ಯವಿದೆ. ನೀರಿನ ಸೌಲಭ್ಯ ಇರುವ ಹಾಗೂ ಆರ್ಥಿಕ ಸಮಸ್ಯೆಗಳು ಇಲ್ಲದಿರುವ ಬೆಳೆಗಾರರು ಸ್ಪ್ರಿಂಕ್ಲರ್‌ಗಳನ್ನು ಬಳಸಿ ಗಿಡಗಳಿಗೆ ನೀರು ನೀಡುವ ಮೂಲಕ ಮುಂದಿನ ವರ್ಷದ ಫಸಲು ತೆಗೆಯಲು ಅಣಿಯಾಗುತ್ತಾರೆ. ಆದರೆ ಮಳೆ ನೀರನ್ನೇ ನಂಬಿರುವ ಬೆಳೆಗಾರರು ಮಾತ್ರ ಈ ಬಾರಿ ಭಾರೀ ನಷ್ಟ ಅನುಭವಿಸುವಂತಾಗಿದೆ.



ಸಂಗಮ ವಿಶೇಷ

ಕೇರಳ ಪ್ರವೇಶ ಬೆನ್ನಲ್ಲೇ

ಕೇರಳಕ್ಕೆ ಮುಂಗಾರು ಪ್ರವೇಶವಾದ 3-4 ದಿನಗಳಲ್ಲಿ ಕೊಡಗಿನಲ್ಲಿ ಆರಂಭವಾಗಲಿದೆ.

- ಮುಂಗಾರಿನ ಸ್ವಾಗತಕ್ಕೆ ಸಜ್ಜಾಗುತ್ತಿದೆ ಈಗ ಕರ್ನಾಟಕದ 'ಮಂಜಿನ ನಗರಿ'
- ಬಿಸಿಲಿನ ಝಳಕ್ಕೆ ತರೆ ಎಳೆಲಿದೆ ಮಳೆ
- ಕಳೆದ ಎರಡು ದಿನಗಳಿಂದ ಕೊಡಗು ಜಿಲ್ಲೆಯಲ್ಲಿ ಮೋಡ, ಮಳೆಯ ಹವೆ
- ಏಕಾಏಕಿ 23 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತ ಕಂಡಿದೆ ಜಿಲ್ಲೆಯ ಕನಿಷ್ಠ ತಾಪಮಾನ

ಈ ಬಾರಿ ಮುಂಗಾರು ಬೇಗ?

ಹವಾಮಾನ ಇಲಾಖೆಯ ಮುನ್ಸೂಚನೆಯನ್ವಯ ಈ ಬಾರಿ ಮುಂಗಾರು ಕೊಡಗಿಗೆ ಬೇಗನೇ ಕಾಲಿಡುವ ನಿರೀಕ್ಷೆಯಿದೆ. ಸಾಮಾನ್ಯವಾಗಿ ಜೂನ್ ಮೊದಲ ವಾರ ಜಿಲ್ಲೆಗೆ ಆಗಮಿಸುತ್ತಿದ್ದು, ಈ ಬಾರಿ ಮೇ ಕೊನೆಯ ವಾರದಲ್ಲಿ ಕೊಡಗಿನಲ್ಲಿ ಮಳೆಯಾಗಲಿರುವುದಾಗಿ ಹೇಳಲಾಗಿದೆ.

ಕೊಡಗು ತಾಪಮಾನದಲ್ಲಿ ಕಾಣಿಸಿದೆ ಏಕಾಏಕಿ ಕುಸಿತ

ಕೊಡಗು ಜಿಲ್ಲೆಯಲ್ಲಿ ಇದೀಗ ಕಳೆದ ಎರಡು ದಿನಗಳಿಂದ ಎಲ್ಲೆಡೆ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿದ್ದು, ಜಿಲ್ಲೆಯ ತಾಪಮಾನ 23 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ. ಅಂಡಮಾನ್‌ಗೆ ಮುಂಗಾರು ಕಾಲಿಟ್ಟಿರುವ ಹಿನ್ನೆಲೆಯಲ್ಲಿ ಈ ಬಾರಿ ಕೊಡಗಿಗೆ ಮೇ ಕೊನೆಯ ವಾರದಲ್ಲಿ ಮುಂಗಾರು ಪ್ರವೇಶಿಸುವ ಸಾಧ್ಯತೆ ದಟ್ಟವಾಗಿದ್ದು, ಇದಕ್ಕೆ ಪೂರಕವೆಂಬಂತೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಮುಂಗಾರು ಪೂರ್ವ ಮಳೆಯಾಗುತ್ತಿದ್ದು,

ಬರೋಬ್ಬರಿ 37 ಡಿಗ್ರಿ ಸೆಲ್ಸಿಯಸ್‌ಗೆ ತಾಪ ಏರಿಕೆ

ತಂಪುತಂಪು ಕೂಲ್ ಕೂಲ್ ಹವಾಮಾನಕ್ಕೆ ಹೆಸರಾಗಿದ್ದ ಕೊಡಗು ಜಿಲ್ಲೆ ಈ ಬಾರಿ ಹಿಂದೆಂದಿಗಿಂತಲೂ ಅಧಿಕ ತಾಪಮಾನಕ್ಕೆ ಸಾಕ್ಷಿಯಾಗಿದೆ. ಜಿಲ್ಲಾ ಕೇಂದ್ರ ಮಡಿಕೇರಿಯಲ್ಲೇ ಈ ಬಾರಿ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ನಿಂದ 37 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಿತ್ತು. ಪರಿಣಾಮವಾಗಿ ಕೊಡಗಿನ ಜನ-ಜಾನುವಾರುಗಳು, ಗಿಡ ಮರಗಳೂ ಬಸವಳಿದಿದ್ದವು. ಹಲವೆಡೆ ಕಾಫಿ ಗಿಡಗಳು, ಕರಿಮೆಣಸು ಬಳ್ಳಿ ಹಳದಿ ಬಣ್ಣಕ್ಕೆ ತಿರುಗಿದ್ದವು.

ಬಂಟ್ವಾಳದಲ್ಲಿ ಅಹೋರಾತ್ರಿ ಧರಣಿಗೆ ಸಿಕ್ಕಿತು ಬಿಜೆಪಿ ನಾಯಕರ ಸಾಥ್ 2
ಕೊಡಗು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಜ್ಜಾಗುತ್ತಿದೆ 'ಕನ್ನಡ ವೃತ್ತ'ದ ತವರೂರು 3
ಭೂತಾಯಿಯ ಮಡಿಲಲ್ಲಿ ಅರಳಲು ಸಿದ್ಧವಾಗುತ್ತಿದೆ ಇಲ್ಲಿ ಸಸ್ಯರಾಶಿಗಳು 4
ರೂ. 1.5 ಕೋಟಿಯ ಪಾಣಾರು ಕೆರೆ ಯೋಜನೆ ಪೂರ್ಣ ನೀರುಪಾಲು 5

ಸುತ್ತ ಮುತ್ತ

ಮೇ 24: ಕೆರೆಕಾಡು ಹಿಂದೂ ರುದ್ರಭೂಮಿ ಲೋಕಾರ್ಪಣೆ

ಮುಲ್ಕಿ: ಇಲ್ಲಿಗೆ ಸಮೀಪದ ಕೆರೆಕಾಡಿನಲ್ಲಿ ಪುನರ್ ನಿರ್ಮಾಣಗೊಂಡಿರುವ ಸಾರ್ವಜನಿಕ ಹಿಂದೂ ರುದ್ರಭೂಮಿಯ ಲೋಕಾರ್ಪಣಾ ಕಾರ್ಯಕ್ರಮವು ಮೇ 24ಕ್ಕೆ ಬೆಳಗ್ಗೆ 9.30ಕ್ಕೆ ರುದ್ರಭೂಮಿಯಲ್ಲಿ ನಡೆಯಲಿದೆ. ಸಂಸದ ಕ್ಯಾ. ಬ್ರಿಜೇಶ್ ಚೌಟ ರುದ್ರಭೂಮಿ ಲೋಕಾರ್ಪಣೆ ಮಾಡಲಿದ್ದು, ಬಳಿಕ 10ಕ್ಕೆ ಕೆರೆಕಾಡು ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರದ ಸಭಾಭವನದಲ್ಲಿ ನಡೆಯಲಿರುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಕೋಟ್ಯಾನ್ ವಹಿಸಲಿದ್ದಾರೆ. ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ನಾಗವೃಜ ಕ್ಷೇತ್ರದ ಆಡಳಿತ ಮೊಕ್ತೇಸರ ಶಶೀಂದ್ರ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಬಜಪೆಯ ಯೋಜನಾಧಿಕಾರಿ ಗಿರೀಶ್ ಕುಮಾರ್ ಎಂ. ಪುನರೂರು, ಶ್ರೀ ವಿಶ್ವನಾಥ ದೇವಸ್ಥಾನದ ಆಡಳಿತ ಮೊಕ್ತೇಸರ ಪಟೇಲ್ ವಾಸುದೇವ ರಾವ್ ಪುನರೂರು, ಕಿನ್ನಿಗೋಳಿಯ ಶ್ರೀ ಶಕ್ತಿ ದರ್ಶನ ಯೋಗಾಶ್ರಮದ ಯೋಗಾಚಾರ್ಯ ದೇವದಾಸ್ ರಾವ್, ಗುರೂಜಿ, ಲೋಕಮುಖಿ ಟ್ರಸ್ಟ್ ಎಸ್. ಕೋಡಿಯ ಅಧ್ಯಕ್ಷ ಡಾ. ಸೋಂದಾ ಭಾಸ್ಕರ್ ಭಟ್ ಕಟೀಲು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಘನತ್ಯಾಜ್ಯ ನಿರ್ವಹಣೆ ನಿಯಮ ಅನುಷ್ಠಾನದ ಕುರಿತು ಸೂಚನೆ

ಉಳ್ಳಾಲ: ಸೋಮೇಶ್ವರ ಪುರಸಭಾ ವ್ಯಾಪ್ತಿಯಲ್ಲಿ ಕೇಂದ್ರ ಸರಕಾರದ ಹೊಸ 'ಘನತ್ಯಾಜ್ಯ ನಿರ್ವಹಣೆ ನಿಯಮ ಅನುಷ್ಠಾನದ ಕುರಿತು ಸಾರ್ವಜನಿಕರಿಗೆ ಹಲವು ಸೂಚನೆಯನ್ನು ನೀಡಿದೆ. ಈ ಹೊಸ ನಿಯಮಾವಳಿಯ ಅನ್ವಯ,ಸೋಮೇಶ್ವರ ಪುರಸಭಾ ವ್ಯಾಪ್ತಿಯ ಎಲ್ಲಾ ಘನತ್ಯಾಜ್ಯ ಉತ್ಪಾದಕರು ತ್ಯಾಜ್ಯವನ್ನು ಮೂಲದಲ್ಲಿಯೇ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಮತ್ತು ವಿಶೇಷ ಕಾಳಜಿಯ ತ್ಯಾಜ್ಯ (ಪೈಂಟ್ ಡ್ರಮ್‌ಗಳು, ಕೀಟನಾಶಕ, ಕ್ಯಾನ್ ಅಥವಾ ಬಾಟಲಿಗಳು, ಸಿ.ಎಫ್.ಸಿ ಬಲ್ಬ್‌ಗಳು,ಅವಧಿ ಮೀರಿದ ಔಷಧಿಗಳು,ಬಳಕೆಯಾಗದ ಅಥವಾ ನಿರುಪಯುಕ್ತ ಸೂಜಿಗಳು,ಸಿರಿಂಜುಗಳು ಮತ್ತು ಕಲುಷಿತ ಮಾಪಕಗಳು) ಎಂದು ನಾಲ್ಕು ವಿಧಗಳಾಗಿ ವಿಂಗಡಿಸಿ ಪುರಸಭೆಯ ಘನತ್ಯಾಜ್ಯ ವಾಹನಗಳಿಗೆ ಹಸ್ತಾಂತರಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ. ಸದರಿ ನಿಯಮಾವಳಿಯಡಿ,ಪ್ರತಿ ದಿನ ಸರಾಸರಿ 100ಕೆ.ಜಿ ಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಅಥವಾ 20,000ಚದರ ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಕಚೇರಿಗಳು,ಮಾಲ್‌ಗಳು, ಆಸ್ಪತ್ರೆಗಳು,ವಸತಿ ಮತ್ತು ಇನ್ನಿತರ ಸಮುಚ್ಚಯಗಳನ್ನು ಹಾಗೂ ದಿನಕ್ಕೆ 40,000 ಲೀಟರ್‌ಗಿಂತ ಹೆಚ್ಚು ನೀರನ್ನು ಬಳಸುವ ಘಟಕಗಳನ್ನು ಬೃಹತ್ ತ್ಯಾಜ್ಯ ಉತ್ಪಾದಕರು ಎಂದು ವರ್ಗೀಕರಿಸಲಾಗಿದೆ. ಘನತ್ಯಾಜ್ಯ ನಿರ್ವಹಣೆಯಲ್ಲಿ ಹಾಗೂ ವಿಲೇವಾರಿಗಳಲ್ಲಿ ಉಲ್ಲಂಘನೆಗಳು ಕಂಡುಬಂದಲ್ಲಿ ಸೋಮೇಶ್ವರ ಪುರಸಭೆಯ ಘನತ್ಯಾಜ್ಯ ನಿರ್ವಹಣೆ ಉಪವಿಧಿಗಳು 2019 ರ ಅನ್ವಯವೇ ದಂಡ ವಿಧಿಸಲಾಗುತ್ತದೆ. ಆದುದರಿಂದ ಎಲ್ಲಾ ಸಾರ್ವಜನಿಕರು ತ್ಯಾಜ್ಯವನ್ನು ನಾಲ್ಕು ವಿಧಗಳಾಗಿ ವಿಂಗಡಿಸಲು ಹಾಗೂ ಬೃಹತ್ ತ್ಯಾಜ್ಯ ಉತ್ಪಾದಕರು ಹಸಿ ತ್ಯಾಜ್ಯವನ್ನು ತಮ್ಮ ಆವರಣದಲ್ಲೇ ಸಂಸ್ಕರಿಸಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಸೋಮೇಶ್ವರ ಪುರಸಭೆಯ ಆರೋಗ್ಯ ವಿಭಾಗಕ್ಕೆ ಭೇಟಿ ನೀಡಲು ಕೋರಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ನಂದಿಗುಡ್ಡ ಉಪಕೇಂದ್ರದಿಂದ ಹೊರಡುವ ಎಲ್ಲಾ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಮಂಗಳಾನಗರ, ಸುಬಾಶ್‌ನಗರ, ಶಿವನಗರ, ಪಾಂಡೇಶ್ವರ,



ಎಮ್ಮೆಕೆರೆ, ಮಂಕಿಸ್ಟ್ಯಾಂಡ್, ಮಂಗಳಾದೇವಿ, ಗ್ರಾಮಸಂಘ, ಮಾರ್ನಮಿಕಟ್ಟೆ ಸರ್ಕಲ್, ಕಾಸಿಯ ಶಾಲೆ, ಮಂಗಳಾದೇವಿ ಸರ್ಕಲ್, ಮಾರ್ನಮಿಕಟ್ಟೆ, ಮೋನಪ್ಪ ಕಂಪೌಂಡ್, ಕುಡುಪಾಡಿ, ಜನಾರ್ಧನ ಭಜನಾ ಮಂದಿರ, ಎಂ.ಆರ್.ಭಟ್ ಲೇನ್, ಮೋರ್ಗನ್ಸ್ ಗೇಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಬಾಬುಗುಡ್ಡೆ, ಜೋಸೆಫ್ ನಗರ, ಅತ್ತಾವರ 6ನೇ ಮತ್ತು 7ನೇ ಅಡ್ಡ ರಸ್ತೆ, ಮಣಿಪಾಲ ಸ್ಕೂಲ್ ರೋಡ್, ಕೆ.ಎಂ.ಸಿ ಅತ್ತಾವರ, ನಂದಿಗುಡ್ಡ ಸರ್ಕಲ್, ನಂದಿಗುಡ್ಡ 1ನೇ ಕ್ರಾಸ್, ವೆಟ್‌ವೆಲ್, ಮಂಗಳೂರು ಸ್ಟೋರ್, ಯೆನೆಪೋಯ ಕ್ಲಸ್ಟರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಡೈಮಂಡ್ ಐಸ್ ಪ್ಲಾಂಟ್, ಭಾರತ್ ಐಸ್‌ಪ್ಲಾಂಟ್, ಕೆ.ಎಫ್.ಡಿ.ಸಿ ಫೀಶರೀಸ್ ಕಾಲೇಜ್, ಭಗತ್ ಸಿಂಗ್ ರಸ್ತೆ, ಅಲ್ಬುಕರ್ಕ್ ಟೈಲ್ ಫ್ಯಾಕ್ಟರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 21ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅಡ್ಯಾರ್, ಕಣ್ಣೂರು ಫೀಡರ್

ಮಂಗಳೂರು: ಅಡ್ಯಾರ್ ಫೀಡರ್ ಮತ್ತು 11ಕೆವಿ ಕಣ್ಣೂರು ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಅಡ್ಯಾರ್, ಅಡ್ಯಾರ್ ಕಟ್ಟೆ, ವಳಚ್ಚಿಲ್, ವಳಚ್ಚಿಲ್ ಪದವು, ಅರ್ಕುಳ, ಮೇರೆಮಜಲು, ಮೇರ್ಲಪದವು, ತುಪ್ಪೆಕಲ್ಲು, ಬಲ್ಲೂರು, ಕೊಡಕ್ಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 21ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯುಲ್ಲಿ ತಿಳಿಸಿದೆ.

ಬಂಟ್ವಾಳದಲ್ಲಿ ಅಹೋರಾತ್ರಿ ಧರಣಿಗೆ ಬಿಜೆಪಿ ನಾಯಕರ ಸಾಥ್ | ಶೀಘ್ರ ಸೌಲಭ್ಯ ಒದಗಿಸಲು ಆಗ್ರಹ

ಹಕ್ಕುಪತ್ರ ಸಿಗದೇ ಪುಣಚದ ಮೂರು ಕುಟುಂಬಗಳು ಅತಂತ್ರ

ಬಂಟ್ವಾಳ: ತಮಗೆ ಅರ್ಹವಾಗಿ ದೊರಕಬೇಕಿದ್ದ ಹಕ್ಕುಪತ್ರವನ್ನು ಒದಗಿಸಿ ಎಂದು ಒತ್ತಾಯಿಸಿ ಬಂಟ್ವಾಳ ಆಡಳಿತ ಸೌಧದ ಮುಂಭಾಗ ಸೋಮವಾರದಿಂದ ಪುಣಚದ ಮೂರು ಕುಟುಂಬಗಳು ನಡೆಸುತ್ತಿರುವ ಧರಣಿಗೆ ಮಂಗಳವಾರ ಬೆಳಗ್ಗೆ ಪುತ್ತೂರಿನ ಮಾಜಿ ಶಾಸಕ ಸಂಜೀವ ಮಠಂದೂರು ನೇತೃತ್ವದಲ್ಲಿ ಪುತ್ತೂರು ಮತ್ತು ಬಂಟ್ವಾಳ ಕ್ಷೇತ್ರಗಳ ಬಿಜೆಪಿ ಮುಖಂಡರು ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಘೋಷಿಸಿದರು.



ಹಕ್ಕುಪತ್ರ ಸಿಗದೇ ಅಲೆದಾಟ

ಬಂಟ್ವಾಳ ತಾಲೂಕಿನ ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟ ಪುಣಚ ಗ್ರಾಮದ 3 ನೇ ವಾರ್ಡ್ ನ ದೇವಿನಗರದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಕಳೆದ ಹಲವು ವರ್ಷದಿಂದ ವಾಸದ ಮನೆಗೆ ಹಕ್ಕುಪತ್ರ ನೀಡದೆ ಅಲೆದಾಡಿಸಲಾಗುತ್ತಿದೆ ಎಂದು ಆರೋಪಿಸಿ ಮೂರು ಮನೆಗಳ ಸದಸ್ಯರು ಹಾಗೂ ಸಂಬಂಧಿಕರು ಮೌನ ಪ್ರತಿಭಟನೆ ಆರಂಭಿಸಿದ್ದರು. ಹಕ್ಕುಪತ್ರಕ್ಕಾಗಿ ಮನವಿ ಸಲ್ಲಿಸಿದ್ದ ಬೇಬಿ ಕುಮಾರಿ, ವಿಜಯಲಕ್ಷ್ಮಿ, ಪ್ರೇಮ ಅವರು ಹಾಗೂ ಮನೆ ಮಂದಿ ಸೇರಿ ಸುಮಾರು 15 ಮಂದಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ.

8 ವರ್ಷವಾದರೂ ಹಕ್ಕುಪತ್ರ ಸಿಕ್ಕಿಲ್ಲ

ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಗಿರಿಧರ್ ನಾಯ್ಕ ಧರಣಿಯ ನೇತೃತ್ವ ವಹಿಸಿದ್ದರು. ಅವರು ಈ ಸಂದರ್ಭ ಮಾತನಾಡಿ, ಪುಣಚ ಗ್ರಾಮದ ದೇವಿನಗರ ಎಂಬಲ್ಲಿ ಸರಕಾರಿ ಜಮೀನಿನಲ್ಲಿ ಪರಿಶಿಷ್ಟ ಪಂಗಡದವರಿಗೆ ಸೇರಿದ 13 ವಾಸದ ಮನೆಗಳಿದ್ದು, ಈ ಪೈಕಿ 5 ಮನೆಯವರಿಗೆ ಮನೆ ಕಟ್ಟಿ 8 ವರ್ಷವಾದರೂ ಈವರೆಗೆ ಹಕ್ಕು ಪತ್ರ ದೊರೆಕಿಲ್ಲ ಎಂದು ಆರೋಪಿಸಿದರು.

ಹಕ್ಕುಪತ್ರವನ್ನು ಪುತ್ತೂರು ಶಾಸಕರು ವಿತರಿಸಬೇಕು ಎಂದು ತಹಸೀಲ್ದಾರ್ ಹೇಳಿರುವುದಕ್ಕೆ ಅವರು ಆಕ್ಷೇಪ ವ್ಯಕ್ತಪಡಿಸಿದರು. ಮಂಗಳವಾರ ಬೆಳಗ್ಗೆ ಬಿಜೆಪಿಯ ಪುತ್ತೂರು ಕ್ಷೇತ್ರ ಹಾಗೂ ಬಂಟ್ವಾಳ ಕ್ಷೇತ್ರದ ಮುಖಂಡರು ಮಾಜಿ ಶಾಸಕ ಸಂಜೀವ ಮಠಂದೂರು ನೇತೃತ್ವದಲ್ಲಿ ಆಗಮಿಸಿ ಪ್ರತಿಭಟನೆಗೆ ಸಾಥ್ ನೀಡಿದರು.

> **ತಹಸೀಲ್ದಾರ್ ಭೇಟಿ, ಧರಣಿ ನಿರತರಿಗೆ ಭರವಸೆ**
>
> ಮಧ್ಯಾಹ್ನದ ವೇಳೆ ತಹಸೀಲ್ದಾರ್ ಮಂಜುನಾಥ್ ಭೇಟಿ ನೀಡಿ ಮಾತನಾಡಿ ಪುತ್ತೂರು ಶಾಸಕರು ಸ್ವತಃ ಕಾರ್ಯಕ್ರಮ ಮೂಲಕ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವುದಾಗಿ ತಿಳಿಸಿದ್ದಾರೆ ಎಂದರು. ಇದಕ್ಕೆ ಬಿಜೆಪಿ ಮುಖಂಡರ ಸಹಿತ ಪ್ರತಿಭಟನಾನಿರತರು ಆಕ್ಷೇಪ ವ್ಯಕ್ತಪಡಿಸಿ ಮತ್ತೆ ಧರಣಿ ಕುಳಿತರು.

ಈ ಸಂದರ್ಭ ಮಾತನಾಡಿದ ಸಂಜೀವ ಮಠಂದೂರು, ಪುತ್ತೂರು ಶಾಸಕರೇ ಬಂದು ಹಕ್ಕುಪತ್ರ ಕೊಡಬೇಕು ಎಂದೇನೂ ಇಲ್ಲ, ತಹಸೀಲ್ದಾರ್ ಅವರಿಗೆ ಸೂಚನೆ ನೀಡಿದರೂ ಆಗುತ್ತದೆ. ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಅವರು ತಹಸೀಲ್ದಾರ್ ಮೂಲಕವೇ ಹಕ್ಕುಪತ್ರ ಕೊಡಿಸುತ್ತಿದ್ದಾರೆ, ಪರಿಶಿಷ್ಟ ಜಾತಿ ಕುಟುಂಬದ ಸದಸ್ಯರು ಧರಣಿ ಕುಳಿತಿರುವ ವೇಳೆ ಸಭಾ ಕಾರ್ಯಕ್ರಮ ಮಾಡಿ ಹಕ್ಕುಪತ್ರ ನೀಡಲಾಗುವುದು ಎಂಬ ಧೋರಣೆ ಸರಿಯಲ್ಲ ಎಂದರು. ಬುಧವಾರ 10 ಗಂಟೆಯ ಒಳಗಾಗಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸದಿದ್ದರೆ ಬಿಜೆಪಿ ಕಾರ್ಯಕರ್ತರು ಫಲಾನುಭವಿಗಳೊಂದಿಗೆ ಸೇರಿ ತೀವ್ರ ಹೋರಾಟ ನಡೆಸಲಾಗುವುದು ಎಂದರು.

ಪ್ರಮುಖರು ಭಾಗಿ

ಮಾಜಿ ಶಾಸಕ ಸಂಜೀವ ಮಠಂದೂರು ಅವರೊಂದಿಗೆ ಬಿಜೆಪಿ ಪ್ರಮುಖರಾದ ವಿಕಾಸ್ ಪುತ್ತೂರು, ಆರ್. ಚೆನ್ನಪ್ಪ ಕೋಟ್ಯಾನ್, ಸಂದೇಶ್ ಶೆಟ್ಟಿ ಆರೆಬೆಟ್ಟು, ರಾಜೇಶ್ ಬನ್ನೂರು, ದೇವಪ್ಪ ಪೂಜಾರಿ ಬಾಳಿಕೆ, ದಿನೇಶ್ ಅಮ್ಟೂರು, ಪ್ರಸನ್ನ ಮಾರ್ತ, ಪುನೀತ್ ಮಾಡತ್ತಾರು, ಪುರುಷೋತ್ತಮ ಮುಂಗ್ಲಿಮನೆ, ನಿತೇಶ್ ಶಾಂತಿವನ, ಹರಿಪ್ರಸಾದ್ ಯಾದವ್, ಶಿವಕುಮಾರ್, ದಯಾನಂದ ಶೆಟ್ಟಿ ಉಜಿರೆಮಾರು, ಸುದರ್ಶನ ಬಜ, ರೊನಾಲ್ಡ್ ಡಿಸೋಜ, ಗೋವಿಂದ ಪ್ರಭು, ಹರಿಪ್ರಸಾದ್ ಭಂಡಾರಿಬೆಟ್ಟು, ಶಿವಪ್ರಸಾದ್ ಶೆಟ್ಟಿ ಆನೆಯಾಲಗುತ್ತು, ಯಶೋಧರ ಕರ್ಬೆಟ್ಟು ಸಹಿತ ಬಿಜೆಪಿಯ ಮುಖಂಡರು ಹಾಜರಿದ್ದರು.

ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆ: ವೇದಪಾಠ ಶಿಬಿರ ಸಮಾರೋಪ



ಮಂಗಳೂರು: ಮನುಷ್ಯರಾಗಿ ಹುಟ್ಟಿದ ಮೇಲೆ ಭಗವಂತನ ಅನುಗ್ರಹ ಪಡೆಯಬೇಕು. ಆಗ ಮಾತ್ರ ಜೀವನ ಸಾರ್ಥಕಗೊಳ್ಳುತ್ತದೆ. ವೇದಾಧ್ಯಯನದ ಮೂಲಕ ವಟುಗಳು ಉತ್ತಮ ಜೀವನ ನಡೆಸುವಂತಾಗಾಬೇಕು ಎಂದು ಕೊಲ್ಲೂರು ಶ್ರೀ ಮೂಕಾಂಬಿಕಾ ಕ್ಷೇತ್ರದ ಪ್ರಧಾನ ಅರ್ಚಕ ವೇ.ಮೂ.ಕೆ.ವಿ. ಶ್ರೀಧರ ಅಡಿಗ ಹೇಳಿದರು.

ಅವರು ಮಂಗಳೂರು ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಯಲ್ಲಿ ಗೋಕರ್ಣ ಅಶೋಕೆ ವಿಷ್ಣುಗುಪ್ತ ವಿಶ್ವವಿದ್ಯಾಪೀಠ, ಭಾರತೀ ಎಜುಕೇಶನ್ ಟ್ರಸ್ಟ್, ಶಂಕರಶ್ರೀ ವಸಂತ ವೇದಪಾಠಶಾಲೆ ಸಮಿತಿ ಮತ್ತು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಜರಗಿದ ಒಂದು ತಿಂಗಳ ವಸಂತ ವೇದಪಾಠಶಾಲೆಯ ಸಮಾರೋಪದಲ್ಲಿ ಮಾತನಾಡಿದರು.

ಟ್ರಸ್ಟ್ ಕಾರ್ಯದರ್ಶಿ ಶ್ರೀಕೃಷ್ಣ ನೀರಮೂಲೆ ಅಧ್ಯಕ್ಷತೆ ವಹಿಸಿದ್ದರು. ವಿದ್ವಾಂಸ ಡಾ.ವಿನಾಯಕ ಭಟ್ ಗಾಳಿಮನೆ ಮಾತನಾಡಿ, ಒಂದು ತಿಂಗಳಲ್ಲಿ ಕಲಿತ ವೇದಪಾಠವನ್ನು ಮನೆಯಲ್ಲಿ ನಿರಂತರವಾಗಿ ಪಠಿಸಬೇಕು. ಹೆತ್ತವರು ಈ ನಿಟ್ಟಿನಲ್ಲಿ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದರು. ಮಂಗಳೂರು ಏನಪೋಯ ವೈದ್ಯಕೀಯ ವಿದ್ಯಾಲಯದ ಪ್ರಸೂತಿ ಮತ್ತು ಸ್ತ್ರೀ ರೋಗ ಚಿಕಿತ್ಸೆ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಮೋಹನ ಭಟ್ ಪೆಲತ್ತಡ್ಕ, ಆಶಾಗೌರಿ ಕೆ.ಎಸ್. ಮತ್ತಿತರರು ಉಪಸ್ಥಿತರಿದ್ದರು. ಮುಖ್ಯಗುರು ವೇದಮೂರ್ತಿ ಅಮೈ ಶಿವಪ್ರಸಾದ ಭಟ್, ಗೋವಿಂದ ಜೋಯಿಸ ಚವರ್ಕಾಡು, ಅನಂತಸುಬ್ರಹ್ಮಣ್ಯ ಶರ್ಮ ಮತ್ತು ಭಾಸ್ಕರ ಹೊಸಮನೆ ಅವರನ್ನು ಗೌರವಿಸಲಾಯಿತು. ಹೆತ್ತವರ ಪರವಾಗಿ ಹರೀಶ್ ಕೇವಳ ಅನಿಸಿಕೆ ವ್ಯಕ್ತಪಡಿಸಿದರು. ವೇದಪಾಠಶಾಲೆಗೆ ಮಂಗಳೂರು ಹವ್ಯಕ ಮಂಡಲ, ಮಂಗಳೂರು ಹವ್ಯಕ ಸಭಾ, ದ.ಕ.ಮತ್ತು ಕಾಸರಗೋಡು ಹವ್ಯಕ ಮಹಾಜನಸಭಾ, ರುದ್ರ ಸಮಿತಿ, ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆ, ಶ್ರೀ ಭಾರತೀ ಸೌಹಾರ್ದ ಸಹಕಾರಿ ನಿ.ಗಳು ಸಹಕಾರ ನೀಡಿದ್ದವು. ವೇ.ಮೂ. ಅಮೈ ಶಿವಪ್ರಸಾದ ಭಟ್ ವೇದಪಾಠ ಬಗ್ಗೆ ಮತ್ತು ಅನಂತ ಸುಬ್ರಹ್ಮಣ್ಯ ಶರ್ಮ ಪರಂಪರಾ ಶಿಬಿರದ ಬಗ್ಗೆ ಪ್ರಸ್ತಾಪಿಸಿದರು. ವೇದಪಾಠಶಾಲೆ ಸಮಿತಿ ಸಂಚಾಲಕ ಬಾಲಸುಬ್ರಹ್ಮಣ್ಯ ಕಬೆಕ್ಕೋಡು ಸ್ವಾಗತಿಸಿ, ಭಾಸ್ಕರ ಹೊಸಮನೆ ನಿರೂಪಿಸಿದರು. ಟ್ರಸ್ಟ್ ಕೋಶಾಧಿಕಾರಿ ಉದಯಶಂಕರ್ ನೀರ್ಪಾಜೆ ವಂದಿಸಿದರು. ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ವೀರಮಂಗಲ ಸಾರಕೂಟೇಲುವರೆಗೆ ಬಸ್ ಸೌಲಭ್ಯಕ್ಕೆ ಶಾಸಕರಿಗೆ ಮನವಿ ಸಲ್ಲಿಕೆ



ಪುತ್ತೂರು: ತಾಲೂಕಿನ ಶಾಂತಿಗೋಡು ಗ್ರಾಮದ ವೀರಮಂಗಲಕ್ಕೆ ಬರುವ ಕೆಎಸ್ಆರ್ಟಿಸಿ ಬಸ್ ಸಾರಕೂಟೇಲಿನವರೆಗೆ ಬರುವಂತೆ ಸಾರಕೂಟೇಲು ಪರಿಸರದ ನೂರಾರು ಫಲಾನುಭವಿಗಳು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರಿಗೆ ಮನವಿ ಮಾಡಿದ್ದಾರೆ.

ಈಗಾಗಲೇ ವೀರಮಂಗಲಕ್ಕೆ ಬರುವ ಕೆಎಸ್ಆರ್ಟಿಸಿ ಬಸ್ ಬೆಳಗ್ಗಿನ ಹೊತ್ತು 8.45ಕ್ಕೆ ಸಾರಕೂಟೇಲಿನವರೆಗೆ ಬಂದು ತಿರುಗಿ ವೀರಮಂಗಲಕ್ಕೆ ಹೋದರೆ ನೂರಾರು ಮಕ್ಕಳಿಗೆ ಅನುಕೂಲವಾಗುತ್ತದೆ. ಅದೇ ರೀತಿ ಸಂಜೆ ವೀರಮಂಗಲದಿಂದ 4.30ಕ್ಕೆ ಹೋಗುವ ಬಸ್ ಸಾರೆಕೂಟೆಲಿನಲ್ಲಿ ತಿರುಗಿ ಪುತ್ತೂರಿಗೆ ತೆರಳಿದಾಗ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ ಎಂದು ಊರವರು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಶಾಸಕರು ತಕ್ಷಣವೇ ಡಿಪೋ ಮ್ಯಾನೇಜರ್‌ಗೆ ವ್ಯವಸ್ಥೆ ಮಾಡಲು ತಿಳಿಸಿದರು. ಶಾಲಾ ಮುಖ್ಯ ಗುರು ತಾರಾನಾಥ ಪಿ., ಊರ ಪ್ರಮುಖರಾದ ಬಾಬು ಶೆಟ್ಟಿ, ಊರ ಫಲಾನುಭವಿಗಳು ಉಪಸ್ಥಿತರಿದ್ದರು.

ಊರವರಿಗೆ ಅನುಕೂಲ

ಗ್ರಾಮೀಣ ಪ್ರದೇಶವಾದ ಶಾಂತಿಗೋಡು ಗ್ರಾಮದ ಸಾರಕೂಟೇಲು ಪುಡಿಂಕಲಡ್ಕ, ಕಾಯರ್ ಮುಗೇರು ಭಾಗದಿಂದ ನೂರಾರು ಮಕ್ಕಳು ಶಾಲೆಗೆ ಬರ್ತಾರೆ. 5 ಕಿ.ಮೀ.ಗಿಂತ ಹೆಚ್ಚು ದೂರದಿಂದ ಶಾಲೆಗೆ ಬರುವುದು ಕಷ್ಟವಾಗಿದೆ. ಆಟೋ ಬಾಡಿಗೆ ಕಟ್ಟಲು ಕೂಲಿ ಮಾಡಿ ಬದುಕುವ ನಿವಾಸಿಗಳಿಗೆ ಕಷ್ಟಸಾಧ್ಯ. ಬಹುತೇಕ ಪ.ಜಾ., ಪ.ಪಂ. ಇನ್ನಿತರ ವರ್ಗಗಳ ಮಕ್ಕಳು ಈ ಪ್ರದೇಶಗಳಲ್ಲಿ ವಾಸ್ತವ್ಯವಿದ್ದಾರೆ. ಗುಣಮಟ್ಟದ ಶಿಕ್ಷಣ ಕೊಡುತ್ತಿರುವ ಊರಿನ ಏಕೈಕ ಶಾಲೆ ವೀರಮಂಗಲವಾಗಿದೆ.

ಕುಲ್ಕುಂದ: ಬಸವೇಶ್ವರ ದೇವಳದ ಅಭಿವೃದ್ಧಿಗಾಗಿ ಬಿವೈಆರ್‌ಗೆ ಮನವಿ



ಸುಬ್ರಹ್ಮಣ್ಯ: ಇತಿಹಾಸ ಪ್ರಸಿದ್ಧ ಕುಲ್ಕುಂದ ಬಸವನಮೂಲೆ ಶ್ರೀ ಬಸವೇಶ್ವರ ದೇವಾಲಯದ ಅಭಿವೃದ್ಧಿಗಾಗಿ ಅನುದಾನ ನೀಡುವಂತೆ ಬಿಜೆಪಿ ಅಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಅವರಿಗೆ ಶ್ರೀ ದೇವಳದ ಆಡಳಿತ ಮಂಡಳಿ ಮನವಿ ಸಲ್ಲಿಸಿತು.

ಶ್ರೀ ದೇವಳವು ಪ್ರಗತಿ ಪಥದಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಸ್ಥಳೀಯ ಹಾಗೂ ಪರಊರ ಭಕ್ತ ಅಭಿಮಾನಿಗಳನ್ನ ಆಕರ್ಷಿಸುವಲ್ಲಿ ಮುಂದಡಿಯಿಟ್ಟಿದೆ. ಈಗಾಗಲೇ ದೇವಾಲಯದ ಅಭಿವೃದ್ಧಿ ಕೆಲಸ ಕಾರ್ಯಗಳು ಬಹಳಷ್ಟು ಆಗಿದ್ದು ಇನ್ನಷ್ಟು ಆಗಬೇಕಾಗಿದೆ. ಆದುದರಿಂದ. ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡಬೇಕಾಗಿ ಮನವಿಯನ್ನು ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂದ, ಕಾರ್ಯದರ್ಶಿ ವಿಜಯ ಕುಮಾರ್ ನಡುತೋಟ, ಕೋಶಾಧಿಕಾರಿ ಶಿವರಾಮ ಪಳ್ಳಿಗದ್ದೆ, ಉಪಾಧ್ಯಕ್ಷ ಚಂದ್ರಶೇಖರ ಬಸವನ ಮೂಲೆ ನೀಡಿದರು. ಬಿ.ವೈ. ವಿಜಯೇಂದ್ರ ಅವರು ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಉಪಸ್ಥಿತರಿದ್ದರು.

ವಿ.ಕೆ. ಸುವರ್ಣರಿಗೆ 'ಓಂ ಶ್ರೀ ತುಳಸಿ' ಪ್ರಶಸ್ತಿ ಪ್ರದಾನ ಸಮಾರಂಭ



ಮಂಗಳೂರು: ಮೊಗವೀರ ಕೋ-ಆಪರೇಟಿವ್ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕ, ಹಾಗೂ ಕೊಟ್ಟಾರ ಧರ್ಮ ರಕ್ಷಣಾ ಮೊಗವೀರ ವೇದಿಕೆಯ ಗೌರವ ಅಧ್ಯಕ್ಷ, ಮುಂಬೈಯ ಶ್ರೀ ಮದ್ಭಾರತ ಮಂಡಳಿಯಲ್ಲಿ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ 90ರ ಹರೆಯದ ವಿ.ಕೆ.ಸುವರ್ಣ ಅವರಿಗೆ ಇತ್ತೀಚೆಗೆ ಓಂ ಶ್ರೀ ತುಳಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೊಟ್ಟಾರದ ಶ್ರೀಯಾನ್ ಮಹಲ್‌ನಲ್ಲಿ ನಡೆದ ಸಮಾರಂಭದಲ್ಲಿ ಯೂನಿಯನ್ ಬ್ಯಾಂಕಿನ ವ್ಯವಸ್ಥಾಪಕರಾದ ನಿಕಿತ್ ಎನ್.ಶ್ರೀಯಾನ್, ನಾರಾಯಣ ಗುರು ವಿದ್ಯಾ ಸಂಸ್ಥೆಯ ನಿವೃತ್ತ ಉಪನ್ಯಾಸಕಿ ತುಳಸಿ ಎನ್.ಶ್ರೀಯಾನ್, ಮೋಹಿನಿ ವಿ ಸುವರ್ಣ, ಧರ್ಮ ರಕ್ಷಣಾ ಮೊಗವೀರ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು. ಧರ್ಮ ರಕ್ಷಣಾ ಮೊಗವೀರ ವೇದಿಕೆಯ ಸ್ಥಾಪಕ ನವೀನ್ ಚಂದ್ರ ಶ್ರೀಯಾನ್ ಸ್ವಾಗತಿಸಿ, ಕಾರ್ಯಕ್ರಮ ವಂದಿಸಿದರು.

ದ.ಕ. ಗ್ಯಾರೇಜ್ ಮಾಲಕರ ಸಂಘ ಬಂಟ್ವಾಳ ವಲಯದ ರಜತ ಸಂಭ್ರಮ



ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲಾ ಗ್ಯಾರೇಜ್ ಮಾಲಕರ ಸಂಘ ಮಂಗಳೂರು ಹಾಗೂ ಉಡುಪಿ ಜಿಲ್ಲೆ ಇದರ ಬಂಟ್ವಾಳ ವಲಯದ ರಜತ ಸಂಭ್ರಮ, ವಾರ್ಷಿಕ ಮಹಾಸಭೆ, 2026-28 ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಸನ್ಮಾನ ಸಮಾರಂಭ ಮೇ 24ಕ್ಕೆ ಬಿ.ಸಿ.ರೋಡಿನ ಸ್ಪರ್ಶಾಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಸುಧೀರ್ ಪೂಜಾರಿ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ ಸಂಘದ 25 ನೇ ವಾರ್ಷಿಕ ಮಹಾಸಭೆ,ಸಂಜೆ 25 ನೇ ವಾರ್ಷಿಕೋತ್ಸವ ರಜತ ಸಂಭ್ರಮ ಕಾರ್ಯಕ್ರಮ ನಡೆಯಲಿದೆ.ಇದೆ ವೇಳೆ ನಿಯೋಜಿತ ಅಧ್ಯಕ್ಷ ಗಣೇಶ್ ಸುವರ್ಣ ಅವರ ನೇತೃತ್ವದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಲಿದೆ. ಇದೇ ವೇಳೆ ತಾಲೂಕಿನ ಹಿರಿಯ ಮೆಕ್ಯಾನಿಕ್ ಸದಸ್ಯರನ್ನು ಹಾಗೂ ಸಾಧಕರನ್ನು ಗುರುತಿಸಿ ಸನ್ಮಾನಿಸ ಲಾಗುವುದಲ್ಲದೆ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿದ ಸಂಘದ ಮತ್ತು ಗ್ಯಾರೇಜ್ ನೌಕರರ ಮಕ್ಕಳಿಗೆ ಪ್ರತಿಭಾ ಪುರಸದಕಾರವನ್ನಿತ್ತು ಗೌರವಿಸಲಾಗುವುದು ಎಂದರು.ಸಂಘದ ಗೌರವ ಸಲಹೆಗಾರ ಸುಧಾಕರ ಸಾಲಿಯಾನ್ ಪೂರಕ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ನಿಯೋಜಿತ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ಪದಾಧಿಕಾರಿ ರಾಜೇಶ್ ಕುಲಾಲ್, ಭಾಸ್ಕರ ಕುಲಾಲ್, ಜಗದೀಶ್ ರೈ,ವಿಶ್ವನಾಥ ಬಿ.,ಉಮೇಶ್ ಶೆಟ್ಟಿ ಮೊದಲಾದವರಿದ್ದರು.

ಪೆರ್ಮಂಕಿ ಯುವವಾಹಿನಿ ಘಟಕ: ಶೈಲೇಂದ್ರ ವೈ. ಸುವರ್ಣರಿಗೆ ಸನ್ಮಾನ



ಮಂಗಳೂರು: ಯುವ ವಾಹಿನಿ ಪೆರ್ಮಂಕಿ ಘಟಕದ ವತಿಯಿಂದ ಗೆಜ್ಜೆಗಿರಿ ಶ್ರೀ ಆದಿ ಧೂಮಾವತಿ ಶ್ರೀ ದೇಯಿ ಬೈದೆತಿ ಕೃಪಾಪೋಷಿತ ಯಕ್ಷಗಾನ ಮಂಡಳಿಯ ವತಿಯಿಂದ ಕಲ್ಕುಡ ಕಲ್ಲುರ್ಟಿ ದೈವದ ಕುರಿತಾದ ನಾಗರತಿ ಎಂಬ ಯಕ್ಷಗಾನ ಪ್ರದರ್ಶನವು ಪೆರ್ಮಂಕಿ ವಿಶಾಲ್ ಗಾರ್ಡನ್‌ನಲ್ಲಿ ನೆರವೇರಿತು.

ಕಾರ್ಯಕ್ರಮದಲ್ಲಿ ಉದ್ಯಮದ ಜೊತೆಗೆ ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಶೈಲೇಂದ್ರ ವೈ.ಸುವರ್ಣ ಅವರನ್ನು ಸನ್ಮಾನಿಸಲಾಯಿತು. ಅನಾರೋಗ್ಯ ಪೀಡಿತ ಕುಟುಂಬವೊಂದಕ್ಕೆ ಆರ್ಥಿಕ ನೆರವು ನೀಡಲಾಯಿತು. ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು, ಕೇಂದ್ರ ಸಮಿತಿಯ ಮಾಜಿ ಅಧ್ಯಕ್ಷ ಹರೀಶ್ ಕೆ. ಪೂಜಾರಿ, ಘಟಕದ ಅಧ್ಯಕ್ಷ ಶಶಿಕುಮಾರ್ ಕರಂದಾಡಿ, ಘಟಕದ ಸ್ಥಾಪಕಾಧ್ಯಕ್ಷ ದಿನೇಶ್ ಅಂಚನ್ ಪೆರ್ಮಂಕಿ, ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ಅಶೋಕ್ ಕುಮಾರ್ ಸುರತ್ಕಲ್, ಬದಿನಡಿ ಕ್ಷೇತ್ರದ ಕೇಶವ ಯಾನೆ ಅಂತ ಪೂಜಾರಿ ಕರಂದಾಡಿ, ರುಕ್ಮಯ ಪೂಜಾರಿ, ಹರಿಕೇಶ್ ಶೆಟ್ಟಿ ಉಳಾಯಿಬೆಟ್ಟು, ಗುಣಕರ ಸಾಲ್ಯಾನ್, ಸುದರ್ಶನ ಶೆಟ್ಟಿ, ಗಂಗಾಧರ ಮಾಸ್ಟರ್, ಕಮಾಲಾಕ್ಷ ತಲ್ಲಿಮಾರ್, ದಯಾವತಿ, ಸುರೇಶ್‌ಕುಮಾರ್ ಮಲ್ಲೂರು ಮತ್ತಿತರರು ಉಪಸ್ಥಿತರಿದ್ದರು. ಶ್ರೀನಾಥ್ ಪೆರ್ಮಂಕಿ ಸ್ವಾಗತಿಸಿ, ವಂದಿಸಿದರು. ಕೀರ್ತಿರಾಜ್ ಕರಂದಾಡಿ ಕಾರ್ಯಕ್ರಮ ನಿರೂಪಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ನೆಹರೂ ಮೈದಾನ ಉಪಕೇಂದ್ರದಿಂದ ಹೊರಡುವ 11ಕೆವಿ ಹಂಪನಕಟ್ಟೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಟಾಲ್‌ಗೇಟ್ ಜಿಲ್ಲಾ ಪಂಚಾಯತ್, ಮಿನಿವಿಧಾನ ಸೌಧ, ಐಡಿಯಲ್ ಐಸ್ ಕ್ರೀಮ್, ಬೂಷನ್ ಬಾರ್,ಕಾರ್‌ಸ್ಟ್ರೀಟ್, ಲೇಡಿಗೋಷನ್ ರಸ್ತೆ, ಮಾರ್ಕೆಟ್ ಒಳಗಿನ ರಸ್ತೆ, ರಾವ್ - ರಾವ್ ಸರ್ಕಲ್, ಸರ್ವಿಸ್ ಬಸ್‌ಸ್ಟ್ಯಾಂಡ್, ಟೌನ್‌ಹಾಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 21ಕ್ಕೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕಬಕದದಲ್ಲಿ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 22ನೇ ಅಕ್ರಮ-ಸಕ್ರಮ ಬೈಠಕ್‌ನಲ್ಲಿ ಶಾಸಕ ಅಶೋಕ್ ರೈ ಹೇಳಿಕೆ

ಕ್ಷೇತ್ರದ ಪ್ರತಿಯೊಬ್ಬರ ಸೂರಿಗೂ ಹಕ್ಕುಪತ್ರ ಒದಗಿಸುವುದೇ ನನ್ನ ಮೊದಲ ಆದ್ಯತೆ

ಪುತ್ತೂರು: ನನ್ನ ವಿಧಾನಸಭಾ ಕ್ಷೇತ್ರದ ಪ್ರತಿಯೊಬ್ಬ ಬಡವನ ಮನೆಯ ಅಡಿಸ್ಥಳಕ್ಕೆ ಹಕ್ಕು ಪತ್ರ ನೀಡಿದಾಗ ಮಾತ್ರ ನನಗೆ ಸಮಾಧಾನವಾಗುತ್ತದೆ. ಅಲ್ಲಿಯವರೆಗೆ ನನಗೆ ಸಮಾಧಾನವಾಗುವುದಿಲ್ಲ ಎಂದು ಶಾಸಕ ಅಶೋಕ್ ರೈ ಹೇಳಿದರು.

ಕಬಕ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆದ ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 22ನೇ ಅಕ್ರಮ-ಸಕ್ರಮ ಬೈಠಕ್ ಮತ್ತು 24ನೇ ಹಕ್ಕು ಪತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ನಾನು ಚುನಾವಣೆಗೆ ಪೂರ್ವ ಹಕ್ಕು ಪತ್ರ ಕೊಡಿಸುವುದಾಗಿ ಭರವಸೆ ಕೊಟ್ಟಿದ್ದೆ. ಅದನ್ನು ಈಡೇರಿಸುವ ಕೆಲಸ ಮಾಡುತ್ತಿದ್ದೇನೆ. ಹಲವು ವರ್ಷಗಳ ಹಿಂದೆ ಅರ್ಜಿ ಹಾಕಿದವರ ಕಡತ ಬಾಕಿಯಾಗಿತ್ತು. ಅವೆಲ್ಲವನ್ನೂ ಮಾಡಿಕೊಡುವ ಪ್ರತಿಜ್ಞೆ ಮಾಡಿದ್ದೇನೆ. ಯಾವುದೇ ಕಾರಣಕ್ಕೂ 94 ಸಿ ಮತ್ತು ಸಿಸಿ ಅರ್ಜಿಗಳನ್ನು ವಿಲೇವಾರಿ ಮಾಡದೆ ಇರಬಾರದು ಎಂದು ಕಂದಾಯ ಇಲಾಖೆಗೆ ಶಾಸಕರು ಸೂಚನೆ ನೀಡಿದರು. ವಿವಿಧ ಕಾರಣಗಳಿಗೆ ತಿರಸ್ಕೃತವಾದ 94 ಸಿ, ಸಿಸಿ ಕಡತಗಳನ್ನು ವಿಲೇವಾರಿ ಮಾಡುವ ಬಗ್ಗೆ ಕಂದಾಯ ಸಚಿವರ ಜೊತೆ ಈಗಾಗಲೇ ಮಾತುಕತೆ ನಡೆಸಿದ್ದು ಅರ್ಹ ಎಲ್ಲಾ ಫಲಾನುಭವಿಗಳಿಗೂ ಹಕ್ಕು ಪತ್ರ ಕೊಟ್ಟೇ ಕೊಡ್ತೇನೆ ಎಂದು ಹೇಳಿದರು.

> **ಯಾವ ಗ್ರಾಮಗಳು?**
>
> ಕಬಕ, ಪಡ್ನೂರು, ಬನ್ನೂರು, ಕೋಡಿಂಬಾಡಿ, ಬೆಳ್ಳಿಪ್ಪಾಡಿ, ಚಿಕ್ಕಮುಡ್ನೂರು, 34 ನೆಕ್ಕಿಲಾಡಿ, ಉಪ್ಪಿನಂಗಡಿ, ಬಜತ್ತೂರು ಹಾಗೂ ಹಿರೆಬಂಡಾಡಿ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು.

ಶಾಸಕ ಅಶೋಕ್ ರೈ ಅವರಿಗೆ ಬಡವರ ಮೇಲೆ ಅಪಾರ ಕಾಳಜಿ ಇದ್ದು ಈ ಕಾರಣಕ್ಕೆ ಗ್ರಾಮಗಳಿಗೆ ತೆರಳಿ ಹಕ್ಕು ಪತ್ರ ವಿತರಣೆ ಮಾಡುತ್ತಿದ್ದಾರೆ. ಇದರಿಂದ ಗ್ರಾಮದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರೆಯುವಂತಾಗಿದೆ ಎಂದು ತಹಶಿಲ್ದಾರ್ ಎಸ್.ಬಿ. ಕೂಡಲಗಿ ಹೇಳಿದರು. ಸಮಿತಿ ಸದಸ್ಯ ಮಹಮ್ಮದ್ ಬಡಗನ್ನೂರು ಮಾತನಾಡಿ, ರಾಜ್ಯದಲ್ಲಿ ಎಲ್ಲಿಯೂ ಆಗದ ಕೆಲಸಗಳು ಪುತ್ತೂರಿನಲ್ಲಿ ನಡೆಯುತ್ತಿದೆ. ಪ್ರತೀ ಗ್ರಾಮದಲ್ಲೂ ಬಡವರಿಗೆ ನಿವೇಶನಕ್ಕೆ ಜಾಗ ಕಾಯ್ದಿರಿಸಿದ್ದಾರೆ. 1000 ನಿವೇಶನವನ್ನು ಏಕ ಸಮಯದಲ್ಲಿ ವಿತರಣೆ ಮಾಡಲಾಗುತ್ತದೆ. 22 ಬೈಠಕ್ ನಲ್ಲಿ 1,600 ಕಡತಗಳನ್ನು ವಿಲೇವಾರಿ ಮಾಡಿದ್ದೇವೆ ಎಂದು ಹೇಳಿದರು. ವೇದಿಕೆಯಲ್ಲಿ ಅಕ್ರಮ-ಸಕ್ರಮ ಸಮಿತಿ ಸದಸ್ಯರಾದ ರಾಮಣ್ಣ ಪಿಲಿಂಜ, ರೂಪರೇಖಾ ಆಳ್ವ, ಕಬಕ ಗ್ರಾ.ಪಂ. ಪಿಡಿಒ ಸುಭಾಶ್ಚಂದ್ರ ಇದ್ದರು. ಉಪ್ಪಿನಂಗಡಿ ಕಂದಾಯ ನಿರೀಕ್ಷಕ ಚಂದ್ರ ನಾಯ್ಕ್ ಸ್ವಾಗತಿಸಿ, ವಂದಿಸಿದರು.

ಸುತ್ತ ಮುತ್ತ

ಮಲ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಹೈಕೋರ್ಟ್ ತಾತ್ಕಾಲಿಕ ತಡೆ

ಕಡಬ: ಕಳಾರದ ತಿಮರಡ್ಡ ಜನವಸತಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪರಿಸರ ವಿರೋಧಿ ಮಲತ್ಯಾಜ್ಯ ವಿಲೇವಾರಿ ಘಟಕಕ್ಕೆ ರಾಜ್ಯ ಉಚ್ಛ ನ್ಯಾಯಾಲಯ ತಾತ್ಕಾಲಿಕ ತಡೆ ನೀಡಿದ್ದು, ಇದು ನಮ್ಮ ನ್ಯಾಯಯುತ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಕಳಾರ ಪರಿಸರ ಸಂರಕ್ಷಣಾ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಎಚ್. ಹಂಝು ಕಳಾರ ಹೇಳಿದರು. ಅವರು ಮಂಗಳವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಿತಿಯ ಕೋಶಾಧಿಕಾರಿ ಸ್ಥಳೀಯ ನಿವಾಸಿ ಪೆಲತ್ತೋಡಿ ಗಣೇಶ್ ನ್ಯಾಯಾಲಯದ ಕದ ತಟ್ಟಿದ್ದಾರೆ. ಅವರು ತಮ್ಮ ಕುಟುಂಬ ದೈವಸ್ಥಾನ ಮತ್ತು ವಸತಿ ಕೂಡ ಹತ್ತಿರವಿರುವುದರಿಂದ ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಘಟಕದ ನಿರ್ಮಾಣ ಕಾರ್ಯಕ್ಕೆ ತಾತ್ಕಾಲಿಕ ತಡೆ ನೀಡಿರುವುದು ಸ್ಥಳೀಯ ಸಾರ್ವಜನಿಕರಿಗೆ ತಾತ್ಕಾಲಿಕ ನ್ಯಾಯ ದೊರೆತಂತಾಗಿದೆ. ಹೈಕೋರ್ಟ್ ನಲ್ಲಿ ನ್ಯಾಯವಾದಿ ದಿವೀನ್ ವರ್ಮಾ ಗಣೇಶ್ ಅವರ ಪರವಾಗಿ ವಾದ ಮಂಡಿಸಿದ್ದರು ಎಂದು ಹಂಝು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಳಾರ ಪರಿಸರ ಸಂರಕ್ಷಣಾ ಹೋರಾಟ ಸಮಿತಿಯ ಅಧ್ಯಕ್ಷ ಕೆ.ಸಿ. ಸೈಮನ್ ಕಳಾರ, ಕೋಶಾಧಿಕಾರಿ ಪಿ. ಗಣೇಶ್ ಪೆಲತ್ತೋಡಿ, ಉಪಾಧ್ಯಕ್ಷ ಕೆ.ಎಚ್. ಇಸ್ಮಾಯಿಲ್, ಸಲಹೆಗಾರರಾದ ಕೆ. ಸುಕೇಶ್ ಕಳಾರ, ಉಸ್ಮಾನ್ ತಿಮರಡ್ಕ, ಸದಸ್ಯರಾದ ಇಬ್ರಾಹಿಂ ತಿಮರಡ್ಕ ಜಬ್ಬಾರ್ ಕಳಾರ, ಸಾಮಾಜಿಕ ಹೋರಾಟಗಾರರಾದ ಕೆ.ಎಂ. ಫಾರೂಕ್, ಮಹಮ್ಮದ್ ಅಲಿ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕಾವೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಯೆಯ್ಯಾಡಿ, ಹರಿಪದವು ಮತ್ತು ವಾಮಂಜೂರು ಫೀಡರ್ ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಮೇ 21ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಮೇರಿಹಿಲ್, ಯೆಯ್ಯಾಡಿ, ಹರಿಪದವು, ಕುಂಟಲ್ಪಾಡಿ, ಕೆ.ಪಿ.ಟಿ, ಉದಯನಗರ, ಲ್ಯಾಂಡ್ ಲಿಂಕ್ಸ್, ಪೆರ್ಲಗುರಿ, ಪದವಿನಂಗಡಿ, ವಾಮಂಜೂರು, ಪಚ್ಚನಾಡಿ, ಮಂಗಳ ಜ್ಯೋತಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ. ಕಾಟಿಪಳ್ಳ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಸುರತ್ಕಲ್, ಕಾನ ಮತ್ತು ತಡಂಬೈಲ್ ವಿದ್ಯುತ್ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 21ರಂದು ಬೆಳಿಗ್ಗೆ 10.30ರಿಂದ ಸಂಜೆ 4ರವರೆಗೆ ಕೆವಿ ಕಾನ, ಕಟ್ಲ, ಜನತಾ ಕಾಲೊನಿ, ಸುರತ್ಕಲ್, ಗುಡ್ಡೆಕೊಪ್ಲ, ಹೊಸಬೆಟ್ಟು, ತಡಂಬೈಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಶಿಕ್ಷಕರ ನೇಮಕಾತಿ

ಮುಳ್ಳೇರಿಯ: ಅಡೂರು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 29ರಂದು ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ಇಂಗ್ಲಿಷ್, ಇತಿಹಾಸ – ಸೀನಿಯರ್, ಮಲೆಯಾಳ, ಕನ್ನಡ, ಅರೇಬಿಕ್ – ಜೂನಿಯರ್ ವಿಷಯಗಳಿಗೆ ಮತ್ತು ಅಪರಾಹ್ನ 2ಕ್ಕೆ ರಾಜ್ಯಶಾಸ್ತ್ರ – ಸೀನಿಯರ್ ಹಾಗೂ ಜೂನಿಯರ್, ಅರ್ಥಶಾಸ್ತ್ರ – ಜೂನಿಯರ್, ಸಮಾಜಕಾರ್ಯ ಮತ್ತು ವಾಣಿಜ್ಯ – ಸೀನಿಯರ್ ವಿಷಯಗಳಿಗೆ ಸಂದರ್ಶನ ಏರ್ಪಡಿಸಲಾಗಿದೆ.

ಪ್ರಾಧ್ಯಾಪಕರ ನೇಮಕಾತಿ

ಕಾಸರಗೋಡು: ಎಳೇರಿತಟ್ಟು ಇ.ಕೆ.ನಾಯನಾರ್ ಸ್ಮಾರಕ ಸರಕಾರಿ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ ಅತಿಥಿ ಪ್ರಾಧ್ಯಾಪಕರ ನೇಮಕಾತಿಗಾಗಿ ಸಂದರ್ಶನ ಮೇ 29ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ. ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶನಾಲಯದಲ್ಲಿ ಹೆಸರು ನೋಂದಾಯಿಸಬೇಕು. ಸಂಬಂಧಿತ ವಿಷಯದಲ್ಲಿ ನೆಟ್, ಪಿಎಚ್‌ಡಿ ವಿದ್ಯಾರ್ಹತೆಯಾಗಿದೆ. ಅವರ ಅನುಪಸ್ಥಿತಿಯಲ್ಲಿ ಶೇಕಡಾ 55ಕ್ಕಿಂತ ಕಡಿಮೆಯಿಲ್ಲದ ಅಂಕ ಹೊಂದಿರುವ ಸ್ನಾತಕೋತ್ತರ ಪದವೀಧರರನ್ನು ಪರಿಗಣಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ 0467 2245833, 9188900213 ಸಂಪರ್ಕಿಸಬಹುದು.

ಶಿಕ್ಷಕರ ನೇಮಕಾತಿ

ಕಾಸರಗೋಡು: ಮುಳ್ಳೇರಿಯ ಜಿವಿಎಚ್‌ಎಸ್‌ಎಸ್ ನ ಪ್ರೌಢಶಾಲಾ ವಿಭಾಗದಲ್ಲಿ ಎಚ್‌ಎಸ್‌ಟಿ ಗಣಿತ (ಮಲೆಯಾಳ), ಎಚ್‌ಎಸ್‌ಟಿ ಗಣಿತ (ಕನ್ನಡ), ಭೌತ ವಿಜ್ಞಾನ (ಮಲೆಯಾಳ), ಎಚ್‌ಎಸ್‌ಟಿ ಅರೇಬಿಕ್ ಮತ್ತು ಎಚ್‌ಎಸ್‌ಟಿ ಸಂಸ್ಕೃತ (ಅರೆಕಾಲಿಕ) ಹುದ್ದೆಗಳ ನೇಮಕಾತಿಗೆ ಸಂದರ್ಶನ ಮೇ 25ರಂದು ಬೆಳಗ್ಗೆ 11ಕ್ಕೆ ಶಾಲಾ ಕಚೇರಿಯಲ್ಲಿ ನಡೆಯಲಿದೆ.

ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘದ ಸ್ವಂತ ಕಟ್ಟಡ ಉದ್ಘಾಟಿಸಿ ರವಿರಾಜ್ ಹೆಗ್ಡೆ ಹೇಳಿಕೆ

ದ.ಕ. ಒಕ್ಕೂಟದಿಂದ ಹೈನುಗಾರರಿಗೆ ಹಾಲಿಗೆ ಗರಿಷ್ಠ ದರ

ಶಿರ್ವ: ಗ್ರಾಮೀಣ ಭಾಗದ ಸಂಘಗಳು ಬಲಗೊಳ್ಳುತ್ತಿವೆ. ಸ್ವಂತ ಕಟ್ಟಡದ ಕನಸು ನನಸಾಗಿದೆ. ದಾನಿಗಳ ಸಹಕಾರದೊಂದಿಗೆ ಮಾಡಿದ ಈ ಸಾಧನೆಗೆ ಅಭಿನಂದನೆಗಳು. ಹಾಲಿನ ಸಂಗ್ರಹಣೆ 500ರಿಂದ 600 ಲೀಟರ್‌ಗಳಿಗೆ ಏರಿಸಬೇಕು. ರಾಜ್ಯದ 15 ಒಕ್ಕೂಟಗಳಲ್ಲಿ ಹಾಲಿಗೆ ಗರಿಷ್ಠ ದರ ನೀಡುವ ಒಕ್ಕೂಟ ನಮ್ಮದು. ಲಾಭಾಂಶ ಕಡಿಮೆ ಮಾಡಿ ರೈತರಿಗೆ ನೀಡುತ್ತಿದ್ದೇವೆ. ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದ್ದೇವೆ. ಗುಣಮಟ್ಟದ ಕಲಬೆರಕೆ ರಹಿತ ಹಾಲು ಕೊಡಿ, ಉತ್ತಮ ಮಾರುಕಟ್ಟೆ ಒದಗಿಸುತ್ತೇವೆ ಎಂದು ದ.ಕ. ಹಾಲು ಉತ್ಪಾದಕರ ಒಕ್ಕೂಟ ಮಂಗಳೂರು ಇದರ ಅಧ್ಯಕ್ಷ ರವಿರಾಜ್ ಹೆಗ್ಡೆ ಕೊಡವೂರು ನುಡಿದರು.

ಅವರು ಮಂಗಳವಾರ ಶಿರ್ವ ಸಮೀಪದ ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘ ಇವರು ಖರೀದಿಸಿದ 4 ಸೆಂಟ್ಸ್ ಸ್ಥಳದಲ್ಲಿ ನಿರ್ಮಿಸಿದ ಸ್ವಂತ ಕಟ್ಟಡ 'ಉದ್ಭವ'ವನ್ನು ಲೋಕಾರ್ಪಣೆಗೊಳಿಸಿ ಕೋಡು ಮುಲ್ಕಾಡಿ ಶ್ರೀ ದುರ್ಗಾಪರಮೇಶ್ವರೀ ದೇವಳದ ಸಭಾಂಗಣದಲ್ಲಿ ಏರ್ಪಡಿಸಿದ ಸಭಾಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



ಹಾಲಿನ ಉತ್ಪನ್ನಗಳನ್ನು ವಿವಿಧ ಮಾದರಿಯಲ್ಲಿ ಪರಿವರ್ತಿಸಿ ಜನರಿಗೆ ತಲುಪಿಸುತ್ತಿದ್ದೇವೆ. ತಿರುಪತಿಗೆ ನಂದಿನಿ ತುಪ್ಪ ಹೋಗುತ್ತದೆ. ಒಕ್ಕೂಟ ಹೈನುಗಾರರಿಗೆ ವಿವಿಧ ಯೋಜನೆಗಳ ಮೂಲಕ ಪಶುಆಹಾರ, ಪೂರಕ ವಿವಿಧ ಪರಿಕರಗಳಿಗೆ ಅನುದಾನ ನೀಡುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಪಂಜಿಮಾರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸಂತೋಷ್ ಶೆಟ್ಟಿ ಕೋಡು ವಹಿಸಿದ್ದರು. ಈ ಸಂದರ್ಭದಲ್ಲಿ ಪಂಜಿಮಾರು ಘಟಕದ ವತಿಯಿಂದ ಮಂಗಳೂರು ಒಕ್ಕೂಟದ ಅಧ್ಯಕ್ಷ ರವಿರಾಜ್ ಹೆಗ್ಡೆ ಕೊಡವೂರು, ಮತ್ತು ಉಪಾಧ್ಯಕ್ಷ ಉದಯ ಎಸ್. ಕೊಟ್ಯಾನ್ ಇವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಹಾಲು ಮಹಾ ಮಂಡಲ ಬೆಂಗಳೂರು ಮತ್ತು ದ.ಕ. ಹಾಲು ಒಕ್ಕೂಟ ಮಂಗಳೂರು ಇದರ ನಿರ್ದೇಶಕ ಐಕಳಬಾವ ದೇವಿ ಪ್ರಸಾದ್ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು. ಪಂಜಿಮಾರು ಸಹಕಾರಿ ಸಂಘದ ಮಾಜಿ ಅಧ್ಯಕ್ಷರುಗಳನ್ನು ಅಭಿನಂದಿಸಲಾಯಿತು. ಉದಯ ಎಸ್. ಕೊಟ್ಯಾನ್, ಐಕಳಬಾವ ದೇವಿ ಪ್ರಸಾದ್ ಶೆಟ್ಟಿ ಸೇರಿದಂತೆ ವೇದಿಕೆಯಲ್ಲಿನ ಗಣ್ಯರು ಶುಭಾಶಂಸನೆಗೈದರು.

> ಹೈನುಗಾರರು ಹಾಲು ಸೊಸೈಟಿಗೆ ಗುಣಮಟ್ಟದ ಹಾಲು ಒದಗಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಆಗ ಗರಿಷ್ಠ ದರ ನೀಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಹಾಲು ಸೊಸೈಟಿಯು ಕೂಡ ಸದಸ್ಯರಿಗೆ ಅರಿವು ಮೂಡಿಸಬೇಕು.
>
> ● ರವಿರಾಜ್ ಹೆಗ್ಡೆ ಕೊಡವೂರು

ವೇದಿಕೆಯಲ್ಲಿ ನಿರ್ದೇಶಕರುಗಳಾದ ಸುಧಾಕರ ಶೆಟ್ಟಿ ಮೂಡಾರು, ಕೆ.ಶಿವಮೂರ್ತಿ, ಮಮತಾ ಆರ್ ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಡಿ, ಶೇಖರಣೆ ಮತ್ತು ತಾಂತ್ರಿಕ ವಿಭಾಗದ ವ್ಯವಸ್ಥಾಪಕ ಡಾ.ರವಿರಾಜ್ ಉಡುಪ, ಶ್ರೀಕ್ಷೇತ್ರ ಧ.ಗ್ರಾ.ಯೋಜನೆ ಕಾಪು ಇದರ ಯೋಜನಾಧಿಕಾರಿ ಮಮತಾ ಶೆಟ್ಟಿ, ಶ್ರೀ ಮುಲ್ಕಾಡಿ ಶ್ರೀ ದುರ್ಗಾಪರಮೇಶ್ವರೀ ದೇವಳದ ಆಡಳಿತ ಮೊಕ್ತೇಸರ ಸುಧೀರ್ ಹೆಗ್ಡೆ, ಶಿರ್ವ ವ್ಯ.ಸೇ.ಸ.ಸಂಘದ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ, ವಲದೂರು ವೆಲ್ಫೇರ್ ಅಸೋಸಿಯೇಶನ್ ಅಧ್ಯಕ್ಷ ಅಶೋಕ್ ಕುಮಾರ್ ವಲದೂರು, ಬಂಟಕಲ್ಲು ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷ ಬಂಟಕಲ್ಲು ಮಾಧವ ಕಾಮತ್, ಕೋಡು ಶಾಲಾ ಹಳೆವಿದ್ಯಾರ್ಥಿ ಸಂಘದ ಕೋಶಾಧಿಕಾರಿ ರಾಜೇಶ್ ಶೆಟ್ಟಿ, ದ.ಕ ಹಾಲು ಒಕ್ಕೂಟದ ಉಪವ್ಯವಸ್ಥಾಪಕ ಡಾ.ಮಾಧವ ಐತಾಳ್, ಸಹಾಯಕ ವ್ಯವಸ್ಥಾಪಕ ಡಾ.ಪ್ರಶಾಂತ್ ಆರ್.ಜಿ, ವಿಸ್ತರಣಾಧಿಕಾರಿ ಅಬ್ದುಲ್ ಶಮೀರ್, ಪಂಜಿಮಾರು ಸಂಘದ ಉಪಾಧ್ಯಕ್ಷ ನಿತ್ಯಾನಂದ ನಾಯಕ್ ಪಾಲಮೆ ಉಪಸ್ಥಿತರಿದ್ದರು. ಪ್ರಸಾದ್ ಶೆಟ್ಟಿ ವಲದೂರು ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಕೇಶ್ ಪೂಜಾರಿ ವಲದೂರು ವರದಿ ಓದಿ, ಕೊನೆಯಲ್ಲಿ ಧನ್ಯವಾದವಿತ್ತರು. ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಯಶವಂತ ನಿರೂಪಿಸಿದರು.

ಶೃಂಗೇರಿ ಜಗದ್ಗುರುಗಳ ಗುರುವಂದನೆ | ಅಂಬಿಕಾದಲ್ಲಿ ಕೃತಜ್ಞತಾ ಸಭೆ

ಎಲ್ಲರ ಸಹಕಾರದಿಂದ ಯಶಸ್ವಿ: ಚಿದಾನಂದ ಬೈಲಾಡಿ

ಪುತ್ತೂರು: ಇತ್ತೀಚೆಗೆ ಜರಗಿದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿನ ಹಿನ್ನೆಲೆಯಲ್ಲಿ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಮಂಗಳವಾರ ಕೃತಜ್ಞತಾ ಸಭೆ ನಡೆಯಿತು.

ಈ ಸಂದರ್ಭ ಮಾತನಾಡಿದ ಗುರು ವಂದನಾ ಸಮಿತಿಯ ಅಧ್ಯಕ್ಷ ಚಿದಾನಂದ ಬೈಲಾಡಿ, ಎಲ್ಲರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದೆ. ಜಗದ್ಗುರುಗಳು ಹರ್ಷಚಿತ್ತರಾಗಿದ್ದಾರೆ ಎಂದು ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ವಿವಿಧ ಸಮಿತಿಗಳ ನಡುವಣ ಹೊಂದಾಣಿಕೆ, ಪರಸ್ಪರ ಸಲಹೆ ಸೂಚನೆಗಳು, ಏಕೋದ್ದೇಶದೊಂದಿಗೆ ಕಾರ್ಯ ನಿರ್ವಹಣೆಯೇ ಮೊದಲಾದ ಸಂಗತಿಗಳು ಯಶಸ್ಸಿನ ತಳಹದಿಗಳೆನಿಸಿವೆ. ಶೃಂಗೇರಿ ಜಗದ್ಗುರುಗಳನ್ನು ನಾಲ್ಕನೆಯ ಬಾರಿಗೆ ಪುತ್ತೂರಿನ ಮಣ್ಣಿಗೆ ಕರೆತಂದ ಅಂಬಿಕಾ ಸಂಸ್ಥೆಗಳು ಅಭಿನಂದನೆಗೆ ಅರ್ಹ ಎಂದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಜಗದ್ಗುರುಗಳ ಅನುಗ್ರಹದಿಂದ ಎಲ್ಲವೂ ಅತ್ಯಂತ ಸಮರ್ಪಕವಾಗಿ ನಡೆದಿದೆ. ಇದೇ ಮೊದಲಬಾರಿಗೆ ಶೃಂಗೇರಿ ಜಗದ್ಗುರುಗಳು ಬಲ್ನಾಡು ಉಳ್ಳಾಲ್ತಿಯ ಮೂಲಸ್ಥಾನವಾದ ತೊಟ್ಟಿಲಕಯಕ್ಕೆ ಆಗಮಿಸಿ, ಚಂಡಿಕಾಹೋಮದ ಪೂರ್ಣಾಹುತಿಯನ್ನು ನಡೆಸಿಕೊಟ್ಟಿರುವುದು ಚರಿತ್ರಾರ್ಹ ವಿಚಾರವಾಗಿ ಮೂಡಿಬಂದಿದೆ. ಜಗದ್ಗುರುಗಳ ದರ್ಶನದಿಂದ ಎಲ್ಲರೂ ಪಾವನರಾಗಿದ್ದೇವೆ ಎಂದು ಹೇಳಿದರು.



> ಎದುರಿಗೆ ಕಾಣಿಸದೆ ಸಾಕಷ್ಟು ಪರಿಶ್ರಮಪಟ್ಟ ಹಲವು ವ್ಯಕ್ತಿಗಳಿದ್ದಾರೆ. ಅಂಬಿಕಾ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಉದ್ಯೋಗಿಗಳ ಸಮರ್ಪಣಾಭಾವ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದೆ. ಸಮಾಜದ ವಿವಿಧ ಸಮುದಾಯಗಳಿಂದಲೂ ಪ್ರತಿನಿಧಿಗಳು ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮವನ್ನು ದಾಖಲೆಯಾಗಿ ಮಾರ್ಪಡಿಸಿದ್ದಾರೆ ಎಂದರು.
>
> ● ದಂಬೆಕಾನ ಸದಾಶಿವ ರೈ, ತಾಲೂಕು ಧರ್ಮ ಶಿಕ್ಷಣ ಸಮಿತಿ 'ಧರ್ಮಾಭ್ಯುದಯ'ದ ಅಧ್ಯಕ್ಷ

ಗುರುವಂದನಾ ಸಮಿತಿಯ ಸಂಘಟನಾ ಕಾರ್ಯದರ್ಶಿ ದಿನೇಶ್ ಜೈನ್ ಮಾತನಾಡಿದರು. ಗುರುವಂದನಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ದಾಖಲೆಗಳನ್ನು ಚಿದಾನಂದ ಬೈಲಾಡಿಯವರು ಸುಬ್ರಮಣ್ಯ ನಟ್ಟೋಜ ಅವರಿಗೆ ಹಸ್ತಾಂತರಿಸಿದರು. ಗುರುವಂದನಾ ಸಮಿತಿಯ ಗೌರವಾಧ್ಯಕ್ಷ ಮೊಗೆರೋಡಿ ಬಾಲಕೃಷ್ಣ ರೈ, ಕಾರ್ಯಾಧ್ಯಕ್ಷ ಶಿವರಾಮ ಆಳ್ವ ಮತ್ತಿತರರು ಉಪಸ್ಥಿತರಿದ್ದರು.

ಬಂಟಕಲ್ಲು ಕಾಲೇಜಿನಲ್ಲಿ ಮಿನಿ ಪ್ರಾಜೆಕ್ಟ್, ವಿಜ್ಞಾನ ಮಾದರಿ ಪ್ರದರ್ಶನ

ಪ್ರಾಯೋಗಿಕ ಜ್ಞಾನ ಅಗತ್ಯ: ಡಾ. ಸುದರ್ಶನ್

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಸಹಪಠ್ಯ ಚಟುವಟಿಕೆ ಘಟಕವು ಐಇಇಇ ಮತ್ತು ಇನ್ ಸ್ಟಿಟ್ಯೂಟ್ ಇನೋವೇಶನ್ ಕೌನ್ಸಿಲ್ ಸಹಯೋಗದೊಂದಿಗೆ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳಿಗೆ 'ಟೆಕ್ ಶೋಕೇಸ್ 2026' ಮಿನಿ ಪ್ರಾಜೆಕ್ಟ್ ಪ್ರದರ್ಶನ ಹಾಗೂ ಸ್ಪರ್ಧೆ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಮೂಲ ವಿಜ್ಞಾನ ವಿಭಾಗವು ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದೊಂದಿಗೆ 'ಆಕೃತಿ' ವಿಜ್ಞಾನ ಮಾದರಿ ಪ್ರದರ್ಶನ ಮತ್ತು ಸ್ಪರ್ಧೆಯನ್ನು ಆಯೋಜಿಸಿತ್ತು.

ಮುಖ್ಯ ಅತಿಥಿಯಾಗಿ ಸಂಸ್ಥೆಯ ಹಳೆ ವಿದ್ಯಾರ್ಥಿನಿ, ನಿವಿಯಸ್ ಸೊಲ್ಯೂಶನ್‌ನ ಕ್ಲೌಡ್ ಎಕ್ಸ್ಪರ್ಟ್ ಶ್ರೀದೇವಿ ರಾವ್ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ಪ್ರಾಜೆಕ್ಟ್‌ಗಳ ಮಹತ್ವದ ಬಗ್ಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ ಸಂಸ್ಥೆಯ ಶೈಕ್ಷಣಿಕ ಡೀನ್ ಡಾ. ಸುದರ್ಶನ್ ರಾವ್ ಕೆ ಮಾತನಾಡಿ, ಜ್ಞಾನವೆಂಬುದು ಯಾರೂ ಕಸಿದುಕೊಳ್ಳಲಾಗದ ಅಮೂಲ್ಯ ಸಂಪತ್ತು. ಇಂತಹ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನವನ್ನು ವೃದ್ಧಿಸಬಹುದು ಎಂದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್ ಐತಾಳ್, ಸಂಸ್ಥೆಯ ಪ್ರಾಂಶುಪಾಲ ಡಾ. ನಾಗರಾಜ್ ಭಟ್, ಡೀನ್‌ಗಳು, ವಿವಿಧ ವಿಭಾಗದ ಮುಖ್ಯಸ್ಥರು ಮತ್ತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪ್ರಾಜೆಕ್ಟ್ ಮತ್ತು ವಿಜ್ಞಾನ ಮಾದರಿ ಮತ್ತು ಪ್ರಾಜೆಕ್ಟ್ ಪ್ರದರ್ಶನಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.



ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಂಗಳೂರು ಇಜಿಡಿಕೆ ಇಂಡಿಯಾ ಇದರ ಸೀನಿಯರ್ ಕ್ಯೂ ಎ ಇಂಜಿನಿಯರ್, ಕಾವ್ಯಶ್ರೀ ಇವರು ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ನೀಡಿದರು. ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್ ಐತಾಳ್ ಇವರು ವಿದ್ಯಾರ್ಥಿಗಳು ಉತ್ತಮ ವಿಜ್ಞಾನ ಮಾದರಿ ಮತ್ತು ಪ್ರಾಜೆಕ್ಟ್‌ಗಳನ್ನು ಅಭಿವೃದ್ಧಿ ಪಡಿಸಿದಕ್ಕಾಗಿ ಅಭಿನಂದಿಸಿದರು.

ಸಂಸ್ಥೆಯ ಪ್ರಾಂಶುಪಾಲರಾದ ಡಾ. ನಾಗರಾಜ್ ಭಟ್ ಇವರು ವಿದ್ಯಾರ್ಥಿಗಳ ನವೀನ ಪ್ರಾಜೆಕ್ಟ್‌ಗಳನ್ನು ಅಭಿವೃದ್ಧಿ ಪಡಿಸಿದಕ್ಕಾಗಿ ಅಭಿನಂದಿಸಿದರುಮತ್ತು ಅವುಗಳನ್ನು ಇನ್ನಷ್ಟು ಉತ್ತಮಗೊಳಿಸುವಂತೆ ತಿಳಿಸಿದರು. ಕಾರ್ಯಕ್ರಮವನ್ನು ಪಠ್ಯೇತರ ಚಟುವಟಿಕೆ ಘಟಕದ ಸಂಯೋಜಕಿ ಡಾ. ರೆನಿಟಾ ಶರೋನ್ ಮೋನಿಸ್ ಮತ್ತು ಪ್ರಥಮ ವರ್ಷದ ಇಂಜಿನಿಯರಿಂಗ್ ವಿಭಾಗದ ಸಂಯೋಜಕಿ ಡಾ. ಲೊಲಿಟ ಪ್ರಿಯ ಕ್ಯಾಸ್ಥಲಿನೋ ಸಂಯೋಜಿಸಿದ್ದರು.

> **69 ಪ್ರಾಜೆಕ್ಟ್‌ಗಳ ಪ್ರದರ್ಶನ**
>
> ಕಾಲೇಜಿನ ಪ್ರದರ್ಶನದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳು ಒಟ್ಟು 81 ವಿಜ್ಞಾನ ಮಾದರಿ ಹಾಗೂ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳು ಒಟ್ಟು 69 ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಎನ್‌ಎಸ್‌ಯುಐನಿಂದ ಪ್ರತಿಭಟನೆ



ಉಳ್ಳಾಲ: ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದವರ ವಿರುದ್ಧ ಕೇಂದ್ರ ಸರಕಾರ ಕಠಿಣ ಕ್ರಮ ಕೈಗೊಳ್ಳಬೇಕು, ತೊಂದರೆಗೊಳಗಾದ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕೆಂದು ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್ ಆಗ್ರಹಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಎನ್‌ಎಸ್‌ಯುಐ ಮಂಗಳೂರು ಕ್ಷೇತ್ರ ಸಮಿತಿಯಿಂದ ತೊಕ್ಕೊಟ್ಟು ಫ್ಲೈಓವರ್ ಬಳಿ ಸೋಮವಾರದಂದು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು.

ಎನ್‌ಎಸ್ ಯುಐ ಜಿಲ್ಲಾಧ್ಯಕ್ಷ ಸುಹಾನ್ ಆಳ್ವ ಮಾತನಾಡಿ, ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಬಳಿಕ 40 ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಇದರಿಂದ ಬಹಳಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರು. ಎನ್‌ಎಸ್‌ಐಯು ಮಂಗಳೂರು ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಯು.ಟಿ.ಫರೀದ್, ಮುಖಂಡರಾದ ದಿನೇಶ್ ಕುಂಪಲ,ಮೋನು ಮಲಾರ್, ಅಮಿತಾ ಅಶ್ವಿನ್ ಬಂಡಿಕೊಟ್ಯ,ಆಲ್ವಿನ್ ಡಿಸೋಜ, ಉಸ್ಮಾನ್ ಕಲ್ಲಾಪು, ರಝಿಯಾ ಇಬ್ರಾಹಿಮ್, ಮಹಮ್ಮದ್ ಮೋನು ಮಲಾರ್, ಮನ್ಸೂರ್ ಮಂಚಿಲ, ಶಾಹಿಲ್ ಮಂಚಿಲ, ಫಿರೋಝ್ ಮಲಾರ್, ಮುರಳೀಧರ ಶೆಟ್ಟಿ ಮೋರ್ಲ, ಆಸೀಫ್ ಪೆರಿಮಾರ್, ದಿನೇಶ್ ರೈ, ನವಾಝ್ ನರಿಂಗಾನ, ತ್ವಾಹೀ ಕಲ್ಲಾಪು, ಝುಕರಿಯಾ ಮಲಾರ್, ಮಿತೇಶ್, ಬಾಜಿಲ್.ಡಿ ಸೋಜ ಮೊದಲಾದವರು ಉಪಸ್ಥಿತರಿದ್ದರು.

ಆರೋಗ್ಯ ಶಿಬಿರ, ಹೃದಯಾಘಾತ ತಡೆಗೆ ಮುನ್ನೆಚ್ಚರಿಕಾ ಕ್ರಮಗಳ ಮಾಹಿತಿ



ಕೊಣಾಜೆ: ರೋಟರಿ ಕ್ಲಬ್ ದೇರಳಕಟ್ಟೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಣಾಜೆ ವಲಯ, ಯೆನೆಪೋಯ ಆರ್ಯುರ್ವೇದ ಮೆಡಿಕಲ್ ಕಾಲೇಜು ಹಾಗೂ ಕೊಣಾಜೆ ಮಂಗಳ ಗ್ರಾಮೀಣ ಯುವಕ ಮಂಡಲ ಇದರ ಆಶ್ರಯದಲ್ಲಿ ಹೃದಯಾಘಾತ ಸಂದರ್ಭದಲ್ಲಿ ಜೀವವನ್ನು ಉಳಿಸುವ ತರಬೇತಿ ಕಾರ್ಯಕ್ರಮ ಹಾಗೂ ಉಚಿತ ಆರೋಗ್ಯ ಶಿಬಿರವು ಭಾನುವಾರ ಕೊಣಾಜೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉಳ್ಳಾಲ ತಾಲೂಕು ಜಮಿಯತುಲ್ ಫಲಾಹ್ ಇದರ ಅಧ್ಯಕ್ಷ ಅಬ್ದುಲ್ ರಹಿಮಾನ್ ಕೋಡಿಜಾಲ್ ಉದ್ಘಾಟಿಸಿ, ಇತ್ತೀಚೆಗೆ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿದ್ದು, ಅನೇಕ ಸಂದರ್ಭಗಳಲ್ಲಿ ಕೂಡಲೇ ಸೂಕ್ತ ಆರೈಕೆ ದೊರೆತರೆ ಜೀವ ಉಳಿಸುವ ಅವಕಾಶ ಒದಗಿ ಬರುತ್ತದೆ ಎಂದರು.

ಕೆಎಂಸಿ ವೈದ್ಯ ಡಾ.ರಂಜನ್ ಆರ್ ಕೆ ಅವರು ಪ್ರಾತ್ಯಕ್ಷಿಕೆಯ ಮೂಲಕ ಹೃದಯಾಘಾತ ಸಂದರ್ಭದಲ್ಲಿ ಜೀವವನ್ನು ಉಳಿಸುವ ಕಾರ್ಯ ವಿಧಾನಗಳ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು. ದೇರಳಕಟ್ಟೆ ರೋಟರಿ ಕ್ಲಬ್‌ನ ಅಧ್ಯಕ್ಷ ಡಾ.ಅನಿತಾ ರವಿಶಂಕರ್ ರಾವ್ ಮಾತನಾಡಿ, ಇಂತಹ ಮಹತ್ವದ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು ಎಂದರು. ಮೂಡದ ಮಾಜಿ ಅಧ್ಯಕ್ಷ ಇಬ್ರಾಹಿಂ ಕೋಡಿಜಾಲ್, ರೋಟರಿ ಕ್ಲಬ್ ಕಾರ್ಯದರ್ಶಿ ಲತಾ ವಿಕ್ರಂ, ಮಾಜಿ ಜಿಲ್ಲಾ ಗವರ್ನರ್ ವಿಕ್ರಂ ದತ್ತ, ಜೆಪಿ ರೈ, ರೂಪ ಶೆಟ್ಟಿ, ಕೊಣಾಜೆ ಪಂಚಾಯತ್ ಮಾಜಿ ಅಧ್ಯಕ್ಷ ಅಚ್ಯುತ ಗಟ್ಟಿ, ಮುಖಂಡರಾದ ಅಬ್ದುಲ್ ನಾಸೀರ್ ಕೆಕೆಎಸ್, ಗ್ರಾ.ಯೋ. ಮೇಲ್ವಿಚಾರಕ ಗಿರೀಶ್ ನಾಯ್ಕ್, ಡಾ.ಅಕ್ಷತಾ ಇದ್ದರು. ಗ್ರಾಮಾಭಿವೃದ್ಧಿ ಯೋಜನೆಯ ನೌಶಾದ್ ಸ್ವಾಗತಿಸಿ, ಮಂಗಳ ಗ್ರಾಮೀಣ ಯುವಕ ಸಂಘದ ಅಧ್ಯಕ್ಷರಾದ ಎ.ಕೆ.ಅಬ್ದುಲ್ ರಹಿಮಾನ್ ವಂದಿಸಿದರು. ವಿಶ್ರಾಂತ ಪ್ರಾಧ್ಯಾಪಕ ಡಾ.ರವಿಶಂಕರ್ ರಾವ್ ನಿರೂಪಿಸಿದರು.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶಿಕ್ಷಣ ಸಂಸ್ಥೆಗಳಿಗೆ ಕಿನ್ನಿಗೋಳಿ ಅನುಗ್ರಹ ಸಹೋದರರು ಸುಮಾರು 60 ವರ್ಷಗಳ ಹಿಂದಿನ ಲೆಗ್ ಹಾರ್ಮೋನಿಯಂ, ಹಾರ್ಮೋನಿಯಂ, ಅಷ್ಟೇ ಹಳೆಯದಾದ ತಬಲಾ, ಮದ್ದಲೆಗಳನ್ನು ನೀಡಿದರು. ಸಂಗೀತ ಉಪಕರಣಗಳನ್ನು ಕಟೀಲು ದೇಗುಲದ ಅರ್ಚಕ ಕಮಲಾದೇವೀಪ್ರಸಾದ ಆಸ್ರಣ್ಣ ಸ್ವೀಕರಿಸಿದರು. ದಾನಿಗಳಾದ ವಾಸುದೇವ ರಾವ್, ನಿತ್ಯಾನಂದ, ರಾಧಾಕೃಷ್ಣ ಗಣೇಶ್ ಕಿನ್ನಿಗೋಳಿ, ಉದ್ಯಮಿ ಜಯಕುಮಾರ ಮಯ್ಯ, ಹಾರ್ಮೋನಿಯಂ ಶಿಕ್ಷಕ ವಾಸು ಮಾಸ್ತರ್, ಕಟೀಲು ಶಿಕ್ಷಣ ಸಂಸ್ಥೆಗಳ ಮೇಲುಸ್ತುವಾರಿ ದಯಾನಂದ ಮಾಡ ಉಪಸ್ಥಿತರಿದ್ದರು.



ವಿಟ್ಲ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪಿಎಂಶ್ರೀ ಸರಕಾರಿ ಪ್ರೌಢ ಶಾಲೆಯ ಪ್ರಾಥಮಿಕ ಶಾಲಾ ವಿಭಾಗದಿಂದ ದಾಖಲಾತಿ ಆಂದೋಲನ ನಡೆಸಲಾಯಿತು. ವಿಟ್ಲ ಪ.ಪಂ. ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ರವಿಪ್ರಕಾಶ್, ಸಿಆರ್‌ಪಿ ಬಿಂದು, ಶಿಕ್ಷಕಿ ಶ್ರೀಮತಿ, ಸಹ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸುಂಟಿಕೊಪ್ಪ ಗ್ರಾಮ ಪಂಚಾಯತ್‌ನ ಹಳೆ ಕಟ್ಟಡದಲ್ಲಿ ಸಮ್ಮೇಳನದ ತಾತ್ಕಾಲಿಕ ಕಚೇರಿ ಉದ್ಘಾಟನೆ | ಸಮಿತಿ ಉಪ ಸಮಿತಿ ರಚನೆ, ಭರದ ಸಿದ್ಧತೆ

ಕೊಡಗು 17ನೇ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಜ್ಜಾಗುತ್ತಿದೆ ರಾಜ್ಯದ 'ಕನ್ನಡ ವೃತ್ತ'ದ ತವರೂರು

ಸುಂಟಿಕೊಪ್ಪ: ಸುಂಟಿಕೊಪ್ಪದಲ್ಲಿ ಕೊಡಗು ಜಿಲ್ಲಾ 17ನೇ ಸಾಹಿತ್ಯ ಸಮ್ಮೇಳನವು ಮೇ 29, 30ರಂದು ನಡೆಸಲು ಈಗಾಗಲೇ ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ಸುಂಟಿಕೊಪ್ಪದಲ್ಲಿ 2015ರಲ್ಲಿ ಹೋಬಳಿ ಮಟ್ಟದ ಸಾಹಿತ್ಯ ಸಮ್ಮೇಳನ ನಡೆದ ಬಳಿಕ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಕ್ಕೆ ಸುಂಟಿಕೊಪ್ಪವು ಸಜ್ಜುಗೊಳ್ಳುತ್ತಿದೆ.

ಹಲವು ವೈಶಿಷ್ಟ್ಯತೆಯನ್ನು ಹೊಂದಿರುವ ತವರೂರಾದ ಸುಂಟಿಕೊಪ್ಪ ತನ್ನದೆಯಾದ ಇತಿಹಾಸ ಹೊಂದಿದೆ. ರಾಷ್ಟ್ರಕವಿ ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಸೇರಿದಂತೆ ಸಾಕಷ್ಟು ಕವಿಮಾನಿಯರು ವೃತ್ತದ ಮೂಲಕವೇ ಗುಂಡುಗುಟ್ಟಿ ಮಂಜನಾಥಯ್ಯ ಅವರ ಮನೆಗೆ ಹಾದು ಹೋಗಿ ಭೇಟಿ ನೀಡಿ ತಂಗಿರುವ ಸಾಕಷ್ಟು ಪುರಾವೆಗಳು ಇದ್ದು ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ನಾವು ಅದೇಷ್ಟೋ ವೃತ್ತಗಳನ್ನು ಕಂಡಿರುತ್ತೇವೆ ಸಾಧಕರ ಕವಿಗಳ ಪದನಾಮಗಳ ವೃತ್ತವನ್ನೇ ಕಾಣುತ್ತೇವೆ. ಆದರೆ ಸುಂಟಿಕೊಪ್ಪ ಪಟ್ಟಣದ ಹೃದಯ ಭಾಗದಲ್ಲಿರುವ ವೃತ್ತವೊಂದಕ್ಕೆ ಕನ್ನಡ ವೃತ್ತ ಎಂದು ಪದನಾಮ ಮಾಡಲಾಗಿದೆ. ಈ ಕನ್ನಡ ವೃತ್ತಕ್ಕೆ 4 ದಶಕಗಳ ಇತಿಹಾಸವಿದ್ದು, ಕಳೆದ 32 ವರ್ಷಗಳಿಂದ ಕನ್ನಡ ರಾಜ್ಯೋತ್ಸವವನ್ನು ಇಲ್ಲಿ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ವಿವಿಧ ಸಂಘಟನೆಗಳು ಸೇರಿ ಅದ್ದೂರಿಯಾಗಿ ಆಚರಿಸುತ್ತಿದೆ. ಕರ್ನಾಟಕದಲ್ಲಿ ಏಕೈಕ ಕನ್ನಡ ವೃತ್ತವಾಗಿದ್ದು ವರ್ಷದ 365 ದಿನವೂ ಕನ್ನಡದ ಬಾವುಟ ಹಾರಾಡುತ್ತಿರುತ್ತದೆ.



> **ಅಧ್ಯಕ್ಷರಿಗೆ ಆಹ್ವಾನ**
>
> ಕೇಂದ್ರ ಸಾಹಿತ್ಯ ಆಕಾಡಮಿ ಯುವ ಪುರಸ್ಕಾರಕ್ಕೆ ಪಾತ್ರರಾದ ಸುಂಟಿಕೊಪ್ಪದವರೇ ಆದ ಅಬ್ದುಲ್‌ರಶೀದ್ ಸಮ್ಮೇಳನದ ಸರ್ವ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಈಗಾಗಲೇ ಜಿಲ್ಲಾ ಕಸಾಪ ಕುಶಾಲನಗರ ತಾಲೂಕು ಕಸಾಪ ಮತ್ತು ಸುಂಟಿಕೊಪ್ಪ ಹೋಬಳಿ ಕಸಾಪದ ವತಿಯಿಂದ ಸಮ್ಮೇಳನದ ಸ್ವಾಗತ ಸಮಿತಿಯು ಅಬ್ದುಲ್ ರಶೀದ್ ಅವರನ್ನು ಸಮ್ಮೇಳನಕ್ಕೆ ಅಧಿಕೃತವಾಗಿ ಆಹ್ವಾನಿಸಿದೆ.

ಇದಕ್ಕೆ ಪೂರಕವಾಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ತಾತ್ಕಾಲಿಕ ಕಚೇರಿಯನ್ನು ಸುಂಟಿಕೊಪ್ಪ ಗ್ರಾ.ಪಂ.ನ ಹಳೆಯ ಕಟ್ಟಡದಲ್ಲಿ ತೆರೆಯಲಾಗಿದೆ. ಸಮ್ಮೇಳದ ಲಾಂಛನವನ್ನು ಕನ್ನಡ ಸಾಹಿತ್ಯ ಸಂಸ್ಥಾಪನ ದಿನದಂದು ಅನಾವರಣಗೊಳಿಸಲಾಗಿದೆ. ಈಗಾಗಲೇ ಜಿಲ್ಲಾ ಕಸಾಪ, ಹೋಬಳಿ ಕಸಾಪ ಸಾಕಷ್ಟು ಪೂರ್ವಬಾವಿ ಸಭೆಗಳನ್ನು ನಡೆಸಿದ್ದು ಮಡಿಕೇರಿ ವಿಧಾಸಭಾ ಕ್ಷೇತ್ರದ ಶಾಸಕರಾದ ಡಾ.ಮಂಥರ್‌ಗೌಡ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು ಕಾರ್ಯಾಧ್ಯಕ್ಷರಾಗಿ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ಇದ್ದಾರೆ. ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿ ಮತ್ತು ಹಣಕಾಸು ಸಮಿತಿಯ ಅಧ್ಯಕ್ಷರಾಗಿ ಎ.ಲೋಕೇಶ್ ಕುಮಾರ್ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಾಗತ ಸಮಿತಿಯ ಗೌರವಧ್ಯಕ್ಷರುಗಳಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಬೋಸರಾಜ್, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯ ಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್. ಪೊನ್ನಣ್ಣ ಅವರುಗಳು ಇದ್ದಾರೆ.

ಸಮ್ಮೇಳನವನ್ನು ಯಶಸ್ವಿಗೊಳಿಸಲು ವಿವಿಧ ಉಪಸಮಿತಿಗಳನ್ನು ರಚಿಸಿಕೊಳ್ಳಲಾಗಿದ್ದು, ಅವೆಲ್ಲಾವೂ ತಮ್ಮ ವ್ಯಾಪ್ತಿಯ ಕಾರ್ಯನಿರ್ವಹಣೆಯಲ್ಲಿ ತೊಡಗಿವೆ ವಿಶೇಷವಾಗಿ ಹಣಕಾಸು ಸಮಿತಿಯಲ್ಲಿ ಆರ್ಥಿಕ ಸಂಪೂನ್ಮೂಲ ಕ್ರೂಡೀಕರಣ ಮೆರವಣಿಗೆ,ಸ್ಮರಣ ಸಂಚಿಕೆ, ಆಹಾರ ಮತ್ತು ಅಲಂಕಾರ, ಸಾಂಸ್ಕೃತಿಕ ಹಾಗೂ ದ್ವಾರ ಸಮಿತಿಗಳನ್ನು ರಚಿಸಲಾಗಿದೆ. 17ನೇ ಸಮ್ಮೇಳನದ ಹಿನ್ನಲೆಯಲ್ಲಿ ಸುಂಟಿಕೊಪ್ಪ ವ್ಯಾಪ್ತಿಯ ಪ್ರತಿಷ್ಠಿತ ಕುಟುಂಬಗಳು ಹಾಗೂ ಗಣ್ಯರ ಹೆಸರಿನಲ್ಲಿ 17 ಮಹಾದ್ವಾರಗಳನ್ನು ನಿರ್ಮಿಸಲಾಗುತ್ತದೆ. ಸಮ್ಮೇಳನ ನಡೆಯುವ ಸಭಾಂಗಣ ಮತ್ತು ಮುಖ್ಯ ವೇದಿಕೆಗೆ ಕನ್ನಡ ನಾಡು ನುಡಿಗೆ ಗಣನೀಯ ಸೇವೆ ಮಾಡಿದವರ ಹೆಸರನ್ನು ಇಡಲಾಗುವುದೆಂದು ಜಿಲ್ಲಾಧ್ಯಕ್ಷ ಎಂ.ಪಿ. ಕೇಶವಕಾಮತ್ ಮಾಹಿತಿ ನೀಡಿದರು. ಸಮ್ಮೇಳನದಲ್ಲಿ 17 ಮಂದಿ ಜಿಲ್ಲೆಯ ಸಾಧಕರನ್ನು ಹಾಗೂ ಕ್ರೀಡಾ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಸುಂಟಿಕೊಪ್ಪ ಹೋಬಳಿ ಕಸಾಪ ಅಧ್ಯಕ್ಷ ಸಮ್ಮೇಳನದ ಮಹಾಪ್ರಧಾನ ಕಾರ್ಯದರ್ಶಿ ಪಿ.ಎಫ್.ಸಬಾಸ್ಟಿನ್ ತಿಳಿಸಿದ್ದಾರೆ.

ಸುತ್ತ ಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಚಿತ್ರಾಪು, ಕಾರ್ನಾಡು, ಗೇರುಕಟ್ಟೆ, ಬಪ್ಪನಾಡು, ಮುಲ್ಕಿ ಬಸ್ ಸ್ಟ್ಯಾಂಡ್, ಒಡೆಯರಬೆಟ್ಟು, ಕೊಳಚಿಕಂಬ್ಳ ಪಡುಪಣಂಬೂರು, ಪಂಚಮಹಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 21ರಂದು ಬೆಳಗ್ಗೆ 10ರಿಂದ ಸಂಜೆ 5:30ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಚೆಕ್ ಅಮಾನ್ಯ ಪ್ರಕರಣ; ಆರೋಪಿಗೆ ದಂಡ

ಪುತ್ತೂರು: ಸ್ವಸಹಾಯ ಸಂಘದ ಸದಸ್ಯರ ಸಾಲ ಮರುಪಾವತಿ ಹಣವನ್ನು ವೈಯಕ್ತಿಕ ಅಗತ್ಯಕ್ಕೆ ಉಪಯೋಗಿಸಿ ದುರುಪಯೋಗ ಮಾಡಿದ ವಿರುದ್ಧದ ಚೆಕ್ ಅಮಾನ್ಯ ಪ್ರಕರಣದ ಆರೋಪಿ ಬಡಗನ್ನೂರು ಕೆಮನಡ್ಕ ನಿವಾಸಿ, ದ.ಕ. ಜಿಲ್ಲಾ ಸಹಜೀವನ ಒಕ್ಕೂಟದ ಕಾರ್ಯಕರ್ತೆಯಾಗಿದ್ದ ಮಾರ್ಸಲಿನ್ ಡಿ'ಸೋಜಾ ಅವರಿಗೆ ರೂ.16,10,100 ದಂಡ ವಿಧಿಸಿ ಮಂಗಳೂರು ಜೆಎಂಎಫ್‌ಸಿ ಕೋರ್ಟ್ ಆದೇಶಿಸಿದೆ. ದ.ಕ.ಜಿಲ್ಲಾ ಸಹಜೀವನ ಒಕ್ಕೂಟ ಸಿ.ಸಿ.ಡಿ.ಪಿ. ಸಂಸ್ಥೆಯ ಪುತ್ತೂರು ತಾಲೂಕಿನ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿದ್ದ ಮಾರ್ಸಲಿನ್ ಡಿ'ಸೋಜಾ ಅವರು ಪುತ್ತೂರು ಆರ್ಡರ್ ಒಕ್ಕೂಟದ ಸ್ವಸಹಾಯ ಸಂಘಗಳ ಸದಸ್ಯರು ಸಾಲ ಮರುಪಾವತಿ ಮಾಡಿದ ಹಣವನ್ನು ವೈಯಕ್ತಿಕ ಅಗತ್ಯಕ್ಕೆ ಉಪಯೋಗಿಸಿ ದುರುಪಯೋಗ ಮಾಡಿದ್ದರು. ಬಳಿಕ ಇದಕ್ಕೆ ಅವರು ನೀಡಿದ್ದ ಚೆಕ್ ಅಮಾನ್ಯವಾಗಿತ್ತು. ಈ ಬಗ್ಗೆ ಒಕ್ಕೂಟದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು. ಚೆಕ್ ಅಮಾನ್ಯ ಪ್ರಕರಣದ ವಿಚಾರಣೆ ನಡೆಸಿದ ಮಂಗಳೂರು ಜೆಎಂಎಫ್‌ಸಿ ಕೋರ್ಟ್ ಆರೋಪಿಯ ವಿರುದ್ಧ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ಕಲಂ 138ರ ಅಪರಾಧ ಸಾಬೀತಾಗಿದೆ ಎಂದು ತೀರ್ಮಾನಿಸಿ ಆರೋಪಿಗೆ ರೂ.16,10,100 ದಂಡ ವಿಧಿಸಿ ಮೇ 14ರಂದು ತೀರ್ಪು ನೀಡಿದೆ. ಪರಿಹಾರ ಧನ ಪಾವತಿಸಲು ವಿಫಲವಾದಲ್ಲಿ ಆರೋಪಿಗೆ ಆರು ತಿಂಗಳ ಸರಳ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು ಎಂದು ನ್ಯಾಯಾಲಯ ತಿಳಿಸಿದೆ. ಕಾರಾಗೃಹ ಶಿಕ್ಷೆ ಅನುಭವಿಸಿದರೂ ಪರಿಹಾರದ ಪಾವತಿಸುವ ಹೊಣೆಗಾರಿಕೆಯಿಂದ ಆರೋಪಿಗೆ ವಿನಾಯಿತಿ ಇರುವುದಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ದೂರುದಾರರ ಪರವಾಗಿ ಅಡ್ವೊಕೇಟ್ ಸೀಮಾ ರೊಡ್ರಿಗಸ್ ಅವರು ವಾದ ಮಂಡಿಸಿದ್ದರು.

ಮೇ 22: 'ಗಜಾನನ ಕ್ರಿಕೆಟರ್ಸ್' ತುಳು ಸಿನೆಮಾ ತೆರೆಗೆ

ಪುತ್ತೂರು: ಪ್ರಜ್ವಲ್ ಫಿಲಂಸ್ ಲಾಂಛನದಲ್ಲಿ ತಯಾರಾಗುತ್ತಿರುವ ಪ್ರಜ್ವಲ್ ಶೆಟ್ಟಿ ನಿರ್ಮಾಣ ಹಾಗೂ ಕೀರ್ತನ್ ಭಂಡಾರಿ ನಿರ್ದೇಶನದ 'ಗಜಾನನ ಕ್ರಿಕೆಟರ್ಸ್ (ಜಂಟೊಲ್ಟು ಸಿನ್ಸ್ 1983)' ತುಳು ಚಲನಚಿತ್ರವು ಮೇ 22ರಂದು ಕರಾವಳಿಯಾದ್ಯಂತ ತೆರೆಕಾಣಲಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಿತ್ರದ ನಾಯಕ ನಟ ವಿನೀತ್ ಕುಮಾರ್, ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿದ್ದು, ಜೊತೆಗೆ ಹಲವು ಕಡೆ ಪ್ರೀಮಿಯರ್ ಶೋನಲ್ಲಿ ಉತ್ತಮ ಮೆಚ್ಚುಗೆ ಸಿಕ್ಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ತುಳುನಾಡು ಚಿತ್ರರಂಗಕ್ಕೆ ಹೊಸ ಸಂಚಲನ ನೀಡಬಲ್ಲ ಚಿತ್ರವೆಂದು ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದವರು ಹೇಳಿದರು. ಚಿತ್ರದ ತಾರಾಗಣದಲ್ಲಿ ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ಭೋಜರಾಜ್ ವಾಮಂಜೂರು, ದೀಪಕ್ ರೈ ಪಾಣಾಜೆ, ಪ್ರಕಾಶ್ ತುಮಿನಾಡು, ಉಮೇಶ್ ಮಿಜಾರು, ಸಮತಾ ಅಮೀನ್, ಅನ್ವಿತಾ ಸಾಗರ್, ಸರ್ವೋತ್ತಮ ಶೆಟ್ಟಿ ವಾಲ್ಟರ್ ನಂದಳಿಕೆ, ರೂಪಾ ವರ್ಕಾಡಿ, ಲಂಚೊ ಲಾಲ್, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಪುಷ್ಪರಾಜ್ ಬೊಳ್ಳಾರು, ಸಚಿನ್ ಮಾಡ, ಜೇಮ್ಸ್ ಮೆಂಡೋನ್ಸಾ, ಕರಣ್ ಪೂಜಾರಿ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ. ಗೀತ ಸಾಹಿತ್ಯವನ್ನು ನಿರ್ದೇಶಕರಾದ ಕೀರ್ತನ್ ಭಂಡಾರಿ ರಚಿಸಿದ್ದಾರೆ. ಸೃಜನ್ ಕುಮಾರ್ ತೋನ್ಸೆ ಸಂಗೀತ ನೀಡಿದ್ದಾರೆ. ವಿನುತ್ ಕೆ. ಸುವರ್ಣ ಅವರ ಛಾಯಾಗ್ರಹಣ, ಸುಜಯ್ ಶಿವರಾಮ್ ಹಾಗೂ ಕೌಶಿಕ್ ಭಂಡಾರಿ ಸಂಕಲನ, ಸಹ ನಿರ್ಮಾಪಕರಾಗಿ ಸಂತೋಷ್ ಲಾಡ್ ಸಹಕರಿಸಿದ್ದಾರೆ ಎಂದು ತಿಳಿಸಿದರು. ಸಹ ನಿರ್ಮಾಪಕ ರೋಹನ್ ವಾಮಂಜೂರು ಮಾತನಾಡಿ, ಅಂಡರ್ ಆರ್ಮ್ ಕ್ರಿಕೆಟ್ ಮಣ್ಣಿನ ಆಟವನ್ನು ಈ ಚಿತ್ರದಲ್ಲಿ ಪ್ರದರ್ಶಿಸಲಾಗಿದೆ. ಚಿತ್ರದಲ್ಲಿ ಹಾಸ್ಯ, ಪ್ರೇಮಪೂರಿತ ಭಾವನೆಗಳು ಮತ್ತು ಸಮಾಜಮುಖಿ ಸಂದೇಶವಿರುವ ಕತೆ ಒಳಗೊಂಡಿದೆ ಎಂದವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ಮಾಪಕ ಪ್ರಜ್ವಲ್ ಶೆಟ್ಟಿ, ನಾಯಕಿಯಾದ ಅನ್ವಿತಾ, ಸಮತಾ ಅಮೀನ್ ಮತ್ತು ಚಿತ್ರದ ವಿತರಕ ಬಾಲಕೃಷ್ಣ ಶೆಟ್ಟಿ ಕುಕ್ಕಾಡಿ ಉಪಸ್ಥಿತರಿದ್ದರು.

ಪುತ್ತೂರು ವಲಯ ಅರಣ್ಯ ವಿಭಾಗದ ಸಸ್ಯಪಾಲನಾ ಕ್ಷೇತ್ರದಿಂದ ಸಾರ್ವಜನಿಕರಿಗೆ ಸಿಗಲಿದೆ ಗಿಡಗಳು

ಭೂತಾಯಿಯ ಮಡಿಲಲ್ಲಿ ಅರಳಲು ಸಿದ್ಧವಾಗಿದೆ ಸಸ್ಯರಾಶಿ



ಪುತ್ತೂರು: ಮಳೆಗಾಲ ಸಮೀಪಿಸುತ್ತಿದೆ. ವಾಣಿಜ್ಯ ಮೌಲ್ಯಗಳ ವೃಕ್ಷಗಳ, ಹಣ್ಣು ಹಂಪಲುಗಳ ಸಸಿಗಳನ್ನು ನೆಲಕ್ಕೂರಲು ಕಾಲ ಪರಿಪಕ್ವವಾಗಿದೆ. ಇದಕ್ಕೆ ಪೂರಕವಾಗಿ ಕನಕಮಜಲಿನ ಪಂಜಲ್ಲು ಎಂಬಲ್ಲಿರುವ ಪುತ್ತೂರು ವಲಯ ಅರಣ್ಯ ವಿಭಾಗದ ಸಸ್ಯಪಾಲನಾ ಕ್ಷೇತ್ರದಲ್ಲಿ ವೈವಿಧ್ಯಮಯ ಸಸ್ಯರಾಶಿ ಗಳು ಸಾರ್ವಜನಿಕರ ಆಗಮನಕ್ಕಾಗಿ ಕಾದು ಕುಳಿತಿದೆ.

ವೃಕ್ಷಗಳ ಹನನ

ಬೇಸಿಗೆಯ ಸೂರ್ಯನ ಕಿರಣಗಳು ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಬೆಂಕಿ ಕೆಂಡದ ಶಾಖದಂತಿರುತ್ತದೆ. ಎಳೆಯ ಮಕ್ಕಳು, ಮಧ್ಯಮ ವಯಸ್ಕರು, ವಯೋ ವೃದ್ಧರು ಬಿಸಿಲಿನ ಕಡು ತಾಪದಿಂದ ರಕ್ಷಿಸಿಕೊಳ್ಳಲು ಮನೆಯಿಂದ ಹೊರಗಡೆ ಬಾರದಂತಹ ಸ್ಥಿತಿ. ದೊಡ್ಡ ಮರಗಳೆಲ್ಲ ಎಂಬ ಉದ್ಗಾರ ಸರ್ವತ್ರ ಕೇಳಿ ಬರುತ್ತಿದೆ. ಆಧುನಿಕವಸತಿಸಮುಚ್ಚಯ,ವಾಣಿಜ್ಯಸಂಕೀರ್ಣಗಳು ನಿರ್ಮಾಣಗೊಂಡು ಸ್ವಾಭಾವಿಕವಾಗಿ ಬೆಳೆದ ಬೃಹತ್ ಮರಗಳು ನಿರ್ನಾಮಗೊಂಡಿರುವುದನ್ನು ಹಿರಿಯರು ನೆನಪಿಸಿ ಕೊಳ್ಳುತ್ತಾರೆ. ಇರುವ ಬಂಜರು ಭೂಮಿ, ರಸ್ತೆಯ ಅಕ್ಕಪಕ್ಕದಲ್ಲಿ (ವಿದ್ಯುತ್ ತಂತಿಗಳ ತಗುಲದಂತೆ) ಹೊಸ ಗಿಡಗಳನ್ನು ನೆಟ್ಟು ಪೋಷಿಸುವ ಹೊಣೆಗಾರಿಕೆಯ ಅರಿವು ಮೂಡುತ್ತಿದೆ.

ವೈವಿಧ್ಯಮಯ ಸಸ್ಯಗಳು

ಈ ನಿಟ್ಟಿನಲ್ಲಿ ಕರ್ನಾಟಕ ಅರಣ್ಯ ಇಲಾಖೆ ರಾಜ್ಯದೆಲ್ಲೆಡೆ ಕೃಷಿಕರಿಗಾಗಿ, ಪರಿಸರ ಪ್ರಿಯರಿಗಾಗಿ, ಸಾರ್ವಜನಿಕ ಸೇವಾ ಸಂಸ್ಥೆಗಳ ಸದ್ಬಳಕೆಗಾಗಿ 400ರಷ್ಟು 60 ವಿಧಗಳ ಸಸ್ಯಪಾಲನಾ ಕ್ಷೇತ್ರಗಳಲ್ಲಿ ಆರೈಕೆ ಮಾಡುತ್ತಿದ್ದಾರೆ. ಪುತ್ತೂರು ವಲಯ ಅರಣ್ಯ ವಿಭಾಗದ ಸಸ್ಯಪಾಲನಾ ಕ್ಷೇತ್ರವು ಕನಕಮಜಲಿನ ಪಂಜಲ್ಲು ಎಂಬಲ್ಲಿ ನದಿ ತಟದಲ್ಲಿದೆ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯನ್ವಯ ಗಿಡಗಳನ್ನು ಇಲ್ಲಿಂದ ಪೂರೈಸಲಾಗುತ್ತದೆ ಮತ್ತು ಸಾರ್ವಜನಿಕರಿಗೆ ವಿತರಿಸಲಾಗುತ್ತದೆ. ಇಲ್ಲಿ ಸುಮಾರು 9300 ಗಿಡಗಳು ಸಾರ್ವಜನಿಕ ವಿತರಣೆಗಾಗಿ ಲಭ್ಯವಿದೆ ಎಂದು ವಲಯ ಅರಣ್ಯ ಅಧಿಕಾರಿ ಬಿ.ಎಂ. ಕಿರಣ್ ತಿಳಿಸಿದ್ದಾರೆ.

ಪಡೆದುಕೊಳ್ಳುವುದು ಹೇಗೆ?

ಅರಣ್ಯ ಪ್ರೋತ್ಸಾಹ ಯೋಜನೆಯಡಿ ಗಿಡಗಳನ್ನು ಪಡೆದುಕೊಳ್ಳಲು ಅರ್ಜಿದಾರರು ಗಿಡ ನೆಡುವ ಜಮೀನಿನ ಪಹಣಿ ಪತ್ರ, ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ಯಥಾಪ್ರತಿ, ಭಾವಚಿತ್ರ ನೀಡಬೇಕಾಗುತ್ತದೆ. ಒಂದು ಹೆಕ್ಟೇರ್ ಜಮೀನಿಗೆ 400 ಗಿಡಗಳಂತೆ ಸಾರ್ವಜನಿಕರಿಗೆ ನೀಡಲಾಗುವುದು. ಇದಕ್ಕೆ ಕೃಷಿಕರಿಗೆ ಪ್ರಥಮ ವರ್ಷ ರೂ.35, ದ್ವಿತೀಯ ವರ್ಷ ರೂ.40 ಮತ್ತು ತೃತೀಯ ವರ್ಷ ರೂ.50ರಂತೆ ಸಹಾಯಧನ ದೊರಕುತ್ತದೆ. ಸಸ್ಯಪಾಲನಾ ಕ್ಷೇತ್ರ ಉಸ್ತುವಾರಿ ಕೆ. ಅಣ್ಣು ಅವರ ಆರೈಕೆಯಲ್ಲಿ ಸಸ್ಯರಾಶಿಗಳು ಕಂಗೊಳಿಸುತ್ತಿವೆ.

ತಾಪಮಾನ ನಿಯಂತ್ರಿಸಿ

ಶಾಲಾ ಕಾಲೇಜ್, ದೇವಾಲಯ, ದೈವಸ್ಥಾನಗಳು, ಚರ್ಚ್, ಮಸೀದಿಗಳ ಬಳಿಯಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ತಾಪಮಾನ ಏರಿಕೆಯನ್ನು ತಡೆಯಬಹುದು. ಮಳೆಗಾಲದ ಮುಂಚಿತವಾಗಿ 2x2x2 ಅಡಿ ಗುಂಡಿ ತೋಡಿ ಗಿಡಗಳನ್ನು ನೆಡಲು ತಯಾರಿ ಮಾಡಬಹುದು.

● **ಸುಬ್ಬಯ್ಯ ನ್ಯಾಕ್,** ಸಹಾಯಕ ಅರಣ್ಯಾಧಿಕಾರಿ

ಕನಿಷ್ಠ ಬೆಲೆಗೆ ಗಿಡಗಳು

ಸಾಗುವಾನಿ, ಕಹಿಬೇವು, ಮಹಾಗನಿ, ರಂಬೂಟಾನ್, ರಕ್ತಚಂದನ, ಶ್ರೀಗಂಧ, ನಾಗಸಂಪಿಗೆ, ನೇರಳೆ, ಪುನರ್ಪುಳಿ, ರಾಂಪತ್ರೆ, ಕಾಯಿಧೂಪ, ಮಾವು, ಹಾಲ್ಮಡ್ಡಿ, ಬಾದಾಮ್, ರೆಂಜ, ಜಂಬು ನೇರಳೆ, ಕಾಂತಿ, ಹಲಸು ಗಿಡಗಳು ಸಾರ್ವಜನಿಕರಿಗೆ ಲಭ್ಯವಿದ್ದು, ಕನಿಷ್ಠ ಬೆಲೆ ಪಾವತಿಸಿ ಗಿಡಗಳನ್ನು ಪಡೆದುಕೊಳ್ಳಬಹುದು.

● **ರಂಜಿತಾ,** ಉಪವಲಯ ಅರಣ್ಯಾಧಿಕಾರಿ

ಸಂತಾನ ಹರಣ ಚಿಕಿತ್ಸೆಗಾಗಿ ಬೀದಿ ನಾಯಿಗಳ ಸೆರೆ: ಕೃಷ್ಣಪ್ರಸಾದ್ ಮಾಹಿತಿ



ಸೋಮವಾರಪೇಟೆ: ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆಗಾಗಿ ನಾಯಿಗಳನ್ನು ಹಿಡಿಯಲಾಗುತ್ತಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಮನವಿ ಮಾಡಿದ್ದಾರೆ.

ಇಲ್ಲಿನ ಪಟ್ಟಣ ಪಂಚಾಯತ್ ವತಿಯಿಂದ ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕಾರ್ಯಕ್ಕೆ ಪಶುವೈದ್ಯ ಆಸ್ಪತ್ರೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶಸ್ತ್ರಚಿಕಿತ್ಸಾ ಕೊಠಡಿಗೆ ಪೂಜೆ ನೆರವೇರಿಸಿ ಮಾಹಿತಿ ನೀಡಿದರು.

ದೇಶದ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬೀದಿ ನಾಯಿ ಗಳನ್ನು ಹಿಡಿದು ಅವುಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿ ಆರೈಕೆ ನಂತರ ಬಿಡುಗಡೆ ಮಾಡಲಾಗುವುದು ಎಂದ ಅವರು, ಸಾರ್ವಜನಿಕರು ಯಾವುದೇ ಅಪಪ್ರಚಾರ ಅಥವಾ ಗೊಂದಲಕ್ಕೆ ಒಳಗಾಗದೆ ನಾಯಿಹಾವಳಿ ತಪ್ಪಿಸುವ ಈ ಯೋಜನೆಗೆ ಸಹಕರಿಸಬೇಕು ಎಂದು ತಿಳಿಸಿದರು.

ವೈದ್ಯೋಪಚಾರ ನಂತರ ಬಿಡುಗಡೆ

ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜ್ ದೊಡ್ಡಮನಿ ಮಾತನಾಡಿ, ಬೀದಿ ನಾಯಿಗಳ ಹಾವಳಿ ಹಾಗೂ ಅವುಗಳ ಸಾವು ತಪ್ಪಿಸುವ ಸಲುವಾಗಿ ಸರ್ಕಾರ ಯೋಜನೆ ರೂಪಿಸಿದ್ದು, ಆದರಂತೆ ಎನ್.ಜಿ.ಒಗಳ ಮೂಲಕ ನಾಯಿಗಳನ್ನು ಹಿಡಿದು ಅವುಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು ಗಂಡು ನಾಯಿಗಳಿಗೆ 3 ದಿನ, ಹೆಣ್ಣು ನಾಯಿಗಳಿಗೆ 5 ದಿನಗಳ ವೈದ್ಯೋಪಚಾರದ ನಂತರ ಬಿಡುಗಡೆಗೊಳಿಸಲಾಗುವುದು ಎಂದರು.

ಇದೇ ಸಂದರ್ಭ ಮನೆಗಳಲ್ಲಿ ಸಾಕು ನಾಯಿಗಳಿದ್ದವರು ಕೂಡ ನಾಯಿಗಳಿಗೆ ಶಸ್ತ್ರ ಚಿಕಿತ್ಸೆ ಹಾಗೂ ರೇಬಿಸ್ ಲಸಿಕೆ ಯನ್ನು ಉಚಿತವಾಗಿ ಹಾಕಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭ ಪಟ್ಟಣ ಪಂಚಾಯತ್ ಅಭಿಯಂತರ ಹೇಮಂತ್ ಕುಮಾರ್, ಆರೋಗ್ಯ ನಿರೀಕ್ಷಕ ಜಾಸಿಂ ಖಾನ್, ದಫೇದಾರ ಆದಿಲ್ ಹಾಗೂ ಮುಂತಾದವರು ಹಾಜರಿದ್ದರು.

ಸುಬ್ರಹ್ಮಣ್ಯ ಪ್ರೌಢ ಶಾಲೆ: ಸ್ನೇಹ ಸಂಭ್ರಮ, ಜ್ಞಾನದೀಪ ವಿದ್ಯಾರ್ಥಿ ಸಂಘ ಉದ್ಘಾಟನೆ



ಸುಬ್ರಹ್ಮಣ್ಯ: ಜ್ಞಾನ ನೀಡಿದ ವಿದ್ಯಾ ಸಂಸ್ಥೆಯ ಬಗ್ಗೆ ಅಪಾರ ಅಭಿಮಾನ ಮತ್ತು ಪ್ರೀತಿ ಬೆಳೆಸಿಕೊಳ್ಳುವುದು ಅತ್ಯಗತ್ಯ. ಬದುಕಿಗೆ ವಿದ್ಯೆಯ ಮೂಲಕ ಅರ್ಥ ಕಲ್ಪಿಸಿಕೊಟ್ಟ ಸಂಸ್ಥೆಯಲ್ಲಿ 2 ದಶಕಗಳ ಬಳಿಕ ಒಟ್ಟಿಗೆ ಸೇರುವುದು ಐತಿಹಾಸಿಕ ಕ್ಷಣ. ಭವಿಷ್ಯ ರೂಪಿಸಿದ ಸಂಸ್ಥೆ ಗುರುಗಳ ಆಶೀರ್ವಾದ ಪಡೆಯುವುದು ಮುಂದಿನ ಜೀವನದ ಚಿನತ್ಯಕ್ಕೆ ಪೂರಕವಾಗುತ್ತದೆ ಎಂದು ಎಸ್.ಎಸ್.ಪಿ.ಯು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್ ಹೇಳಿದರು.

ಎಸ್‌ಎಸ್‌ಪಿ ಪಿಯು ಕಾಲೇಜಿನ ಪ್ರೌಢ ಶಾಲಾ ವಿಭಾಗದ 2005ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ 20 ವರ್ಷಗಳ ಬಳಿಕ ಆಯೋಜಿಸಲಾದ ಸ್ನೇಹ ಸಂಭ್ರಮ ಹಾಗೂ ಶ್ರೀ ಜ್ಞಾನದೀಪ ವಿದ್ಯಾರ್ಥಿ ಸಂಘ ಉದ್ಘಾಟಿಸಿ, ಮಾತನಾಡಿದರು.

ಪ್ರೌಢ ಶಾಲಾ ವಿಭಾಗದ ಮುಖ್ಯ ಗುರು ನಂದಾ ಹರೀಶ್ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಮುಖ್ಯ ಗುರು ಕೆ. ಯಶವಂತ ರೈ, ಹಿರಿಯ ಸಹ ಶಿಕ್ಷಕ ಎಂ. ಕೃಷ್ಣ ಭಟ್, ದೈಹಿಕ ಶಿಕ್ಷಣ ಶಿಕ್ಷಕಿ ಸ್ಮಿತಾ, ದೈಹಿಕ ಶಿಕ್ಷಣ ಉಪನ್ಯಾಸಕ ರಾಧಾಕೃಷ್ಣ ಚಿದ್ಗಲ್, ನಿವೃತ್ತ ಉಪನ್ಯಾಸಕ ಎ. ಮೋಹನ ಗೌಡ, ಚಿತ್ರಕಲಾ ಶಿಕ್ಷಕ ನಾರಾಯಣ, ನಿವೃತ್ತ ಶಿಕ್ಷಕ ರಘು ಬಿಜೂರು, ಸುಪ್ರೀಯ, ನಿವೃತ್ತ ಬೋಧಕೇತರ ಸಿಬ್ಬಂದಿ ರವಿರಾಮ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಜೇಶ್ ಎನ್.ಎಸ್., ಸಂಘಟಕ ಮುರಳಿ ವೇದಿಕೆಯಲ್ಲಿದ್ದರು.

ಗುರು ವಂದನೆ

ಈ ಸಂದರ್ಭ 2005ನೇ ಅವಧಿಯಲ್ಲಿ ಸೇವೆ ಸಲ್ಲಿಸಿದ್ದ ಶಿಕ್ಷಕರಿಗೆ ಗುರುವಂದನೆ ಸಲ್ಲಿಸಿ, ಬೋಧಕೇತರ ಸಿಬ್ಬಂದಿಯನ್ನು ಗೌರವಿಸ ಲಾಯಿತು. 2025-26ನೇ ಸಾಲಿನ ಎಸ್ಎಸ್ ಎಲ್‌ಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ 17 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅತ್ಯಧಿಕ ಅಂಕ ಗಳಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಿಸಲಾಯಿತು. ಶಾಲೆಗೆ ಕೃತಜ್ಞತಾ ಕಾಣಿಕೆಯಾಗಿ ಎರಡು ಜತೆ ಮರದ ಮೇಜು ಹಾಗೂ ಕುರ್ಚಿಗಳನ್ನು ಹಸ್ತಾಂತರಿಸಲಾಯಿತು.



ಬಂಟ್ವಾಳ ತಾಲೂಕಿನ ಮೂರ್ಜೆ - ಕುದ್ಕೋಳಿ ರಸ್ತೆಯಲ್ಲಿ ಸರಕು ತುಂಬಿದ ಘನ ವಾಹನಗಳ ವಿಪರೀತ ಸಂಚಾರದಿಂದ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ದ್ವಿಚಕ್ರ ಸವಾರರು ದಿನನಿತ್ಯವೂ ಪರದಾಟ ನಡೆಸುವಂತಾಗಿದೆ. ಶಾಲಾ ವಿದ್ಯಾರ್ಥಿಗಳು ಮತ್ತು ಪಾದಚಾರಿಗಳು ನಡೆದಾಡಲು ಸಂಕಷ್ಟ ಪಡುವಂತಾಗಿದೆ.ಈ ನಿಟ್ಟಿನಲ್ಲಿ ನಾಗರಿಕ ಹಿತರಕ್ಷಣಾ ಸಮಿತಿ ಪುಂಜಾಲಕಟ್ಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದು ಕ್ರಮದ ಭರವಸೆ ನೀಡಿದ್ದಾರೆ.



ಕಾಸರಗೋಡು ಸಮೀಪದ ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಬ್ರಹ್ಮಕಲಶದ ಪ್ರಯುಕ್ತ ಹರಿದಾಸ ಜಯಾನಂದ ಕುಮಾರ್ ಹೊಸದುರ್ಗ ಅವರಿಂದ ಭಕ್ತಿ ಭಜನ್ ಜರಗಿತು.



ಕಾಸರಗೋಡು ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್‌ನ ಆಶ್ರಯದಲ್ಲಿ ಪ್ರತಿಷ್ಠಿತ ಕೆಸಿಎ ಕ್ರೀಡಾಂಗಣದಲ್ಲಿ ನಡೆದ ಸೀಸನ್ ಜಿಲ್ಲಾ ಲೀಗ್ ಎ ಡಿವಿಷನ್ ಫೈನಲ್ ಪಂದ್ಯಾಟದಲ್ಲಿ ಸ್ಪೋರ್ಟಿಂಗ್ ಚಟ್ಟಂಚಾಲ್ ಚಾಂಪಿಯನ್ ಶಿಪ್ ಪಡೆದಿದೆ. ವಿಜೇತ ತಂಡಗಳಿಗೆ ವಿವಿಧ ವಲಯಗಳ ಪ್ರಮುಖರು ಬಹುಮಾನಗಳನ್ನು ವಿತರಿಸಿ ಶುಭಹಾರೈಸಿದರು.

ವಿಕ್ರಂ ಟ್ರೋಫಿ ಕ್ರಿಕೆಟ್ ಪಂದ್ಯಾಟ: ಬಾಕಾ ಕೆಆರ್‌ಎಸ್‌ಎ ತಂಡ ಪ್ರಥಮ



ಬೈಂದೂರು: ಪ್ರತಿಭೆಗಳು ಎಳವೆಯಿಂದಲೇ ಉತ್ತಮ ತರಬೇತಿಯೊಂದಿಗೆ ಶಿಸ್ತನ್ನು ಮೈಗೂಡಿಸಿ ಕೊಂಡು ಕಠಿಣ ಪರಿಶ್ರಮಪಟ್ಟು ಅಭ್ಯಾಸ ಮಾಡಿದಾಗ ಯಶಸ್ಸು ಸಾಧ್ಯ ಎಂದು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ಹೇಳಿದರು.

ಇಲ್ಲಿನ ಗಾಂಧಿ ಮೈದಾನದಲ್ಲಿ ವಿಕ್ರಂ ಕ್ರಿಕೆಟ್ ಕ್ಲಬ್ ಆಶ್ರಯದಲ್ಲಿ ಉಡುಪಿ ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್ ಸಹಭಾಗಿತ್ವದೊಂದಿಗೆ ಉಡುಪಿ ಜಿಲ್ಲಾ ಇಂಟರ್ ಕ್ಯಾಂಪಸ್ ಅಕಾಡೆಮಿ ಆಟಗಾರರ ಅಂಡರ್ 23 ಲೆದರ್ ಬಾಲ್ ಟಿ20 ನಾಕೌಟ್ ಮಾದರಿಯ ಕ್ರಿಕೆಟ್ ಪಂದ್ಯಾಟ ವಿಕ್ರಂ ಟ್ರೋಫಿ-2026 ಇದರ ಸಮಾರೋಪದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ ವಿತರಿಸಿ ಮಾತನಾಡಿದರು.

ವಿಕ್ರಂ ಕ್ರಿಕೆಟ್ ಕ್ಲಬ್ ಗೌರವಾಧ್ಯಕ್ಷ ನಾಗರಾಜ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸೇನೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಿರೀಶ್ ಬೈಂದೂರು, ಏರೋಮ್ಯಾಕ್ಸ್ ಇಂಡಿಯಾ ಚೇರ್‌ಮನ್, ಸಿಇಓ ಕರ್ನೋಲಿಯಸ್ ಪ್ರಸಾದ್, ಉಪನ್ಯಾಸಕ ಹಾಗೂ ಕ್ರಿಕೆಟ್ ತರಬೇತುದಾರ ವಿಜಯ್ ಆಳ್ವಾ ಹಿರಿಯ ಕ್ರಿಕೆಟ್ ಆಟಗಾರ ಉದಯ ಕಟಪಾಡಿ, ಉಡುಪಿ ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್ ಕಾರ್ಯದರ್ಶಿ ರೆನ್ ಟ್ರೆವರ್ ಡಯಾಸ್ ಇದ್ದರು. ವಿಕ್ರಂ ಕ್ರಿಕೆಟ್ ಕ್ಲಬ್ ಅಧ್ಯಕ್ಷ ದಿನೇಶ್ ಗಾಣಿಗ ಸ್ವಾಗತಿಸಿದರು. ಶಿಕ್ಷಕ ಸುಬ್ರಹ್ಮಣ್ಯ ಜಿ. ಉಪ್ಪುಂದ ನಿರೂಪಿಸಿದರು. ಎರಡು ದಿನಗಳ ಕಾಲ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಜಿಲ್ಲೆಯ ಐದು ತಂಡಗಳು ಭಾಗವಹಿಸಿದ್ದವು. ಬಾಕಾ ಕೆಆರ್ ಎಸ್‌ಎ ಪ್ರಥಮ ಸ್ಥಾನ ಹಾಗೂ ನೇತಾಜಿ ಸ್ಪೋರ್ಟ್ಸ್ ಕ್ಲಬ್ ದ್ವಿತೀಯ ಸ್ಥಾನ ಗಳಿಸಿತು.

ವರ್ಣ ಕುಟೀರ: ಮೇ 23ರಿಂದ ಗಾಂಧಾರಿ ವಿದ್ಯೆಯ 3ನೇ ತಂಡ ಆರಂಭ



ಪುತ್ತೂರು: ನಗರದ ವರ್ಣ ಕುಟೀರ ಕಲಾ ಶಿಕ್ಷಣ ಸಂಸ್ಥೆಯು 25ನೇ ವರ್ಷದ ಸಂಭ್ರಮದೊಂದಿಗೆ ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿದೆ. ಈಗಾಗಲೇ ಮಕ್ಕಳ ಬೆಳವಣಿಗೆಗೆ ಪೂರಕವಾಗಿ ಗಾಂಧಾರಿ ವಿದ್ಯೆಯ ಎರಡು ತಂಡಗಳು ಮುಗಿದಿದ್ದು, ಮೇ 23ರಿಂದ 3ನೇ ತಂಡ ಆರಂಭಗೊಳ್ಳಲಿದೆ ಎಂದು ವರ್ಣ ಕುಟೀರ ಕಲಾ ಶಿಕ್ಷಣ ಸಂಸ್ಥೆಯ ಸಂಚಾಲಕ ಪ್ರವೀಣ್ ವರ್ಣ ಕುಟೀರ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರಕಲೆ, ಸುಗಮ ಸಂಗೀತ, ಕರೋಕೆಯೊಂದಿಗೆ ಹಾಡುವ ತರಬೇತಿ, ಕೊಳಲು, ಕೀ ಬೋರ್ಡ್ ಮತ್ತು ರಂಗಶಿಕ್ಷಣ ತರಬೇತಿಯ ಸಂಸ್ಥೆಯಾಗಿರುವ ವರ್ಣಕುಟೀರದಲ್ಲಿ ಈಗಾಗಲೇ ಗಾಂಧಾರಿ ವಿದ್ಯೆಯ ಮೂಲಕ ಮಕ್ಕಳು ಎಲ್ಲಾ ವಿಷಯದಲ್ಲಿ ಸಾಧಕರಾಗುತ್ತಿದ್ದಾರೆ. ಮಕ್ಕಳ ಸಾಧನೆಗೆ ವರ್ಣಕುಟೀರ ಸಂಸ್ಥೆ ಸದಾ ಸಿದ್ಧವಾಗಿದೆ ಎಂದರು. ನಾವು ಭಾರತೀಯ ಪರಂಪರೆಯ ಶಕ್ತಿಯನ್ನು ಮಕ್ಕಳಿಗೆ ನೀಡುತ್ತಿದ್ದೇವೆ. ಇದರಿಂದ ಮಕ್ಕಳಲ್ಲಿ ಮೊಬೈಲ್ ಗೀಳು, ಕೆಟ್ಟ ಚಟಗಳಿಗೆ ಭಾಗಿಯಾಗುವುದೂ ತಪ್ಪುತ್ತದೆ ಎಂದರು. ಗಾಂಧಾರಿ ವಿದ್ಯೆಯ 3ನೇ ಬ್ಯಾಚ್ ಮೇ 23ರಿಂದ ಮೇ 30 ರ ತನಕ ನಡೆಯಲಿದೆ. ಪ್ರತಿ ದಿನ ಸಂಜೆ ಗಂಟೆ 5ರಿಂದ 6.30ರ ತನಕ ನಡೆಯಲಿದ್ದು ಆಸಕ್ತರು ಸಂಪರ್ಕಿಸುವಂತೆ ತಿಳಿಸಿದರು.

ಗಾಂಧಾರಿ ವಿದ್ಯೆ ಶಿಬಿರದಿಂದ ಮಕ್ಕಳು ತಾವು ಕಲಿತ ವಿದ್ಯೆಯನ್ನು ಸುದ್ದಿಗೋಷ್ಠಿಯಲ್ಲಿ ಪ್ರದರ್ಶನ ಮಾಡಿದರು. ಕಣ್ಣಿಗೆ ಬಟ್ಟೆ ಕಟ್ಟಿ ಬಣ್ಣ, ಸಂಖ್ಯೆಯನ್ನು ಹೇಳುವ ಮತ್ತು ಬರೆಯುವ ಕಲೆಯನ್ನು ಪ್ರದರ್ಶಿಸಿದರು.

ಸುದ್ದಿಗೋಷ್ಠಿಯಲ್ಲಿ ವರ್ಣಕುಟೀರ ಕಲಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಗೀತಾಲಕ್ಷ್ಮೀ ಕೆದಿಮಾರು, ಶಿಬಿರಾರ್ಥಿಗಳಾದ ಅಂಶಿ, ವಿಷ್ಮಾ, ಭುವಿಕಾ, ಗಿರಿವಿಹಾರಿ, ಸಾನ್ವಿಕಾ, ಸೋಹನ್ ಮತ್ತು ಮಕ್ಕಳ ಪೋಷಕರು ಉಪಸ್ಥಿತರಿದ್ದರು.



ಮಂಗಳೂರು ನಗರದ ವಿ.ಟಿ ರಸ್ತೆಯಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ ಅಧಿಕ ಮಾಸದ ಎಲ್ಲಾ ದಿನಗಳಲ್ಲಿ ನಡೆಯಲಿರುವ ಸಾಮೂಹಿಕ ಸಂಪೂರ್ಣ ಶ್ರೀಮದ್ ಭಗವದ್ಗೀತಾ ಪಠಣದ ಪ್ರಾರಂಭೋತ್ಸವಕ್ಕೆ ಭಾನುವಾರ ಡಾ. ಪಂಡಿತ್ ನರಸಿಂಹ ಆಚಾರ್ಯ ಚಾಲನೆ ನೀಡಿದರು. ವೇದಮೂರ್ತಿ ವಿಠಲ್ ಭಟ್, ವೇದಮೂರ್ತಿ ಎಚ್. ಕೃಷ್ಣಾನಂದ ಭಟ್, ಆಡಳಿತ ಮಂಡಳಿಯ ಕುಡ್ಪಿ ಜಗದೀಶ್ ಶೆಣೈ, ಮಹೇಶ್ ಪ್ರಭು , ನರೇಶ್ ಆರ್ ಕಿಣಿ, ರಾಮ್ ಮೋಹನ್ ಹೆಗ್ಡೆ ಅಭಿಯಾನದ ಸಂಚಾಲಕಿ ಪುಷ್ಪಾ ಪ್ರಭು ರಾಧಿಕಾ ಕೆ. ಭಟ್ ಭಕ್ತಾದಿಗಳು ಉಪಸ್ಥಿತರಿದ್ದರು.

ಮೇ 21: ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಕಂಕನಾಡಿ ಬೈಪಾಸ್ ರಸ್ತೆ, ಕಲ್ಪನಾ ರಸ್ತೆ, ಬೆಂದರೂವೆಲ್, ವಾಸ್‌ಲೇನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 21ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಸುಬ್ರಹ್ಮಣ್ಯ ಐನೆಕಿದು ಸೇವಾ ಸಹಕಾರಿ ಸಂಘದ ಸದಸ್ಯರ ಮಕ್ಕಳಿಗೆ ನೆರವು

ಪ್ರೋತ್ಸಾಹ ಮತ್ತಷ್ಟು ಸಾಧನೆಗೆ ಸ್ಫೂರ್ತಿ: ವಿಶ್ವನಾಥ



ಸುಬ್ರಹ್ಮಣ್ಯ: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದರಿಂದ ಅವರಿಗೆ ಮತ್ತಷ್ಟು ಸಾಧನೆ ಮೆರೆಯಲು ಪ್ರೋತ್ಸಾಹ ದೊರಕುತ್ತದೆ ಎಂದು ನಿವೃತ್ತ ಉಪನ್ಯಾಸಕ ವಿಶ್ವನಾಥ ನಡುತೋಟ ಹೇಳಿದರು.

ಸುಬ್ರಹ್ಮಣ್ಯದ ಹೊಸ ಬೆಳಕು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಸಹಾಯಧನ ಹಸ್ತಾಂತರ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಸುಬ್ರಹ್ಮಣ್ಯ ಐನೆಕಿದು ಸೇವಾ ಸಹಕಾರಿ ಸಂಘದ ಸದಸ್ಯರ ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯಧನ ಹಸ್ತಾಂತರಿಸಲಾಯಿತು.

ಎಸ್ಸೆಸ್ಸೆಲ್ಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಾದ ಪ್ರೀತಿಕಾ, ಚಿರಂತನ್, ಅಕ್ಷಯ್, ಸಿಂಚನ, ಶ್ರೇಯ, ನಮನ ಆಚಾರ್ಯ, ಸಾನ್ವಿ ಭೂಮಿಕ ಸಹಾಯಧನ ಪಡೆದರು. ಸುಬ್ರಹ್ಮಣ್ಯ ಐನೆಕಿದು ಸೇವಾ ಸಹಕಾರಿ ಸಂಘದ ಅಧ್ಯಕ್ಷ ವೆಂಕಟೇಶ ಎಚ್.ಎಲ್. ಅಧ್ಯಕ್ಷತೆ ವಹಿಸಿದ್ದರು. ಹೊಸ ಬೆಳಕು ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಡಾ. ತಿಲಕ್ ಎ.ಎ. ಕಾರ್ಯಕ್ರಮ ಉದ್ಘಾಟಿಸಿದರು. ಟ್ರಸ್ಟ್‌ನ ನಿರ್ದೇಶಕಿ ಗಾಯತ್ರಿ ತಿಲಕ್, ಸಹಕಾರಿ ಸಂಘದ ಮಾಜಿ ಅಧ್ಯಕ್ಷರಾದ ರವೀಂದ್ರ ಕುಮಾರ್ ರುದ್ರಪಾದ, ಜಯಪ್ರಕಾಶ್ ಕೂಜುಗೋಡು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಕೆ.ಎಸ್. ಕಟ್ಟೆಮನೆ ವೇದಿಕೆಯಲ್ಲಿದ್ದರು.

ಕಡಬ ಶ್ರೀ ದುರ್ಗಾಂಬಿಕಾ ಅಮ್ಮನವರ ಕ್ಷೇತ್ರದ ಪ್ರತಿಷ್ಠಾ ವಾರ್ಷಿಕೋತ್ಸವ

ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನ



ಕಡಬ: ಇಲ್ಲಿನ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ 15ನೇ ವರ್ಷದ ಪ್ರತಿಷ್ಠಾ ವಾರ್ಷಿ ಕೋತ್ಸವ, ಚಂಡಿಕಾ ಯಾಗವು ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ನೆರವೇರಿತು.

ಬೆಳಗ್ಗೆ ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಮಹಾಗಣಪತಿ ಹೋಮ, ಪಂಚ ವಿಶಂತಿ ಕಲಶ ಪೂಜೆ, ಪೂರ್ವಾಹ್ನ 11ಕ್ಕೆ ಚಂಡಿಕಾ ಯಾಗ ಪೂರ್ಣಾಹುತಿ ನಡೆಯಿತು. ಬಳಿಕ ಸುಹಾಸಿನೀ ಪೂಜೆ, ಶ್ರೀ ದೇವರಿಗೆ ಕಲಶಾಭಿಷೇಕ, ಮಧ್ಯಾಹ್ನ ಗಂಟೆ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಶ್ರೀ ದೇವರಿಗೆ ರಂಗಪೂಜೆ ನಡೆಯಿತು. ಪ್ರಧಾನ ಅರ್ಚಕ ಗೋಪಾಲಕೃಷ್ಣ ಕೆದಿಲಾಯ ಅವರು ವೈದಿಕ ವಿಧಿ ಗಳಲ್ಲಿ ಸಹಕರಿಸಿದರು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಕರ್ಕೇರ, ಮಾಜಿ ಅಧ್ಯಕ್ಷ ಜನಾರ್ದನ ಗೌಡ ಪಣೆಮಜಲು, ಭಜನಾ ಮಂಡಳಿಯ ಅಧ್ಯಕ್ಷ ಸೋಮಪ್ಪ ನ್ಯಾಕ್ ಕಡಬ, ವ್ಯವಸ್ಥಾಪನಾ ಸಮಿತಿಯ ಕಾರ್ಯದರ್ಶಿ ಗೀತಾ ಲೋಕೇಶ್, ಸದಸ್ಯರಾದ ಶೀನ ನಾಯ್ಕ ಕಮಲ ಪಣೆಮಜಲು, ಸದಾನಂದ ಗೌಡ ಸಾಂತ್ಯಡ್ಕ ರಾಮಚಂದ್ರ ಗೌಡ, ಪ್ರಮುಖರಾದ ಕೃಷ್ಣ ಶೆಟ್ಟಿ ಕಡಬ, ಬಾಲಕೃಷ್ಣ ಬಳ್ಳೇರಿ, ಪುಲಸ್ತ್ಯ ರೈ, ದಯಾನಂದ ಗೌಡ ಆರಿಗ, ಶ್ರೀಕೃಷ್ಣ ಎಂ.ಆರ್., ವಿಶ್ವನಾಥ ರೈ ಪೆರ್ಲ, ಜಿನ್ನಪ್ಪ ಸಾಲಿಯಾನ್, ಪಿ.ವೈ. ಕುಸುಮ, ಶಿವಪ್ರಸಾದ್ ರೈ ಮೈಲೇರಿ, ಅಶೋಕ್ ಕುಮಾರ್ ಪಿ., ಅಶೋಕ್ ಆಳ್ವ ಬೆದ್ರಾಜೆ, ಸೀತಾರಾಮ ಗೌಡ ಎ. ಮತ್ತಿತರರಿದ್ದರು.

ಸುತ್ತಮುತ್ತ

ಇಂದು, ನಾಳೆ ಪ್ರತಿಷ್ಠಾ ಕಲಶಾಭಿಷೇಕ

ಪೆರ್ಲ: ಪೆರ್ಲಬೀಡು ಕುಟುಂಬ ಮನೆಯ ನೂತನ ಗೃಹಪ್ರವೇಶ ಮತ್ತು ದೈವಗಳ ಬಿಂಬ ಪ್ರತಿಷ್ಠಾ ಕಲಶಾಭಿಷೇಕವು ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿ ಮತ್ತು ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರು ನೇತೃತ್ವದಲ್ಲಿ ಮೇ 20 ಮತ್ತು 21ರಂದು ವಿವಿಧ ವೈದಿಕ, ತಾಂತ್ರಿಕ, ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಮೇ 20 ರಂದು ಸಂಜೆ ತಂತ್ರಿಗಳ ಆಗಮನ, ರಾತ್ರಿ 7ರಿಂದ ವಿವಿಧ ವೈದಿಕ ಕಾರ್ಯಕ್ರಮ, ಮೇ 21 ರಂದು ಬೆಳಗ್ಗೆ 6ಕ್ಕೆ ಗಣಪತಿ ಹೋಮ, ಬ್ರಹ್ಮಕಲಶ ಪೂಜೆ, 7.47ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಗೃಹಪ್ರವೇಶ, 10.28ರ ಕರ್ಕಾಟಕ ಲಗ್ನದಲ್ಲಿ ದೈವಗಳ ಬಿಂಬ ಪ್ರತಿಷ್ಠೆ ಕಲಶಾಭಿಷೇಕ, ಮಹಾಪೂಜೆ, ನಿತ್ಯನೈಮಿತ್ತಿಕ ನಿರ್ಣಯ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ಹಾಗೂ ಅಪರಾಹ್ನ 2 ರಿಂದ ಯಕ್ಷಗಾನ ನಡೆಯಲಿದೆ.

ಮೇ 25ರಂದು ಸಂದರ್ಶನ

ಕುಂಬಳೆ: ಸೂರಂಬೈಲು ಸರಕಾರಿ ಪ್ರೌಢಶಾಲೆಯಲ್ಲಿ ಖಾಲಿಯಿರುವ ಎಚ್‌ಎಸ್‌ಟಿ ಗಣಿತ (ಮಲೆಯಾಳ ಮಾಧ್ಯಮ), ಎಚ್‌ಎಸ್‌ಟಿ ಸಂಸ್ಕೃತ, ಎಚ್‌ಎಸ್‌ಟಿ ಫಿಸಿಕಲ್ ಸಯನ್ಸ್ (ಮಲೆಯಾಳ ಮಾಧ್ಯಮ), ಯುಪಿಎಸ್‌ಟಿ (ಮಲೆಯಾಳ ಮಾಧ್ಯಮ), ಯುಪಿಎಸ್‌ಟಿ (ಕನ್ನಡ ಮಾಧ್ಯಮ), ಎಲ್‌ಪಿಎಸ್‌ಟಿ (ಮಲೆಯಾಳ ಮಾಧ್ಯಮ), ಅರೇಬಿಕ್ ಜೂನಿಯರ್ ಲೇಂಗ್ವೇಜ್ ಟೀಚರ್ ಹುದ್ದೆಗಳಿಗೆ ದಿನವೇತನ ಆಧಾರದಲ್ಲಿ ನೇಮಕಾತಿಗಾಗಿ ಸಂದರ್ಶನ ಮೇ 25ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅಸಲಿ ದಾಖಲೆಪತ್ರಗಳೊಂದಿಗೆ ಹಾಜರಾಗಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9495094859, 8921073496

ಮೇ 26: ಮಾನಸಿಕ ಆರೋಗ್ಯ ತಜ್ಞರ ಸೇವೆ

ಕಾಸರಗೋಡು: ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿರುವ ಮಹಿಳಾ ರಕ್ಷಣಾ ಕಚೇರಿಯಲ್ಲಿ ಮೇ 26 ರಂದು ಉಚಿತ ಮಾನಸಿಕ ಆರೋಗ್ಯ ತಜ್ಞರ ಸೇವೆ ಲಭ್ಯವಿದೆ. ಸೇವೆಯ ಅಗತ್ಯವಿರುವವರು ಮೇ 25 ರೊಳಗೆ 8281999065 ಅಥವಾ 9847000302 ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ನಾಳೆ, ಮೇ 25ರಂದು ವಾಹನ ತಪಾಸಣೆ

ಕಾಸರಗೋಡು: 2026-27ನೇ ಶೈಕ್ಷಣಿಕ ವರ್ಷದ ಶಾಲಾ ವಾಹನಗಳ ತಪಾಸಣೆಯು ಮೇ 21 ಮತ್ತು 25 ರಂದು (ಮೇ 21ರಂದು 1ರಿಂದ 5000 ವರೆಗಿನ ನೋಂದಣಿ ಸಂಖ್ಯೆಗಳನ್ನು ಹೊಂದಿರುವ ವಾಹನಗಳು ಮತ್ತು ಮೇ 25 ರಂದು 5001 ರಿಂದ 9999 ವರೆಗಿನ ಸಂಖ್ಯೆಗಳನ್ನು ಹೊಂದಿರುವ ವಾಹನಗಳು) ಕಾಞಂಗಾಡಿನ ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ನಡೆಯಲಿದೆ. ಏಪ್ರಿಲ್ ಮತ್ತು ಮೇನಲ್ಲಿ ಫಿಟ್‌ನೆಸ್ ತಪಾಸಣೆಗೆ ಹಾಜರುಪಡಿಸಲಾದ ವಾಹನಗಳನ್ನು ಈ ತಪಾಸಣೆಗೆ ಹಾಜರುಪಡಿಸುವ ಅಗತ್ಯವಿಲ್ಲ. ತಪಾಸಣೆಗೆ ಹಾಜರುಪಡಿಸದೆ ಮಕ್ಕಳನ್ನು ಸಾಗಿಸುವ ವಾಹನಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಹೊಸದುರ್ಗ ತಾಲೂಕು ವ್ಯಾಪ್ತಿಯ ಎಲ್ಲಾ ಶಾಲಾ ವಾಹನಗಳು ಫಿಟ್‌ನೆಸ್ ಹೊಂದಿವೆ ಸುರಕ್ಷಿತ ಪ್ರಯಾಣಕ್ಕೆ ಯೋಗ್ಯವಾಗಿವೆ ಎಂದು ಖಚಿತಪಡಿಸಿಕೊಳ್ಳಲು ತಪಾಸಣೆಗೆ ಹಾಜರುಪಡಿಸಬೇಕು ಎಂದು ಜಂಟಿ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕರ ಹುದ್ದೆಗೆ ಸಂದರ್ಶನ

ಮಂಜೇಶ್ವರ: ಪೈವಳಿಕೆನಗರ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಇಂಗ್ಲಿಷ್, ಗಣಿತ, ಭೂವಿಜ್ಞಾನ ಮತ್ತು ರಾಜ್ಯಶಾಸ್ತ್ರದ ಹಿರಿಯ ಮಾಧ್ಯಮಿಕ ವಿಭಾಗದಲ್ಲಿ ಹಿರಿಯ ಶಿಕ್ಷಕರು ಮತ್ತು ಇಂಗ್ಲಿಷ್, ಮಲೆಯಾಳ, ಹಿಂದಿ, ಅರೇಬಿಕ್, ಭೌತಶಾಸ್ತ್ರ ರಸಾಯನಶಾಸ್ತ್ರ ಗಣಿತ ಮತ್ತು ಸಸ್ಯಶಾಸ್ತ್ರ ವಿಷಯಗಳಲ್ಲಿ ಕಿರಿಯ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 26 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 9495494840 ಕರೆ ಮಾಡಬಹುದು.

ಪ್ರಾಧ್ಯಾಪಕರ ಸಂದರ್ಶನ

ಕಾಸರಗೋಡು: ಮಡಿಕೈ ಐಎಚ್‌ಆರ್‌ಡಿ ಮಾಡೆಲ್ ಕಾಲೇಜಿನಲ್ಲಿ ಇಂಗ್ಲಿಷ್, ವಾಣಿಜ್ಯ ಮತ್ತು ಇತರ ವಿಷಯಗಳಲ್ಲಿ ಪ್ರಾಧ್ಯಾಪಕರ ನೇಮಕಾತಿಗಾಗಿ ಸಂದರ್ಶನವು ಮೇ 22 ರಂದು ಬೆಳಗ್ಗೆ 10.30ಕ್ಕೆ ಕಾಲೇಜು ಕಚೇರಿಯಲ್ಲಿ ನಡೆಯಲಿದೆ. ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 8547005068 ಅಥವಾ 9447637934 ಕರೆ ಮಾಡಬಹುದು.

ಅರ್ಜಿಗಳ ಆಹ್ವಾನ

ಕಾಸರಗೋಡು: ಎಲ್‌ಬಿಎಸ್ ಸೆಂಟರ್ ಫಾರ್ ಸಯನ್ಸ್ ಆ್ಯಂಡ್ ಟೆಕ್ನಾಲಜಿಯ ಕಾಸರಗೋಡು ಮತ್ತು ಕಾಞಂಗಾಡು ಕೇಂದ್ರಗಳಲ್ಲಿ ಕಂಪ್ಯೂಟರ್ ಕೋರ್ಸ್‌ಗಳಿಗೆ ತರಗತಿಗಳನ್ನು ನಡೆಸಿಕೊಡಲು ಬಿ.ಟೆಕ್ (ಕಂಪ್ಯೂಟರ್ ಸಯನ್ಸ್), ಎಂಸಿಎ, ಎಂಎಸ್‌ಸಿ (ಕಂಪ್ಯೂಟರ್ ಸಯನ್ಸ್) ಮತ್ತು ಕನಿಷ್ಠ ಒಂದು ವರ್ಷ ಬೋಧನಾ ಅನುಭವ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೂಲ ಪ್ರಮಾಣಪತ್ರಗಳೊಂದಿಗೆ ಮೇ 28ರಂದು ಬೆಳಗ್ಗೆ 10.30ಕ್ಕೆ ಕಾಸರಗೋಡಿನಲ್ಲಿರುವ (ನಗರಸಭಾ ಶಾಪಿಂಗ್ ಕಾಂಪ್ಲೆಕ್ಸ್, ಹಳೆ ಬಸ್ ನಿಲ್ದಾಣ) ಕೇಂದ್ರದಲ್ಲಿ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 221011 ಅಥವಾ 04672 201422 ಕರೆ ಮಾಡಬಹುದು.

ಸಮರ್ಪಕ ಅಧ್ಯಯನ ಕೈಗೊಳ್ಳದೆ ಅಧಿಕಾರಿಗಳು ಕಾರ್ಯಗತಗೊಳಿಸಿದ ಕಾಮಗಾರಿ ವಿನಾಶದಂಚಿಗೆ

ರೂ. 1.5 ಕೋಟಿಯ ಪಾಣಾರು ಕೆರೆ ಯೋಜನೆ ನೀರುಪಾಲು



ಕಾಸರಗೋಡು: ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸಮರ್ಪಕವಾದ ಅಧ್ಯಯನ ನಡೆಸದೆ ಅನುಷ್ಠಾನಗೊಳಿಸಿದ ಯೋಜನೆಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಒಂದೂವರೆ ಕೋಟಿ ರೂ. ಅಧಿಕ ನಷ್ಟವಾಗಿದೆ. ರಸ್ತೆ ಬದಿಗಳ ಸೊಬಗು ಹೆಚ್ಚಿಸಲು, ನವೋಲ್ಲಾಸ ತುಂಬಿಸಲು ಜಿಲ್ಲಾ ಆಡಳಿತ ಕೂಟವು ಮಂಜೂರುಗೊಳಿಸಿದ ಕಾಸ್ರೋಡ್ ಕೆಫೆಯ ಭಾಗವಾಗಿ ಚೆಂಗಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾಣಾರು ಕೆರೆ ನಿರ್ಮಾಣ ಯೋಜನೆ ಕಾರ್ಯಗತಗೊಂಡು 7 ವರ್ಷಗಳು ಕಳೆದರೂ ಸಾರ್ವಜನಿಕರ ಪ್ರಯೋಜನಕ್ಕೆ ಬಾರದಾಗಿದೆ.
ಚೆಂಗಳ ನಾಲ್ಕನೇ ಮೈಲ್‌ನಲ್ಲಿರುವ ಪಾಣಾರು ಕೆರೆಯನ್ನು ನವೀಕರಿಸಿ ಕಂದಾಯ ಇಲಾಖೆಯು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಿದ ಪ್ರದೇಶದಲ್ಲಿ ಉದ್ಯಾನ ವನ ಹಾಗೂ ಮಕ್ಕಳ ಆಟದ ಮೈದಾನ, ಆಂಫಿ ಥಿಯೇಟರ್ ಫುಟ್‌ಪಾತ್, ಮಕ್ಕಳಿಗಿರುವ ವಿನೋದ ಉಪಕರಣಗಳು, ತೆರೆದ ವೇದಿಕೆ ಹಾಗೂ ಆಸನಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಪ್ರಸ್ತುತ ಈ ಎಲ್ಲಾ ಯೋಜನೆಗಳು ಹಾನಿಗೀಡಾಗಿದ್ದು, ಜೊತೆಗೆ ಕಬ್ಬಿಣದ ಗೇಟ್, ಶೌಚಾಲಯದ ಬಾಗಿಲುಗಳು ನಾಶಗೊಂಡ ಸ್ಥಿತಿಯಲ್ಲಿವೆ.
ಪಾಣಾರುಕೆರೆ ನವೀಕರಿಸಿ ಸ್ಟೀಲ್ ಪೈಪ್ ಅಳವಡಿಸಿ ಸಂರಕ್ಷಣಾ ಕವಚ ನಿರ್ಮಿಸಲಾಗಿದ್ದರೂ ಈ ಯೋಜನೆ ಕೂಡಾ ಪರಿಪೂರ್ಣಗೊಂಡಿಲ್ಲ. 1.53 ಕೋಟಿ ರೂ. ವಿನಿಯೋಗಿಸಿದ ಈ ಮಹತ್ತರ ಎಲ್ಲಾ ಯೋಜನೆ ನಿರ್ಮಿತಿ ಕೇಂದ್ರದ ನೇತೃತ್ವದಲ್ಲಿ ಕೈಗೊಳ್ಳಲಾಗಿತ್ತು. ಕಾಸರಗೋಡು ಜಿ.ಪಂ. ಹಾಗೂ ಚೆಂಗಳ ಗ್ರಾ.ಪಂ. ತಲಾ 25 ಲಕ್ಷ ರೂ., ಮಾಜಿ ಶಾಸಕ ಎನ್.ಎ.ನೆಲ್ಲಿಕುನ್ನು ಅವರ ಪ್ರಾದೇಶಿಕ ಅಭಿವೃದ್ಧಿ ನಿಧಿಯಿಂದ 5 ಲಕ್ಷ ರೂ., ಪ್ರವಾಸೋದ್ಯಮ ಇಲಾಖೆ ಮಂಜೂರುಗೊಳಿಸಿದ 98 ಲಕ್ಷ ರೂ.ವನ್ನು ಯೋಜನೆಯ ಅಂಗವಾಗಿ ವಿನಿಯೋಗಿಸಲಾಗಿದೆ.
ರಾಷ್ಟ್ರೀಯ ಹೆದ್ದಾರಿ ಮೂಲಕ ಹಾದುಹೋಗುವವರಿಗೆ ಗುಣಮಟ್ಟವಿರುವ ಆಹಾರ ಪೂರೈಕೆ ಕೈಗೊಂಡು ಅತ್ಯಾಧುನಿಕ ಸಕಲ ವ್ಯವಸ್ಥೆಗಳೊಂದಿಗೆ ವಿಶ್ರಾಂತಿ ಕೇಂದ್ರವನ್ನು ನಿರ್ಮಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿತ್ತು.

ಶತಮಾನಗಳ ಇತಿಹಾಸದ ಕೆರೆ

ಶತಮಾನಗಳ ಇತಿಹಾಸವಿದೆ ಎನ್ನಲಾಗುತ್ತಿರುವ ಪಾಣಾರು ಕೆರೆಯು ಅಧಿಕಾರಿಗಳ ಕಡೆಗಣನೆ ಹಾಗೂ ನಿರ್ಲಕ್ಷ್ಯ ಧೋರಣೆಗೆ ಒಳಗಾಗಿ ವಿನಾಶದ ಅಂಚಿನಲ್ಲಿದೆ. ಉರಿಬಿಸಿಲಿನಲ್ಲೂ ನೀರು ಬತ್ತದ ಕೆರೆ ಇದಾಗಿದೆ. ಪಾಂಡವರು ನಿರ್ಮಿಸಿದ ಐತಿಹಾಸಿಕ ಕೆರೆ ಇದೆಂದು ಹಿರಿಯರು ಹೇಳುತ್ತಾರೆ. ಕೆರೆಯನ್ನು ಸಂರಕ್ಷಿಸಬೇಕು ಎಂದು ಆಗ್ರಹಿಸಿ ಚೆಂಗಳ ಜವಾನ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ಗ್ರೀನ್ ಸ್ಟಾರ್ ಚೆಂಗಳ, ಫ್ರೆಂಡ್ಸ್ ಸಸಿಹಿತ್ಲು, ಗ್ರೀನ್ ಸ್ಟಾರ್ ಸಸಿಹಿತ್ಲು ಹಾಗೂ ಇನ್ನಿತರ ಸಂಘಟನೆಗಳ ನೇತೃತ್ವದಲ್ಲಿ ಮಾನವ ಸರಪಳಿ ನಿರ್ಮಿಸಿ ಹೋರಾಟ ನಡೆಸಲಾಗಿತ್ತು.

ಸಾರ್ವಜನಿಕರ ಆಂದೋಲನ

ಇದೇ ವೇಳೆ ಶಾಹಿನಾ ಸಲೀಂ ಅವರ ನೇತೃತ್ವದಲ್ಲಿದ್ದ ಚೆಂಗಳ ಗ್ರಾಮ ಪಂಚಾಯತ್ ಆಡಳಿತ ಸಮಿತಿಯ ಆಶ್ರಯದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಡಾ.ಸಜಿತ್ ಬಾಬು ಅವರ ಆಶಯದಂತೆ ಪಾಣಾರು ಕೆರೆಯನ್ನು ನವೀಕರಿಸಲಾಗಿತ್ತು. ಬಳಿಕ ಈ ಕೆರೆಯು ಯಾವುದೇ ಅಭಿವೃದ್ಧಿ ಹೊಂದದೆ ಇದೀಗ ವಿನಾಶದ ಅಂಚಿನಲ್ಲಿದೆ. ಪಾಣಾರು ಕೆರೆಯನ್ನು ಸಂರಕ್ಷಿಸಬೇಕು ಎಂದು ಆಗ್ರಹಿಸಿ ಸಾರ್ವಜನಿಕರು ಕೂಡಾ ಹಲವು ಬಾರಿ ಪ್ರತಿಭಟನೆ ನಡೆಸಿದ್ದರು. ಅಲ್ಲದೆ ಈ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿತ್ತು. ಮದ್ಯಪಾನಿಗಳು, ಮಾದಕವಸ್ತು ಮಾಫಿಯಾಗಳು ಹಾಗೂ ಇನ್ನಿತರ ಸಾಮಾಜಿಕ ಪಿಡುಗು ಹೊಂದಿದ ಚಟುವಟಿಕೆಗಳು ಇಲ್ಲಿ ನಡೆಯುತ್ತಿವೆ. ಅಲ್ಲದೆ ಸಮಾಜದ್ರೋಹಿಗಳು ಈ ಭಾಗದಲ್ಲಿ ಠಿಕಾಣಿ ಹೂಡುತ್ತಿದ್ದು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮೌನಕ್ಕೆ ಶರಣಾಗಿರುವುದು ವಿಪರ್ಯಾಸವಾಗಿದೆ. ಪಾಣಾರು ಕೆರೆಯನ್ನು ಸಂರಕ್ಷಿಸಲು ಹೆಚ್ಚಿನ ಸಂಘ ಸಂಸ್ಥೆಗಳು ಮುಂದೆ ಬಂದಿರುವುದು ವಿಶೇಷವಾಗಿದೆ. ಆದರೆ ಈ ವಿಚಾರದಲ್ಲಿ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕಾಗಿದೆ.

ಮೀಯಪದವು ಮಾಸ್ಟರ್ಸ್ ಆರ್ಟ್ಸ್, ಸ್ಪೋರ್ಟ್ಸ್ ಕ್ಲಬ್‌ನ ವಾರ್ಷಿಕೋತ್ಸವ



ಮಂಜೇಶ್ವರ: ಮೀಯಪದವಿನ ಪ್ರತಿಷ್ಠಿತ ಕ್ರೀಡೆ ಹಾಗೂ ಸಾಂಸ್ಕೃತಿಕ ಸಂಘಟನೆಯಾದ ಮಾಸ್ಟರ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ಇದರ ವತಿಯಿಂದ 15ನೇ ವಾರ್ಷಿಕೋತ್ಸವ ಕಾರ್ಯಕ್ರಮವು ಮೀಯಪದವು ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆಯ ನಾರಾಯಣೀಯಂ ವೇದಿಕೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.
ಸಭಾ ಕಾರ್ಯಕ್ರಮದಲ್ಲಿ ಮಂಜೇಶ್ವರ ಬ್ಲಾಕ್ ಪಂಚಾಯತ್ ಮಾಜಿ ಸದಸ್ಯ ಕೆ.ವಿ.ರಾಧಾಕೃಷ್ಣಭಟ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗುರುದೇವದತ್ತ ಸಂಸ್ಥಾನ ಒಡಿಯೂರಿನ ಪರಮಪೂಜ್ಯ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾರದಾ ಗಣಪತಿ ವಿದ್ಯಾಕೇಂದ್ರ ಕೈರಂಗಳದ ಸಂಚಾಲಕರಾದ ರಾಜಾರಾಮ ಭಟ್, ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮೊಕ್ತೇಸರ ನಾರಾಯಣ ಹೆಗ್ಡೆ, ಮಂಜೇಶ್ವರ ಬ್ಲಾಕ್ ಪಂಚಾಯತ್ ಸದಸ್ಯೆ ಜ್ಯೋತಿ ಪಿ. ರೈ, ವಿಎಯುಪಿಎಸ್ ಮೀಯಪದವು ಆಡಳಿತ ಸಲಹೆಗಾರ ಶ್ರೀಧರ ರಾವ್, ಆರ್.ಎಂ., ಎಸ್‌ವಿವಿಎಚ್‌ಎಸ್‌ಎಸ್ ಮೀಯಪದವು ಸಂಚಾಲಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕ್ಯಾಂಪ್ಕೋ ನಿರ್ದೇಶಕಿ ಸೌಮ್ಯಾಪ್ರಕಾಶ್ ಶುಭಹಾರೈಸಿದರು. ಈ ವೇಳೆ 2024-25ನೇ ಸಾಲಿನ ಕರ್ನಾಟಕ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಜಗದೀಶ್ ಶೆಟ್ಟಿ ಎಲಿಯಾಣ, ರಂಗಭೂಮಿ ಮತ್ತು ಚಲನಚಿತ್ರ ಕಲಾವಿದ ತುಳುನಾಡ ರತ್ನ ದಿನೇಶ್ ಅತ್ತಾವರ, ಕರ್ನಾಟಕ ಯಕ್ಷಗಾನ ಅಕಾಡೆಮಿಯ ನಿಕಟ ಪೂರ್ವ ಸದಸ್ಯರು, ಬರಹಗಾರ ಯೋಗೀಶ್ ರಾವ್ ಚಿಗುರುಪಾದೆ ಹಾಗೂ ಅಂತಾರಾಷ್ಟ್ರೀಯ ತ್ರೋಬಾಲ್ ಆಟಗಾರ ಬಸವರಾಜ್ ಅವರನ್ನು ಗೌರವಿಸಲಾಯಿತು. ಎಸ್‌ವಿವಿಎಚ್‌ಎಸ್‌ಎಸ್ ಶಾಲೆಯ ಅಧ್ಯಾಪಕರಾದ ಬ್ರಿಜೇಶ್ ಪ್ರಾರ್ಥನೆ ಹಾಡಿದರು. ಮಾಸ್ಟರ್ಸ್ ಕ್ಲಬ್ ಗೌರವಾಧ್ಯಕ್ಷ ಪುಷ್ಪರಾಜ್ ಶೆಟ್ಟಿ ತಲೇಕಳ ಸ್ವಾಗತಿಸಿ, ಕ್ಲಬ್ ಸದಸ್ಯ ರಘುವೀರ್ ರಾವ್ ವಂದಿಸಿದರು. ಎಸ್‌ವಿವಿಎಚ್‌ಎಸ್‌ಎಸ್ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ರಾಜಾರಾಮ್ ರಾವ್ ಹಾಗೂ ಕಿರಣ್ ಭಟ್ ಚಂಡಿತೋಟ ನಿರೂಪಿಸಿದರು.
ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ದುಂಬಿ ಮೆಲೋಡೀಸ್' ಮಂಜೇಶ್ವರ ತಂಡದ ನೇತೃತ್ವದಲ್ಲಿ ಹೆಜ್ಜೆನಾದ ಹಾಗೂ ಪ್ರಸಿದ್ಧ ಹಿನ್ನಲೆ ಗಾಯಕರ ನೃತ್ಯಗಾನ, ಮಹಾಲಿಂಗೇಶ್ವರ ಮಕ್ಕಳ ಕುಣಿತ ಭಜನೆ, ಮಹಾಕಾಳಿ ಪ್ರಸಾದಿತ ತಂಡ ಮೀಯಪದವು ಇವರಿಂದ ಕೈಕೊಟ್ಟುಕ್ಕಳಿ ಕಾರ್ಯಕ್ರಮ ಹಾಗೂ ಕುಮಾರಿ ಶರಣ್ಯ ಕಳ್ಳಿಗೆ ಅವರಿಂದ ನೃತ್ಯ ಜರಗಿತು.
ನಂತರ ಕಾಪು ರಂಗತರಂಗ ಕಲಾವಿದರಿಂದ 'ಶೋಬಾಜಿ' ಎಂಬ ತುಳು ಹಾಸ್ಯಮಯ ನಾಟಕ ಪ್ರದರ್ಶನಗೊಂಡು ಜನಮನ ಸೂರೆಗೊಂಡಿತು.

ನಿವೃತ್ತಿ ಹೊಂದಿದ ಅಂಗನವಾಡಿ ಶಿಕ್ಷಕಿಗೆ ಬೀಳ್ಕೊಡುಗೆ, ಪುಟಾಣಿಗಳ ನೃತ್ಯ



ಮಂಜೇಶ್ವರ: ಕಳೆದ ಹಲವಾರು ವರ್ಷಗಳಿಂದ ದೈಗೋಳಿ ಅಂಗನವಾಡಿ ಕೇಂದ್ರದಲ್ಲಿ ಶಿಕ್ಷಕಿಯಾಗಿ ಹಲವಾರು ಶಿಷ್ಯಂದಿರ ಅಚ್ಚುಮೆಚ್ಚಿನ ಶಿಕ್ಷಕಿಯಾಗಿ ಜನಮನ್ನಣೆ ಪಡೆದು ನಿವೃತ್ತಿ ಹೊಂದಿದ ಉತ್ತಮ ಅಂಗನವಾಡಿ ಕಾರ್ಯಕರ್ತೆ, ರಾಜ್ಯ ಪ್ರಶಸ್ತಿ ಪುರಸ್ಕೃತೆ, ಕೇಂದ್ರ ಸರಕಾರದ ಗಣರಾಜ್ಯ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತೆ, ವಿಶಾಲಾಕ್ಷಿ ಪೂಂಜ ಅಡೆಕಳಕಟ್ಟೆ ಅವರಿಗೆ ಬೀಳ್ಕೊಡುಗೆ ಸಮಾರಂಭ ಹಾಗೂ ಅಂಗನವಾಡಿ ಪುಟಾಣಿಗಳ ನೃತ್ಯ ಕಾರ್ಯಕ್ರಮವು ಜರಗಿತು.
ಸಾರ್ವಜನಿಕ ಸನ್ಮಾನ ಸಮಿತಿ ದೈಗೋಳಿ ಇದರ ಸಾರಥ್ಯದಲ್ಲಿ ಜ್ಞಾನೋದಯ ಸಮಾಜದ ಗಣೇಶ ಮಂದಿರದಲ್ಲಿ ಜರಗಿದ ಸಮಾರಂಭದಲ್ಲಿ ಕೋಳ್ಯೂರು ವಾರ್ಡ್ ಸದಸ್ಯ, ಸಾರ್ವಜನಿಕ ಸನ್ಮಾನ ಸಮಿತಿಯ ಅಧ್ಯಕ್ಷೆ ಶಾಂತಕುಮಾರಿ ಬಿ. ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಬ್ಲಾಕ್ ಸದಸ್ಯರೂ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಮೋಹನ್ ರೈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೀಂಜ ಪಂಚಾಯತ್ ಮಾಜಿ ಉಪಾಧ್ಯಕ್ಷ ತಿಮ್ಮಣ್ಣ ಭಟ್ ಕೊಮ್ಮೆ ಮೀಂಜ ಗ್ರಾ.ಪಂ. ಸದಸ್ಯೆ ಆಶಾಲತ ಬಿ.ಎಂ., ಜ್ಞಾನೋದಯ ಸಮಾಜದ ಸದಸ್ಯ ಬಿ.ವಿ.ಸುರೇಶ್, ಮೀಂಜ ಅಂಗನವಾಡಿ ಮೇಲ್ವಿಚಾರಕಿ ಬಿಂದು, ವರ್ಕಾಡಿ ಪಂಚಾಯತ್‌ನ ಮಾಜಿ ಸದಸ್ಯೆ ಮಮತಾ ಶೇಖರ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿಶಾಲಾಕ್ಷಿ ಪೂಂಜ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಮುಖ್ಯೋಪಾಧ್ಯಾಯರಾದ ವೆಂಕಟೇಶ್ವರ ಭಟ್ ಬಜೆ, ಸುಂದರ ಮಾಸ್ಟರ್ ಚಿತ್ತರಂಜನ್ ದೈಗೋಳಿ, ಜ್ಞಾನೋದಯ ಸಮಾಜ ಅಧ್ಯಕ್ಷ ಶಿವರಾಮ ಭಟ್, ಕೋಳೂರು ವಾರ್ಡ್‌ನ ಮಾಜಿ ಸದಸ್ಯ ನಾರಾಯಣ ತುಂಗ, ಮೀಂಜ ಗ್ರಾ.ಪಂ.ನ ಅಕೌಂಟೆಂಟ್ ಜಮಾಲುದ್ದೀನ್, ಸಾರ್ವಜನಿಕ ಗಣೇಶೋತ್ಸವ ಸಮಿತಿ ಅಧ್ಯಕ್ಷ ತಿಲಕ ಪ್ರಸಾದ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಸಾರ್ವಜನಿಕ ಸನ್ಮಾನ ಸಮಿತಿಯ ಕೋಶಾಧಿಕಾರಿ ಪದ್ಮನಾಭ ಮಾಸ್ಟರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸತ್ಯನಾರಾಯಣ ಭಟ್ ಪಜ್ವ ದೈಗೋಳಿ ಸ್ವಾಗತಿಸಿ, ಮಾಧವ ಶೆಟ್ಟಿಗಾರ್ ದೈಗೋಳಿ ವಂದಿಸಿದರು.

ಜಿಲ್ಲಾ ಸಹಕಾರಿ ಸಂಘದ ನಿವೃತ್ತ ಜಂಟಿ ನಿಬಂಧಕ ವಿ.ಚಂದ್ರನ್‌ಗೆ ಬೀಳ್ಕೊಡುಗೆ



ಕುಂಬಳೆ: ಮಂಜೇಶ್ವರ ತಾಲೂಕು ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ವೇದಿಕೆಯ ಆಶ್ರಯದಲ್ಲಿ ಸೇವೆಯಿಂದ ನಿವೃತ್ತರಾದ ಕಾಸರಗೋಡು ಜಿಲ್ಲಾ ಸಹಕಾರಿ ಸಂಘದ ಜಂಟಿ ನಿಬಂಧಕ ವಿ.ಚಂದ್ರನ್ ಅವರಿಗೆ ಬೀಳ್ಕೊಡುಗೆ ಸಮಾರಂಭವು ಕುಂಬಳೆ ಸಹಕಾರಿ ಬ್ಯಾಂಕ್ ಸಭಾಂಗಣದಲ್ಲಿ ಜರಗಿತು. ಶಾಲು ಹೊದೆಸಿ, ಫಲವಸ್ತು ಹಾಗೂ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.
ಸಮಾರಂಭವನ್ನು ಸಹಕಾರಿ ಸಂಘದ ಸಹಾಯಕ ನಿಬಂಧಕ ರವೀಂದ್ರ ಉದ್ಘಾಟಿಸಿದರು. ಕುಂಬಳೆ ಕೃಷಿ ಸುಧಾರಣಾ ಸಹಕಾರಿ ಸಂಘದ ಕಾರ್ಯದರ್ಶಿ ಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು.
ಮಂಜೇಶ್ವರ ಸೇವಾ ಸಹಕಾರಿ ಬ್ಯಾಂಕ್‌ನ ಕಾರ್ಯದರ್ಶಿ ರಾಜನ್ ನಾಯರ್ ಸ್ವಾಗತಿಸಿ, ಮಂಗಲ್ಪಾಡಿ ಸಹಕಾರಿ ಬ್ಯಾಂಕ್‌ನ ಕಾರ್ಯದರ್ಶಿ ಬಾಲಸುಬ್ರಹ್ಮಣ್ಯ ವಂದಿಸಿದರು.
ಸಹಕಾರಿ ಸಂಘ ಜನರಲ್ ವಿಭಾಗದಿಂದ ಲೆಕ್ಕಪರಿಶೋಧನಾ ವಿಭಾಗಕ್ಕೆ ವರ್ಗಾವಣೆಯಾಗುತ್ತಿರುವ ಸಹಕಾರಿ ಸಂಘದ ವಿಶೇಷ ದರ್ಜೆಯ ನಿರೀಕ್ಷಕ ವಿ.ಸುನೀಲ್ ಕುಮಾರ್ ಮತ್ತು ಸಹಕಾರಿ ಸಂಘದ ಜೂನಿಯರ್ ನಿರೀಕ್ಷಕ ಜಯರಾಮ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸರ್ಕಲ್ ಸಹಕಾರಿ ಯೂನಿಯನ್ ಸದಸ್ಯ ಪ್ರದೀಪ್ ಕುಮಾರ್, ಮಂಜೇಶ್ವರ ಸಹಕಾರಿ ಸಂಘದ ಸಹಾಯಕ ನಿಬಂಧಕ ಕಚೇರಿ ಅಧೀಕ್ಷಕ ರಾಜೇಶ್, ಜೂನಿಯರ್ ಇನ್‌ಸ್ಪೆಕ್ಟರ್‌ಗಳಾದ ಅರುಣ್, ಸುಮನ್, ಅಂಗಡಿಮೊಗರು ಸಹಕಾರಿ ಬ್ಯಾಂಕ್ ಕಾರ್ಯದರ್ಶಿ ವಿಠಲ್ ರೈ, ಮಜಿಬೈಲು ಸಹಕಾರಿ ಬ್ಯಾಂಕ್ ಕಾರ್ಯದರ್ಶಿ ಉದಯ್‌ಕುಮಾರ್ ಶೆಟ್ಟಿ, ಪೆರ್ಲ ಸಹಕಾರಿ ಬ್ಯಾಂಕ್ ಕಾರ್ಯದರ್ಶಿ ಪ್ರಭಾಕರ್, ರಾಮಕೃಷ್ಣ ರೈ, ಪೈವಳಿಕೆ ಸಹಕಾರಿ ಬ್ಯಾಂಕ್ ಕಾರ್ಯದರ್ಶಿ ಕೇಶವ ಬಾಯಿಕಟ್ಟೆ, ಜೀಜಾ, ಜಯರಾಮ ಕೊಡ್ಲಮೊಗರು ಮೊದಲಾದವರು ಮಾತನಾಡಿದರು.

ಶ್ರೀ ವಿಷ್ಣು ಯಕ್ಷವೈಭವ ಉದ್ಘಾಟನೆ



ಮಂಜೇಶ್ವರ: ಶ್ರೀ ವಿಷ್ಣು ಯಕ್ಷಬಳಗ ಮಜಿಬೈಲು ಮಂಜೇಶ್ವರ ಕಲಾ ತಂಡದ 'ಶ್ರೀ ವಿಷ್ಣು ಯಕ್ಷ ವೈಭವ 2026' ಕಾರ್ಯಕ್ರಮವನ್ನು ಉದ್ಯಮಿ, ಉಡುಪಿ ಉಜ್ವಲ್ ಗ್ರೂಪ್ ಉಡುಪಿ ಆಡಳಿತ ನಿರ್ದೇಶಕ ಅಜಯ್ ಪಿ.ಶೆಟ್ಟಿ ದೀಪ ಬೆಳಗಿಸಿ ಉದ್ಘಾಟಿಸಿ ಶ್ರೀ ವಿಷ್ಣು ಯಕ್ಷವೈಭವಕ್ಕೆ ಶುಭ ಹಾರೈಸಿದರು. ಪ್ರೀತೇಶ ಶೆಟ್ಟಿ ವಿ.ಫೋರ್ ಚಾನೆಲ್ ಮಂಗಳೂರು ಪ್ರತಿನಿಧಿ, ಬೆನಕ ಯಕ್ಷಕಲಾ ವೇದಿಕೆ ಪೈವಳಿಕೆ ಇದರ ಸಂಚಾಲಕ ಹಾಗೂ ಹವ್ಯಾಸಿ ಕಲಾವಿದ, ಶಿಕ್ಷಕ ದೇವಕಾನ ಕೃಷ್ಣ ಭಟ್, ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ಕಡಂಬಾರು ಕ್ಷೇತ್ರದ ಆಡಳಿತ ಮೊಕ್ತೇಸರ ಸೂರ್ಯನಾರಾಯಣ ಮಯ್ಯ ಕಡಂಬಾರು ಉಪಸ್ಥಿತರಿದ್ದರು. ಹವ್ಯಾಸಿ ಯಕ್ಷಗಾನ ಕಲಾವಿದ ಅರ್ಥಧಾರಿ ಗುರುರಾಜ ಹೊಳ್ಳ ಬಾಯಾರು ಕಾರ್ಯಕ್ರಮ ನಿರೂಪಿಸಿದರು.

ಪುದುಕೋಳಿಯಲ್ಲಿ 40 ವರ್ಷಗಳ ಬಳಿಕ ನೆರವೇರಿತು ರಕ್ತೇಶ್ವರೀ ದೈವದ ಕೋಲ



ಬದಿಯಡ್ಕ: ನೀರ್ಚಾಲು ಸಮೀಪದ ಪುದುಕೋಳಿಯಲ್ಲಿ ಸುದೀರ್ಘ 42 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಭಾನುವಾರ ಹಾಗೂ ಮಂಗಳವಾರ ಶ್ರೀ ರಕ್ತೇಶ್ವರಿ ದೈವಗಳ ಕೋಲ ಸಾಂಪ್ರದಾಯಿಕ ಶ್ರದ್ಧಾ ಭಕ್ತಿಗಳೊಂದಿಗೆ ನೆರವೇರಿತು.
ಭಾನುವಾರ ರಾತ್ರಿ ಶ್ರೀ ದೇವರ ಪೂಜೆ, ಮಂಗಳಾರತಿ, ಪ್ರಸಾದ ವಿತರಣೆ, ಪ್ರಾರ್ಥನೆ, ತೊಡಂಜಲ್ ಬಳಿಕ ಅನ್ನದಾನ, ಭಂಡಾರ ಏರುವುದು ನಡೆಯಿತು. ಬಳಿಕ ಸೋಮವಾರ ಮುಂಜಾನೆ ಪೊಟ್ಟನ್ ದೈವದ ತೋಟ್ಟಂಪಾಟ್, ಪ್ರಾರ್ಥನೆ, ಮುಖವಾಡ ಧಾರಣೆ, ಕೋಲ, ಪ್ರಸಾದ ವಿತರಣೆ ನಡೆಯಿತು. ಬಳಿಕ ಸಪ್ತಶತೀ ಸಹಿತ ಶ್ರೀ ದೇವೀ ಮಹಾತ್ಮೆಯನ್ನೊಳಗೊಂಡ ರಕ್ತೇಶ್ವರಿ ದೈವದ ತೋಟ್ಟಂಪಾಟ್, ದೈವಕೋಲ, ಪ್ರಸಾದ ವಿತರಣೆ, ಗುಳಿಗನ್ ದೈವದ ಕೋಲದೊಂದಿಗೆ ಸಮಾರೋಪಗೊಂಡಿತು. ಪುದುಕೋಳಿ ತರವಾಡಿನ ಶ್ರೀಕೃಷ್ಣ ಭಟ್, ಗಣೇಶ ಭಟ್, ಶಂಕರ ಭಟ್ ಪರಕ್ಕಾಲು, ಗೋವಿಂದ ಭಟ್ ಪರಕ್ಕಾಲು, ಕೃಷ್ಣಮೂರ್ತಿ ಪುದುಕೋಳಿ ಮೊದಲಾದವರು ನೇತೃತ್ವ ವಹಿಸಿದ್ದರು. ಸ್ಥಳೀಯರಲ್ಲದೆ ಕೇರಳದ ಪಾಲಕ್ಕಾಡ್, ಕರ್ನಾಟಕದ ಸುಳ್ಯ, ಪುತ್ತೂರು, ಬಂಟ್ವಾಳ, ಮಂಗಳೂರು ಸಹಿತ ವಿವಿಧೆಡೆಗಳ ಭಕ್ತಾದಿಗಳು ಪಾಲ್ಗೊಂಡರು. ಮಾನ್ಯದ ಉಣ್ಣಿ ಪಣಿಕ್ಕರ್, ಉದಯ ಪಣಿಕ್ಕರ್ ತಂಡ ನಿರ್ವಹಿಸಿದರು.

ಸೂರಂಬೈಲು ಪ್ರೌಢಶಾಲೆಗೆ ಶೇ. 100 ಫಲಿತಾಂಶ



ಕುಂಬಳೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸೂರಂಬೈಲು ಸರಕಾರಿ ಪ್ರೌಢಶಾಲೆ ಶೇಕಡಾ 100 ಫಲಿತಾಂಶ ಸಾಧಿಸಿದೆ. ಒಟ್ಟು ಪರೀಕ್ಷೆ ಬರೆದ 76 ವಿದ್ಯಾರ್ಥಿಗಳೂ ಉತ್ತೀರ್ಣರಾಗಿ 8 ಮಂದಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಗಳಿಸಿದ್ದಾರೆ. ಇಬ್ಬರು 9 ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಮತ್ತು ಮೂರು ವಿದ್ಯಾರ್ಥಿಗಳು 8 ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಗಳಿಸಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದ 18 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಗಳಿಸಿದ್ದಾರೆ.

ಅಧ್ಯಾಪಕರ ನೇಮಕಾತಿ: ಅರ್ಜಿ ಆಹ್ವಾನ

ಕಾಸರಗೋಡು: ವಿದ್ಯಾನಗರ ಸರಕಾರಿ ಮೆಟ್ರಿಕ್ ಪೂರ್ವ ಹಾಸ್ಟೆಲ್ (ಪುರುಷ) ಮತ್ತು ಆಣಂಗೂರು ಸರಕಾರಿ ಮೆಟ್ರಿಕ್ ಪೂರ್ವ ಹಾಸ್ಟೆಲ್ (ಮಹಿಳೆ) ನಿವಾಸಿಗಳಿಗೆ ಬೋಧನೆ ನೀಡಲು ಶಿಕ್ಷಕರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪದವೀಧರರು, ಸ್ನಾತಕೋತ್ತರ ಪದವೀಧರರು, ಟಿಟಿಸಿ ಮತ್ತು ಪಿಂಚಣಿ ಪಡೆಯುವ ಶಿಕ್ಷಕರು ಅರ್ಜಿ ಸಲ್ಲಿಸಬಹುದು. ತಿಂಗಳಿಗೆ 20 ಗಂಟೆ ಕಾಲ ಬೆಳಗ್ಗೆ ಅಥವಾ ಸಂಜೆ ತರಗತಿ ತೆಗೆದುಕೊಳ್ಳಬೇಕು. ಆಸಕ್ತರು ಅರ್ಜಿ ಮತ್ತು ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಮೇ 26ರೊಳಗೆ ಕಾಸರಗೋಡು ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ದೂ.ಸಂ. 8547630172 ಕರೆ ಮಾಡಬಹುದು.

ನಿಧಾನಗತಿಯಲ್ಲಿ ಸಾಗುತ್ತಿದೆ ರಾಷ್ಟ್ರೀಯ ಹೆದ್ದಾರಿ 66ರ ಯೋಜನೆಯ ಕಾಮಗಾರಿ | ಸ್ಥಳಕ್ಕೆ ಕಾಞಂಗಾಡು ಆರ್‌ಡಿಒ ಭೇಟಿ

ಮಳೆಗಾಲದ ಆತಂಕದಲ್ಲಿ ಚೆರುವತ್ತೂರು ವೀರಮಲೆಕುನ್ನು ಪ್ರದೇಶದ ನಿವಾಸಿಗಳು



ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕಾಸರಗೋಡು ಜಿಲ್ಲೆಯ ವಿವಿಧೆಡೆ ವಿಸ್ತರಣಾ ಯೋಜನೆಯ ಅಂಗವಾಗಿ ಚೆರುವತ್ತೂರು ಸಮೀಪದ ವೀರಮಲೆಕುನ್ನು (ವೀರಮಲೆಗುಡ್ಡ) ಭಾಗವನ್ನು ಅಗೆಯುವ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ.
ಕಳೆದ ದಿನಗಳಲ್ಲಿ ಸುರಿದ ಧಾರಾಕಾರ ಮಳೆಗೆ ವೀರಮಲೆಕುನ್ನು ಗುಡ್ಡದಿಂದ ಮಳೆನೀರಿನೊಂದಿಗೆ ಮಣ್ಣು ಹಾಗೂ ಪಾರೆಕಲ್ಲುಗಳು ಕೊಚ್ಚಿಕೊಂಡು ಸುರಕ್ಷಾ ಗೋಡೆಯನ್ನೂ ದಾಟಿ ರಸ್ತೆ ತುಂಬಾ ಬಿದ್ದುಕೊಂಡಿವೆ. ಇದರಿಂದಾಗಿ ವೀರಮಲೆಗುಡ್ಡಕ್ಕೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿಯು ಸಂಪೂರ್ಣ ಕೆಸರುಮಯವಾಗಿದೆ. ಮಳೆಗಾಲಕ್ಕೆ ಮೊದಲು ವೀರಮಲೆಕುನ್ನು ಭಾಗದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹೆದ್ದಾರಿಯ ಇಕ್ಕೆಲಗಳಿಂದ ಪ್ರಸ್ತುತ ಮಣ್ಣು ರಾಶಿ ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ. ಇದೇ ವೇಳೆ ಮಧ್ಯಭಾಗದಲ್ಲಿ ಸಮತಟ್ಟು ಮಾಡಿ ರಸ್ತೆ ಬದಿಗಳಲ್ಲಿ ನೆಟ್ ಅಳವಡಿಸಿದ ಬಳಿಕ ಕಬ್ಬಿಣದ ಆಣಿ ಸ್ಥಾಪಿಸುವ ಕಾಮಗಾರಿ ಸಾಗುತ್ತಿದೆ.

ಹಂತಹಂತವಾಗಿ ಮಣ್ಣು ತೆರವು

ವೀರಮಲೆಬೆಟ್ಟವನ್ನು ಹಂತಗಳಾಗಿ ಮಣ್ಣು ತೆರವು ಮೂಲಕ ಭೂಕುಸಿತವನ್ನು ಸಂಪೂರ್ಣವಾಗಿ ತಡೆಗಟ್ಟಲು ಅಗತ್ಯದ ಶಾಶ್ವತ ಕ್ರಮಗಳು ಸಾಗುತ್ತಿರುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮತ್ತು ನಿರ್ಮಾಣ ಕಂಪೆನಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಂಗಾರು ಮಳೆ ತೀವ್ರಗೊಂಡರೆ ಮಣ್ಣು ಕುಸಿದು ರಸ್ತೆ ಮೇಲೆಲ್ಲ ಹರಡಲಿದೆ ಎಂಬ ಆತಂಕ ನಾಗರಿಕರದ್ದಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭಗೊಂಡಂದಿನಿಂದ ವೀರಮಲೆಗುಡ್ಡದ ಪರಿಸರದಲ್ಲಿ ವಾಸವಿರುವವರು ಭಯದಿಂದಲೇ ಬದುಕು ಸಾಗಿಸುವಂತಾಗಿದೆ. ಈ ಪ್ರದೇಶದಲ್ಲಿ ಕಾಮಗಾರಿ ಆಮೆಗತಿಯಲ್ಲಿ ನಡೆಸಲಾಗುತ್ತಿರುವುದು ಇಂದಿನ ದುರವಸ್ಥೆಗೆ ಮುಖ್ಯ ಕಾರಣವಾಗಿದೆ.
ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಇತ್ತೀಚೆಗೆ ವೀರಮಲೆಕುನ್ನು ಪ್ರದೇಶಕ್ಕೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದ್ದರು. ಅಲ್ಲದೆ ಯೋಜನೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಬೇಕೆಂದು ಆದೇಶಿಸಿದ್ದರು. ಜೊತೆಗೆ ರಾಷ್ಟ್ರೀಯ ಹೆದ್ದಾರಿ ಹಾಗೂ ಸಂಬಂಧಿತ ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು ಎಂದು ತಿಳಿಸಿದ್ದರು. ಆದರೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಮಾತ್ರ ದಿನಗಟ್ಟಲೆ ವಿಳಂಬವಾಗುತ್ತಿರುವುದು ವ್ಯಾಪಕ ಆಕ್ರೋಶಕ್ಕೂ ಎಡೆಮಾಡಿಕೊಟ್ಟಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ಸೂಚನೆ ಮೇರೆಗೆ ಕಾಞಂಗಾಡು ಆರ್‌ಡಿಒ ಕೆ.ಆರ್.ಮನೋಜ್ ಕುಮಾರ್ ಅವರು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಾಮಗಾರಿಯನ್ನು ತ್ವರಿತಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಯಂತ್ರೋಪಕರಣಗಳನ್ನು ಬಳಸುವಂತೆ ಆರ್‌ಡಿಒ ಸೂಚನೆ ನೀಡಿದರು. ಜಿಲ್ಲಾಧಿಕಾರಿಗಳು ಇತ್ತೀಚೆಗೆ ಸ್ಥಳಕ್ಕೆ ಭೇಟಿ ನೀಡಿ ಮೇ 20ರೊಳಗೆ ನಿರ್ಮಾಣ ಪೂರ್ಣಗೊಳಿಸಲು ಸೂಚಿಸಿದ್ದರು. ಆದರೆ ನಿರ್ಮಾಣ ನಿಧಾನವಾಗಿದೆ ಎಂಬ ದೂರುಗಳನ್ನು ಅನುಸರಿಸಿ ಜಿಲ್ಲಾಧಿಕಾರಿಗಳು ಕಾಞಂಗಾಡು ಕಂದಾಯ ವಿಭಾಗೀಯ ಅಧಿಕಾರಿ ಕೆ.ಆರ್. ಮನೋಜ್ ಕುಮಾರ್ ಅವರನ್ನು ಕಾಮಗಾರಿ ಮೇಲ್ವಿಚಾರಣೆಗೆ ನೇಮಿಸಿದ್ದರು. ನಿರ್ಮಾಣದ ಪ್ರಗತಿ ಪರಿಶೀಲಿಸಲು ಕೂಡಾ ಅವರು ನಿರ್ದೇಶಿಸಿದ್ದರು.

ಸುತ್ತ ಮುತ್ತ

ವಿದ್ಯಾರ್ಥಿ ನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಉಡುಪಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪಿ.ಯು.ಸಿ ಕೋರ್ಸಿನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದ್ದು ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣ ಅಧಿಕಾರಿಗಳು ಪರಿಶೀಲನೆ ಮಾಡಲು ಜೂ.17 ಕೊನೆಯ ದಿನ, ಜೂ. 19ರಂದು ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. ಜೂ. 25 ರ ವರೆಗೆ ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಲು ಕೊನೆಯ ದಿನವಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರ ಪ್ರಕಟಣೆ ತಿಳಿಸಿದೆ.

ಮೇ 27: ಕೆಡಿಪಿ ಸಭೆ

ಉಡುಪಿ: ಬ್ರಹ್ಮಾವರ ತಾಲೂಕು ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮ) ಪ್ರಗತಿ ಪರಿಶೀಲನಾ ಸಭೆಯು ಮೇ 27 ರಂದು ಬೆಳಗ್ಗೆ 10.30 ಕ್ಕೆ ಚಾಂತಾರು ಗ್ರಾಮ ಪಂಚಾಯತ್ ಸಭಾಂಗಣದಲ್ಲಿ, ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಪಿಎಂ ಆವಾಸ್: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಉಡುಪಿ: ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) ಅಡಿಯ ಸಮೀಕ್ಷೆ-2018 ರ ಶಾಶ್ವತ ಪಟ್ಟಿಗೆ ಸೇರಿಸಲು ಉಡುಪಿ ತಾ.ಪಂ. ವ್ಯಾಪ್ತಿಯ ಗ್ರಾ.ಪಂ.ಗಳಲ್ಲಿ ಬಾಕಿ ಉಳಿದಿರುವ ನಿವೇಶನ ರಹಿತರು ಹಾಗೂ ವಸತಿ ರಹಿತರ ಅರ್ಹತೆ ಹೊಂದಿರುವವರ ಸಮೀಕ್ಷೆ ಕಾರ್ಯದಿಂದ ಬಿಟ್ಟು ಹೋಗಿರುವ ಅರ್ಜಿದಾರರ ಆನ್‌ಲೈನ್ ನೋಂದಣಿ ದಿನಾಂಕವನ್ನು ವಿಸ್ತರಿಸಲಾಗಿದ್ದು, ಅರ್ಹರು ಅಗತ್ಯ ದಾಖಲೆಗಳೊಂದಿಗೆ ಮೇ 29 ರ ಒಳಗಾಗಿ ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ಹೆಸರು ನೋಂದಾಯಿಸಬಹುದಾಗಿದೆ ಎಂದು ಉಡುಪಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಕೃಷಿಗೆ 'ಮೈಲುಕುತ್ತು!'

ಕೃಷಿಕ ಖರೀದಿಸಿದ ಮೈಲುತುತ್ತುವಿನ ಬಿಲ್‌ಗಳ ಜೊತೆಗೆ ತಮ್ಮ ಪಹಣಿ ಪತ್ರ, ಆಧಾರ್, ಬ್ಯಾಂಕ್ ಪಾಸ್ ಪುಸ್ತಕ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಆದ್ಯತೆ ಮೇರೆಗೆ ಆತನಿಗೆ ಸಬ್ಸಿಡಿ ಮೊತ್ತವು ನೇರವಾಗಿ ತೋಟಗಾರಿಕಾ ಇಲಾಖೆಯಿಂದ ಖಾತೆಗೆ ಜಮೆಯಾಗುತ್ತಿದೆ. ಇದರ ಸಂಪೂರ್ಣ ಪ್ರಯೋಜನ ಸಿಗಲು ಮಾನದಂಡಗಳನ್ನು ವಿಧಿಸಿರುವುದು ಕೂಡಾ ಕೃಷಿಕನನ್ನು ಕಂಗೆಡಿಸಿದೆ.

ವಿಡಿಯೋ!

ಅಲ್ಲಿಯ 40 ಸೆಂಟ್ಸ್ ಭೂಮಿಯ ಧಾರಣ ಸಾಮರ್ಥ್ಯಕ್ಕಿಂತ ಹೆಚ್ಚು ಕಸ ಸಂಗ್ರಹವಾಗುತ್ತಿದ್ದು, ಸಂಗ್ರಹಿಸಲ್ಪಟ್ಟ ಕಸವನ್ನು ಬೇರೆಡೆಗೆ ಸಾಗಿಸಬೇಕಾದ ಅನಿವಾರ್ಯತೆ ಬಂದಿದೆ. ಪುತ್ತೂರು ನಗರ ಸಭೆಯ ಸಹಕಾರದಲ್ಲಿ ಅಲ್ಲಿನ ಸಿಎನ್‌ಜಿ ಘಟಕದಲ್ಲಿ ಹಸಿ ಕಸವನ್ನು ವಿಲೇವಾರಿ ಮಾಡಲು ಮಾತುಕತೆ ನಡೆದಿದ್ದು, ಮುಂದಿನ ಹತ್ತು ದಿನಗಳಲ್ಲಿ ಅದು ಅನುಷ್ಠಾನಗೊಳ್ಳಬಹುದು. ಸಾಮಾಜಿಕ ಜಾಲತಾಣದಲ್ಲಿ ಹರಿಯುತ್ತಿರುವ ವಿಡಿಯೋದಲ್ಲಿ ತ್ಯಾಜ್ಯ ಸುರಿಯುತ್ತಿರುವುದು ನದಿ ಬದಿಯ ತ್ಯಾಜ್ಯ ಸಂಗ್ರಹಣ ಸ್ಥಳದ್ದಾಗಿದೆ. ಅದನ್ನು ವಿರುದ್ಧ ದಿಕ್ಕಿನಿಂದ ವಿಡಿಯೋ ಮಾಡಿದಾಗ ಅದು ನದಿಗೆ ಸುರಿಯುತ್ತಿದ್ದಂತೆಯೇ ಭಾಸವಾಗುತ್ತಿದೆಯೇ ವಿನಃ ವಾಸ್ತವವಾಗಿ ನದಿಗೆ ಸುರಿದಿರುವುದಿಲ್ಲ. ಕರ್ನಾಟಕ ರಕ್ಷಣಾ ವೇದಿಕೆಯ ಮುಖಂಡನೆಂದು ಹೇಳಿಕೊಂಡು ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ಕೊಟ್ಟ ಖಲಂದರ್ ಎಂಬ ವ್ಯಕ್ತಿ ಅಲ್ಲಿನ ದೃಶ್ಯಾವಳಿಯನ್ನು ವಿಡಿಯೋ ಮಾಡಿರುವುದು ಫೋಟೋ ತೆಗೆದಿರುವುದಕ್ಕೆ ನಮ್ಮ ಯಾವುದೇ ಆಕ್ಷೇಪವಿಲ್ಲ, ಆದರೆ ಅಲ್ಲಿನ ವಾಹನಕ್ಕೆ ಅಡ್ಡನಿಂತು ತಡೆಯೊಡ್ಡುವುದು, ಅಲ್ಲಿನ ಸಿಬ್ಬಂದಿ ಕರ್ತವ್ಯಕ್ಕೆ ತಡೆಯೊಡ್ಡಿರುವುದು ಮಾತ್ರ ಕಾನೂನು ಬಾಹಿರಕೃತ್ಯ. ಈ ಮಧ್ಯೆ ಹೊಸದಾಗಿ 3 ಎಕ್ರೆ ಭೂಮಿಯನ್ನು ವೈಜ್ಞಾನಿಕ ರೀತಿಯ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಗೊತ್ತುಪಡಿಸಲಾಗಿದ್ದು ಅದು ಯಾವುದೇ ಅಡೆತಡೆ ಇಲ್ಲದೆ ಲಭಿಸಿದ್ದೇ ಆದಲ್ಲಿ ಈ ಎಲ್ಲಾ ಸಮಸ್ಯೆಗಳು ಶೀಘ್ರದಲ್ಲಿಯೇ ಬಗೆಹರಿಯಲಿದೆ ಎಂದವರು ತಿಳಿಸಿದರು.

ಕೊಡವೂರಲ್ಲಿ ಮಹಾರುದ್ರಯಾಗದ ಧಾರ್ಮಿಕ ಸಭೆ ಸಮಾರೋಪ | ವಾದಿರಾಜ ತಂತ್ರಿ ಪುತ್ತೂರು ಬಣ್ಣನೆ

ವೇದ, ಮಂತ್ರ ಘೋಷಗಳಿಂದ ದೇವಸ್ಥಾನದ ಸಾನ್ನಿಧ್ಯ ವೃದ್ಧಿ

ಉಡುಪಿ: ದೇವಸ್ಥಾನಗಳಲ್ಲಿ ವೇದ ಮತ್ತು ಮಂತ್ರ ಘೋಷಗಳು ನಿರಂತರವಾಗಿ ನಡೆಯುತ್ತಿದ್ದರೆ ಆ ಕ್ಷೇತ್ರದ ದಿವ್ಯ ಸನ್ನಿಧಾನ ವೃದ್ಧಿಯಾಗುತ್ತದೆ. ಮಹಾರುದ್ರಯಾಗದಂತಹ ಧಾರ್ಮಿಕ ಸೇವೆಗಳು ಆಗಾಗ ಜರುಗುತ್ತಿದ್ದರೆ ಸಾನಿಧ್ಯ ಬೆಳಗಿ, ನಾಡಿನಲ್ಲಿ ಶಾಶ್ವತವಾಗಿ ಸುಭಿಕ್ಷೆ ನೆಲೆಸುತ್ತದೆ ಎಂದು ಕೊಡವೂರು ಶಂಕರನಾರಾಯಣ ದೇವಸ್ಥಾನದ ತಂತ್ರಿ ವೇದಮೂರ್ತಿ ವಾದಿರಾಜ ತಂತ್ರಿ ಪುತ್ತೂರು ಹೇಳಿದರು.

ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನ ದಲ್ಲಿ ಪ್ರಸಾದ್‌ರಾಜ್ ಕಾಂಚನ್ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ದಿನಗಳ ಮಹಾರುದ್ರಯಾಗದ ಧಾರ್ಮಿಕ ಸಭೆಯ ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಅನ್ನದಾನದಲ್ಲಿ ಮನುಷ್ಯನಿಗೆ ಪರಮ ತೃಪ್ತಿ

ಮನುಷ್ಯನಿಗೆ ಜಗತ್ತಿನ ಬೇರೆ ಯಾವುದೇ ವಿಷಯದಲ್ಲೂ ಸಂಪೂರ್ಣ ತೃಪ್ತಿ ಸಿಗುವುದಿಲ್ಲ, ಆದರೆ ಅನ್ನದಾನದಲ್ಲಿ ಹೊಟ್ಟೆ ತುಂಬಿದಾಗ ಮಾತ್ರ ಆತ ತೃಪ್ತನಾಗುತ್ತಾನೆ. ನಾವು ನೀಡುವ ಅನ್ನದಾನವು ನಮ್ಮೊಳಗಿರುವ ದೇವರಿಗೆ ಸಲ್ಲುವ ತೃಪ್ತಿಯಾಗಿದೆ. ಈ ಮಹಾರುದ್ರಯಾಗದಲ್ಲಿ ನಿರಂತರವಾಗಿ ಮಹಾ ಅನ್ನದಾನ ನಡೆದಿರುವುದು ದೇವರಿಗೆ ಪ್ರೀತಿಪಾತ್ರವಾಗಿದೆ ಎಂದು ವಾದಿರಾಜ ತಂತ್ರಿಗಳು ಶ್ಲಾಘಿಸಿದರು.

ಉಡುಪಿ ಕಿದಿಯೂರು ಹೋಟೆಲ್‌ನ ಆಡಳಿತ ನಿರ್ದೇಶಕ ಭುವನೇಂದ್ರ ಕಿದಿಯೂರು ಮಾತನಾಡಿ, ಪ್ರಸಾದ್‌ರಾಜ್ ಕಾಂಚನ್ ಕೇವಲ ಧಾರ್ಮಿಕ ಕಾರ್ಯಕ್ರಮಗಳಿಗಷ್ಟೇ ಸೀಮಿತವಾಗದೆ, ಆದರ ಜೊತೆಗೆ ಯುವಜನತೆಗೆ ಬೃಹತ್ ಉದ್ಯೋಗ ಮೇಳ ಸಹಿತ ಹತ್ತು ಹಲವು ಜನೋಪಯೋಗಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್‌ರಾಜ್ ಕಾಂಚನ್ ಅಧ್ಯಕ್ಷತೆ ವಹಿಸಿದ್ದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ್ ಹೇರೂರು, ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ ಶ್ರೀನಿವಾಸ್ ವಿವಿ ಡಾ. ದಿವ್ಯಾರಾಣಿ ಪ್ರದೀಪ್, ಪ್ರಮುಖರಾದ ಪ್ರದೀಪ್ ಶೆಟ್ಟಿ ರಾಘವೇಂದ್ರ ಶೆಟ್ಟಿ, ಪ್ರಖ್ಯಾತ್ ಶೆಟ್ಟಿ ಬಡಾಮನೆ, ಸುಧಾಕರ್ ಶೆಟ್ಟಿ ಮೈರ್ಮಾಡಿ, ಭುಜಂಗ ಶೆಟ್ಟಿ ಡಾ.ಹರಿಪ್ರಸಾದ್ ಐತಾಳ್, ಮೀನಾಕ್ಷಿ ಮಾಧವ, ಆಶಾ ಚಂದ್ರಶೇಖರ್, ರತ್ನಾಕರ್ ಸಾಲ್ಯಾನ್, ದಯೇಶ್ ಕಾಂಚನ್, ಸುರೇಂದ್ರ ಕುಂದರ್, ವಿಠಲ ಕರ್ಕೇರ, ಕಿರಣ್ ಕುಮಾರ್, ರತನ್, ಸುಧಾಕರ ಕಲ್ಮಾಡಿ, ರಾಮಚಂದ್ರ ಕೋಟ್ಯಾನ್, ದಾಮೋದರ್, ಅಶೋಕ್ ಕುಂದರ್, ಗಣೇಶ್ ಅಮೀನ್, ಹರೀಶ್ ಕುಮಾರ್ ನಿಡಂಬಳ್ಳಿ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಹಾಗೂ ತಾರಾನಾಥ್ ಪೂಜಾರಿ ಉಪಸ್ಥಿತರಿದ್ದರು.

ಗೋದಾನ, ಸಾಧಕರಿಗೆ ಸಮ್ಮಾನ

ಯಾಗದ ಸಂಕಲ್ಪದಂತೆ ಪ್ರಸಾದ್‌ರಾಜ್ ಕಾಂಚನ್ ಕೊಡವೂರು ಶಂಕರನಾರಾಯಣ ದೇವಸ್ಥಾನಕ್ಕೆ ಭಕ್ತಿಪೂರ್ವಕವಾಗಿ ಗೋದಾನ ಸಮರ್ಪಣೆ ಮಾಡಿದರು. ಇದರೊಂದಿಗೆ, ಸಹಕಾರಿ ಸೊಸೈಟಿಯ ಮುಖೇನ ದೇವಸ್ಥಾನಕ್ಕೆ ನಿರಂತರವಾಗಿ ಹಾಲು ಪೂರೈಸುತ್ತಿರುವ ಸರ್ವಧರ್ಮದ ಒಟ್ಟು 82 ಮಂದಿ ಸಾಧಕರನ್ನು ವೇದಿಕೆಯಲ್ಲಿ ಸನ್ಮಾನಿಸಿ, ಪಶು ಆಹಾರಕ್ಕಾಗಿ ಗೌರವಧನವನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ದೇವಸ್ಥಾನ, ಭಕ್ತವೃಂದ ಮತ್ತು ಸೇವಾ ಸಮಿತಿಯ ವತಿಯಿಂದ ರುದ್ರಯಾಗದ ಮುಖ್ಯ ಸೇವಾಕರ್ತ ಪ್ರಸಾದ್‌ರಾಜ್ ಕಾಂಚನ್ ಅವರನ್ನು ಗೌರವಿಸಿ ಸಮ್ಮಾನಿಸಲಾಯಿತು. ಆರಂಭದಲ್ಲಿ ರುದ್ರಯಾಗ ಸಮಿತಿಯ ಸಂಚಾಲಕ ಬಾಲಕೃಷ್ಣ ಕೊಡವೂರು ಸ್ವಾಗತಿಸಿದರು. ಸಂಚಾಲಕ ಕೆ. ಕೃಷ್ಣಮೂರ್ತಿ ಆಚಾರ್ಯ ವಂದಿಸಿದರು. ದಯಾನಂದ ಉಗ್ಗೆಲ್‌ಬೆಟ್ಟು ನಿರೂಪಿಸಿದರು.



ಪೂರ್ಣಾಹುತಿ

ಬೆಳಗ್ಗಿನಿಂದಲೇ ಜಿಲ್ಲೆಯ ವಿವಿಧ ಭಾಗಗಳೊಂದಿಗೆ ಹೊರ ಜಿಲ್ಲೆಗಳ ಭಕ್ತರೂ ದೇವಸ್ಥಾನಕ್ಕೆ ಆಗಮಿಸಿ ಯಾಗ, ಹೋಮ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತಿಭಾವದಿಂದ ಪಾಲ್ಗೊಂಡರು. ಮಹಾರುದ್ರಯಾಗದ ಪೂರ್ಣಾಹುತಿ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ರುದ್ರಪಾರಾಯಣ, ಹೋಮ ಹಾಗೂ ಮಂಗಳಾರತಿ ನೆರವೇರಿತು. ಯಾಗಶಾಲೆಯ ಸುತ್ತಮುತ್ತ ವೇದಘೋಷ ಮೊಳಗುತ್ತಿದ್ದರೆ, ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಪಡುಬೆಳ್ಳೆ ವಿಹಿಂಪ ರಜತ ಸಂಭ್ರಮ | ಶ್ರೀರಾಜಶೇಖರಾನಂದ ಆಶಯ

ಹಿಂದುಗಳು ಸಂಘಟಿತರಾದಾಗ ದೇಶ ಬಲಿಷ್ಠ

ಶಿರ್ವ: ಹಿಂದುಗಳು ಸದೃಢವಾದರೆ ಮಾತ್ರ ದೇಶ ಸದೃಢವಾಗುತ್ತದೆ. ಮನೆಯ ಸಂಸ್ಕಾರ, ವ್ಯವಸ್ಥೆ ಸದೃಢವಾಗಬೇಕಾದರೆ ಎಚ್ಚರಗೊಳ್ಳಬೇಕು ಎಂದು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರನಂದ ಸ್ವಾಮೀಜಿ ನುಡಿದರು.

ಅವರು ಭಾನುವಾರ ಪಡುಬೆಳ್ಳೆ ಶ್ರೀ ಮಹಾಲಿಂಗೇಶ್ವರ ದೇಗುಲದ ಸಭಾಂಗಣದಲ್ಲಿ ವಿಶ್ವ ಹಿಂದು ಪರಿಷದ್, ಭಜರಂಗದಳ ಪಡುಬೆಳ್ಳೆ ಇದರ ರಜತ ಸಂಭ್ರಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಅಧ್ಯಕ್ಷತೆಯನ್ನು ಪಡುಬೆಳ್ಳೆ ವಿಶ್ವಹಿಂದು ಪರಿಷದ್ ಸ್ಥಾಪಕ ಅಧ್ಯಕ್ಷ ಬೆಳ್ಳೆ ದೊಡ್ಡಮನೆ ಅಜಿತ್ ಪುಷ್ಕರ ಶೆಟ್ಟಿ ವಹಿಸಿ ಮಾತನಾಡಿ, ಈ ಭಾಗದಲ್ಲಿ ಸಂಘಟನೆಯನ್ನು ಸ್ಥಾಪಿಸಲು ಪ್ರೇರಣೆ, ಮಾರ್ಗದರ್ಶನ ನೀಡಿದ ದಿ. ಕಮಲಾಕ್ಷ ಶೆಣೈ, ಪಾಂಗಾಳ ಪಾಂಡುರಂಗ ಶ್ಯಾನುಭಾಗ್, ಪುಂಡಲೀಕ ಮರಾಠೆ ಸಹಿತ ಅನೇಕ ಹಿರಿಯರು ಪ್ರೋತ್ಸಾಹಿಸಿದ್ದಾರೆ ಎಂದರು.

ಪಡುಬೆಳ್ಳೆ ವಿಹಿಂಪ ಸ್ಥಾಪಕ ಕಾರ್ಯದರ್ಶಿ ಶ್ರೀಶ ಸಾಮಗ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿಹಿಂಪ ಉಡುಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಮೆಂಡನ್, ಸಂಘಟನೆಯ ಸ್ಥಾಪನೆಗೆ ಮಾರ್ಗದರ್ಶನ ನೀಡಿದ ನಿವೃತ್ತ ಶಿಕ್ಷಕ ಬಿ. ಪುಂಡಲೀಕ ಮರಾಠೆ, ಕಟ್ಟಿಂಗೇರಿ ಶ್ರೀಮಹಾಲಿಂಗೇಶ್ವರ ದೇಗುಲದ ಆಡಳಿತ ಧರ್ಮದರ್ಶಿ ಕೆ. ದೇವದಾಸ್ ಹೆಬ್ಬಾರ್ ಮಾತನಾಡಿದರು. ಕಾರ್ಯದರ್ಶಿ ವಿಘ್ನೇಶ್ ದೇವಾಡಿಗ ವರದಿ ಓದಿದರು. ಪಡುಬೆಳ್ಳೆ ವಿಹಿಂಪ ಅಧ್ಯಕ್ಷ ವಿಕಾಸ್ ಪೂಜಾರಿ,ಉಪಾಧ್ಯಕ್ಷ ಉದಯ ಆಚಾರ್ಯ, ಕೋಶಾಧಿಕಾರಿ ಅವಿನಾಶ್ ಆಚಾರ್ಯ, ಬಜರಂಗದಳದ ಸಂಚಾಲಕ ದಿವಾಕರ ಆಚಾರ್ಯ ಇದ್ದರು. ಸಂಧ್ಯಾ ಶೆಟ್ಟಿ ಸ್ವಾಗತಿಸಿದರು. ರಾಶಿ ಶೆಟ್ಟಿ ಪ್ರಾರ್ಥಿಸಿದರು. ಬೆಳ್ಳೆ ನಡಿಮನೆ ವಿಶ್ವನಾಥ್ ಶೆಟ್ಟಿ ಧನ್ಯವಾದವಿತ್ತರು.

ಗೌರವ ಅಧ್ಯಕ್ಷ ಬೆಳ್ಳೆ ಮಧ್ವರಾಜ ಭಟ್, ಹಿರಿಯರಾದ ಬೆಳ್ಳೆ ಸದಾನಂದ ಶೆಣೈ, ಗೌರವ ಸಲಹೆಗಾರರಾದ ಪರಶುರಾಮ ಭಟ್, ಸಂತೋಷ್ ಕುಲಾಲ್, ರಾಕೇಶ್ ಆಚಾರ್ಯ ಪಡುಬೆಳ್ಳೆ, ಸಹ ಕಾರ್ಯದರ್ಶಿ ಮಧುಕರ್ ಕುಲಾಲ್, ಬಜರಂಗದಳ ಸಹ ಸಂಚಾಲಕ ಕಿರಣ್ ದೇವಾಡಿಗ, ಸಾಮರಸ್ಯ ಪ್ರಮುಖ್ ರಾಘವೇಂದ್ರ ಶೆಟ್ಟಿ, ಧರ್ಮಪ್ರಸಾರಕ್ ಶಶಿಕಾಂತ್ ಕುಕ್ಯಾನ್, ಮಠ ಮಂದಿರ ಪ್ರಮುಖ್ ಮಹೇಶ್ ಪೂಜಾರಿ, ಗೋರಕ್ಷಕ್ ಪ್ರಮುಖ್ ಸುನೀಲ್ ದೇವಾಡಿಗ, ವಿದ್ಯಾರ್ಥಿ ಪ್ರಮುಖ್ ಸುದೀಪ್ ದೇವಾಡಿಗ ಇದ್ದರು. 25ನೇ ವರ್ಷದ 'ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯನ್ನು ವೇದಮೂರ್ತಿ ಮಧ್ವರಾಜ ಭಟ್ ಪಡುಬೆಳ್ಳೆ ನೇತೃತ್ವದಲ್ಲಿ ನಡೆಯಿತು. ಶ್ರೀಮಹಾಲಿಂಗೇಶ್ವರ ದೇವರಿಗೆ ರಂಗಪೂಜೆ, ಬೆಂಕಿನಾಥೇಶ್ವರ ಕೃಪಾಪೋಷಿತ ದಶಾವತಾರ ಯಕ್ಷಗಾನ ಮಂಡಳಿ ಇವರಿಂದ 'ಶ್ರೀದೇವಿ ಅಗ್ನಿ ಕಲ್ಲುರ್ಟಿ' ಯಕ್ಷಗಾನ ಬಯಲಾಟ ಜರುಗಿತು. ಕಾಪು ಶಾಸಕ ಗುರ್ಮೆ ಸುರೇಶ ಶೆಟ್ಟಿ, ಸಂಸದ ಕೋಟ ಶ್ರೀನಿವಾಸ ಪೂಜಾರಿ ಶ್ರೀದೇವಳಕ್ಕೆ ಆಗಮಿಸಿ ಪ್ರಸಾದ ಸ್ವೀಕರಿಸಿದರು.



ಕಿರಿಮಂಜೇಶ್ವರದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ 'ಪ್ರೇರಣಾಭಿನಂದನೆ'

ಕನ್ನಡ ಶಾಲೆಗಳಲ್ಲೇ ಉತ್ತಮ ಶಿಕ್ಷಣ: ಗಂಟಿಹೊಳೆ

ಬೈಂದೂರು: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಹಲವು ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ ಪ್ರೇರಣಾ ಶಿಬಿರವು ವಿದ್ಯಾರ್ಥಿಗಳಲ್ಲಿ ಹೊಸ ಆತ್ಮವಿಶ್ವಾಸ ಮೂಡಿಸಿದೆ. ಶಿಬಿರದಿಂದ ಪ್ರೇರಣೆ ಪಡೆದು ಉತ್ತಮ ಅಂಕಗಳಿಸಿದ ಪ್ರತಿ ಶಾಲೆಯ ವಿದ್ಯಾರ್ಥಿಗಳನ್ನು ಅಭಿನಂದಿಸುವುದು ಸಂತಸದ ವಿಷಯ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು..

ಕಿರಿಮಂಜೇಶ್ವರ ಸರ್ಕಾರಿ ಪ್ರೌಢಶಾಲೆಯಲ್ಲಿ ಸಮೃದ್ಧ ಬೈಂದೂರು, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಎನ್‌ಎನ್‌ಓ ಕಮ್ಯೂನಿಟಿ ಸೆಂಟರ್ ಕುಂದಾಪುರ, ಜೋಗಿಮನೆ ಟ್ರಸ್ಟ್ ಹಳಗೇರಿ, ಲಯನ್ಸ್ ಕ್ಲಬ್ ಉಪ್ಪುಂದ-ಬೈಂದೂರು, ಸರ್ಕಾರಿ ಪ್ರೌಢಶಾಲೆ ಕಿರಿಮಂಜೇಶ್ವರ ಸಹಯೋಗದಲ್ಲಿ ನಡೆದ ಪ್ರೇರಣಾಭಿನಂದನೆ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಅವರು ಮಾತನಾಡಿದರು.

ಅನೇಕ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳಿಗೆ ಆಂಗ್ಲ ಮಾಧ್ಯಮ ಶಾಲೆಗಳಿಗಿಂತ ಉತ್ತಮ ಶಿಕ್ಷಣ ನೀಡುತ್ತಿರುವುದರಿಂದ ಕನ್ನಡ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದರು.

ಜೋಗಿಮನೆ ಟ್ರಸ್ಟ್ ಅಧ್ಯಕ್ಷ ವಸಂತ ಜೋಗಿ ಕಾರ್ಯಕ್ರಮ ಉದ್ಘಾಟಿಸಿ, ಸಮಾಜದ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಂಸ್ಕಾರದ ಮಹತ್ವ ಅಪಾರವಾಗಿದೆ. ಪ್ರೇರಣಾ ತರಬೇತಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ಪಡೆಯಲು ಅವಕಾಶ ಸಿಕ್ಕಿದೆ. ಇಂತಹ ಕಾರ್ಯಕ್ರಮಗಳು ಮಕ್ಕಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ. ಸಮಾಜದ ಎಲ್ಲರೂ ಒಗ್ಗಟ್ಟಿನಿಂದ ಉತ್ತಮ ಕಾರ್ಯಗಳಿಗೆ ಕೈಜೋಡಿಸಬೇಕು ಎಂದರು.

ಕೋಟೇಶ್ವರ ಎಚ್‌ಎಸ್‌ಎನ್ ಫೌಂಡೇಷನ್ ಅಧ್ಯಕ್ಷ ಎ. ಶಂಕರ ಐತಾಳ್ ಇವರು ಪ್ರೇರಣಾ ಟ್ರಸ್ಟ್ ಲಾಂಛನ ಅನಾವರಣಗೊಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ಕೆ. ನಾಯ್ಕ್, ತಾಲೂಕು ಜನ ಜಾಗೃತಿ ವೇದಿಕೆ ಅಧ್ಯಕ್ಷ ಸುಧಾಕರ ಆಚಾರ್ಯ ತ್ರಾಸಿ, ಎನ್ ಎನ್‌ಓ ಕಮ್ಯೂನಿಟಿ ಸೆಂಟರ್ ಅಧ್ಯಕ್ಷ ಅಬ್ದುಲ್ ಮುನಾಫ್ ಹಂಗಾರಕಟ್ಟೆ, ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಉಮೇಶ ನಾಯರಿ, ಲಯನ್ಸ್ ಕ್ಲಬ್ ಉಪ್ಪುಂದ ಬೈಂದೂರು ಅಧ್ಯಕ್ಷ ಉದಯ್ ಡಿ.ಆರ್., ಕಿರಿಮಂಜೇಶ್ವರ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಮಂಜು ಎಂ. ಪೂಜಾರಿ, ಎಸ್‌ಡಿಎಂಸಿ ಅಧ್ಯಕ್ಷ ಭಾಸ್ಕರ ಖಾರ್ವಿ ಇದ್ದರು.

ಕಾರ್ಯಕ್ರಮದ ಸಂಯೋಜಕಿ ಸುಮಾ ಆಚಾರ್ ಕಾರ್ಯಕ್ರಮ ನಿರೂಪಿಸಿದರು. ರಾಯಭಾರಿ ಎಸ್‌ಎನ್‌ಆರ್ ಹುಸೈನ್ ಹೈಕಾಡಿ ವಂದಿಸಿದರು.



■ **ಉತ್ತಮ ಶಿಕ್ಷಣದಿಂದಾಗಿ ಕನ್ನಡ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಂದ ಪರೀಕ್ಷೆಯಲ್ಲಿ ಉತ್ತಮ ಸಾಧನೆ**

ಪಡುಬಿದ್ರಿ: ಶಿವಪಂಚಾಕ್ಷರಿ ಜಪ, ರುದ್ರ ಪಾರಾಯಣಗಳ ದೇವತಾ ಸಮರ್ಪಣೆ



ಪಡುಬಿದ್ರಿ: ಪಡುಬಿದ್ರಿ ದೇಗುಲದಲ್ಲಿ 736 ದಿನಗಳ ಕಾಲ ನಡೆದ ಭಜನೆ, ಶಿವಪಂಚಾಕ್ಷರೀ ಜಪ, ರುದ್ರ ಪಾರಾಯಣ ಗಳಿಂದ ಇಲ್ಲಿ ಆಗಿರುವ ಅಭಿವೃದ್ಧಿಯ ಬದಲಾವಣೆಯನ್ನು ನಾವು ಗಮನಿಸಿದ್ದೇವೆ. ಭಕ್ತರೆಲ್ಲರೂ ಒಟ್ಟಾಗಿ ದೇಗುಲ ನಿರ್ಮಾಣವಾಗಿದೆ ಎಂದು ಅದಮಾರು ಕಿರಿಯ ಶ್ರೀಪಾದರಾದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಹೇಳಿದರು.

ಅವರು ಸೂರ್ಯಾಸ್ತಮಾನ ಕಾಲದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ದೀಪಾರಾಧನೆಗೆ ಚಾಲನೆಯನ್ನಿತ್ತು ಸುಮಾರು ಎರಡು ವರ್ಷಗಳಿಂದ ನಡೆಯುತ್ತಿದ್ದ ಭಜನೆ, ಶಿವಪಂಚಾಕ್ಷರಿ ಜಪ, ರುದ್ರ ಪಾರಾಯಣಗಳ ದೇವತಾ ಸಮರ್ಪಣಾ ಕಾರ್ಯಕ್ರಮದಲ್ಲಿ ಸಹಾಯಕ ಅರ್ಚಕ ಅಚ್ಚಡ ಶ್ರೀನಿವಾಸ ಆಚಾರ್ಯ ಅವರನ್ನು ಸನ್ಮಾನಿಸಿ, ಆಶೀರ್ವಚಿಸಿದರು.

ಆನುವಂಶಿಕ ಮೊಕ್ತೇಸರ ಪೇಟೆಮನೆ ಭವಾನಿ ಶಂಕರ ಹೆಗ್ಡೆ, ಕೃಷ್ಣಾಪುರ ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ಮುರಳೀನಾಥ ಶೆಟ್ಟಿ, ರಾಜೇಂದ್ರ ಶೆಣೈ, ಯಾದವೇಂದ್ರ ಉಪಾಧ್ಯಾಯ, ಪ್ರಕಾಶ ದೇವಾಡಿಗ, ರಾಧಾಕೃಷ್ಣ ಆಚಾರ್ ಮತ್ತಿತರರಿದ್ದರು.

ಸಹಾಯಕ ಅರ್ಚಕ ವೇದ ವಿದ್ವಾನ್ ಅಚ್ಚಡ ಶ್ರೀನಿವಾಸ ಆಚಾರ್ಯ ಅವರನ್ನು ಅದಮಾರು ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಸನ್ಮಾನಿಸಿದರು. ಭಜನೆಯಲ್ಲಿ ಸಹಕರಿಸಿವರೆಲ್ಲರನ್ನೂ ಗೌರವಿಸಲಾಯಿತು. ಕಸ್ತೂರಿ ರಾಮಚಂದ್ರ ಪ್ರಸ್ತಾವಿಕವಾಗಿ ಮಾತನಾಡಿದರು. ಶ್ರೀಧರ ಆಚಾರ್ಯ ಸ್ವಾಗತಿಸಿದರು. ರಮಾಕಾಂತ ರಾವ್ ವಂದಿಸಿದರು. ಸಭೆಯಬಳಿಕ ವೇದಿಕೆಯಲ್ಲಿ ಭಜನ ಕಲಾವಿದೆ ಮಂಜೇಶ್ವರದ ಶಾಂತೇರಿ ಲಿಖಿತ್ ಪ್ರಭು ಅವರಿಂದ ಭಜನೆ ಜನಮನ ರಂಜನೆಯೊಂದಿಗೆ ನಡೆಯಿತು.

ಆನಂದ ಶರಧಿಯಲ್ಲಿ ಭಜನಾ ಸ್ಪರ್ಧೆ ಉದ್ಘಾಟನೆ, ಶೋಭಾಯಾತ್ರೆ



ಉಡುಪಿ: ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ಮಲ್ಪೆ ಕಡಲಕಿನಾರೆಯ ಆನಂದ ಶರಧಿ ಯಲ್ಲಿ ಭಜನಾ ಸ್ಪರ್ಧೆಯನ್ನು ಸೋದೆ ಮಠಾಧೀಶರಾದ ಶ್ರೀ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು, ಅದಮಾರು ಕಿರಿಯ ಮಠಾಧೀಶರಾದ ಶ್ರೀ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ಉದ್ಘಾಟಿಸಿ ಅನುಗ್ರಹ ಸಂದೇಶ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ಯಶಪಾಲ್ ಎ.ಸುವರ್ಣ, ಕಟೀಲು ದೇವಸ್ಥಾನದ ಅರ್ಚಕರದ ಹರಿನಾರಾಯಣದಾಸ ಅಸ್ರಣ್ಣ, ನಿಕಟಪೂರ್ವ ಶಾಸಕರಾದ ಕೆ. ರಘುಪತಿ ಭಟ್, ಆದರ್ಶ ಆಸ್ಪತ್ರೆಯ ಆಡಳಿತ ನಿರ್ದೇಶಕರಾದ ಡಾ.ಜಿ.ಎಸ್ ಚಂದ್ರಶೇಖರ್,ಉಜ್ವಲ್ ಡೆವಲಪರ್ಸ್ ಇದರ ಮಾಲಕರಾದ ಪುರುಷೋತ್ತಮ ಶೆಟ್ಟಿ, ಉದ್ಯಮಿಗಳಾದ ಸಾಧು ಸಾಲಿಯಾನ್, ಕೊರಗ ಸಮಾಜದ ಅಧ್ಯಕ್ಷರಾದ ಗಣೇಶ್ ಬಾರ್ಕೂರು, ಆರ್ ಎಸ್ ಎಸ್ ಮಂಗಳೂರು ವಿಭಾಗದ ಕಾರ್ಯವಾಹ ಡಾ. ವಾದಿರಾಜ್, ಶ್ರೀಕೃಷ್ಣ ಪರಿಸರ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ರತ್ನಕುಮಾರ್, ಕಲಾಶ್ರೀ ಮಹೋಪಾಧ್ಯಾಯ ಮಧೂರು ಪಿ. ಬಾಲಸುಬ್ರಹ್ಮಣ್ಯ, ಉದ್ಯಮಿಗಳಾದ ದಿನೇಶ್ ಪುತ್ರನ್ ಉಪಸ್ಥಿತರಿದ್ದರು.

ಶೋಭಾಯಾತ್ರೆ,

ಕಾರ್ಯಕ್ರಮ ಆರಂಭದಲ್ಲಿ ಶ್ರೀ ವಡಭಾಂಡೇಶ್ವರ ಬಲರಾಮ ದೇವಸ್ಥಾನದಿಂದ ಆನಂದ ಶರಧಿಯ ತನಕ ಉಭಯ ಶ್ರೀಪಾದರ ಉಪಸ್ಥಿತಿ ಯಲ್ಲಿ ಗಣ್ಯರು, ಸಮಿತಿಯ ಸಂಚಾಲಕರು, ಸದಸ್ಯರು,ಹಲವಾರು ಭಜನಾ ತಂಡಗಳ ಸದಸ್ಯರು, ಕುಣಿತ ಭಜನೆಗಳೊಂದಿಗೆ ಶೋಭಾ ಯಾತ್ರೆ ನಡೆಯಿತು.

ಶ್ರೀ ಉದ್ಭವಲಿಂಗೇಶ್ವರ ಭಜನಾ ಮಂದಿರ ವಾರ್ಷಿಕೋತ್ಸವ, ಸನ್ಮಾನ



ಕೋಟ: ಇಲ್ಲಿನ ಕೋಟ ಮಣೂರು ಪಡುಕರೆ ಉದ್ಭವಲಿಂಗೇಶ್ವರ ಭಜನಾ ಮಂದಿರದಲ್ಲಿ 40ನೇ ವಾರ್ಷಿಕ ಭಜನಾ ಮಂಗಲೋತ್ಸವದ ನಡೆಯಿತು.

ಈ ಹಿನ್ನಲೆಯಲ್ಲಿ ವಿವಿಧ ಭಜನಾ ತಂಡಗಳ ಭಜನಾ ಮಂಗಲೋತ್ಸವ ಮತ್ತು ಯಕ್ಷಗಾನ ಕಾರ್ಯಕ್ರಮಗಳು ಜರಗಿತು.

ಈ ವೇಳೆ ಗೀತಾನಂದ ಫೌಂಡೇಶನನ ಪ್ರವರ್ತಕ ಆನಂದ ಸಿ ಕುಂದರ್, ಧರ್ಮಸ್ಥಳ ಗ್ರಾ.ಯೋಜನೆ ಕೋಟ ವಲಯ ಮೇಲ್ವಿಚಾರಕ ನಾಗೇಶ್, ಉದ್ಭವಲಿಂಗೇಶ್ವರ ಭಜನಾ ಮಂದಿರದ ಅಧ್ಯಕ್ಷ ನವೀನ ಕುಮಾರ, ಗೌರವ ಅಧ್ಯಕ್ಷರಾದ ದಿನೇಶ ಪುತ್ರನ್ ವಿಠಲವಾಡಿ, ಹರೀಶ ಕುಮಾರ್ ಪಡುಕರೆ, ಜಯರಾಮ ಶೆಟ್ಟಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಪ್ರಗತಿಪರ ಕೃಷಿಕ, ಉದ್ಭವಲಿಂಗೇಶ್ವರ ಭಜನಾ ಮಂದಿರ ಕಾರ್ಯದರ್ಶಿ ಪ್ರಮೋದ ಪಡುಕರೆ, ವಿಜಯ ಕುಮಾರ್, ವಿನಯ ಕುಮಾರ ಹಾಗೂ ಉದ್ಭಲಿಂಗೇಶ್ವರ ಭಜನಾ ಮಂದಿರದ ಸರ್ವ ಸದಸ್ಯರು, ಉಪಸ್ಥಿತರಿದ್ದರು.

ನಂತರ ಸೌಕೂರು ಮೇಳದ ಕಲಾವಿದರಿಂದ ಪಂಜರ ಪಕ್ಷಿ ಯಕ್ಷಗಾನ ಪ್ರದರ್ಶನಗೊಂಡಿತು.

ಸನ್ಮಾನ

ಸಭಾಕಾರ್ಯಕ್ರಮದಲ್ಲಿ ಯಕ್ಷಗಾನ ಕಲಾವಿದರಾದ ಉದಯ ನಾಯ್ಕ್ ಪಡುಕರೆ ಹಾಗೂ ವಿಶ್ವನಾಥ ಆಚಾರ್ಯ ತೊಂಬಟ್ಟು ಅವರನ್ನು ಸನ್ಮಾನಿಸಲಾಯಿತು.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ | ಶಾಸಕ ಯಶ್‌ಪಾಲ್ ಸುವರ್ಣ ಸೂಚನೆ

ಜನರ ಅನುಕೂಲತೆಗೆ ತಾತ್ಕಾಲಿಕ ಏಕನಿವೇಶನ ಬದಲು ಅಂತಿಮ ಏಕನಿವೇಶನ ಒದಗಿಸಲು ಕ್ರಮ

ಉಡುಪಿ: ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಡ ಮತ್ತು ಮಧ್ಯಮ ವರ್ಗದವರು ಮನೆ ನಿರ್ಮಾಣ ಮಾಡುವ ಉದ್ದೇಶಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವಲ್ಲಿ ಆಗುತ್ತಿರುವ ವಿಳಂಬ ಮತ್ತು ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸಬೇಕು. ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಿಯಮಗಳಲ್ಲಿ ಕೆಲವೊಂದು ಸರಳೀಕರಣ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಬಳಿಕ ಅವರು ಮಾತನಾಡಿದರು.

ತಾತ್ಕಾಲಿಕ ಅನುಮೋದನೆ ಕ್ರಮಕ್ಕೆ ವಿರೋಧ

ಮನೆ ನಿರ್ಮಾಣದ ಏಕ ವಿನ್ಯಾಸ ಅನುಮೋದನೆ ನೀಡುವ ಸಮಯದಲ್ಲಿ ಇತ್ತೀಚೆಗೆ 'ತಾತ್ಕಾಲಿಕ ಅನುಮೋದನೆ' ಮತ್ತು 'ಅಂತಿಮ ಅನುಮೋದನೆ' ಎರಡು ಹಂತಗಳನ್ನು ಅಳವಡಿಸಿರುವುದರಿಂದ ಅರ್ಜಿದಾರರಿಗೆ ಅನಗತ್ಯ ವಿಳಂಬ ಮತ್ತು ತೊಂದರೆ ಉಂಟಾಗುತ್ತಿದೆ. ರಸ್ತೆ ಅಗಲೀಕರಣದ ನಿಯಮಗಳಿದ್ದಲ್ಲಿ, ಈ ಹಿಂದಿನಂತೆಯೇ ಸ್ಥಳೀಯ ಸಂಸ್ಥೆಗಳಿಗೆ ಶರತ್ತು ವಿಧಿಸಿ ನೇರವಾಗಿ ಅಂತಿಮ ಅನುಮೋದನೆ ನೀಡುವುದು ಸೂಕ್ತವಾಗಿದೆ. ಅಗಲೀಕರಣದ ಜಾಗವು ಸರ್ಕಾರಕ್ಕೆ ಹಸ್ತಾಂತರವಾಗಿರುವುದನ್ನು ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ನಿಗದಿತವಾಗಿ ವರದಿ ಪಡೆದುಕೊಳ್ಳುವುದರ ಮೂಲಕ ಪ್ರಾಧಿಕಾರವು ಖಾತ್ರಿಪಡಿಸಿಕೊಳ್ಳಬಹುದು ಎಂದು ಶಾಸಕರು ತಿಳಿಸಿದರು.

ಮನೆ ಮರು ನಿರ್ಮಾಣಕ್ಕೆ ವಿನಾಯಿತಿ ನೀಡಿ

ದಶಕಗಳ ಹಿಂದೆ ನಿರ್ಮಾಣವಾದ ಸರ್ಕಾರಿ ಬಡಾವಣೆಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಹಕ್ಕುಪತ್ರ ಪಡೆದ ಫಲಾನುಭವಿಗಳ ಮನೆ ಮರು ನಿರ್ಮಾಣದ ಸಂದರ್ಭದಲ್ಲಿ ರಸ್ತೆ ಅಗಲೀಕರಣದ ನಿಯಮ ಸೂಚಿಸುತ್ತಿರುವುದರಿಂದ ಕನಿಷ್ಠ 3ರಿಂದ 5 ಸೆಂಟ್ಸ್ ಜಾಗ ಪಡೆದ ಅರ್ಜಿದಾರರ ಮನೆ ಮರು ನಿರ್ಮಾಣ ಕಷ್ಟಕರವಾಗಿದೆ. ಈಗಾಗಲೇ ಸದರಿ ಬಡಾವಣೆಗಳಲ್ಲಿ ಅಭಿವೃದ್ಧಿ ಬೆಳವಣಿಗೆಗಳು ಆಗಿರುವುದರಿಂದ, ಈ ಹಿಂದಿನಂತೆ ಏಕ ವಿನ್ಯಾಸ ಅನುಮೋದನೆಯಿಂದ ವಿನಾಯತಿ ನೀಡಿ ಮನೆ ಮರು ನಿರ್ಮಾಣಕ್ಕೆ ಪರವಾನಿಗೆ ನೀಡಬೇಕಾಗಿದೆ. ಹೊಸದಾಗಿ ನಿರ್ಮಾಣವಾಗುವ ಸರ್ಕಾರಿ ಬಡಾವಣೆಗಳಿಗೆ ಮಾತ್ರ ನಗರ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ನಿಯಮವನ್ನು ಅಳವಡಿಸಿಕೊಳ್ಳಬಹುದು ಎಂದರು.

ಇದೇ ವೇಳೆ, ವಸತಿ ರಹಿತ ಕಡುಬಡ ಕುಟುಂಬಗಳಿಗೆ ಸರ್ಕಾರ 94 ಸಿಸಿ ಕಾಯ್ದೆಯಡಿ ಮಂಜೂರು ಮಾಡಿದ ಒಂದೆರಡು ಸೆಂಟ್ಸ್ ನಿವೇಶನಗಳಿಗೆ ಏಕ ವಿನ್ಯಾಸ ಅನುಮೋದನೆಯಿಂದ ಸಂಪೂರ್ಣ ವಿನಾಯತಿ ನೀಡಬೇಕು ಎಂದು ಶಾಸಕರು ಪ್ರತಿಪಾದಿಸಿದರು.

ಪ್ರಾಧಿಕಾರದ ಆಯುಕ್ತ ಮಂಜುನಾಥ ಆರ್., ಪ್ರಮುಖ ಅಧಿಕಾರಿಗಳಾದ ಸಚಿನ್, ಸತ್ಯ, ನಗರಸಭಾ ಸದಸ್ಯರು, ಇಂಜಿನಿಯರ್ ಮತ್ತು ಬಿಲ್ಡರ್ಸ್ ಅಸೋಸಿಯೇಷನ್ ಪ್ರತಿನಿಧಿಗಳು ಇದ್ದರು.



15 ದಿನದಲ್ಲಿ ಮಾಸ್ಟರ್ ಪ್ಲ್ಯಾನ್ ಸಭೆ

2008ರ ಬಳಿಕ ಉಡುಪಿ ನಗರದ ಸಮಗ್ರ ಮಾಸ್ಟರ್ ಪ್ಲ್ಯಾನ್ ತಯಾರಾಗದೇ ಸಾರ್ವಜನಿಕರು ನಿರಂತರ ಸಮಸ್ಯೆ ಎದುರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಇನ್ನು 15 ದಿನಗಳಲ್ಲಿ ಇಲಾಖೆಯ ಅಧಿಕಾರಿಗಳು, ಇಂಜಿನಿಯರ್ ಅಸೋಸಿಯೇಷನ್, ಬಿಲ್ಡರ್ಸ್ ಅಸೋಸಿಯೇಷನ್ ಹಾಗೂ ವಿವಿಧ ತಜ್ಞರ ಜೊತೆ ಸಭೆ ನಡೆಸಲಾಗುವುದು ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರು. ಮಾಸ್ಟರ್ ಪ್ಲ್ಯಾನ್ ರೂಪಿಸುವ ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ಅತೀ ಶೀಘ್ರದಲ್ಲೇ ಮಾಸ್ಟರ್ ಪ್ಲ್ಯಾನ್ ಅಂಗೀಕಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.